ಬೆಂಗಳೂರು
ಗುರುವಾರ, 19 ಮಾರ್ಚ್ 2026
ಸಂಪುಟ 33, ಸಂಚಿಕೆ 138, ಪುಟಗಳು 14+4+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶುಭಾಶಯ

ನಮ್ಮೆಲ್ಲ ಓದುಗರು, ಹಿತೈಷಿಗಳು, ಜಾಹೀರಾತುದಾರರು, ಏಜೆಂಟರು ಹಾಗೂ ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬಿಡುವು

ಯುಗಾದಿ ಪ್ರಯುಕ್ತ ಇಂದು (ಗುರುವಾರ, ಮಾರ್ಚ್ 19) ಹೊಸ ದಿಗಂತ ಕಚೇರಿಗೆ ಬಿಡುವು. ಆದ್ದರಿಂದ ಶುಕ್ರವಾರದ (ಮಾರ್ಚ್ 20) ಸಂಚಿಕೆ ಪ್ರಕಟವಾಗುವುದಿಲ್ಲ.

ಕಾಲಗಣನೆಯ ಕನ್ನಡಿ ಈ 'ಯುಗಾದಿ' ಪುಟ ೦೬

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಅಮಾವಾಸ್ಯೆ ಉಪರಿ ಪಾಡ್ಯ
ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ನಿರಾಶಾವಾದಿಯನ್ನು ಆಶಾವಾದಿಯಾಗಿಸಲು ಎರಡು ಸಹಾನುಭೂತಿಯ ಮಾತುಗಳು ಸಾಕು.
▲ ನಾಣ್ನುಡಿ

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ

• ಸೋಮಶೇಖರ ಸಿ.ಜೆ.

• ಪುಟ ೬

ಇವ ನಮ್ಮವ ಇವ ನಮ್ಮವ ವಿಧೇಯಕ ಮಂಡಿಸಿದ ಸಚಿವ
ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

• **ವಿಧಾನಸಭೆ:** ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಎಸಗುವ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ-ಇವ ನಮ್ಮವ) ವಿಧೇಯಕವನ್ನು ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಮಂಡಿಸಿದರು. ಬಳಿಕ ವಿಧೇಯಕದ ಬಗ್ಗೆ ವಿವರಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಈ ವಿಧೇಯಕದಲ್ಲಿ ಅಂತರ್ಜಾತಿ ವಿವಾಹವಾಗುವ ಜೋಡಿ ಅಥವಾ ದಂಪತಿಗೆ ಮರ್ಯಾದೆ ಹೆಸರಿನಲ್ಲಿ ಯಾರೊಬ್ಬರನ್ನು ಅಥವಾ ಯಾವುದೇ ವ್ಯಕ್ತಿಯನ್ನು ಯಾವುದೇ ರೀತಿ ಅವರ ಸಾವಿಗೆ ಕಾರಣನಾದ ಅಥವಾ ಸಾವಿಗೆ ಕಾರಣವಾಗುವ ಕೃತ್ಯ ಎಸಗುವ ವ್ಯಕ್ತಿಗೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗುತ್ತಾನೆ. ➡ಪುಟ ೨

1 ವರ್ಷದವರೆಗೆ ರಕ್ಷಣೆ

ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಎಸ್‌ಪಿ ಅವರು ದಂಪತಿ ಕುಟುಂಬಕ್ಕೆ ನೀಡಲಾಗುವ ಬೆದರಿಕೆ ಸಂಬಂಧಿಸಿದ ದೂರನ್ನು ಸೂಕ್ಷ್ಮತೆಯಿಂದ ನಿರ್ವಹಿಸತಕ್ಕದ್ದು, ದಂಪತಿಗಳು ಇಚ್ಛಿಸಿದ್ದಲ್ಲಿ ವಿಧಿವತ್ತಾಗಿ ಮದುವೆ ಹಾಗೂ ಮದುವೆಗೆ ಪೊಲೀಸರು ಬೆಂಬಲ ಒದಗಿಸಬಹುದಾಗಿದೆ. ಮದುವೆಯ ನಂತರ 1 ತಿಂಗಳಿಂದ 1 ವರ್ಷದವರಗೆ ನಾಮಮಾತ್ರದ ಶುಲ್ಕ (ನಾಮಿನಲ್ ಫೀ) ಪಾವತಿಯ ಮೇರೆಗೆ ವಸತಿ ರಕ್ಷಣೆ ಒದಗಿಸಬಹದು.



ಡಿಜೆ ನಿಷೇಧಿಸುವ ಕುರಿತು ಚರ್ಚೆ

• **ವಿಧಾನಸಭೆ:** ರಾಜ್ಯದಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಬ್ಬರದ ಸಂಗೀತ ಪ್ರಸಾರಕ್ಕೆ ತಡೆ ಹಾಕುವ ನಿಟ್ಟಿನಲ್ಲಿ ಡಿಜೆ ನಿಷೇಧಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ಬಿಜೆಪಿಯವರು ಒಪ್ಪಿದರೆ ನಾವು ಆದೇಶ ಹೊರಡಿಸುತ್ತೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಎಸ್.ಎನ್. ಚನ್ನಬಸಪ್ಪ (ಚೆನ್ನಿ) ಅವರು ನಿಯಮಿತವಾಗಿ ಸಹ್ಯಾದ್ರಿ ಉತ್ಸವ ಆಯೋಜಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ➡ಪುಟ ೨

> ನಮಗೆ ಬೇಕು. ಡಿಜೆ ನಿಷೇಧಕ್ಕೆ ನನ್ನ ಒಪ್ಪಿಗೆ ಇಲ್ಲ. ಡಿಜೆ ಮಾತ್ರ ನಿಷೇಧ ಏಕೆ? ಸುಪ್ರೀಂ ಕೋರ್ಟ್ ಆದೇಶದಲ್ಲಿ ಆಝಾನ್ ನಿಷೇಧ ಮಾಡಿ ಎಂದಿದೆ. ಅದನ್ನು ನಿಷೇಧಿಸುತ್ತೀರಾ?
> ■ ಎಸ್.ಎನ್. ಚನ್ನಬಸಪ್ಪ, ಬಿಜೆಪಿ ಶಾಸಕ

> ಹೃದಯ ಸಂಬಂಧಿ ಸಮಸ್ಯೆಗಳಿರುವವರು ಮತ್ತು ಫೇಸ್ ಮೇಕರ್ ಹಾಕಿದವರಿಗೆ ಡಿಜೆ ಶಬ್ದದಿಂದ ತುಂಬಾ ತೊಂದರೆ ಆಗುತ್ತಿದೆ. ಮಕ್ಕಳೂ ಕಿವಿ ಮುಚ್ಚಿಕೊಳ್ಳುವುದನ್ನು ಕಂಡಿದ್ದೇವೆ. ಈ ವಿಚಾರದಲ್ಲಿ ಪೊಲೀಸರೂ ಅಸಹಾಯಕರಾಗಿದ್ದಾರೆ. ಡಿಜೆಗಳಿಂದ ಆಗುತ್ತಿರುವ ಶಬ್ದಮಾಲಿನ್ಯವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು.
> ■ ಸುರೇಶ್ ಕುಮಾರ್, ಬಿಜೆಪಿ ಶಾಸಕ

ಚೀನಾಗೆ ತೆರಳಬೇಕಿದ್ದ 7 ಹಡಗು ಮಾರ್ಗ ಬದಲು
ಭಾರತದತ್ತ ರಷ್ಯಾ ತೈಲ ಹಡಗುಗಳು

• **ಹೊಸದಿಲ್ಲಿ:** ಅಚ್ಚರಿ ಎಂಬಂತೆ ಚೀನಾಕ್ಕೆ ತೆರಳಬೇಕಿದ್ದ ರಷ್ಯಾದ ಕಚ್ಚಾ ತೈಲ ಹೊತ್ತ ನೌಕೆಗಳು ಸಮುದ್ರ ಮಧ್ಯದಲ್ಲೇ ಭಾರತದ ಬಂದರುಗಳತ್ತ ಮುಖ ಮಾಡಿವೆ. ಮಾರ್ಗ ಬದಲಾವಣೆ ಬಗ್ಗೆ ಕೇಂದ್ರ ಬಂದರು ಇಲಾಖೆಯಿಂದ ಯಾವುದೇ ಮಾಹಿತಿ ಸಿಗದಿದ್ದರೂ, ಆಂಗ್ಲ ಪತ್ರಿಕೆ ಬ್ಲೂಮ್ ಬರ್ಗ್, ಈ ಕುರಿತಂತೆ ಮಾಹಿತಿ ನೀಡಿದೆ. ಇರಾನ್ ಯುದ್ಧದ ಕಾರಣದಿಂದಾಗಿ ಮಧ್ಯಪ್ರಾಚ್ಯ ರಾಷ್ಟಗಳಿಂದ ಸ್ಥಗಿತಗೊಂಡಿರುವ ತೈಲ ಪೂರೈಕೆಯನ್ನು ಸರಿದೂಗಿಸಲು, ಭಾರತೀಯ ಸಂಸ್ಕರಣಾಗಾರಗಳು ಕೇವಲ ಒಂದು ವಾರದಲ್ಲಿ 30 ಮಿಲಿಯನ್ ಬ್ಯಾರೆಲ್ ರಷ್ಯಾ ತೈಲವನ್ನು ಖರೀದಿಸಿವೆ, ಎಂದು ವರದಿಯಾಗಿದೆ.

ಮಾರುಕಟ್ಟೆ ಸ್ಥಿರತೆಗೆ ಯತ್ನ: ಇರಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ನಡುವೆ ರಾಷ್ಟ್ರೀಯ ಇಂಧನ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಭಾರತ ಈ ಕ್ರಮ ಕೈಗೊಂಡಿದೆ.



ಸರಣಿ ಹತ್ಯೆ

ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಮತ್ತು ಬಸಿಜ್ ಪಡೆಯ ಮುಖ್ಯಸ್ಥ ಗುಲಾಮ್ ರೆಜಾ ಸುಲೈಮಾನಿ ಹತ್ಯೆಯ ಬೆನ್ನಲ್ಲೇ ಖತೀಬ್ ಹತ್ಯೆ ನಡೆದಿದೆ. ಸುಲೈಮಾನಿ ಅವರನ್ನು ಅರಣ್ಯ ಪ್ರದೇಶವೊಂದರಲ್ಲಿ ಗುರಿಯಾಗಿಸಿ ಕೊಲ್ಲಲಾಗಿದೆ. ಇರಾನ್ ನಾಯಕತ್ವಕ್ಕೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಲು ಈ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

30 ದಶಲಕ್ಷ ಬ್ಯಾರೆಲ್ ರಷ್ಯಾ ತೈಲ ಖರೀದಿ!

ಇರಾನ್ ಮೇಲಿನ ಯುದ್ಧ ಆರಂಭವಾದಾಗಿನಿಂದ ಸುಮಾರು 30 ದಶಲಕ್ಷ ಬ್ಯಾರೆಲ್‌ನಷ್ಟು ರಷ್ಯಾ ಕಚ್ಚಾ ತೈಲವನ್ನು ಭಾರತೀಯ ಕಂಪನಿಗಳು ಖರೀದಿಸಿವೆ. ಉಕ್ರೇನ್ ಯುದ್ಧ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ಬಂಧ ಎದುರಿಸುತ್ತಿರುವ ರಷ್ಯಾ ಏಷ್ಯಾ ಬೇಡಿಕೆಯಿಂದ ರಫ್ತು ಸ್ಥಿರತೆ ಕಾಯ್ದುಕೊಂಡಿದೆ. ಇದರಿಂದ ಭಾರತೀಯ ಕಂಪನಿಗಳ ಖರೀದಿ ಬೇಡಿಕೆಗಳಿಗಾಗಿ ತನ್ನ ಹಡಗುಗಳ ಮಾರ್ಗ ಬದಲಾಯಿಸಲು ರಷ್ಯಾ ಸಿದ್ಧವಾಗಿದೆ.

ಬದಲಾಯ್ತು ತೈಲ ನೌಕೆಗಳ ಮಾರ್ಗ

ನೌಕೆಗಳ ಸಂಚಾರದ ದತ್ತಾಂಶದ ಪ್ರಕಾರ, ಯುರಲ್ಸ್ ಕಚ್ಚಾ ತೈಲ ಹೊತ್ತ ಆಕ್ವಾ ಟೈಟಾನ್ ಹಡಗು ಈಗ ನವ ಮಂಗಳೂರು ಬಂದರಿನತ್ತ ಬರುತ್ತಿದ್ದು, ಮಾ.21ರಂದು ತಲುಪುವ ನಿರೀಕ್ಷೆಯಿದೆ. ಅದೇ ರೀತಿ, ಕಝುಕ್ ಸಿಪಿಸಿ ಬ್ಲೆಂಡ್ ಹೊತ್ತ ಝೌಝೌ ಎನ್ ನೌಕೆ ಸಿಕ್ಕಾ ಬಂದರಿನತ್ತ ತಿರುಗಿದೆ. ದಕ್ಷಿಣ ಚೀನಾ ಸಮುದ್ರದಲ್ಲಿ ಕನಿಷ್ಠ ಏಳು ತೈಲ ನೌಕೆಗಳು ಚೀನಾದ ಬಂದರುಗಳಿಗೆ ತೆರಳುವ ಬದಲು ಭಾರತದತ್ತ ತಿರುಗಿವೆ.

ಕಿರುಸುದ್ದಿ

ಬೋರ್ಡೋಲಾಯಿ ಬಿಜೆಪಿಗೆ ಸೇರ್ಪಡೆ

• **ಗುವಾಹಟಿ:** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬರೇ 20 ದಿನಗಳು ಉಳಿದಿರುವಂತೆ, ಕಾಂಗ್ರೆಸ್ ಸಂಸದ ಪ್ರದ್ಯುತ್ ಬೋರ್ಡೋಲಾಯಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

• ವಿವರ ಪುಟ ೧೨

ಪ್ರತ್ಯೇಕ ಬೆಂಕಿ ಅವಘಡ: 17 ಜನ ಸಜೀವ ದಹನ

• **ಹೊಸದಿಲ್ಲಿ/ಇಂದೋರ್:** ದಿಲ್ಲಿ ಮತ್ತು ಇಂದೋರ್‌ನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಬೆಂಕಿ ಅವಘಡದಲ್ಲಿ ಬುಧವಾರ 17 ಮಂದಿ ಮೃತಪಟ್ಟಿದ್ದಾರೆ. ದಿಲ್ಲಿಯ ಪಾಲಂ ಪ್ರದೇಶದ ಬಹುಮಹಡಿ ಕಟ್ಟಡವೊಂದರಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಮೃತಪಟ್ಟಿದ್ದಾರೆ. ಇನ್ನೊಂದೆಡೆ ಮೂರು ಅಂತಸ್ತಿನ ಮನೆಯಲ್ಲಿ ಬುಧವಾರ ಮುಂಜಾನೆ ಮನೆಯ ಹೊರಗೆ ಚಾರ್ಜ್ ಮಾಡಲಾಗುತ್ತಿದ್ದ ಎಲೆಕ್ಟ್ರಿಕ್ ವಾಹನ (ಇವಿ) ಸ್ಫೋಟಗೊಂಡು 8 ಮಂದಿ ಮೃತಪಟ್ಟಿದ್ದಾರೆ.

• ವಿವರ ಪುಟ ೧೨

ವೈಷ್ಣೋದೇವಿ ಯಾತ್ರಿಗಳಿಗೆ ತಲಾ 5 ಸಾವಿರ ರೂ.

• ಪುಟ ೩

ಇಂದು ಮುರ್ಮು ಅಯೋಧ್ಯೆಗೆ ಭೇಟಿ

• ಪುಟ ೧೨

ಇಸ್ರೇಲ್ ವಿರುದ್ಧ ಪ್ರತೀಕಾರ ಇರಾನ್‌ನಿಂದ ಕ್ಷಿಪಣಿ ದಾಳಿ

• ಪುಟ ೧೨

80,886 ಟನ್ ತೈಲ ಹೊತ್ತು ಜಗ್ ಲಾಡ್ಕಿ ತವರಿಗೆ ವಾಪಸ್

• ಪುಟ ೧೨

ಪ್ರವೇಶ ನಿಯಂತ್ರಿತ ರಸ್ತೆ ಯೋಜನೆಗೆ 6,969 ಕೋಟಿ ರೂ.
ಯುವಜನರಿಗಾಗಿ ಭವ್ಯ ಯೋಜನೆ

• **ಹೊಸದಿಲ್ಲಿ:** ಕೇಂದ್ರದ ನರೇಂದ್ರ ಮೋದಿ ಅವರ ಬಿಜೆಪಿ ನೇತೃತ್ವದ ಸರಕಾರ ದೇಶದಲ್ಲಿ ಯುವಜನತೆಗಾಗಿ ಉದ್ಯೋಗ ಸೃಷ್ಟಿಸುವ ಬೃಹತ್ ಯೋಜನೆಯೊಂದನ್ನು ರೂಪಿಸಿದೆ. ಇದರಂತೆ, ಕೇಂದ್ರ ಸಂಪುಟವು ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ(ಭವ್ಯ)ಯಲ್ಲಿ 33,660ಕೋಟಿ ರೂ. ವೆಚ್ಚದಲ್ಲಿ ದೇಶಾದ್ಯಂತ 100 ಹೂಡಿಕೆಗೆ ಸಿದ್ಧವಾದ ಪ್ಲಗ್-ಅಂಡ್-ಪ್ಲೇ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸುವ ಯೋಜನೆಯೊಂದಕ್ಕೆ ಬುಧವಾರ ಅನುಮೋದನೆ ನೀಡಿದೆ. ಇದು ದೇಶದಲ್ಲಿ ಉತ್ಪಾದನಾ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಭಾರೀ ವೇಗ ನೀಡುವಲ್ಲಿ ನೆರವಾಗಲಿದೆ. ಈ ಯೋಜನೆಯು 2026-27ರಿಂದ 2031-32ರ ನಡುವಿನ ಆರು ವರ್ಷಗಳಲ್ಲಿ ಅನುಷ್ಠಾನಗೊಳ್ಳಲಿದ್ದು, ಹೂಡಿಕೆದಾರರ ಲಭ್ಯತೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ನಗರ ಕೇಂದ್ರಗಳ ಬಳಿಯಲ್ಲಿ ಈ ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು. ಕೈಗಾರಿಕಾ ಪಾರ್ಕ್ ಅಭಿವೃದ್ಧಿಗಾಗಿ ಪ್ರತಿ ಎಕರೆಗೆ ಕೇಂದ್ರ ಸರಕಾರವು 1 ಕೋಟಿ ರೂ.ಗಳವರೆಗೆ ಹಣಕಾಸು ಬೆಂಬಲ ಒದಗಿಸಲಿದೆ. ➡ಪುಟ ೨





- ಕೇಂದ್ರದಿಂದ ಭಾರತ್ ಔದ್ಯೋಗಿಕ್ ವಿಕಾಸ್ ಅನುಷ್ಠಾನಕ್ಕೆ ಕ್ರಮ
- 33,660 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿ
- ದೇಶಾದ್ಯಂತ 100 ಕೈಗಾರಿಕಾ ಪಾರ್ಕ್ ನಿರ್ಮಾಣ
- ಸಂಪರ್ಕ ಹೆಚ್ಚಳಕ್ಕೆ ಉತ್ತರ ಪ್ರದೇಶದಲ್ಲಿ 4 ಪಥಗಳ

ಡಿನ್ನರ್ ಮೀಟಿಂಗ್, ಸಿಎಂ ಭೇಟಿ ಬಗ್ಗೆ ನನಗೆ ಮಾಹಿತಿಯಿಲ್ಲ
ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆಶಿ

• **ಹೊಸದಿಲ್ಲಿ:** ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವವರು ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಡಿನ್ನರ್ ಮೀಟಿಂಗ್ ಮಾಡಿರುವ ಬಗ್ಗೆ ಹಾಗೂ ಹಿರಿಯ ಶಾಸಕರು ತಮ್ಮನ್ನು ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚಿಸಿರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಅವರ್ಯಾರೂ ನನ್ನನ್ನು ಈ ವಿಚಾರವಾಗಿ ಭೇಟಿ ಮಾಡಿ ಚರ್ಚೆ ಮಾಡಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.



ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಶಾಸಕರನ್ನು ನಿಯಂತ್ರಣ ಮಾಡುವುದು ಮುಖ್ಯಮಂತ್ರಿಗಳು. ಶಾಸಕಾಂಗದ ಪಕ್ಷದ ನಾಯಕರಾದ ಮುಖ್ಯಮಂತ್ರಿಗಳಿಗೆ ಶಾಸಕರಿಂದ ಶಿಸ್ತು ಪಾಲನೆ ಮಾಡುವ ಜವಾಬ್ದಾರಿ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಆದರೆ, ಶಾಸಕರ ಸಭೆಗಳ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ ಎಂದರು. ➡ಪುಟ ೨

ಶೀಘ್ರವೇ ಉಪಚುನಾವಣೆ ಅಭ್ಯರ್ಥಿಗಳ ಹೆಸರು ಅಂತಿಮ

ದಾವಣಗೆರೆ ಟಿಕೆಟ್ ವಿಚಾರವಾಗಿ ಇರುವ ಗೊಂದಲದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಗೂ ಮುಖ್ಯಮಂತ್ರಿಗಳು ಈ ವಿಚಾರವಾಗಿ ಚರ್ಚೆ ಮಾಡಿದ್ದು, ವರದಿ ಇನ್ನೂ ಬಂದಿಲ್ಲ. ಮುಖ್ಯಮಂತ್ರಿಗಳು ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡುತ್ತಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ನಾನು ಕೂಡಾ ಆ ಭಾಗದ ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ. ನಾನು ಹೈಕಮಾಂಡ್ ನಾಯಕರಿಗೆ ವರದಿ ನೀಡುತ್ತೇನೆ. ಎರಡ್ಮೂರು ದಿನಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರವೂ ಗಮನಿಸಲಿ

- ಈ ವರ್ಷದಿಂದ 5 ಸಾವಿರ ಮಾಂಟೆಸ್ಸರಿ ಆರಂಭ: ಲಕ್ಷ್ಮೀ ಹೆಬ್ಬಾಳ್ಕರ್



• **ವಿಧಾನಸಭೆ:** ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ ವಿಷಯದಲ್ಲಿ ಕೇವಲ ರಾಜ್ಯ ಸರ್ಕಾರದತ್ತ ಬೊಟ್ಟು ಮಾಡುವುದು ಸರಿಯಲ್ಲ, ಕೇಂದ್ರ ಸರ್ಕಾರವೂ ಈ ವಿಷಯದಲ್ಲಿ ಕಣ್ತೆರೆಯಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ರಾಜ್ಯ ಅತಿ ಹೆಚ್ಚು ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೀಡುತ್ತಿದೆ. ➡ಪುಟ ೨

ದಾಖಲೆ ನೀಡಿದರೆ ಮರುಪರೀಕ್ಷೆ | ಮತ್ತೊಂದು ತನಿಖೆಗೂ ಸಿದ್ಧ ಎಂದ ಕೃಷ್ಣ ಬೈರೇಗೌಡ
ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ

• **ವಿಧಾನಸಭೆ:** ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅನುಮಾನಕ್ಕೆ ಪರೀಕ್ಷೆ ಕೇಂದ್ರದ ವಿಡಿಯೋ ಸಂಗ್ರಹ ನೋಡಲಾಗಿದ್ದು, ಯಾವುದೇ ತಪ್ಪು ಕಂಡುಬಂದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಿದ್ದು ಅವರು ಕೂಡ ಬೇಸರ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದ ಬಗ್ಗೆ ಲಿಖಿತವಾಗಿ ಉತ್ತರ ನೀಡುತ್ತೇವೆ. ಮತ್ತೊಂದು ತನಿಖೆ ಬೇಕಾದರೆ ಮಾಡಿಸುತ್ತೇವೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನಿಯಮ 69ರ ಮೇರೆಗೆ ಕೆಪಿಎಸ್‌ಸಿ ಕುರಿತು ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರಿಸಿದ ಅವರು, ಒಂದೇ ಕೊಠಡಿಯಲ್ಲಿ ಪರೀಕ್ಷೆ ಪಾಸ್ ಆಗಿರುವ 11 ಜನರು ಒಂದೇ ಕುಟುಂಬದವರಲ್ಲ, ಬೇರೆ ಬೇರೆ ಜಿಲ್ಲೆಯವರು, ಒಂದೇ ಇನ್ಶಿಯಲ್ ಇರುವುದು ಗೊಂದಲ ಮೂಡಿಸಿರಬಹುದು ಎಂದರು.

ಮರು ಪರೀಕ್ಷೆಗೆ ಒತ್ತಾಯ: ಆರೋಪ ಬಂದಿರುವ 11 ಅಭ್ಯರ್ಥಿಗಳ ಶೈಕ್ಷಣಿಕ ಹಿನ್ನೆಲೆ ನೋಡಬೇಕು. ಆಗ ಆರೋಪ ನಿಜವೋ / ಅಲ್ಲವೋ ಎಂದು ಗೊತ್ತಾಗಲಿದೆ ಎಂದು ಹೇಳಿದ ಶಾಸಕ ಸುರೇಶ್ ಕುಮಾರ್ ಅವರು, ಮರು ಪರೀಕ್ಷೆ ನಡೆಸಬೇಕೆಂದರು. ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು ಎಸ್‌ಐಟಿ ತನಿಖೆ ಕೂಡಾ ಆಗಬೇಕೆಂದು ಆಗ್ರಹಿಸಿದರು. ಶಾಸಕರು, ಸಚಿವರು ಹಾಗೂ ಸಿಎಂ ಮೇಲೂ ತನಿಖೆ ಆಗುತ್ತೆ, ನಾವು ವಿಚಾರಣೆ ಎದುರಿಸಿದ್ದೇವೆ, ಅವರು ಕಟಕಟೆಯ ಮೇಲೆ ನಿಲ್ಲಲಿ ಎಂದು ಅಶೋಕ್ ಹೇಳಿದರು.

ಅನುಮಾನದ ಆಧಾರದ ಮೇಲೆ ಮರು ಪರೀಕ್ಷೆ ನಡೆಸಿದರೆ 1 ವರ್ಷ ಮುಂದಕ್ಕೆ ಹೋಗುತ್ತದೆ. 5,500 ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಬೇಕಾಗುತ್ತದೆ. 2 ವರ್ಷ ವಯೋಮಿತಿ ಮುಂದಕ್ಕೆ ಹೋಗುತ್ತದೆ. ತಪ್ಪಾಗಿರುವ ಬಗ್ಗೆ ದಾಖಲೆ ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ➡ಪುಟ ೨



ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚನೆ

ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಸಭಾಧ್ಯಕ್ಷರು ಅನುಮೋದನೆ ನೀಡಿದರು. ಮುಂದಿನ ಅಧಿವೇಶನದ ಒಳಗಾಗಿ ವರದಿ ಸಲ್ಲಿಸಲು ಒಪ್ಪಿಗೆ ಸೂಚಿಸಲಾಯಿತು. ಇದಕ್ಕೆ ವಿರೋಧ ಪಕ್ಷದವರು ಒಪ್ಪಿಗೆ ನೀಡಿದರು.


ಸದಸ್ಯರ ಸಂಖ್ಯೆ 8ಕ್ಕೆ ಇಳಿಕೆ

15ರಿಂದ 18 ಇರುವ ಸದಸ್ಯರ ಸಂಖ್ಯೆಯನ್ನು 8ಕ್ಕೆ ಇಳಿಸಲು ಸರ್ಕಾರ ನಿರ್ಧರಿಸಿದ್ದು, ಅವರನ್ನು ನಿವೃತ್ತಿ ಆಗುವವರೆಗೂ ತೆಗೆಯಲು ಸಾಧ್ಯವಿಲ್ಲ, 2027ಕ್ಕೆ ಬಹುತೇಕ ಸದಸ್ಯರ ಅವಧಿ ಮುಗಿಯಲಿದೆ, 2027ಕ್ಕೆ ಸದಸ್ಯರ ಸಂಖ್ಯೆ 8ಕ್ಕೆ ಇಳಿಯಲಿದೆ ಎಂದು ತಿಳಿಸಿದರು.

ಸದನದಲ್ಲೇ ಉತ್ತರ ಮಂಡಿಸಲು ಸೂಚನೆ

ವಿಧಾನಸಭೆ: ಲಿಖಿತವಾಗಿ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲೇ ಮಂಡಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸಚಿವರಿಗೆ ಸೂಚನೆ ನೀಡಿದರು. ಪ್ರಶ್ನೋತ್ತರ ಕಲಾಪದ ನಂತರ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರವನ್ನು ಮಂಡಿಸಿದರು. ಉತ್ತರಿಸಬೇಕಾಗಿದ್ದ 199 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಉತ್ತರ ಮಂಡಿಸಲಾಗಿದೆ ಎಂದರು. ಉತ್ತರಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವನ್ನು ಗಮನಿಸಿದ ಸಭಾಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದರು. ಉಳಿದ ಪ್ರಶ್ನೆಗಳಿಗೂ ಉತ್ತರವನ್ನು ಸದನದಲ್ಲೇ ಮಂಡಿಸುವಂತೆ ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ 39 ಪ್ರಶ್ನೆಗಳ ಪೈಕಿ 34ಕ್ಕೆ ಉತ್ತರ ನೀಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 55ರಲ್ಲಿ 33, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 12ರಲ್ಲಿ 11, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ 8ರಲ್ಲಿ 7, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ 34ರಲ್ಲಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ರಾಮ ಬಾಣ



ಯುವಜನರಿಗಾಗಿ ಭವ್ಯ ಯೋಜನೆ

ಪುಟ ೧➡ ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆಯಲ್ಲಿ ರಾಜ್ಯ ಸರಕಾರಗಳು, ಕೇಂದ್ರೀಯ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ಡೆವಲಪರ್ಸ್‌ಗಳ ಸಹಭಾಗಿತ್ವದೊಂದಿಗೆ ಈ ಪಾರ್ಕ್‌ಗಳನ್ನು ನಿರ್ಮಿಸಲಾಗುವುದು. ಇಲ್ಲಿ ಚಾಲೆಂಜ್- ಮೋಡ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಕೈಗಾರಿಕಾ ಕ್ಲಸ್ಟರ್‌ಗಳು, ಪ್ರಧಾನಮಂತ್ರಿ ಗತಿಶಕ್ತಿ ತತ್ವಗಳೊಂದಿಗೆ ಭೂಗತ ಯುಟಿಲಿಟಿ ಕಾರಿಡಾರ್‌ಗಳು, ಹಸಿರು-ಇಂಧನ ಏಕೀಕರಣ ಮತ್ತು ಲಾಜಿಸ್ಟಿಕ್ ಯೋಜನೆಗಳನ್ನು ಸಂಯೋಜಿಸಲಿವೆ. ಹಾಗೆಯೇ ಜಾಗತಿಕ ಸ್ಪರ್ಧಾತ್ಮಕತೆಯ ಕೈಗಾರಿಕಾ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸಲು ಅಗತ್ಯವಾದ ಉದ್ಯಮ ವ್ಯವಹಾರವನ್ನು ಸುಲಲಿತಗೊಳಿಸುವ ಸುಧಾರಣೆಗಳ ಮೇಲೆ ಕೇಂದ್ರೀಕರಿಸಲಿವೆ ಎಂದು ಹೇಳಲಾಗಿದೆ.

ಈ ಉಪಕ್ರಮವು ಹೂಡಿಕೆಗೆ ಸಿದ್ಧವಾದ ಸುಮಾರು 34000 ಎಕರೆ ಕೈಗಾರಿಕಾ ಭೂಮಿಯನ್ನು ಸ್ಪರ್ಧಾತ್ಮಕ ದರದಲ್ಲಿ ಸೃಷ್ಟಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಇವುಗಳ ಅರ್ಹತಾ ಮಾನದಂಡಗಳು ಕೈಗಾರಿಕಾ ಪಾರ್ಕ್‌ನ ಕನಿಷ್ಠ ಗಾತ್ರ 100 ಎಕರೆ ಎಂದು ನಿಗದಿಪಡಿಸಲಾಗಿದ್ದು, ಈಶಾನ್ಯ ರಾಜ್ಯಗಳು ಮತ್ತು ಪರ್ವತೀಯ ಪ್ರದೇಶಗಳಲ್ಲಿ ಇವನ್ನು 25 ಎಕರೆಗಳಿಗೆ ಸಡಿಲಿಸಲಾಗುವುದು. ಈ ಉಪಕ್ರಮವು ಆತ್ಮನಿರ್ಭರ್ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಗುರಿಗಳಿಗೆ ಬೆಂಬಲವಾಗಲಿದೆ ಎಂದು ಸರಕಾರ ನಿರೀಕ್ಷಿಸಿದ್ದು, ಕೈಗಾರಿಕಾ ಸಾಮರ್ಥ್ಯ ವಿಸ್ತರಣೆಯ ಮೂಲಕ ದೇಶದ ಯುವಜನತೆಗೆ ಗಣನೀಯ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ವಿಶ್ವಾಸಕ್ಕೆ ಪುಷ್ಟಿ ನೀಡಲಿದೆ.ಭಾರತದಲ್ಲಿ ಉದ್ಯೋಗವಕಾಶಗಳ ಸೃಷ್ಟಿಯ ಪ್ರಮಾಣ ಶೇ.60ಕ್ಕೇರಿರುವ ಬಗ್ಗೆ ಸಮೀಕ್ಷಾ ವರದಿಗಳು ತಿಳಿಸಿದ್ದು, ಇದನ್ನು ಇನ್ನಷ್ಟು ಹೆಚ್ಚಿಸುವಲ್ಲಿ ನರೇಂದ್ರ ಮೋದಿ ಸರಕಾರದ ಈ ಬೃಹತ್ ಉಪಕ್ರಮ ಒಂದು ದೊಡ್ಡ ಹೆಜ್ಜೆ ಎಂದು ವಿಶ್ಲೇಷಿಸಲಾಗಿದೆ.

ಸಣ್ಣ ಜಲವಿದ್ಯುತ್ ಅಭಿವೃದ್ಧಿಗೆ 2,584.60 ಕೋಟಿ

ಕೇಂದ್ರ ಸಚಿವ ಸಂಪುಟವು ಬುಧವಾರ ಸಣ್ಣ ಜಲವಿದ್ಯುತ್ (ಎಸ್‌ಎಚ್‌ಪಿ) ಅಭಿವೃದ್ಧಿ ಯೋಜನೆಗೆ ಹಣಕಾಸು ವರ್ಷ 2026-27 ರಿಂದ ಹಣಕಾಸು ವರ್ಷ 2030-31ರವರೆಗೆ ಒಟ್ಟು 2,584.60 ಕೋಟಿ ರೂ. ವೆಚ್ಚದೊಂದಿಗೆ ಅನುಮೋದನೆ ನೀಡಿದೆ. ಈ ಯೋಜನೆಯು ದೇಶಾದ್ಯಂತ ಸುಮಾರು 1,500 ಮೆಗಾವ್ಯಾಟ್ ಸಾಮರ್ಥ್ಯದ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದು, ಹೆಚ್ಚಿನ ಬಳಕೆಯಾಗದ ಸಾಮರ್ಥ್ಯ ಹೊಂದಿರುವ ಗುಡ್ಡಗಾಡು ಮತ್ತು ಈಶಾನ್ಯ ರಾಜ್ಯಗಳ ಮೇಲೆ ವಿಶೇಷ ಗಮನವನ್ನು ಕೇಂದ್ರೀಕರಿಸುತ್ತದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ದೇಶದ ಆರ್ಥಿಕತೆ ನಿರ್ವಹಿಸಲು ಜಗತ್ತಿನ ಮುಂದೆ ಭಿಕ್ಷೆ ಬೇಡುತ್ತಿದ್ದೇವೆ
- ಪಾಕಿಸ್ತಾನದ ಪ್ರಧಾನಿ
-ಭಿಕ್ಷೆ ಕೊಟ್ಟರೂ ಕಷ್ಟ, ಏಕೆಂದರೆ ಹೊಟ್ಟೆ ತುಂಬಿದ ಮೇಲೆ ಭಿಕ್ಷೆ ನೀಡಿದವನ ಮೇಲೆ ನೀವು ಭಯೋತ್ಪಾದನೆ ಮಾಡುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು?

ದಿನ ಭವಿಷ್ಯ

ಮೇಷ
ಭರವಸೆಯ ದಿನ. ಶುಭ ಸಂಕೇತಗಳು ಕಾಣುತ್ತಿವೆ. ವೈಯಕ್ತಿಕ ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಚಿಂತಿತ ಮನಸ್ಸಿಗೆ ಶಮನ.

ವೃಷಭ
ಮೌನವಾಗಿ ಕಠಿಣ ಕಾರ್ಯ ನಿರ್ವಹಿಸಿ. ಸಫಲತೆ ನಿಮ್ಮದಾಗಲಿದೆ. ಮೆಚ್ಚುಗೆಯೂ ಸಿಗಲಿದೆ. ಕುಟುಂಬಸ್ಥರ ಜತೆ ಸಂತೋಷದ ಕಾಲಕ್ಷೇಪ.

ಮಿಥುನ
ಹರ್ಷೋಲ್ಲಾಸ. ಕೌಟುಂಬಿಕ ಸಮಾಗಮ. ಹಣದ ಬಿಕ್ಕಟ್ಟು ಪರಿಹಾರ. ಖರ್ಚು ತುಸು ಹೆಚ್ಚಿದರೂ ಅದು ಇಂದು ಮಹಾ ಅನ್ನಿಸದು.

ಕಟಕ
ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ಪುಟ್ಟ ಪ್ರವಾಸಕ್ಕೆ ಸಿದ್ಧರಾಗಿ. ದೈನಂದಿನ ರಗಳೆ ಮರೆತು ವ್ಯವಹರಿಸಿ. ಬಂಧು ಜತೆಗಿನ ವಿರಸ ಮಾಯ.

ಸಿಂಹ
ಹಠಮಾರಿ ವರ್ತನೆ ಇತರರ ಟೀಕೆಗೆ ಗುರಿಯಾದೀತು. ವಿನಯ ಪ್ರದರ್ಶಿಸಿ. ಕೋಪದ ಕೈಗೆ ಬುದ್ಧಿ ಕೊಡಬೇಡಿ. ಹೊಂದಾಣಿಕೆ ಒಳಿತು.

ಕನ್ಯಾ
ನಿಮ್ಮ ವ್ಯವಹಾರದಲ್ಲಿ ಒಳ್ಳೆ ಅವಕಾಶ ಸಿಕ್ಕರೆ ತಿರಸ್ಕರಿಸಬೇಡಿ. ಹಿಂಜರಿಕೆ ತ್ಯಜಿಸಿ. ಆತ್ಮೀಯರ ಸಂಗದಲ್ಲಿ ಸಂತೋಷ ಕಾಣುವಿರಿ. ಧನಪ್ರಾಪ್ತಿ.

ತುಲಾ
ನಿಮ್ಮ ಕುರಿತಂತೆಯೆ ಸಿನಿಕತನ ಬೇಡ. ಎಲ್ಲವನ್ನು ಆಶಾವಾದದಿಂದ ಸ್ವೀಕರಿಸಿ. ಜಗದ ಜಂಜಡಕ್ಕೆ ಮನಸು ಹಾಳು ಮಾಡಿಕೊಳ್ಳದಿರಿ. ಒಳ್ಳೆ ಕಾಲ ಬರಲಿದೆ.

ವೃಶ್ಚಿಕ
ವ್ಯವಹಾರದಲ್ಲಿ ಮುತುವರ್ಜಿ ವಹಿಸಿ. ಬೇಕಾಬಿಟ್ಟಿ ಧೋರಣೆ ಒಳಿತಲ್ಲ. ಖಾಸಗಿ ಬದುಕಿಗೆ ಹೆಚ್ಚಿನ ಗಮನ ಕೊಡಬೇಕಾದ ಪ್ರಸಂಗ.

ಧನು
ಎಲ್ಲರ ನಡುವೆ ನಿಮ್ಮ ಪಾತ್ರವೇನು ಎಂದು ಪರಾಮರ್ಶಿಸಿ. ಅದರಂತೆ ವರ್ತಿಸಿ. ಎಲ್ಲರಿಂದ ಬೇರೆಯಾಗಿ ನಿಲ್ಲಬೇಡಿ. ಹೊಂದಾಣಿಕೆ ಮುಖ್ಯ.

ಮಕರ
ಶಾಂತ ಮನಸ್ಸು. ದುಗುಡ ನಿವಾರಣೆ. ಇತರರ ಮೇಲ್ಪಂಕ್ತಿ ಅನುಸರಿಸಿ. ಮುಖ್ಯ ಬೇಡಿಕೆಯೊಂದು ಇಂದು ಈಡೇರುವುದು.

ಕುಂಭ
ಒತ್ತಡಗಳಿಲ್ಲದ ವಿರಾಮ ದಿನ. ಬಂಧು ಬಳಗದ ಭೇಟಿ. ಮನೆಯಲ್ಲಿ ಹರ್ಷದ ವಾತಾವರಣ. ಖರೀದಿ ಹುಮ್ಮಸ್ಸು.

ಮೀನ
ಆರ್ಥಿಕ ಉನ್ನತಿ. ಆಕಾಂಕ್ಷೆ ಈಡೇರಿಕೆ. ಆಪ್ತರ ಜತೆ ಭಾವುಕ ಸನ್ನಿವೇಶ ಎದುರಿಸುವಿರಿ. ಮನೋದಾರ್ಢ್ಯ ಪ್ರದರ್ಶಿಸಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ: 3,8,2,5

ಮಾತುಗಳಿಂದ ಮೋಸ: ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ
ಅಭಿವೃದ್ಧಿಗೆ ಆದ್ಯತೆ ನೀಡಲಿ

ವಿಧಾನಸಭೆ: ಬಜೆಟ್ ಗಾತ್ರ ಮಾತ್ರ ಹೆಚ್ಚಾಗಿದೆ, ಅಭಿವೃದ್ಧಿ ಕಾಣುತ್ತಿಲ್ಲ. ಭರವಸೆಗಳ ಬಣ್ಣದ ಮಾತುಗಳಿಂದ ಜನರನ್ನು ಮೋಸಗೊಳಿಸುವ ಬದಲು, ನೈಜ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಆದ್ಯತೆ ನೀಡಬೇಕು ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಬುಧವಾರ ಕಲಾಪದಲ್ಲಿ ಆಯವ್ಯಯದ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಅವರು, ರಾಜ್ಯದ ಪ್ರಸಕ್ತ ಆಯವ್ಯಯವು ಯೋಜನೆಗಳಿಲ್ಲದ, ದಿಸೆ ತೋರದ ಅಂಕಿ-ಅಂಶಗಳ ಸಮೂಹವಾಗಿದೆ. ಆಯವ್ಯಯವು ಕೇವಲ ಅಂಕಿ-ಸಂಖ್ಯೆಗಳ ನಿರ್ಜೀವ ಪ್ರದರ್ಶನವಲ್ಲ; 7 ಕೋಟಿ ಜನರ ಬದುಕಿನ ಭರವಸೆಯ ದಿಕ್ಕು ತೋರಿಸಬೇಕು. ಆದರೆ, ಇದು ಕನ್ನಡಿಗರ ಭವಿಷ್ಯಕ್ಕೆಆರ್ಥಿಕ ಮರಣ ಶಾಸನವಾಗಲಿದೆ ಎಂದು ವಿಶ್ಲೇಷಿಸಿದರು.

ಲಕ್ಷಾಂತರ ಮನೆಗಳನ್ನು ನಿರ್ಮಿಸಿ ಬಡವರಿಗೆ ನೀಡಿದ್ದೇವೆ ಎಂದು ವಸತಿ ಸಚಿವರು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು. ಕಳೆದ 3 ವರ್ಷಗಳಲ್ಲಿ ಸರ್ಕಾರದ ಮಾಹಿತಿ ಪ್ರಕಾರ, ಪಿಎಂಎವೈ ಅಡಿ 7.03 ಲಕ್ಷ ಗುರಿ ಇದ್ದು, 3.13 ಲಕ್ಷ ಮನೆಗಳನ್ನು ಮಾತ್ರ ಮಂಜೂರು ಮಾಡಿದೆ. ಈ ಪೈಕಿ 9,757 ಮನೆಗಳನ್ನಷ್ಟೇ ನಿರ್ಮಿಸಿದ್ದಾರೆ. ಮತ್ತೆ ಈ ವರ್ಷ 3 ಲಕ್ಷ ಮನೆಗಳನ್ನು ನಿರ್ಮಿಸುವ ಭರವಸೆ ನೀಡಲಾಗಿದೆ. ಇದಕ್ಕೆ 13,500 ಕೋಟಿ ರೂ. ಅನುದಾನ ಬೇಕು. ಆದರೆ, ಬಜೆಟ್‌ನಲ್ಲಿ ಅಷ್ಟೊಂದು ಹಣ ಇಟ್ಟಿಲ್ಲ, ಇದನ್ನು ಗಮನಿದರೆ ಸರ್ಕಾರ ಕೇವಲ ಸುಳ್ಳು ಹೇಳಿ ದಲಿತರು, ಹಿಂದುಳಿದ ಹಾಗೂ ಬಡ ಜನರಿಗೆ ಅನ್ಯಾಯ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿದೆ ಎಂದರು.

ಆಯವ್ಯಯ ಘೋಷಣೆಗೆ ಸೀಮಿತವಾಗಿದೆ: ಶಿಕ್ಷಣ ಇಲಾಖೆಗೆ ಹೆಚ್ಚಿನ ಅನುದಾನ ನೀಡಿದರೂ ಸಾಧನೆ ಮಾತ್ರ ಶೂನ್ಯ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಉದ್ಯೋಗ, ಹೊಸ ದಿಕ್ಕು ನೀಡಲು ಕೇಂದ್ರ ಸರ್ಕಾರ ಶಿಕ್ಷಣ ನೀತಿ ತಂದಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನಕ್ಕೆ ತರದೆ ಕೈ ಬಿಟ್ಟರು. ಶಿಕ್ಷಣ ಇಲಾಖೆ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ ಹೊರತು, ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಪ್ರಯತ್ನ ಮಾಡುತ್ತಿಲ್ಲ, ಕಳೆದ ಆಯವ್ಯಯದಲ್ಲಿ 500 ಹೊಸ ಕೆಪಿಎಸ್ ಶಾಲೆ ತೆರೆಯುವ ಘೋಷಣೆ ಆಗಿತ್ತು. ಆದರೆ, ಒಂದೂ ಶಾಲೆ ಆರಂಭವಾಗಿಲ್ಲ, ಈ ವರ್ಷ ಮತ್ತೆ ಘೋಷಣೆ ಮಾಡಿದ್ದಾರೆ. ಹೀಗಾಗಿ ಸರ್ಕಾರ ಕೇವಲ ಘೋಷಣೆ ಮಾಡುತ್ತಿದೆ ಹೊರತು ಅನುಷ್ಠಾನಕ್ಕೆ ತರುತ್ತಿಲ್ಲ. ಕಡ್ಡಾಯ ಶಿಕ್ಷಣ ಕಾಯ್ದೆ(ಆರ್‌ಟಿಇ)ಯನ್ನು ಬದಲಿಸಿ, ಬಡವರಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ದೊರೆಯದಂತೆ ಮಾಡಲಾಗಿದೆ ಎಂದು ಟೀಕಿಸಿದರು.

ನೀರಾವರಿ ಯೋಜನೆಗೆ ಅನುದಾನವಿಲ್ಲ: ಕೃಷ್ಣಾ ಮೇಲ್ದಂಡೆ ಯೋಜನೆಗೆ 75,000 ಕೋಟಿ ರೂ. ಹೆಚ್ಚುವರಿಗೆ ಅನುದಾನ ಬೇಕಿದೆ. ಆದರೆ, ಕೃಷ್ಣೆಯ ಉಳಿವಿಗೆ ಯಾತ್ರೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದು ಅಲ್ಪ ಮಾತ್ರ. ಇದರಿಂದ 20 ವರ್ಷವಾದರೂ ಯೋಜನೆ ಪೂರ್ಣಗೊಳ್ಳುತ್ತಿಲ್ಲ, ಮಹಾದಾಯಿ ಹಾಗೂ ಮೇಕೆದಾಟು ಯೋಜನೆಗೆ 1000 ಕೋಟಿ ರೂ. ಅನುದಾನ ಹೆಸರಿಗೆ ಮೀಸಲಿಟ್ಟಿರುವ ಸರ್ಕಾರ, ಅನುಮೋದನೆಗಾಗಿ ಕಾಯುವ ಪ್ರಕ್ರಿಯೆಯಲ್ಲೇ ಕಾಲಹರಣ ಮಾಡುತ್ತಿದೆ. ಹೀಗೆ ರೈತರಿಗೆ ಅನುಕೂಲವಾಗುವಂತಹ ಯಾವುದೇ ನೀರಾವರಿ ಯೋಜನೆ ತರುವುದಿರಲಿ ಸೂಕ್ತ ಅನುದಾನ ನೀಡುವ ಕೆಲಸವೂ ಆಗಿಲ್ಲ ಎಂದು ದೂರಿದರು.

ರಾಜ್ಯದಲ್ಲಿ 77,11,374 ಇಪಿಎಫ್ ಖಾತೆದಾರರಿದ್ದಾರೆ. ಇದರಲ್ಲಿ ಶೇ. 78 ಜನರು ಬೆಂಗಳೂರಿನವರೇ. ಇದನ್ನು ಗಮನಿಸಿದರೆ ಎಲ್ಲ ಉದ್ಯೋಗದ ಸೃಷ್ಟಿ ಬೆಂಗಳೂರು ಹಾಗೂ ಅದರ ಸುತ್ತಲಿನ ಜಿಲ್ಲೆಗಳಲ್ಲೇ ಎಂಬುದು ಸ್ಪಷ್ಟ, ಇದು ಸರ್ಕಾರ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿರುವುದಕ್ಕೆ ಸಾಕ್ಷಿ. ಮೂರು ವರ್ಷಗಳಲ್ಲಿ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಮೂಲಕ ಒಟ್ಟು 3,409 ಉದ್ಯೋಗ ದೊರೆತಿದೆ ಎಂದರು.



7 ಲಕ್ಷ ಜನರಿಗೆ 2.10 ಲಕ್ಷ ಕೋಟಿ ರೂ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4.48 ಲಕ್ಷ ಕೋಟಿ ರೂ. ಗಾತ್ರದ ಆಯವ್ಯಯ ಮಂಡಿಸಿದ್ದಾರೆ. ಈ ಪೈಕಿ ಏಳು ಲಕ್ಷ ಸರ್ಕಾರಿ ನೌಕರರು, ನಿವೃತ್ತ ನೌಕರರಿಗೆ 2.10 ಲಕ್ಷ ಕೋಟಿ ರೂ. ನೀಡಿರುವ ಸರ್ಕಾರ ರಾಜ್ಯದ ಉಳಿದ 7 ಕೋಟಿ ಜನರಿಗೆ 73 ಸಾವಿರ ಕೋಟಿ ರೂ ಮಾತ್ರ ನೀಡಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಎಂದು ಅರವಿಂದ ಬೆಲ್ಲದ ಹೇಳಿದರು.

ಶಿವಮೊಗ್ಗದಲ್ಲಿ ಭರ್ಜರಿ ಆಲಿಕಲ್ಲು ಸಹಿತ ಮಳೆ

ಶಿವಮೊಗ್ಗ: ನಗರದಲ್ಲಿ ಬುಧವಾರ ಆಲಿಕಲ್ಲು ಸಹಿತ ಭರ್ಜರಿ ಮಳೆ ಸುರಿದಿದ್ದು, ಇಡಿ ನಗರದ ರಸ್ತೆಗಳು, ಕಟ್ಟಡಗಳ ಮಹಡಿಗಳು ಮಲ್ಲಿಗೆ ಹೂವು ಚೆಲ್ಲದಂತಾಗಿದ್ದು, ಆಲಿಕಲ್ಲಿನ ಅವತಾರ ಕಂಡು ಜನ ಪುಳಕಿತರಾಗಿದ್ದರು.

ಮಳೆ, ಜಡಿಗಾಳಿ, ಆಲಿಕಲ್ಲಿನ ರಭಸಕ್ಕೆ ಸುಮಾರು ಅರ್ಧ ಗಂಟೆಕಾಲ ಇಡೀ ನಗರ ಸ್ತಬ್ಧವಾಗಿತ್ತು. ಪಟಪಟನೆ ಉದುರುತ್ತಿದ್ದ ಆಲಿಕಲ್ಲಿನ ಸುರಿಮಳೆ ನೋಡುವುದೇ ಜನರಿಗೆ ಹಬ್ಬದಂತಾಗಿದ್ದು, ಈ ಚಿತ್ರಣವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯದವರೇ ಇಲ್ಲ ಎನ್ನುವಂತಾಗಿತ್ತು. ಕ್ಷಣ ಮಾತ್ರದಲ್ಲಿ ಸ್ಟೇಟಸ್‌ಗಳಲ್ಲಿ ಫೋಟೋ ಅಪ್‌ಲೋಡ್ ಮಾಡಿ ತಮ್ಮ ಭಾವಾಭಿವ್ಯಕ್ತಿಯನ್ನು ಹರಿಬಿಟ್ಟದ್ದು ಮಳೆಯ ಮೋಡಿಯೂ ಎಂಬಂತಾಗಿತ್ತು.

ಗಾಳಿಯ ರಭಸಕ್ಕೆ ಅನೇಕ ಕಡೆಗಳಲ್ಲಿ ಮರದ ಕೊಂಬೆಗಳು ರಸ್ತೆ ಮೇಲೆ ಬಿದ್ದು ಸಂಚಾರಕ್ಕೆ ಅಡಚಣೆಯಾಗಿತ್ತು. ವಿನೋಬನಗರದ ಶುಭಮಂಗಳ ಬಳಿ ರಸ್ತೆ ಮೇಲೆ ಕೊಂಬೆ ಬಿದ್ದಿದ್ದರಿಂದ ಕೆಲಹೊತ್ತು ಸಂಚಾರ ಸ್ಥಗಿತವಾಗಿತ್ತು. ಮನೆ ಅಂಗಳದ ಹುಲ್ಲು ಹಾಸಿನ ಮೇಲೆ ಆಲಿಕಲ್ಲು ಮನಮೋಹಕವಾಗಿ ಕಂಡರೆ, ಮಹಾನಗರ ಪಾಲಿಕೆಯ ಆವರಣದಲ್ಲಿನ ಕಲ್ಲು ಹಾಸಿನ ಮೇಲೆ ಆಲಿಕಲ್ಲು ಉಪ್ಪು ಸುರಿದಂತಾಗಿತ್ತು. ಜೈಲ್ ರಸ್ತೆ, ನೆಹರು ರಸ್ತೆ, ಕಾಂಗ್ರೆಸ್ ಕಚೇರಿ ರಸ್ತೆ, ಮಿಳಘಟ್ಟ ರಸ್ತೆ, ಕಾಮಾಕ್ಷಿ ಬೀದಿ, ಸಿಮ್ಸ್ ಕಾಲೇಜು ಎದುರು, ವೆಂಕಟೇಶ್ ನಗರದ ಸೇರಿದಂತೆ ಕೆಲವು ತಗ್ಗು ಪ್ರದೇಶಗಳಲ್ಲಿನ ಚರಂಡಿ ಕಟ್ಟಿಕೊಂಡು ರಸ್ತೆ ಮೇಲೆ ನೀರು ಹರಿದು ಅವಾಂತರ ಸೃಷ್ಟಿಯಾಗಿತ್ತು. ನಗರದ ಬಹುತೇಕ ಕಡೆಗಳಲ್ಲಿ ವಿದ್ಯುತ್ ಕೂಡ ಸ್ಥಗಿತವಾಗಿತ್ತು.

ಯುಗಾದಿಯ ವ್ಯಾಪಾರಕ್ಕೆ ತಂದಿದ್ದ ಮಾವು, ಬೇವಿನ ಸೊಪ್ಪಿನ ವ್ಯಾಪಾರಿಗಳಿಗೂ ಮಳೆ ಸಂಚಕಾರ ತಂದಿತ್ತು. ಏಕಾಏಕಿ ಮಳೆ ಬಂದಿದ್ದರಿಂದಾಗಿ ವ್ಯಾಪಾರಿಗಳು ಫುಟ್‌ಪಾತ್ ಮೇಲೆಯೇ ಬಿಟ್ಟು ಕಟ್ಟಡದೊಳಗೆ ಆಶ್ರು ಪಡೆಯುವಂತಾಗಿತ್ತು.



ಹಸಿರು ಹಾಸಿನ ಮೇಲೆ ಬಿದ್ದ ಆಲಿಕಲ್ಲಿನ ದೃಶ್ಯ

ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆ



ಪುಟ ೧➡ **ಅಸ್ಸಾಂ ಜನರು ಬದಲಾವಣೆ ಬಯಸಿದ್ದಾರೆ:** ಅಸ್ಸಾಂ ಕಾಂಗ್ರೆಸ್ ಸಂಸದ ಹಾಗೂ ಪಕ್ಷದ ನಿಷ್ಠಾವಂತ ನಾಯಕ ಪಕ್ಷ ತೊರೆದಿರುವುದು ನಮಗೆ ಅಚ್ಚರಿ ತಂದಿದೆ. ನಾನು ಅವರ ಜತೆ ಮಾತನಾಡುವ ಪ್ರಯತ್ನ ಮಾಡಿದೆ. ಆದರೆ ಅಷ್ಟು ಹೊತ್ತಿಗೆ ಅವರು ತೀರ್ಮಾನ ಮಾಡಿದ್ದರು. ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಕಾಂಗ್ರೆಸ್ ಪಕ್ಷದಲ್ಲಿ ರೋಲ್ ಮಾಡೆಲ್ ಆಗಿದ್ದರು ಎಂದು ತಿಳಿಸಿದರು.

ಕೆಪಿಎಸ್ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ: ಸಚಿವ



ಪುಟ೧➡ ಈ ವೇಳೆ ಸುರೇಶ್ ಕುಮಾರ್ ಅವರು ತಮ್ಮಲ್ಲಿರುವ ದಾಖಲಾತಿಗಳನ್ನು ತನಿಖೆಗೆ ನೀಡುವುದಾಗಿ ತಿಳಿಸಿದರು.

ಹೂಟಾ ಸಮಿತಿಯ ಶಿಫಾರಸು ಅನುಷ್ಠಾನ: ಶೇ.99ರಷ್ಟು ಹೂಟಾ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಿದ್ದು, ಸದಸ್ಯರ ನೇಮಕಕ್ಕೆ ಸ್ವಂತ ಕಮಿಟಿ ಮಾಡಿದ್ದು, ಸಂದರ್ಶನದಲ್ಲಿ ಏನೆಲ್ಲ ನಡೆಯುತ್ತದೆ ಎಂಬುದೆಲ್ಲ ಸತ್ಯ, ಶೇ.80ರಷ್ಟು ಅಂಕ ನೀಡಿದರೆ ಕಾರಣ ನೀಡಬೇಕಿದೆ. ಈಗ ಸಿ ಗ್ರೂಪ್ ಹುದ್ದೆಗಳ ನೇಮಕಕ್ಕೆ ಸಂದರ್ಶನ ರದ್ದು ಮಾಡಲಾಗಿದೆ ಎಂದರು. ಪ್ರತಿ ವರ್ಷ ನೇಮಕಾತಿ ಘೋಷಣೆ ಸೇರಿದಂತೆ ಪರೀಕ್ಷೆ ದಿನಾಂಕ ನಿಗದಿ ಮಾಡಬೇಕು. ಸಂದರ್ಶನದ ಅಂಕಗಳನ್ನು ಕಡಿಮೆ ಮಾಡಿದ್ದು, 150ಕ್ಕೆ ಇದ್ದಿದ್ದನ್ನು 25ಕ್ಕೆ ಇಳಿಸಲಾಗಿದೆ. ಆ ವರ್ಷದ ನೇಮಕಾತಿ ಆ ವರ್ಷಕ್ಕೆ ಮುಗಿಯಬೇಕು ಆದರೆ ಅದು ಪ್ರಾಯೋಗಿಕವಾಗಿ ಅನುಷ್ಠಾನ ವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತಿ ವರ್ಷ ಡಿ.31ರೊಳಗೆ ಇಲಾಖೆಗಳು ತಮ್ಮಲ್ಲಿ ಖಾಲಿ ಇರುವ ಹುದ್ದೆಗಳ ವಿವರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಮೂಲಕ ಕೆಪಿಎಸ್‌ಸಿಗೆ ಕಳುಹಿಸಬೇಕು, ನಿಗದಿಯಾದ ತಿಂಗಳಿನ ವಾರದ ದಿನದಂದೇ ಪರೀಕ್ಷೆ ನಡೆಯಬೇಕು, ಆ ವರ್ಷದ ಪರೀಕ್ಷೆಗೊಂದಲ ಉಂಟಾದರೂ ಪ್ರತಿ ವರ್ಷದ ಪರೀಕ್ಷೆ ನಡೆಯುತ್ತಲೇ ಇರಬೇಕು, 5 ವರ್ಷದ ಕ್ಯಾಲೆಂಡರ್ ಸಿದ್ಧಪಡಿಸಬೇಕು ಮತ್ತು ಈ ಬಗ್ಗೆ ಹಣಕಾಸು ಇಲಾಖೆ ಅಧಿಕಾರಿಗಳ ಜತೆಗೂ ಮಾತನಾಡಲಾಗಿದೆ ಎಂದರು.

ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ

ಬೆಂಗಳೂರು: ತಿರುಪತಿಗೆ ಭೇಟಿ ನೀಡುವ ರಾಜ್ಯದ ಭಕ್ತಾದಿಗಳ ಅನುಕೂಲಕ್ಕಾಗಿ ಇರುವ ಕರ್ನಾಟಕ ಭವನದ ಆಡಳಿತ ಮತ್ತು ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಿದೆ. ಈವರೆಗೆ ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದ ಈ ಭವನದ ಜವಾಬ್ದಾರಿಯನ್ನು ಈಗ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ(ಕೆಎಸ್‌ಟಿಡಿಸಿ) ಹಸ್ತಾಂತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ ನೀಡಲು ಸರ್ಕಾರ ನಿರ್ಧರಿಸಿದೆ.

ಈ ವಿಚಾರವಾಗಿ ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದರಾಜು ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಾರಿಗೆ ಹಾಗೂ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಲಿಖಿತ ಉತ್ತರ ನೀಡಿದ್ದಾರೆ.ತಿರುಪತಿ ಭಕ್ತಾದಿಗಳಿಂದ ಕೇಳಿಬಂದ ಸಾಲು ಸಾಲು ದೂರುಗಳು ಹಾಗೂ ಸ್ವಚ್ಛತೆಯ ಕೊರತೆಯ ಹಿನ್ನೆಲೆಯಲ್ಲಿ, ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದ ಖಾಸಗಿ ಸಂಸ್ಥೆಗೆ ಭಾರಿ ದಂಡ ವಿಧಿಸುವುದರ ಜೊತೆಗೆ, ವಸತಿ ಗೃಹಗಳನ್ನು ಉತ್ಕೃಷ್ಟವಾಗಿ ನಿರ್ವಹಿಸುವ ಸಲುವಾಗಿ, ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕೆಎಸ್‌ಟಿಡಿಸಿಗೆ ಹಸ್ತಾಂತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ಫೆಬ್ರವರಿಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಆಡಳಿತಾತ್ಮಕ ಬದಲಾವಣೆಗಳು, ಕೆಎಸ್‌ಟಿಡಿಸಿಗೆ ವಹಿಸಬೇಕಾದ ಜವಾಬ್ದಾರಿಗಳು ಮತ್ತು ಭಕ್ತಾದಿಗಳಿಗೆ ನೀಡಬೇಕಾದ ರಿಯಾಯಿತಿ ದರಗಳ ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ. ತಿರುಮಲದ ಕರ್ನಾಟಕ ಭವನದಲ್ಲಿ ಕೊಠಡಿಗಳ ಸ್ವಚ್ಛತೆ, ಶೌಚಾಲಯಗಳ ನಿರ್ವಹಣೆ ಮತ್ತು ಭಕ್ತಾದಿಗಳಿಗೆ ನೀಡಬೇಕಾದ ಕನಿಷ್ಠ ಸೌಲಭ್ಯಗಳಲ್ಲಿ ಖಾಸಗಿ ಏಜೆನ್ಸಿಯು ತೀವ್ರ ನಿರ್ಲಕ್ಷ್ಯ ತೋರಿರುವುದು ಸರ್ಕಾರದ ಗಮನಕ್ಕೆ ಬಂದ ಬಳಿಕ ಈ ಕ್ರಮ ಕೈಗೊಂಡಿದೆ. ನಿರ್ವಹಣಾ ವೆಚ್ಚದ ಬಿಲ್ಲಿನಲ್ಲಿ ಶೇ. 20 ರಷ್ಟು ಮೊತ್ತವನ್ನ ದಂಡದ ರೂಪದಲ್ಲಿ ಕಡಿತಗೊಳಿಸಲಾಗಿದೆ.

ಕೇಂದ್ರ ಸರ್ಕಾರವೂ ಗಮನಿಸಲಿ

ಪುಟ ೧➡ ಹೆಚ್ಚು ಗೌರವ ಧನ ಕೊಡುತ್ತಿರುವವರ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಸರ್ಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತದೆ. ಹರ್ಯಾಣ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ಬಳಿಕ ಹೆಚ್ಚು ಗೌರವಧನ ಕೊಡಲಾಗುತ್ತಿದೆ ಎಂದರು.

ಅಂಗನವಾಡಿ ಕಾರ್ಯಕರ್ತರಿಗೆ ಕೇಂದ್ರ ಸರ್ಕಾರ 2700 ರೂ. ಗೌರವ ಧನವನ್ನು ಪಾವತಿಸಿದರೆ, ಉಳಿದ 9800 ರೂ.ಗಳನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಕಳೆದ ಏಪ್ರಿಲ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 1000 ರೂ., ಸಹಾಯಕಿಯರಿಗೆ 750 ರೂ. ಏರಿಕೆ ಮಾಡಲಾಯಿತು. ಅವರು ಮಾಡುತ್ತಿರುವ ಕೆಲಸಕ್ಕೆ ಇದು ಸಾಕಾಗುತ್ತಿಲ್ಲ, ಸಹಾಯಧನ ಏರಿಕೆ ಮಾಡಬೇಕು ಎಂದು ಮನವಿ ಬಂದಿದ್ದು, ಈ ಸಂಬಂಧ ನಾವು ಈಗಾಗಲೇ ಹಣಕಾಸು ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಆದರೆ, ಈ ವಿಷಯದಲ್ಲಿ ಕೇಂದ್ರ ಸರ್ಕಾರ ಒಂದು ಹೆಜ್ಜೆ ಮುಂದೆ ಹೋದರೆ ನಾವೂ ಒಂದು ಹೆಜ್ಜೆ ಮುಂದೆ ಹೋಗುತ್ತೇವೆ. ಅವರೂ ಕಣ್ತೆರೆಯಬೇಕು ಎಂದು ಸಚಿವರು ತಿಳಿಸಿದರು.

5 ಸಾವಿರ ಅಂಗನವಾಡಿಗಳಲ್ಲಿ ಮಾಂಟೆಸ್ಸರಿ

ಪ್ರಸಕ್ತ ವರ್ಷದಿಂದ 5,000 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಪೌಷ್ಟಿಕ ಆಹಾರದ ಜತೆ ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಉದ್ದೇಶ. ಬಿಎ, ಬಿ.ಇಡಿ, ಎಂಎ, ಎಂಕಾಂ ಪದವಿ ಪಡೆದಿರುವ ಸುಮಾರು 17 ಸಾವಿರ ಅಂಗನವಾಡಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಮಾಂಟೆಸ್ಸರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ನಮ್ಮ ಗುರಿಯಾಗಿದೆ ಎಂದರು.

ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಗಳ ಘನತೆಯನ್ನು ಉಳಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಒಬ್ಬರೇ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳು ಡಾಕ್ಟರೇಟ್ ನೀಡುತ್ತಿರುವುದು ಮತ್ತು ಗೌರವ ಡಾಕ್ಟರೇಟ್ ನೀಡುವುದರಲ್ಲಿನ ಪಾರದರ್ಶಕತೆಯ ಕೊರತೆಯ ಬಗ್ಗೆ ದೂರುಗಳು ಬರುತ್ತಿರುವ ಹಿನ್ನೆಲೆ, ಇನ್ನುಮುಂದೆ ಈ ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ ರೂಪಿಸಲು ಸರ್ಕಾರ ಮುಂದಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರಿಗೆ ಈ ಕುರಿತು ಪತ್ರ ಬರೆದಿದ್ದು, ಏಕರೂಪದ ಮಾರ್ಗಸೂಚಿಗಳನ್ನು ರೂಪಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಪತ್ರ ಬರೆದು ಮನವಿ ಮಾಡಿದ್ದಾರೆ. ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಎಲ್ಲಾ ರಾಜ್ಯ, ಖಾಸಗಿ ಮತ್ತು ವಿಶೇಷ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ ಸಮಾನ ನಿಯಮಗಳನ್ನು ರೂಪಿಸಬೇಕು. ಒಬ್ಬ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳಿಂದ ಗೌರವ ಪದವಿ ಸಿಗದಂತೆ ಮಿತಿಯನ್ನು ನಿಗದಿ ಮಾಡಬೇಕು ಎಂದು ಸಚಿವರು ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಪದವಿಯ ಪವಿತ್ರತೆಯನ್ನು ಕಾಪಾಡಲು ಈ ಕ್ರಮ ಅನಿವಾರ್ಯವಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿಯಾಗಲಿ

ವಿಧಾನ ಪರಿಷತ್: ಪರಿಶಿಷ್ಟ ಜಾತಿಗಳಿಗೆ ನೀಡಿದಂತೆ ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಬೇಕು ಎಂಬ ಕೂಗು ಸದನದಲ್ಲಿ ಬುಧವಾರ ಕೇಳಿಬಂದಿದೆ.

ಈ ಬಗ್ಗೆ ಮೇಲ್ಮನೆಯಲ್ಲಿ ಶಾಂತಾರಾಮ್ ಸಿದ್ದಿ ಅವರು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಲು, ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ ರಚಿಸಿ, ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಮಾತ್ರ ಒಳ ಮೀಸಲಾತಿ ಜಾರಿ ಮಾಡಿದೆ, ಆದರೆ, ಪರಿಶಿಷ್ಟ ಪಂಗಡಗಳಿಗೂ ಒಳ ಮೀಸಲಾತಿ ವಿಸ್ತರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನಲ್ಲಿ ನಡೆದ ವಿವಿಧ ಬುಡಕಟ್ಟು ಸಮುದಾಯಗಳ ನಾಯಕರ ಸಭೆಯಲ್ಲಿ ಆಗ್ರಹಿಸಲಾಗಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರಿಗೆ ಮನವಿ ಕೂಡ ಸಲ್ಲಿಸಲಾಗಿದೆ ಎಂದು ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ ಎಂದರು. 2024ರ ಆ.1ರಂದು ಪ್ರಕಟವಾದ ಒಳ ಮೀಸಲಾತಿ ಕುರಿತ ಐತಿಹಾಸಿಕ ತೀರ್ಪಿನಲ್ಲಿ, ಪರಿಶಿಷ್ಟ ಜಾತಿ ಜತೆಗೆ ಪರಿಶಿಷ್ಟ ಪಂಗಡದಲ್ಲೂ ಒಳ ಮೀಸಲಾತಿ ವರ್ಗೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಪಾಲಿಸಿಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಶಾಂತಾರಾಮ್ ಸಿದ್ದಿ ತಿಳಿಸಿದರು. ಪರಿಶಿಷ್ಟ ಪಂಗಡಗಳಲ್ಲಿ ಸಣ್ಣ ಬುಡಕಟ್ಟು, ಸೂಕ್ಷ್ಮ, ದುರ್ಬಲ, ಪ್ರಬಲ ಸಮುದಾಯಗಳು ಒಂದೇ ಗುಂಪಿನಲ್ಲಿ ಮೀಸಲಾತಿ ಹಂಚಿಕೊಳ್ಳುವಂತಾಗಿದೆ ಎಂದು ಅನೇಕ ಪತ್ರಿಕೆಗಳು ವರದಿ ಮಾಡಿವೆ. ಈ ಕುರಿತು ಸರ್ಕಾರ ಮುತುವರ್ಜಿ ವಹಿಸಿ, ನಿವೃತ್ತ ನ್ಯಾಯಮೂರ್ತಿಗಳ ಆಯೋಗ ರಚಿಸಬೇಕು ಎಂದು ಬುಡಕಟ್ಟು ಸಮುದಾಯಗಳ ಮುಖಂಡರು ಒತ್ತಾಯಿಸುತ್ತಿದ್ದಾರೆ ಎಂದು ತಿಳಿಸಿದರು.

ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

ಪುಟ ೧➡ ಮರ್ಯಾದೆಯ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೆ ತೀವ್ರ ಗಾಯವಾಗಲು ಕಾರಣನಾದ ವ್ಯಕ್ತಿಗೆ 3 ವರ್ಷಗಳ ಜೈಲು, 3 ಲಕ್ಷ ರೂ.ವರೆಗೆ ದಂಡ ಹಾಕಲಾಗುತ್ತದೆ. ಸಣ್ಣ ಗಾಯವಾಗಲು ಕಾರಣವಾದರೆ 2 ವರ್ಷದವರೆಗೆ ಜೈಲು ಶಿಕ್ಷೆ ಮತ್ತು 2 ಲಕ್ಷ ರೂ. ವರೆಗೆ ದಂಡ ವಿಧಿಸಬಹುದಾಗಿದೆ. ಇದನ್ನು 7 ವರ್ಷದವರೆಗೂ ವಿಸ್ತರಿಸಬಹುದಾಗಿದೆ. ಮದುವೆಯಾಗುವ ಜೋಡಿಯ ಯಾವುದೇ ಕಡೆಯ ಸಂಬಂಧಿ ಅಥವಾ ಬೆಂಬಲಿಗರನ್ನು ಬೆದರಿಸಿದರೆ 3 ವರ್ಷಗಳಿಂದ 5 ವರ್ಷಗಳ ಜೈಲು ಮತ್ತು 2 ಲಕ್ಷ ರೂ.ವರೆಗೆ ದಂಡ ವಿಧಿಸಬಹುದಾಗಿದೆ. ಸಂತ್ರಸ್ತರ ಸಂಬಂಧಿಕರು ಮತ್ತು ಸಾಕ್ಷಿಗಳ ವಿರುದ್ಧ ಹಿಂಸೆ ಅಥವಾ ಬಲವಂತದ ಬೆದರಿಕೆಗಳಿಗೆ ರಕ್ಷಣೆ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಪೊಲೀಸರು ರಕ್ಷಣೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ ತಕ್ಷಣವೇ ಮತ್ತು 6 ಗಂಟೆಯೊಳಗೆ ಈ ವ್ಯಕ್ತಿಗಳಿಗೆ ಸೂಕ್ತ ಎನಿಸುವ ವಿಧಾನದಲ್ಲಿ ಸುರಕ್ಷತಾ ಕ್ರಮಗಳನ್ನು ಒದಗಿಸಬೇಕು ಮತ್ತು ಜಿಲ್ಲಾ ಕೇಂದ್ರದಲ್ಲಿ ವಾಸಸ್ಥಳ ಸ್ಥಾಪಿಸಬೇಕಾಗುತ್ತದೆ.

ಡಿಜೆ ನಿಷೇಧಿಸುವ ಕುರಿತು ಚರ್ಚೆ

ಪುಟ೧➡ ಇದೇ ವೇಳೆ, ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರು ಕೊಪ್ಪಳದಲ್ಲಿ ಆನೆಗುಂದಿ ಉತ್ಸವವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು. ಮಧ್ಯಪ್ರವೇಶಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಎಲ್ಲ ಜಯಂತಿಗಳ ಆಚರಣೆ ಸಂದರ್ಭದಲ್ಲಿ ಡಿಜೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಯಾವುದೇ ಆಚರಣೆ, ಮೆರವಣಿಗೆ ಸಂದರ್ಭದಲ್ಲಿ ಡಿಜೆ, ಐಟಂ ಸಾಂಗ್‌ಗಳು ಪ್ರಸಾರ ಆಗಲಿಲ್ಲವೆಂದರೆ ದೇವರು ಮುಂದೆ ಸಾಗುವುದೇ ಇಲ್ಲ, ಇದು ಅಸಹ್ಯವಾಗುತ್ತದೆ, ಈ ಬಗ್ಗೆ ಚರ್ಚೆಯಾಗಬೇಕಿದೆ. ಡಿಜೆಗಳು, ಐಟಂ ಸಾಂಗ್‌ಗಳು ಯಾವುದೇ ಸಂಸ್ಕೃತಿಗೆ ಒಳ್ಳೆಯದಲ್ಲ, ಆದ್ದರಿಂದ ಡಿಜೆ ನಿಷೇಧಿಸಬೇಕು ಎಂದು ಪ್ರತಿಪಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ತಂಗಡಗಿ, ಡಿಜೆಯಿಂದಾಗಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ನಾವು ಈ ಸಂಬಂಧ ಆದೇಶ ಹೊರಡಿಸುತ್ತೇವೆ. ಆದರೆ, ಬಿಜೆಪಿಯವರು ಸಹಕಾರ ಕೊಡಬೇಕು. ಎಲ್ಲರೂ ಸಹಮತ ಸೂಚಿಸಿದರೆ, ಡಿಜೆ ನಿಷೇಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಮಧ್ಯಪ್ರವೇಶ ಮಾಡಿ, ನಮ್ಮಲ್ಲಿ ಡಿಜೆ ಸಂಸ್ಕೃತಿ ಇರಲಿಲ್ಲ, ಡಿಜೆ ಸಂಸ್ಕೃತಿ ಈಗ ಹುಟ್ಟಿದ್ದು. ಡಿಜೆಗಳಲ್ಲಿ ಹಾಕುವ ಹಾಡುಗಳ ಬಗ್ಗೆ ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭಜನೆಗಳಿಗೆ ಯಾರೂ ಬೇಡ ಎನ್ನುತ್ತಿಲ್ಲ ಎಂದರು. ಈ ವೇಳೆ ಸ್ಪಷ್ಟನೆ ನೀಡಿದ ಸಭಾಧ್ಯಕ್ಷ ಯು.ಟಿ. ಖಾದರ್, ಡೆಸಿಬಲ್ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ನಿಗದಿಪಡಿಸಿದೆ. ಎಲ್ಲ ಸರ್ಕಾರಗಳೂ ಅದನ್ನು ಅನುಸರಿಸಬೇಕು ಎಂದು ಹೇಳಿದರು. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ನೀಡುವುದಾಗಿ ತಿಳಿಸಿದರು.

ಇವ ನಮ್ಮವ ವೇದಿಕೆ

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಮ್ಯಾಜಿಸ್ಟ್ರೇಟರು ಇವ ನಮ್ಮವ ವೇದಿಕೆ ರಚಿಸಬೇಕಿದ್ದು, ಇದರಲ್ಲಿ ನಿವೃತ್ತ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ, ಕಂದಾಯ ಉಪನೋಂದಣಿ ಅಧಿಕಾರಿ ಮತ್ತು ಸರ್ಕಾರ ನೇಮಿಸಬಹುದಾದ ಸದಸ್ಯರು ಇರುತ್ತಾರೆ. ವೇದಿಕೆಯು ಮದುವೆ ವಿಧಿವಿಧಾನಕ್ಕೆ ಅನಕೂಲ ಕಲ್ಪಿಸಿಕೊಡಲಿದ್ದು, ಸಮಾಲೋಚನಾ ಸೇವೆಗಳನ್ನು ಒದಗಿಸಲಿದೆ.

ವಸತಿರಹಿತರಿಗೆ ಮನೆ: ಸಚಿವ

• **ವಿಧಾನ ಪರಿಷತ್:** ಕಲಬುರಗಿ ಜಿಲ್ಲೆಯಲ್ಲಿ ವಸತಿರಹಿತ ಕುಟುಂಬಕ್ಕೆ ಮುಂದಿನ ಸಂಪುಟದಲ್ಲಿ ಅನುಮೋದಿಸಿ, ಮನೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಿದ್ದೇವೆ. ಮುಂಬರುವ ಜೂನ್



ತಿಂಗಳಿನಲ್ಲಿ ಸೇಡಂನಲ್ಲಿ ಕಾರ್ಯಕ್ರಮ ಮಾಡಿ, ಆದಷ್ಟು ಶೀಘ್ರದಲ್ಲಿ ಮನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್ ಅವರು ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿಯಲ್ಲಿ ನಮ್ಮ ಇಲಾಖೆ ವತಿಯಿಂದ ನಡೆಸಿದ ಸಮೀಕ್ಷೆ ಪ್ರಕಾರ, ಗ್ರಾಮೀಣ ಭಾಗದಲ್ಲಿ 1,52,089, ನಗರ ಭಾಗದಲ್ಲಿ 8,309 ಮನೆಗಳು ಸೇರಿ ಒಟ್ಟಾರೆ 1,60,398 ವಸತಿರಹಿತರಿದ್ದಾರೆ. ಹಾಗೂ ಗ್ರಾಮೀಣ ಭಾಗದಲ್ಲಿ 4,658 ಮತ್ತು ನಗರ ಭಾಗದಲ್ಲಿ 18,813 ಸೇರಿದಂತೆ ಒಟ್ಟು 23,471 ನಿವೇಶನರಹಿತರಿರುವ ಮಾಹಿತಿ ಲಭ್ಯವಾಗಿದೆ ಎಂದರು.

1 ಲಕ್ಷ ಮನೆಗಳ ಹೊಸ ಗುರಿ

ಈ ಬಾರಿಯ ಬಜೆಟ್‌ನಲ್ಲಿ ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆ ಅಡಿಯಲ್ಲಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿಯನ್ನು ಘೋಷಿಸಲಾಗಿದೆ. ಈ ಗುರಿ ಅಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಕೇಂದ್ರ ಸರ್ಕಾರದಿಂದ 1.5 ಲಕ್ಷ ರೂ. ರಾಜ್ಯ ಸರ್ಕಾರದಿಂದಲೂ 1.20 ಲಕ್ಷ ಅನುದಾನ ಸಿಗಲಿದ್ದು, ರಾಜ್ಯದ 1.20 ಲಕ್ಷ ರೂ. ಮೊತ್ತವನ್ನು 2 ಲಕ್ಷ ರೂ.ವರೆಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಮುಖ್ಯಮಂತ್ರಿಗಳು ಪರಿಶೀಲನಾ ಸಭೆ ಕೈಗೊಂಡು ಅಂತಿಮವಾಗಿ ಸಚಿವ ಸಂಪುಟಕ್ಕೆ ತರಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಉತ್ಸವಗಳಿಗೆ ಮಾರ್ಗಸೂಚಿ ರೂಪಿಸಿ

• **ವಿಧಾನಸಭೆ:** ಪ್ರತಿಯೊಂದು ಜಿಲ್ಲೆಯೂ ಉತ್ಸವವನ್ನು ಹೊಂದಿರಬೇಕು. ಈ ಜಿಲ್ಲಾ ಉತ್ಸವಗಳಿಗೆ ಮಾರ್ಗಸೂಚಿಯನ್ನು ರೂಪಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸಲಹೆ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಚನ್ನಬಸಪ್ಪ (ಚೆನ್ನಿ) ಅವರು ಸಹ್ಯಾದ್ರಿ ಉತ್ಸವ ಅಥವಾ ಮಲ್ನಾಡ್ ಉತ್ಸವವನ್ನು ನಿಯಮಿತವಾಗಿ ನಡೆಸಲು ಸರ್ಕಾರದಿಂದ ಅನುದಾನ ನೀಡುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಎಲ್ಲಾ



ಜಿಲ್ಲೆಗಳಿಗೂ ತಮ್ಮದೇ ಆದ ಉತ್ಸವಗಳು ಬೇಕು ಎಂಬ ಬೇಡಿಕೆ ಹೆಚ್ಚಾಗುತ್ತಿದ್ದು, ಇದು ನಮಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಉತ್ಸವವು ಆಯಾ ಸ್ಥಳದ ಇತಿಹಾಸಕ್ಕೆ ತಳುಕುಹಾಕಿಕೊಂಡಿರಬೇಕು. ದಸರಾ ಮೊದಲು ಮೈಸೂರು, ಮಡಿಕೇರಿ ಮತ್ತು ಚಾಮರಾಜನಗರಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಶಿವಮೊಗ್ಗವನ್ನೂ ಸೇರಿಸಲಾಯಿತು ಎಂದು ಮಾಹಿತಿ ನೀಡಿದರು.

ಈ ವೇಳೆ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಪ್ರತಿಯೊಂದು ಜಿಲ್ಲೆಗೂ ಅದರದ್ದೇ ಆದ ಉತ್ಸವ ಇರಬೇಕು. ಇದು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉತ್ತೇಜಿಸುತ್ತದೆ. ಇಲ್ಲದಿದ್ದರೆ ಮುಂದಿನ ಪೀಳಿಗೆಯ ಮಕ್ಕಳು ನಮ್ಮ ಸಂಸ್ಕೃತಿಯನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ ಎಂದು ಅಭಿಪ್ರಾಯಪಟ್ಟರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ರಾಜ್ಯದಲ್ಲಿ ವರ್ಷಪೂರ್ತಿ ಉತ್ಸವಗಳು ನಡೆಯಬೇಕು. ಅವು ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿರದೇ ಸ್ಥಳೀಯ ಕಲಾವಿದರಿಗೆ ನೆರವಾಗಲು ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸುವಂತಿರಬೇಕು. ನಾವು ಕೇವಲ ಎರಡು ದಿನದ ಉತ್ಸವಕ್ಕಾಗಿ 20 ಕೋಟಿ ರೂ. ಖರ್ಚು ಮಾಡುತ್ತೇವೆ. ಹಾಗಾದರೆ ಉಳಿದ 363 ದಿನಗಳ ಕಥೆ ಏನು? ಎಂದು ಪ್ರಶ್ನಿಸಿದರು. ಈ ವೇಳೆ ಕಾರ್ಮಿಕ ಸಚಿವ ಸಂತೋಷ್ ಲಾಡ್, ಹೊಸ ಉತ್ಸವಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆ. ಏಕೆಂದರೆ ದೊಡ್ಡ ಗಾಯಕರನ್ನು ಆಹ್ವಾನಿಸಲಾಗುತ್ತದೆ ಎಂದರು.

ಕಿರುಸುದ್ದಿ

ವೈಷ್ಣೋದೇವಿ ಯಾತ್ರಿಗಳಿಗೆ ತಲಾ ₹5 ಸಾವಿರ ಸಹಾಯಧನ

• **ಬೆಂಗಳೂರು:** ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಮಂಜೇಗೌಡ ಪ್ರಶ್ನೆಗೆ ಉತ್ತರ ನೀಡಿದ ಅವರು, ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ 5 ಕೋಟಿ ರೂ. ಹಣ ಮೀಸಲಿಡಲಾಗಿದೆ. 2026-27ನೇ ಸಾಲಿನಿಂದ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದರು. ಅಲ್ಲದೇ, ಕೈಲಾಸ ಮಾನಸ ಸರೋವರ ಯಾತ್ರಿಗಳಿಗೆ 30 ಸಾವಿರ ರೂ. ಚಾರ್ ಧಾಮ್‌ಗೆ 20 ಸಾವಿರ ರೂ. ಮತ್ತು ಕಾಶಿ ಯಾತ್ರಿಗೆ 5 ಸಾವಿರ ರೂ. ಸಹಾಯಧನ ನೀಡಲಾಗುತ್ತದೆ. ಅರ್ಚಕರಿಗೆ ಉಚಿತವಾಗಿ ಯಾತ್ರೆ ಮಾಡಿಸುತ್ತೇವೆ. ವರ್ಷಕ್ಕೆ 2,500 ಅರ್ಚಕರಿಗೆ ಉಚಿತ ಪ್ರವಾಸ ಕೊಡಿಸಲಾಗುತ್ತದೆ. ಯಾತ್ರಿಗಳು ವೈಷ್ಣೋದೇವಿ ಸೇರಿ ಯಾತ್ರೆಗೆ ಹೋಗಿ ಫೋಟೋ ಅಪ್ಲೋಡ್ ಮಾಡಿದರೆ ಸಹಾಯಧನ ಅವರ ಮನೆಗೆ ಕೊಡುತ್ತೇವೆ. ಫಸ್ಟ್ ಕಮ್ ಫಸ್ಟ್ ಸರ್ವೀಸ್ ನೀಡಲಾಗುತ್ತದೆ. ಯಾರು ಬೇಕಾದರೂ ಯಾತ್ರೆಗೆ ಹೋಗಬಹುದು ಎಂದು ಹೇಳಿದರು.

ದೈಹಿಕ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿ: ನಮೋಶಿ

• **ವಿಧಾನ ಪರಿಷತ್:** ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದೈಹಿಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳು ಸಾವಿರಾರು ಸಂಖ್ಯೆಯಲ್ಲಿ ಖಾಲಿಯಿದ್ದು, ಅವುಗಳ ಭರ್ತಿಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಬಿಜೆಪಿ ಶಾಸಕ ಶಶಿಲ್ ನಮೋಶಿ ಒತ್ತಾಯಿಸಿದರು. ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ದೈಹಿಕ ಶಿಕ್ಷಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳಿಗೆ ಕಳೆದ 15 ವರ್ಷಗಳಿಂದ ನೇಮಕಾತಿಯೇ ನಡೆದಿಲ್ಲ. ಪರಿಣಾಮ ಆಯಾ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ ಲಕ್ಷಾಂತರ ಜನ ಅಭ್ಯರ್ಥಿಗಳು ಸರ್ಕಾರಿ ನೌಕರರಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಮತ್ತೊಂದೆಡೆ ಪ್ರಾಥಮಿಕ ಹಂತದಿಂದಲೇ ಮಕ್ಕಳು ದೈಹಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಸಮಸ್ಯೆಯ ಗಂಭೀರತೆಯನ್ನು ಸದನದ ಮುಂದಿಟ್ಟರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಜಿ.ಪರಮೇಶ್ವರ್, ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಸದನಕ್ಕೆ ಭರವಸೆ ನೀಡಿದರು.

ಭದ್ರಾ ಅಣೆಕಟ್ಟು ದುರಸ್ತಿಯಲ್ಲಿ ಅಕ್ರಮ

• **ವಿಧಾನ ಪರಿಷತ್:** ಭದ್ರಾ ಜಲಾಶಯದ ಗೇಟ್‌ಗಳ ದುರಸ್ತಿ ಕಾರ್ಯದಲ್ಲಿ ಅಕ್ರಮದ ಆರೋಪ ಕೇಳಿ ಬರುತ್ತಿದ್ದು, ಈ ಕೂಡಲೇ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಶಾಸಕಿ ಬಿಲ್ಕಿಸ್ ಬಾನು ಸರ್ಕಾರಕ್ಕೆ ಒತ್ತಾಯಿಸಿದರು. ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಭದ್ರಾ ಜಲಾಶಯದ ದುರಸ್ತಿ ಕಾಮಗಾರಿಗೆ ಸರ್ಕಾರ 4 ಕೋಟಿ ರೂ. ಒದಗಿಸಿದೆ. ಆದರೆ, ತುಂಗಭದ್ರಾ ಜಲಾಶಯದಿಂದ ತೆರವುಗೊಳಿಸಿರುವ ಹಳೆಯ ತುಕ್ಕು ಹಿಡಿದ ಕ್ರಸ್ಟ್ ಗೇಟ್‌ಗಳು ಗುಜರಿಗೆ ಸೇರುವಂತಿವೆ. ಅವುಗಳನ್ನು ಇಲ್ಲಿ ಬಿಡಿ ಭಾಗಗಳನ್ನಾಗಿ ಬಳಕೆ ಮಾಡಲಾಗುತ್ತಿದೆ. ನೀರು ಸೋರಿಕೆಯಾಗದಂತೆ ಗೇಟ್‌ಗಳಿಗೆ ಅಳವಡಿಸುವ ರಬ್ಬರ್ ಕಳಪೆಯಾಗುತ್ತಿದೆ ಎಂಬ ಮಾಹಿತಿಯಿದೆ. ಈ ಕೂಡಲೇ ಸರ್ಕಾರ ಗಮನ ಹರಿಸಿ, ತನಿಖೆ ನಡೆಸಬೇಕು ಎಂದು ಕೋರಿದರು.

ಮಹಾನಗರ, ನಗರ ಸ್ಥಳೀಯ ಸಂಸ್ಥೆಗಳಿಗೆ ತಿದ್ದುಪಡಿ ಕಾಯ್ದೆ ಅನ್ವಯ

ಜಾಹೀರಾತು ಮಸೂದೆಗೆ ಅಸ್ತು

• **ವಿಧಾನ ಪರಿಷತ್:** ರಾಜ್ಯಾದ್ಯಂತ ಪುರಸಭೆಗಳು ಹೋರ್ಡಿಂಗ್‌ಗಳು, ಜಾಹೀರಾತು ಫಲಕಗಳ ಶುಲ್ಕದ ಮೇಲೆ ತೆರಿಗೆ ವಿಧಿಸಲು ಅನುವು ಮಾಡಿಕೊಡುವ ತಿದ್ದುಪಡಿ ಮಸೂದೆ ಅಂಗೀಕರಿಸಿದೆ.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧಾನಸಭೆಯಿಂದ ಅಂಗೀಕರಿಸಿದ ಮಸೂದೆಯನ್ನು ಪರಿಷತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಹೊರತುಪಡಿಸಿ ರಾಜ್ಯದ ಇನ್ನುಳಿದ ಮಹಾನಗರ, ನಗರಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಉದ್ದೇಶಿತ ತಿದ್ದುಪಡಿ ಕಾಯ್ದೆ ಅನ್ವಯವಾಗಲಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಜಾಹೀರಾತು ಹೋಲ್ಡಿಂಗ್‌ಗಳನ್ನು ಅಳವಡಿಸಿ ಭಾರೀ ಪ್ರಚಾರ ಪಡೆದುಕೊಳ್ಳುತ್ತಿವೆ. ಹೋಲ್ಡಿಂಗ್‌ಗೆ ಜಾಗ ಮಾಡಿಕೊಟ್ಟ ಮನೆ, ನಿವೇಶನ ಮಾಲೀಕರೂ ಆದಾಯ ಪಡೆಯುತ್ತಿದ್ದಾರೆ. ಆದರೆ, ಅದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಆದಾಯವೇ ಇಲ್ಲ. ಜಾಹೀರಾತು ಶುಲ್ಕದಿಂದ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಲವರ್ಧನೆಯಾಗಲಿವೆ ಎಂಬುದು ಈ ಮಸೂಧೆಯ ಸದುದ್ದೇಶವಾಗಿದೆ. ಈ ಕುರಿತಂತೆ ಶೀಘ್ರವೇ ಡ್ರೋಣ್‌ಗಳ ಮೂಲಕ ಹೋಲ್ಡಿಂಗ್ಸ್ ಸಮೀಕ್ಷೆ ನಡೆಸಲಾಗುತ್ತದೆ. ಸ್ವಂತ ಉದ್ಯಮ ಫಲಕಗಳಿಗೆ ಇದರಿಂದ ವಿನಾಯಿತಿ ನೀಡಲಾಗುವುದು ಎಂದರು. ಅದಕ್ಕೆ ಆಕ್ಷೇಪಿಸಿದ ಬಿಜೆಪಿ ಸದಸ್ಯರಾದ ಸಿ.ಟಿ.ರವಿ, ಖಾಸಗಿ ಕಟ್ಟಡಗಳ ಮಾಲೀಕರು ಈಗಾಗಲೇ ಸರ್ಕಾರಕ್ಕೆ ಆಸ್ತಿ ತೆರಿಗೆ, ನೀರಿನ ಕರ, ಕಸದ ತೆರಿಗೆ ಕಟ್ಟುತ್ತಿದ್ದರೂ ಸರ್ಕಾರದ ಹಣದ ದಾಹ ತೀರುತ್ತಿಲ್ಲ. ಹೀಗಾಗಿ ಜಾಹೀರಾತು ಫಲಕಗಳಿಂದ ಜನರಿಗೆ ಬರುವ ಆದಾಯಕ್ಕೂ ಸರ್ಕಾರ ಕನ್ನ ಹಾಕುತ್ತಿದೆ ಎಂಬುದಕ್ಕೆ ಈ ವಿಧೇಯಕ ಸಾಕ್ಷಿ. ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಜಾಹೀರಾತು ಪ್ರದರ್ಶಿಸಲು ಕಂಪನಿಗಳು ದುಡ್ಡು ನೀಡುವುದಲ್ಲದೇ ನಿಮಗೂ ತೆರಿಗೆ ಕಟ್ಟಬೇಕೇ? ಇನ್ನೂ ಯಾವ ಯಾವ ಮೂಲದಿಂದ ತೆರಿಗೆ ಸಂಗ್ರಹಿಸಬೇಕೋ ಹೇಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪ್ರಚಾರಕ್ಕಾಗಿ ಸುಣ್ಣ ಬಣ್ಣ

ಇದಕ್ಕೆ ಧ್ವನಿಗೂಡಿಸಿದ ಭೋಜೇಗೌಡ, ಮುಖ್ಯ ರಸ್ತೆಯಲ್ಲಿರುವ ಅನೇಕ ಮನೆಗಳ ಗೋಡೆಗಳಿಗೆ ಪ್ಲಾಸ್ಟರಿಂಗ್, ಸುಣ್ಣ ಬಣ್ಣವೂ ಇರುವುದಿಲ್ಲ. ಅಂತಹ ಕಟ್ಟಡಗಳ ಮಾಲೀಕರಿಗೆ ಒಂದಿಷ್ಟು ಹಣ ನೀಡಿ, ತಮ್ಮ ಕಂಪನಿಯ ಪ್ರಚಾರಕ್ಕಾಗಿ ಸುಣ್ಣಬಣ್ಣ ಬರೆಸುವುದಕ್ಕೂ ಈ ವಿಧೇಯಕ ಕೊಡಲಿ ಪೆಟ್ಟಾಗುತ್ತದೆ. ಬಡವರ ಹೊಟ್ಟೆ ಮೇಲೆ ಹೊಡೆದ ಂತಾಗುತ್ತದೆ ಎಂದು ಎಚ್ಚರಿಸಿದರು. ಆಗ ಮಧ್ಯ ಪ್ರವೇಶಿಸಿದ ಸಭಾಪತಿ ಹೊರಟ್ಟಿ, ಭೋಜೇಗೌಡ ನಾಳೆ ನಾನು ತೋರಿಸುತ್ತೇನೆ ಕೂರು ಎಂದು ನಗೆ ಚಟಾಕಿ ಹಾರಿಸಿದರು.

ಪೊಲೀಸ್ ತಿದ್ದುಪಡಿ ವಿಧೇಯಕ ಅಂಗೀಕಾರ

• **ವಿಧಾನ ಪರಿಷತ್:** ಅಶಿಸ್ತು, ಅನುಚಿತ ವರ್ತನೆ ಹಾಗೂ ಕರ್ತವ್ಯ ಲೋಪ ಎಸಗುವ ಡಿವೈಎಸ್ಪಿಗಿಂತ ಕೆಳ ಹಂತದ ಸಿಬ್ಬಂದಿಗೆ ಅಂಕುಶ ಹಾಕುವ ಉದ್ದೇಶದಿಂದ ಗೃಹ ಸಚಿವ ಡಾ.ಜಿ.ಪರಮೇಶ್ವರ ಮಂಡಿಸಿದ ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ-2026 ಅನ್ನು ಮೇಲ್ಮನೆಯಲ್ಲಿ ಅಂಗೀಕರಿಸಲಾಯಿತು.

ತಿದ್ದುಪಡಿ ವಿಧೇಯಕವನ್ನು ಮಂಡಿಸಿದ ಸಚಿವ ಡಾ.ಪರಮೇಶ್ವರ್, ಪೊಲೀಸ್ ವರ್ಗಾವಣೆಗೆ ಸಂಬಂಧಿಸಿದ ಈ ಮಸೂಧೆಯನ್ನು ಕೆಳಮನೆ ಅಂಗೀಕರಿಸಿದೆ. ಐಪಿಎಸ್, ಡಿವೈಎಸ್ಪಿ ಹಾಗೂ ಇನ್ಸಪೆಕ್ಟರ್‌ಗಳ ವರ್ಗಾವಣೆಗೆ ಈಗಾಗಲೇ ವ್ಯವಸ್ಥೆಯಿದೆ. ಆದರೆ, ಅಶಿಸ್ತು, ಕರ್ತವ್ಯಲೋಪ ತೋರಿದವರನ್ನು ತಕ್ಷಣ ಅಲ್ಲಿಂದ ವರ್ಗಾವಣೆ ಮಾಡಲು ಈ ವಿಧೇಯಕದಡಿ ಕರ್ನಾಟಕ ಪೊಲೀಸ್ ಎಸ್ಟಾಬ್ಲಿಷ್ಮೆಂಟ್ ಬೋರ್ಡ್ ಸ್ಥಾಪಿಸಲಾಗುತ್ತದೆ. ಡಿಜಿ-ಐಜಿ ಅವರು ಬೋರ್ಡ್‌ನ ಮುಖ್ಯಸ್ಥರಾಗಿರುತ್ತಾರೆ.

ಪೊಲೀಸರ ದುರ್ನಡತೆ ಹೆಚ್ಚಳ

ಅದಕ್ಕೆ ಪ್ರತಿಕ್ರಿಯಿಸಿದ ಜೆಡಿಎಸ್ ಸದಸ್ಯ ಶರವಣ, ಬಿಜೆಪಿ ಸದಸ್ಯೆ ಹೇಮಲತಾ ನಾಯಕ್, ನವೀನ್ ಕೆ.ಎಸ್., ಕಾಂಗ್ರೆಸ್‌ನ ಎಂ.ನಾಗರಾಜ, ಇತ್ತೀಚಿನ ದಿನಗಳಲ್ಲಿ ಪೊಲೀಸ್ ಅಧಿಕಾರಿಗಳ ದುರ್ನಡತೆ ಹೆಚ್ಚುತ್ತಿದೆ. ಸಾರ್ವಜನಿಕರು, ರೈತರು ಮೇಲೆ ಪೊಲೀಸ್ ದರ್ಪಕ್ಕೆ ಕಡಿವಾಣ ಹಾಕಬೇಕು. ವರ್ಗಾವಣೆ ನೆಪದಲ್ಲಿ ಕೆಳ ಸಿಬ್ಬಂದಿಗೆ ಕಿರುಕುಳ ಆಗದಂತೆ ಕಾಯ್ದೆಯಲ್ಲಿ ನಿಯಮಗಳನ್ನು ರೂಪಿಸಿ ಎಂದರು.

ಕೃಷಿ ಇಲಾಖೆಯಲ್ಲಿ 940 ಹುದ್ದೆಗಳ ಭರ್ತಿ: ಸಚಿವ

143 ಹುದ್ದೆಗಳು ಮಂಜೂರು

ಉಡುಪಿ ಜಿಲ್ಲೆ ವ್ಯಾಪ್ತಿಯಲ್ಲಿನ ವಿವಿಧ ಕಚೇರಿಗಳಲ್ಲಿ 143 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 30 ಹುದ್ದೆಗಳು ಖಾಲಿಯಿವೆ. ಮುಂದಿನ 2-3 ತಿಂಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಉಡುಪಿ ಭಾಗಕ್ಕೂ ನಿಯೋಜಿಸಲಾಗುವುದು ಎಂದು ಸಚಿವರು ತಿಳಿಸಿದರು.

• **ವಿಧಾನಸಭೆ:** ಕೃಷಿ ಇಲಾಖೆಯಲ್ಲಿ ಖಾಲಿ ಇರುವ 940 ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018ರಲ್ಲಿ 370 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2023ರಲ್ಲಿ 940 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಕೃಷಿ ಇಲಾಖೆಯ ಗ್ರೂಪ್ ಬಿ ಮತ್ತು ಸಿ ವೃಂದದ ಹುದ್ದೆಗಳನ್ನು ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ 945 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ನಂತರ ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ಬಂದಿದ್ದು, ಸರ್ಕಾರದ ನಿರ್ದೇಶನದನ್ವಯ ಹಿಂದಿನ ನೇಮಕಾತಿ ಅಧಿಸೂಚನೆ ರದ್ದು ಪಡಿಸಲಾಗಿದೆ. ಸರ್ಕಾರದ ಇತ್ತೀಚಿನ ನಿರ್ದೇಶನದಂತೆ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ. ಮುಂದಿನ ಮೂರು ತಿಂಗಳಲ್ಲಿ ನೇಮಕಾತಿ ಮಾಡಲಾಗುವುದು ಎಂದರು.

6 ಸಾವಿರ ಹೊಸ ಬಸ್ ಖರೀದಿಗೆ ತೀರ್ಮಾನ

• **ವಿಧಾನ ಪರಿಷತ್:** ನಮ್ಮ ಸರ್ಕಾರ ಬಂದ ಮೇಲೆ ಸುಮಾರು 6 ಸಾವಿರ ಹೊಸ ಬಸ್ ಖರೀದಿ ಮಾಡಲು ತೀರ್ಮಾನಿಸಿದ್ದೇವೆ. ಅವಧಿ ಮೀರಿರುವ ಬಸ್‌ಗಳು ನಮ್ಮಲ್ಲಿ ಇಲ್ಲ. ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದೆ ಎಂದು ಸಾರಿಗೆ



ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸದಸ್ಯರಾದ ಭಾರತಿ ಶೆಟ್ಟಿ ಹಾಗೂ ಗೋವಿಂದ್ ರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಲ್ಲೆಲ್ಲಿ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಬಸ್‌ಗಳನ್ನು ಒದಗಿಸುತ್ತೇವೆ. ಪ್ರಕ್ರಿಯೆಯಿಂದ ತಡವಾಗಿದೆ. ಮುಖ್ಯಮಂತ್ರಿ ಅವರು 2 ಸಾವಿರ ಕೋಟಿ ರೂ. ಸಾಲ ಕೊಟ್ಟಿದ್ದಾರೆ. ಅದನ್ನು ಕೆಎಸ್‌ಆರ್‌ಟಿಸಿ ತೀರಿಸುತ್ತಿದೆ. ಇಲಾಖೆಯಲ್ಲಿ ಒಟ್ಟು 6 ಸಾವಿರ ಕೋಟಿ ರೂ. ಸಾಲ ಇದೆ. ಇದನ್ನು ಸರ್ಕಾರವೇ ತೀರಿಸಲಿದೆ. ನಾನು ಮಂತ್ರಿ ಆದಾಗ 4,099 ಕೋಟಿ ರೂ. ಸಾಲವಿತ್ತು. ಹಿಂದಿನ ಸರ್ಕಾರ ಬಸ್ ಖರೀದಿ ಮಾಡಿರಲಿಲ್ಲ, ನೇಮಕಾತಿ ಆಗಿರಲಿಲ್ಲ. ನಮ್ಮ ಸರ್ಕಾರ ಬಂದ ನಂತರ ಸುಮಾರು 6 ಸಾವಿರ ಹೊಸ ಬಸ್ ಅನ್ನು ಖರೀದಿಗೆ ತೀಮಾನಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮೊದಲು ಸದಸ್ಯೆ ಭಾರತಿ ಶೆಟ್ಟಿ ಅವರು, ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯದ ಶಕ್ತಿ ಯೋಜನೆ ಹಣ ಸರ್ಕಾರದಿಂದ ಬಾಕಿ ಇದೆ. ಇದರಿಂದ ಇಲಾಖೆಗೆ ಆರ್ಥಿಕ ಕೊರತೆ ಉಂಟಾಗಿದೆ. ನಮ್ಮ ಸರ್ಕಾರದಲ್ಲಿ ಬಸ್ ಸರಿಯಾಗಿತ್ತು. ಅದಕ್ಕೆ ಹೊಸ ಬಸ್ ಖರೀದಿ ಮಾಡಿಲ್ಲ. ಈಗ ಸರಿಯಿಲ್ಲ. ಹೊಸ ಬಸ್ ಖರೀದಿ ಮಾಡಿ ಎಂದು ತಿಳಿಸಿದರು. ಸದಸ್ಯ ಗೋವಿಂದ್ ರಾಜ್ ಮಾತನಾಡಿ, ಕೇಂದ್ರದ ಜೆಸಿಸಿ ಬಸ್ ಯಾವಾಗ ಬರುತ್ತದೆ? ಶಕ್ತಿ ಯೋಜನೆಯಿಂದ 4 ಸಾವಿರ ಕೋಟಿ ರೂ. ಬಾಕಿ ಇದೆ. ಶಕ್ತಿ ಯೋಜನೆ ಆತುರವಾಗಿ ಜಾರಿ ಮಾಡಿದ್ದೀರಿ. ಈ ಯೋಜನೆಗೆ ಬಾಕಿ ಹಣ ತೆಗೆದುಕೊಂಡು ಹೊಸ ಬಸ್ ಖರೀದಿ ಮಾಡಬೇಕು. ನೌಕರರ ವೇತನ ಪರಿಷ್ಕರಣೆ ಮಾಡಿ ಎಂದು ಒತ್ತಾಯಿಸಿದರು.

ಸ್ವಯಂಚಾಲಿತವಾಗಿ ಖಾತೆ ಬದಲಾವಣೆ

• **ವಿಧಾನ ಪರಿಷತ್:** ಆಸ್ತಿ ನೋಂದಣಿ ನಂತರ ಖಾತೆ ಬದಲಾವಣೆ ಪೈಕಿ ಪ್ರಸ್ತುತ ಶೇ.98 ರಷ್ಟು ಸ್ವಯಂ ಚಾಲಿತವಾಗಿಯೇ ಖಾತೆ ಬದಲಾವಣೆ ಆಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ 1 ವರ್ಷದಿಂದ 2 ಹಂತದಲ್ಲಿ ಸುಧಾರಣೆಗಳನ್ನು ತರಲಾಗಿದೆ. ಹೀಗಾಗಿ ಮೊದಲ ಹಂತದಲ್ಲಿ ಕಳೆದ ವರ್ಷ ಒಟ್ಟು ಖಾತೆ ಬದಲಾವಣೆ ಪೈಕಿ ಶೇ.66 ರಷ್ಟು ಖಾತೆಗಳನ್ನು ಆಟೋ ಮ್ಯುಟೇಶನ್ ಮಾಡುವ ಮೂಲಕ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಜಾರಿ ಮಾಡಿದ್ದೇವೆ. ಕಳೆದ ತಿಂಗಳು ಮತ್ತೆ ಒಂದು ಹೆಜ್ಜೆ ಮುಂದಿಡಲಾಗಿದೆ ಎಂದರು. ಕೆಲವು ಅರ್ಜಿ ನೀಡಿದ ಕೇವಲ ಮೂರು ಗಂಟೆಗಳಲ್ಲಿ, ಕೆಲವು ಎಂಟನೇ ದಿನ, ಇನ್ನೂ ಕೆಲವು 16ನೇ ದಿನ ಕಾನೂನು ಪ್ರಕಾರವಾಗಿ ಖಾತೆ ಬದಲಾವಣೆ ಆಗುತ್ತವೆ. ಈ ಬಗ್ಗೆ ತಕರಾರು ದಾಖಲಾದರೆ ಮಾತ್ರ ಖಾತೆ ಬದಲಾವಣೆ ವಿಳಂಬವಾಗುತ್ತದೆ. ಇನ್ನುಳಿದಂತೆ ಯಾರನ್ನೂ ಭೇಟಿ ಮಾಡದೆ, ಮಧ್ಯವರ್ತಿಗಳ ಹಾವಳಿ ಇಲ್ಲದೆಯೇ ಸೇವೆಯನ್ನು ಪಡೆಯಬಹುದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆರ್‌ಐ ತಮ್ಮ ಕಡೆಯವರಿಂದ ತಕರಾರು ಹಾಕುತ್ತಿದ್ದಾರೆ ಎಂಬ ಬಗ್ಗೆಯೂ ಆರೋಪ ಇತ್ತು. ಹೀಗಾಗಿ ತಕರಾರು ಹಾಕುವವರಿಗೆ ಆಧಾರ್ ಇ-ಕೆವೈಸಿಯನ್ನು ಕಡ್ಡಾಯ ಮಾಡಲಾಗಿದೆ ಎಂದು ತಿಳಿಸಿದರು.

ಬಾಕಿ ಇದ್ದ ಪ್ರಕರಣಗಳು ವಿಲೇವಾರಿ

ತಹಶೀಲ್ದಾರ್ ನ್ಯಾಯಾಲಯದಲ್ಲಿ ನಾವು ಬರುವ ಮೊದಲು ಅವಧಿ ಮೀರಿರುವ 10,774 ತಕರಾರು ಪ್ರಕರಣಗಳು ಬಾಕಿಯಿದ್ದವು. ಇದೀಗ ಪ್ರಸ್ತುತ 137 ಪ್ರಕರಣಗಳು ಮಾತ್ರ ಬಾಕಿ ಉಳಿದಿವೆ. ಎಸಿ ನ್ಯಾಯಾಲಯಗಳಲ್ಲಿ 73,634 ಪ್ರಕರಣಗಳು ಬಾಕಿ ಉಳಿದಿದ್ದ ಈ ಪೈಕಿ ಪ್ರಸ್ತುತ 10,255 ಪ್ರಕರಣಗಳು ಬಾಕಿ ಇವೆ. ಐದು ವರ್ಷಕ್ಕೂ ಮೀರಿದ 32,787 ಪ್ರಕರಣಗಳ ಪೈಕಿ 2894 ಪ್ರಕರಣಗಳು ಮಾತ್ರ ಬಾಕಿ ಇವೆ. ಪ್ರಕರಣ ವಿಲೇವಾರಿಗೆ ಬೆಂಗಳೂರಿಗೆ ಮಾತ್ರ 8 ಜನ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ರಾಜ್ಯಾದ್ಯಂತ 27 ವಿಶೇಷ ಎಸಿಗಳನ್ನು ನೇಮಕ ಮಾಡಲಾಗಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿಗೆ ಮನವಿ

• **ವಿಧಾನಸಭೆ:** ಜಿಲ್ಲಾ ಕೇಂದ್ರಗಳಿಂದ ಹೆಚ್ಚಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಬೇಡಿಕೆ ಬರುತ್ತಿರುವುದರಿಂದ 250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ ಎಂದು ಸಚಿವ ಶಿವರಾಜ ಎಸ್.ತಂಗಡಗಿ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ರಾಜ್ಯದಲ್ಲಿ 1.41 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಒದಗಿಲು ಸಾಧ್ಯವಾಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು 150 ಹಾಸ್ಟೆಲ್ ಕೊಟ್ಟಿದೆ. ಈಗಾಗಲೇ ಮುಖ್ಯಮಂತ್ರಿಗಳು 50 ಹಾಸ್ಟೆಲ್ ನೀಡಿದ್ದಾರೆ. ಬೇಡಿಕೆ ಹೆಚ್ಚಿರುವುದರಿಂದ ಇನ್ನೂ 250 ಹಾಸ್ಟೆಲ್ ನೀಡುವಂತೆ ಮನವಿ ಮಾಡುವುದಾಗಿ ತಿಳಿಸಿದರು. ಕೊಪ್ಪಳ ಜಿಲ್ಲೆಯಲ್ಲಿ 42 ಮೆಟ್ರಿಕ್ ಪೂರ್ವ ಮತ್ತು 48 ಮೆಟ್ರಿಕ್ ನಂತರ ಸೇರಿ ಒಟ್ಟು 90 ಹಾಸ್ಟೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ವಿಧಾನಸಭಾಧ್ಯಕ್ಷ ಯು. ಟಿ. ಖಾದರ್ ಉಳ್ಳಾಲ ಕ್ಷೇತ್ರದಲ್ಲಿನ ದೀನ ದಯಾಳ್ ಉಪಾಧ್ಯಾಯ ಹಾಸ್ಟೆಲ್‌ಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ ಸಚಿವರಿಗೆ ತಿಳಿಸಿದರು. ಬಿಜೆಪಿ ಶಾಸಕ ಉಮಾನಾಥ ಕೋಟ್ಯಾನ್, ಮೂಡಬಿದಿರೆ ಮತ್ತು ಮುಲ್ಕಿಗೆ ಹಾಸ್ಟೆಲ್ ಮಂಜೂರು ಮಾಡುವಂತೆ ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಒತ್ತಾಯ

ಮೀನುಗಾರರ ಪ್ರೋತ್ಸಾಹಧನ ಹೆಚ್ಚಿಸಲಿ

• **ವಿಧಾನ ಪರಿಷತ್:** ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ನೀಡಲಾಗುವ ಧನ ಸಹಾಯವನ್ನು ಕನಿಷ್ಠ 5 ಲಕ್ಷ ರೂ. ಗೆ ಹೆಚ್ಚಿಸಬೇಕು. ಗ್ರಾಮೀಣ ಭಾಗದಲ್ಲಿ ಮನೆ ನಿರ್ಮಾಣಕ್ಕೆ ಗ್ರಾ.ಪಂ. ಯಿಂದಲೇ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಮರು ಜಾರಿಗೆ ತರಬೇಕು ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದರು.

ಮೇಲ್ಮನೆಯಲ್ಲಿ ಪ್ರಶ್ನೋತ್ತರ ವೇಳೆ ಪ್ರಸ್ತಾಪಿಸಿದ ಅವರು, 2022 ರಿಂದ ರಾಜ್ಯದಲ್ಲಿ ಈ ವರೆಗೆ ಒಂದೇ ಒಂದು ಮನೆ ಮಂಜೂರಾಗಿಲ್ಲ, ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಭಾಗದ ಫಲಾನುಭವಿಗಳಿಗೆ 1.20 ಲಕ್ಷ ರೂ., ಪರಿಶಿಷ್ಟ ಜಾತಿ, ಪಂಗಡದವರಿಗೆ 1.75 ಲಕ್ಷ ರೂ. ನೀಡಲಾಗುತ್ತದೆ. ಇತ್ತೀಚೆಗೆ ಎಲ್ಲ ವಸ್ತುಗಳು ದುಬಾರಿಯಾಗಿದ್ದರಿಂದ ಸರ್ಕಾರದ ಅತ್ಯಲ್ಪದ ಸಹಾಯಧನದಲ್ಲಿ ಮನೆ ನಿರ್ಮಾಣ ಸಾಧ್ಯವಾಗದೇ ಪರದಾಡುವಂತಾಗಿದೆ. ಅದರಂತೆ ಈ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ಸ್ಥಳೀಯ ಪಂಚಾಯತ್‌ನಿಂದ ಅನುಮತಿ ನೀಡಲಾಗುತ್ತಿತ್ತು. ಅದನ್ನು ನಗರಾಭಿವೃದ್ಧಿ ಕೋಶಕ್ಕೆ ವರ್ಗಾಯಿಸಿದ್ದರಿಂದ ಜನರು ಪರದಾಡುವಂತಾಗಿದೆ ಎಂದು ದೂರಿದರು. ಅದಕ್ಕೆ ಉತ್ತರಿಸಿದ ಮೀನುಗಾರಿಕೆ ಇಲಾಖೆ ಸಚಿವ ಮಂಕಾಳ ವೈದ್ಯ, ಈಗಿನ ನಿಮಯಗಳಲ್ಲಿ ಸಹಾಯಧನ ಹೆಚಿಸಲು ಸಾಧ್ಯವಿಲ್ಲ. ಇಲಾಖೆಯಿಂದ ನೀಡಲಾಗುವ ಸಹಾಯಧನದ ಜೊತೆಗೆ ನರೇಗಾದಿಂದ ನೀಡಲಾಗುವ 30 ಸಾವಿರ ರೂ. ಸೇರಿದರೆ 1.50 ಲಕ್ಷ ರೂ. ಹಾಗೂ ಪರಿಶಿಷ್ಟ ಫಲಾನುಭವಿಗಳಿಗೆ 2 ಲಕ್ಷ ರೂ. ಗಳಾಗುತ್ತವೆ. ಮುಂದಿನ ದಿನಗಳಲ್ಲಿ ಸಹಾಯಧನವನ್ನು 3 ಲಕ್ಷ ರೂ. ಗೆ ಹೆಚ್ಚಿಸಲು ಪ್ರಯತ್ನಿಸಲಾಗುವುದ ಎಂದು ಭರವಸೆ ನೀಡಿದರು.



ಸಹಕಾರ ಸಂಘಗಳ ನೇಮಕಾತಿ ಪಾರದರ್ಶಕವಾಗಲಿ

ಇದೇ ವೇಳೆ ಸಹಕಾರ ಸಂಘಗಳ ನೇಮಕಾತಿಯನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಶಾಸಕ ಎ. ವಸಂತ ಕುಮಾರ್, ಸಹಕಾರ ಸಂಘಗಳ ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪ ತಡೆಯಬೇಕು. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿಸುವ ಮೂಲಕ ಠೇವಣಿದಾರರ ವಿಶ್ವಾಸವನ್ನು ಗಟ್ಟಿಗೊಳಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಸಿಗುವಂತೆ ಮಾಡಬೇಕು ಎಂದು ಸರ್ಕಾರದ ಗಮನ ಸೆಳೆದರು.

ಶಾಸಕರ ಭವನ ಸುತ್ತಲಿನ ಹೋಟೆಲ್‌ಗಳಲ್ಲಿ ಊಟ-ತಿಂಡಿ ಸಿಗುತ್ತಿಲ್ಲ

ಮೇಲ್ಮನೆಯಲ್ಲೂ ಪ್ರತಿಧ್ವನಿಸಿದ ಅನಿಲ ಕೊರತೆ

• **ವಿಧಾನ ಪರಿಷತ್:** ದೇಶದ ವಿವಿಧೆಡೆ ಉಂಟಾಗಿರುವ ಅಡುಗೆ ಅನಿಲ ಕೊರತೆ ಮೇಲ್ಮನೆಯಲ್ಲೂ ಪ್ರತಿಧ್ವನಿಸಿ ಹಲವಾರು ದಿನಗಳಿಂದ ಸರಿಯಾಗಿ ಊಟ, ತಿಂಡಿ ಸರಿಯಾಗಿ ಸಿಗುತ್ತಿಲ್ಲ ಎಂಬ ಸದಸ್ಯರ ಆಹಾರ ವಿಷಯವು ಕುತೂಹಲ ಮೂಡಿಸಿದೆ.

ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಕಾಂಗ್ರೆಸ್ ಸದಸ್ಯ ಐವನ್ ಡಿಸೋಜಾ ಈ ವಿಷಯ ಪ್ರಸ್ತಾಪಿಸಿ, ಶಾಸಕರಿಗೆ ಶಾಸಕರ ಭವನ ಮತ್ತು ಸುತ್ತಲಿನ ಹೋಟೆಲ್‌ಗಳಲ್ಲಿ ಇಂದು ಇಡ್ಲಿ-ವಡೆ-ದೋಸೆ ಸೇರಿ ಯಾವುದೇ ಸರಿಯಾದ ಊಟ-ತಿಂಡಿ ಸಿಗುತ್ತಿಲ್ಲ. ಒಂದು ವಾರದಿಂದ ನಾವೆಲ್ಲಾ ಪರದಾಡುವಂತಾಗಿದೆ. ಕೊನೆಗೆ ಇಂದಿರಾ ಕ್ಯಾಂಟೀನ್‌ನಲ್ಲಿ ತಿನ್ನೋಣವೆಂದರೆ ಅಲ್ಲಿಯೂ ಗ್ಯಾಸ್ ಸಮಸ್ಯೆಯಿಂದ ಊಟ-ತಿಂಡಿ ಸಿಗುತ್ತಿಲ್ಲ. ಶಾಸಕರ ಪರಿಸ್ಥಿತಿ ಹೀಗಾದರೆ ಜನರ ಪರಿಸ್ಥಿತಿ ಹೇಗೆ ಸ್ವಾಮಿ. ಶೇ. 50 ರಷ್ಟು ಹೋಟೆಲ್‌ಗಳು ಬಂದ್ ಆಗಿವೆ. ದಯಮಾಡಿ ಸಮಸ್ಯೆಯನ್ನು ಪರಿಹರಿಸಿ ಎಂದು ಮನವಿ ಮಾಡಿದರು. ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿಅವರು, ಅದಕ್ಕೆಲ್ಲ ಸರ್ಕಾರವೇ ಉತ್ತರ ಕೊಡಬೇಕು. 10 ನಿಮಿಷ ಅನುಮತಿ ಕೊಡುತ್ತೇನೆ ತಿಂಡಿ ತಿಂದು ಬಾ ಎಂದು ಡಿಸೋಜಾಗೆ ಹೇಳಿದರು. ಆಗ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಡಿಸೋಜಾ ಅವರು ಹಸಿದು ಬಂದಿದ್ದಾರೆ. ದಯವಿಟ್ಟು ಇಡ್ಲಿ-ವಡಾ ತರಿಸಿಕೊಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಡಿಸೋಜಾ, ಗ್ಯಾಸ್ ಸಮಸ್ಯೆ ಇದೆ. ಕಟ್ಟಿಗೆಯೇ ಇಲ್ಲ, ಇನ್ನೂ ಇಡ್ಲಿ-ವಡೆ ಎಲ್ಲಿಂದ ತರುವುದು ಎಂದರು.

ಮಾತು ಮುಂದುವರಿಸಿದ ಐವಾನ್ ಡಿಸೋಜಾ, ಎಷ್ಟು ದಿನದೊಳಗೆ ಗ್ಯಾಸ್ ಸಿಗುತ್ತದೆ. 60 ರೂ. ಊಟ 100 ರೂ. ದರ ಹೆಚ್ಚಳ ಮಾಡಿದ್ದಾರೆ. ಜತೆಗೆ ಗ್ಯಾಸ್ ದರವೂ ಹಾಕುತ್ತಿದ್ದಾರೆ. ಆ ಮಟ್ಟಕ್ಕೆ ಇಂದು ಬಂದಿಳಿದಿದೆ ಎಂದರು. ಈ ವೇಳೆ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು, ಇದು ಕೇಂದ್ರದ ಗ್ಯಾಸ್ ಟ್ರಬಲ್ ಕತೆ ಎಂದು ಪರೋಕ್ಷವಾಗಿ ಪ್ರತಿಪಕ್ಷದ ಸದಸ್ಯರನ್ನು ಕಿಚಾಯಿಸಿದರು.



ವಿಕ್ಷಪಗಳ ನಡುವೆ ವಾಕ್ಸಮರ

ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ಜಗತ್ತಿನಾದ್ಯಂತ ಅಡುಗೆ ಅನಿಲದ ಕೊರತೆ ಉಂಟಾಗಿದ್ದು, ಇದರ ಎಫೆಕ್ಟ್ ಭಾರತದ ಮೇಲೂ ಬಿದ್ದಿದೆ. ಅದರಲ್ಲೂ ಅಡಿಗೆ ಅನಿಲದ ಬೆಲೆ ಏರಿಕೆಯಿಂದಾಗಿ ಅಡುಗೆ ಅನಿಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ಮನೆಗಳು ಹಾಗೂ ಹೊಟೇಲ್ ಗಳಿಗೂ ಭಾರಿ ಹೊಡೆತ ಬಿದ್ದಿದ್ದು, ಇದು ವಿಧಾನಪರಿಷತ್‌ನಲ್ಲೂ ದೊಡ್ಡಮಟ್ಟದ ಚರ್ಚೆಯೇ ಉಂಟಾಗಿದ್ದು, ಆಡಳಿತ ಹಾಗೂ ವಿಕ್ಷಪದ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

IN THE COURT OF THE ASSISTANT COMMISSIONER BANGALURU NORTH SUB-DIVISION AT BANGALORE

R.A(BE) No. 483/2023

BETWEEN : Sri. Nagaraju and another ...APPELLANTS

AND : Tahasildhar and other ...RESPONDENTS

NOTICE / SUMMONS TO THE RESPONDENT No. 3, 5, 6, 7, 10, 12, 15, 18A, 18(B), 19 & 20

Whereas the Appellants have prepared this appeal against impugned order dated 19-05-2022, in RRT(Dis) No. 207/2019-20 and impune dated: 19-10-1996 in IHC No. 16/1995-96 MRT-12 and in M.R. No. 40213-14 & M.R No. T-12/2020-21 Dt: 24-05-2021 and M.R No. 30/2022-23 Dt: 19-06-2023 and MRT No. 7/2021-22 Dt: 27-9-2021 & MRH 5/2013-14, MRH 5/2022-23, on Dt: 10-03-2023, and MRT-23/2022-23 Dt: 14-1-2023 in respect of the property bearing old Sy.No. 23, New Sy.No. 23/1, 23/5, 23/6, 23/7 measuring 1 acre 06 guntas out of total 2 acres 14 guntas (including 2 guntas) situated at Huskur Village, Bidarahalli Hobli, Bangalore East Taluk & Bangalore District, against the Respondents and the Respondent No. 1 to 18 are hereby informing to attend the case on **06.04.2026 at 3.00 p.m.** either in person or by pleader to answer the same failing which, the Respondent No. 3, 5, 6, 7, 10, 12, 15, 18A, 18(B), 19 & 20 heard and determined as Ex-parte.

Respondent No. 3, 5, 6, 7, 10, 12, 15, 18A, 18(B), 19 & 20

1. Smt. Muniyamma (R-3), W/o. Late Muniyappa, Aged about 70 years, **2. Smt. Anjinamma (R-5)** D/o. Late Chikkathimmappa, Aged about 67 years, **3. Smt. Manjulamma (R-6)** D/o. Late Chikkathimmappa, Aged about 65 years 1 to 3 (Respondent No. 3, 5, 6) are R/at Huskur Village, Bidharahalli Hobli, Bangalore East Taluk, Bangalore-560049.

4. Srinivas (R-7) S/o. Late Chikkavenkatappa,

5. Rajanna (R-10) S/o. Late Narayanappa, Major,

6. Sri. Manu (R-12) S/o. Late Narayanappa, Major, 4 to 6 (Respondent No. 7, 10 and 12) are Residing at Annaghatta Village, Kasaba Hobli, Devanahalli Taluk, Bengaluru Rural District.

8. Smt. Chinnamma (R-15) D/o. Late Chikkathimmappa, Aged about 55 years, R/at Huskur Village, Bidharahalli Hobli, Bangalore East Taluk, Bangalore-560 049.

9. Smt. Muniyamma (R-18(a)) D/o. Late Yerappa & Late Marakka, Aged about 61 years, R/at Parappana Agrahara Village, Begur Hobli, Bengaluru South Taluk, Bengaluru District-560068.

10. Smt. Akkayamma (R-18(B)) D/o. Late Yerappa & Late Marakka, Aged about 56 years, R/at Arekere Village, Beguru Hobli, Bengaluru South Taluk, Bengaluru District-560076.

11. Sri. Madhu G. (R-19) S/o. Ganesh A., Aged about 26 years, **12. Smt. Likhitha H.V., (R-20)** W/o. Madhu G., Aged about 20 years, Sl. No. 11 & 12, (R-19 & 20) are residing at Huskur Village, Bidarahalli Hobli, Bangalore East Taluk, Bangalore - 560 049.

Given under my hand and seal of Court, this 18th day of March 2026.

By order of the Court,
ವಿಶೇಷ ಉಪ ವಿಭಾಗಾಧಿಕಾರಿಗಳು,
ಬೆಂಗಳೂರು ಉತ್ತರ ಉಪ-ವಿಭಾಗ, ಬೆಂಗಳೂರು.

BABU, Advocate
No. 9th Floor, B.K. Hostel Building,
Near Avenue Road Cross, Kilari Road,
Bangalore-53. Mob. No. 9880839095

ನಮೂನೆ ಸಂಖ್ಯೆ. ಯುಆರ್‌ಸಿ-2

ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ ನೋಂದಣಿಯ ಕುರಿತು ಅಧಿಸೂಚನೆ ನೀಡುವ ಜಾಹೀರಾತು (ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 374(b) ಮತ್ತು ಕಂಪನಿಗಳ (ನೋಂದಾಯಿಸಲು ಅಧಿಕೃತ) ನಿಯಮಗಳು, 2014 ರ ನಿಯಮ 4(1) ರ ಅನುಸಾರ)

1. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 366 ರ ಉಪ-ವಿಭಾಗ (2) ರ ಅನುಸಾರ, ಮೆಕ್ಸಿಕ್ ಇಂಜಿನಿಯರ್ಸ್ ಎಲ್‌ಎಲ್‌ಪಿ (LLPIN AAQ-1386) ಎಂಬ ಸೀಮಿತ ಹೊಣೆಗಾರಿಕೆ ಪಾಲು ದಾರಿಕೆ ಸಂಸ್ಥೆಯನ್ನು ಕಂಪನಿಗಳ ಕಾಯ್ದೆ 2013 ರ ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ, ಷೇರುಗಳ ಮೂಲಕ ಲಿಮಿಟೆಡ್ ಕಂಪನಿಯಾಗಿ ನೋಂದಾಯಿಸಲ್ಪಡಲು ಬೆಂಗಳೂರು, ಕರ್ನಾಟಕದ ಕಂಪನಿಗಳ ರಿಜಿಸ್ಟ್ರಾರ್‌ಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂಬ ಸೂಚನೆಯನ್ನು ಇಲ್ಲಿ ನೀಡಲಾಗಿದೆ.

2.ಕಂಪನಿಯ ಪ್ರಮುಖ ಉದ್ದೇಶಗಳು: ಆರ್ಕಿಟೆಕ್ಚರಲ್ ಮೆಟೀರಿಯಲ್ಸ್ ಮತ್ತು ಕೈಗಾರಿಕ ಉಪಕರಣಗಳ ತಯಾರಿಕೆ ವ್ಯವಹಾರ ಮತ್ತು ಟರ್ನ್‌ಕೀ ಯೋಜನೆಗಳ ವ್ಯವಹಾರವನ್ನು ನಡೆಸುವುದು.

3.ಪ್ರಸ್ತಾವಿತ ಕಂಪನಿಯ ಕರಡು ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರತಿಯನ್ನು ಸೈಟ್ ನಂ.39, ಸರ್ವೆ ನಂ.7/2, ಕಚೋಹಳ್ಳಿ ಕೈಗಾರಿಕಾ ಪ್ರದೇಶ, ದಾಸನಪುರ ಹೋಬಳಿ, ಮಾಡಿ ಮುಖ್ಯ ರಸ್ತೆ, ಕಚೋಹಳ್ಳಿ, ಬೆಂಗಳೂರು-562123 ಇಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು.

4.ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್, ಪ್ಲಾಟ್ ನಂ.6, 7 ಮತ್ತು 8, ಸೆಕ್ಟರ್ 5, ಐಎಂಟಿ ಮಾನೆಸರ್, ಜಿಲ್ಲೆ ಗುರ್ಗಾಂವ್ (ಹರಿಯಾಣ), ಪಿನ್ ಕೋಡ್- 122050 ಇಲ್ಲಿರುವ ರಿಜಿಸ್ಟ್ರಾರ್‌ಗೆ, ಈ ನೋಟಿಸ್ ಪ್ರಕಟವಾದ ದಿನಾಂಕದಿಂದ 21 ದಿನಗಳ ಒಳಗೆ, ಕಂಪನಿಯ ನೋಂದಾಯಿತ ಕಚೇರಿಯ ವಿಳಾಸಕ್ಕೆ ಒಂದು ಪ್ರತಿಯೊಂದಿಗೆ ಕಳುಹಿಸ ಬಹುದು ಎಂದು ಇಲ್ಲಿ ಸೂಚಿಸಲಾಗಿದೆ.

ಮೆಕ್ಸಿಕ್ ಇಂಜಿನಿಯರ್ಸ್ ಎಲ್‌ಎಲ್‌ಪಿ
ಪರವಾಗಿ

ಹೆಚ್.ಎಲ್. ಶಿವಪ್ರಕಾಶ
ನಿಯೋಜಿತ ಪಾಲುದಾರ
ಡಿಪಿಐಎನ್: 07541824

ಯಲ್ಲಪ್ಪ ಆರ್. ಹುದ್ದಾರ್
ನಿಯೋಜಿತ ಪಾಲುದಾರ
ಡಿಪಿಐಎನ್: 07541826

ಪ್ರವೀಣ್. ಎಸ್.ಎಸ್
ನಿಯೋಜಿತ ಪಾಲುದಾರ
ಡಿಪಿಐಎನ್: 07541788

ದಿನಾಂಕ: 19/03/2026 ಸ್ಥಳ: ಬೆಂಗಳೂರು

ಸಾರ್ವಜನಿಕ ಪ್ರಕಟಣೆ

[illegible] ರವರು ದಿನಾಂಕ 18.12.1999 ರಂದು [illegible] ದಿನಾಂಕ 24.03.1988 ರಂದು [illegible] ದಿನಾಂಕ 06.07.1995 ರಂದು [illegible] ಸಂಖ್ಯೆ. 373/2025, 374/2026 [illegible] ದಿನಾಂಕ 24.03.2026 [illegible]

ದಿನಾಂಕ 17ನೇ ಮಾರ್ಚ್ 2026 [illegible]

[illegible]
ಅಡ್ವಕೇಟ್, ಶ್ರೀ. ಟಿ.ಎಲ್. ಜಯರಾಮು

IN THE COURT OF THE I ADDL. SENIOR CIVIL JUDGE AT KOLAR
O.S.NO. 707/2025

Between : Ramachndrappa ...Plaintiff
AND
Narayanaswamy and others ...Defendants

NOTICE TO DEFENDANT No.2, 3 ad 7 UNDER ORDER 5 RULE 20 READ WITH SECTION 151 OF CPC

2) Lakshmidevamma W/o Narayana swmay Aged about 53 years, R/at Chikkanahalli village Shettikothanur post Vokkaleri Hobli, Kolar Taluk.

3) Smt. Radhamma D/o Narayana swamy Aged about 33 years R/at Kotapalli village, Ethur Mandalam, Punganoor Taluk Chittor district, (AP).

7) Shyjala C.N D/o Narayanaswmay, Aged 31 years R/at Mathangapura village, Huladenahalli post Malur Taluk Kolar district.

The Plaintiff has filed above suit against the defendants for and such other the relief of specific performance of contract reliefs This Hon'ble court be pleased to issued notice to the Defendant No. 2, 3 and 5 but Defendant No. 2, 3 and 5 failed to receive the same, finally the plaintiff taken steps through RPAD, but same was returned un-served. Hence the Defendant No. 2, 3 and 5 are hereby summoned to appear before this Hon'ble court to answer all such questions relating to the above proceedings in order to enable the court effectually and completely to adjudicate upon and settled all the questions involved.

The above matter is coming up for hearing on 30-4-2026 Defendant No. 2, 3 and 5 may appear before this court in person or through his advocate on that day at 11.00.am to file his objections if any. Failing which the matter will be heard and determined exparte in your absence.

Given under my hand and seal of the court 17-3-2026

By the order of the Court,
S/d Shirasthedar,
Hon'ble I Addl. Senior Civil Judge Kolar.
A.Sathish Kumar, Advocate, Kolar.

ಮಾನ್ಯ 19 ನೇ ಎಸಿಜೆಎಂ ನ್ಯಾಯಾಲಯ, ಬೆಂಗಳೂರು ನಗರ, ಬೆಂಗಳೂರು

ಸಿ.ಮಿಸ್. ಸಂಖ್ಯೆ. 3942/2026

[illegible]

ಸಾರ್ವಜನಿಕ ಪ್ರಕಟಣೆ

[illegible]

ದಿನಾಂಕ 23.04.2026 ರಂದು [illegible]

By Order of the Court, Sheristedar, XIX Addl. Chief Judicial Magistrate Court, Bengaluru City.

40ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

ಕ್ರಿ. ಮಿಸ್ಸೆಲೇನಿಯಸ್ ಪಿಟಿಷನ್ ಸಂಖ್ಯೆ: 3116/2026

[illegible]

ಮೇಲ್ಕಂಡ ವಿಷಯಕ್ಕೆ ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ, ಅವರು **02.04.2026 ರಂದು ಬೆಳಿಗ್ಗೆ 11.00 ಗಂಟೆಗೆ** ಈ ನ್ಯಾಯಾಲಯದ ಮುಂದೆ ಸ್ವತಃ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬಹುದು. ಹಾಗೆ ಮಾಡದಿದ್ದಲ್ಲಿ, ಅರ್ಜಿಯನ್ನು ಕಾನೂನಿನ ಪ್ರಕಾರ ನಿರ್ಧರಿಸಲಾಗುವುದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 16.03.2026 ರಂದು ನೀಡಲಾಗಿದೆ.

By Order of the Court, Senior Sheristedar, XXXVIII ADDL. Chief Judicial Magistrate Court, Bengaluru City.

ಅರ್ಜಿದಾರರ ಪರ ವಕೀಲರು : **ಶ್ರೀಮತಿ ಅಶ್ವಿನಿ ಎಸ್ ಆದಮ್ಮ ಲೀಗಲ್**, ಬೆಂಗಳೂರು.

CHANGE OF NAME

I, **SATHYA KUMAR G (SATHYA KUMAR GOVINDARAJ),** aged about 32 years, S/o. Govindaraj, No. 06, Deepa Nagar, 2nd Cross, Poorva Pratham Layout, Bogadi, Mysuru-570026, do hereby declare that I have changed my name from **SATHIYA KUMAR G (SATHIYA KUMAR GOVINDARAJ)** to **SATHYA KUMAR G (SATHYA KUMAR GOVINDARAJ),** vide affidavit dated 17.03.2026, sworn to before K.V. Mani, Advocate & Notary, Govt. of India, Bengaluru.

IN THE COURT OF THE I ADDITIONAL CIVIL JUDGE AND JMFC AT CHICKBALLAPUR
Crl. Mis.579/2025

PETITIONER : Smt. N Ashwathamma W/o Late. BT Srinivas, Aged about 67 years, R/at, Manchanabale Village, Kasaba Hobli, Chickaballapur Taluk, **-V/s-**
RESPONDENT: The Registrar of Births & Deaths, The Tahasildar, Chickballapur Taluk, Chickballapur.

DRAFT PAPER PUBLICATION

The petitioner has filed the above petition for grant of death certificate of her father **Narayanappa S/o Late. Subbanna** was died on 15-6-1973, at Arikete Village, Kasaba Hobli, Chickballapur Taluk and District. Any person has any right or interest may appear before this Hon'ble court on 6.4.2026 at 11 am in person or through to file your objection if any. Take notice that in default of your appearance on the date before mentioned in petition in it will be heard and determine ex-parte.

By Order of the Court
Sheristhedar, ADDL Civil Judge & JMFC
Chickballapur

Advocate for service: **Smt. Jayasudha,** Advocate, Chickballapur-562101

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸೂಚಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕಾರೇಹಳ್ಳ ಗ್ರಾಮದ ಹನುಮಯ್ಯ ಹೆಚ್. ರವರ ಮಗ **ನಾಗೇಂದ್ರ.ಹೆಚ್** (ಖರೀದಿದಾರರು) ಇವರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕುಲುವನಹಳ್ಳ ಗ್ರಾಮ, 1ನೇ ಮುಖ್ಯ ರಸ್ತೆ, ಕೆ. ವಿ. ನಾಗಯ್ಯ ರಸ್ತೆ, ಮನೆ ನಂ.20, ಇಲ್ಲಿ ವಾಸವಾಗಿರುವ ಬೈಲಪ್ಪ. ಕೆ. ಎನ್ ರವರ ಹೆಂಡತಿ **ಶ್ರೀಮತಿ. ಜಿ.ಭಾಗ್ಯಮ್ಮ** (ಮಾಲೀಕರು) ಇವರಿಂದ ಕೊಂಡುಕೊಳ್ಳಲು ಉದ್ದೇಶಿಸಿದ್ದಾರೆ.

ಆದಾಗಿ ಷೆಡ್ಯೂಲ್ ಸ್ವತ್ತು ಶ್ರೀಮತಿ. ಜಿ.ಭಾಗ್ಯಮ್ಮ ನವರ ಸ್ವಯಾರ್ಜಿತವಾದ ಸ್ವತ್ತಾಗಿದ್ದು, ತಾರೀಖು- 04-01-2005ರಲ್ಲು ಸಿದ್ದಗಂಗಯ್ಯ ನವರು ನೆಲಮಂಗಲದ ಉಪ-ನೊಂದಣಾಧಿಕಾರಿಗಳವರ ಕಛೇರಿಯ ಒಂದನೇ ಪುಸ್ತಕದ ದಸ್ತಾವೇಜು ನಂಬರ್ ಎನ್.ಎಮ್.ಜಿ-1-06889-2004-05ಆಗಿ, ಸಿ.ಡಿ. ನಂಬರ್ ಎನ್.ಎಮ್.ಜಿ.ಡಿ.-27ನೇದ್ದರಲ್ಲಿ ನೊಂದಾಯಿಸಿರುವ ಶುದ್ಧ ಕ್ರಯ ಪತ್ರದ ಮೂಲಕ ಶ್ರೀಮತಿ.ಜಿ.ಭಾಗ್ಯಮ್ಮ ಕೋಂ. ಕೆ.ಎನ್.ಬೈಲಪ್ಪ ನವರಿಗೆ ಬಂದು, ಶ್ರೀಮತಿ.ಜಿ. ಭಾಗ್ಯಮ್ಮ ಕೋಂ. ಕೆ.ಎನ್.ಬೈಲಪ್ಪ ನವರ ಹೆಸರಿಗೆ ಖಾತೆ ದಾಖಲಾರುತ್ತದೆ. ಹಾಲಿ ಷೆಡ್ಯೂಲ್ ಸ್ವತ್ತು ಮೇಲ್ಕಂಡ ಮಾಲೀಕರ ಸಂಪೂರ್ಣ ಸ್ವಾಧೀನಾನುಭವದಲ್ಲಿದ್ದು, ಸದರಿ ಸ್ವತ್ತು ಯಾವುದೇ ರೀತಿಯ ಋಣಭಾರ, ದಾವೆಗಳು ಮತ್ತು ಯಾವುದೇ ಕಾನೂನಿನ ನಡಾವಳಿಗಳಿಲ್ಲದೆ ಮುಕ್ತವಾಗಿರು-ವುದೆಂದು ಸ್ವತ್ತಿನ ಮಾಲೀಕರುಗಳು ಪ್ರತಿಪಾದಿಸಿದ್ದಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಕ್ರಯ, ವಿನಿಮಯ, ಆಧಾರ, ಪ್ರಭಾರ, ಧರಣಾಧಿಕಾರ ಉಡುಗೊರೆ, ದಾನ, ವಾರಸುದಾರಿಕೆ, ಉಯಿಲು, ಸ್ವಾಧೀನತೆ ಹಕ್ಕು ಇತ್ಯರ್ಥವಾಗದೆ ಉಳಿದಿರುವುದು, ಜೀವನಾಂಶ, ಅನುಭೋಗ, ಒಪ್ಪಂದ ಪತ್ರ, ಕರಾರು ಪತ್ರ, ಪವರ್ ಆಫ್ ಅಟಾರ್ನಿ, ಆಯ್ಕೆ ಹಕ್ಕು ಅಥವಾ ಇನ್ನಿತರೆ ರೂಪದಲ್ಲಿ ಯಾವುದೇ ಹಕ್ಕು ಹೊಂದಿದ್ದರೆ ಈ ನೋಟೀಸ್ ಪ್ರಕಟವಾದ ದಿನಾಂಕದಿಂದ **ಹದಿನೈದು(15)** ದಿನಗಳ ಅವಧಿಯ ಒಳಗಾಗಿ ಸಂಬಂಧಿಸಿದ ಎಲ್ಲಾ ದಾಖಲಾತಿ ಪುರಾವೆಯೊಡನೆ ಲಿಖಿತ ರೂಪದಲ್ಲಿ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಹಕ್ಕುಪತ್ರಗಳು ಸ್ಪಷ್ಟವಾಗಿರುವುದಾಗಿ ಮತ್ತು ಮಾರಾಟ ಮಾಡಬಹುದಾದ ಹಕ್ಕುಗಳನ್ನು ಮಾಲೀಕರು ಹೊಂದಿರುವುದಾಗಿ ನಮ್ಮ ಕಕ್ಷಿದಾರರು ಭಾವಿಸುವರು ಹಾಗೂ ಮಾರಾಟ ವ್ಯವಹಾರ ನಡೆಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕುಲುವನಹಳ್ಳ ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಯಲ್ಲಿರುವ ಸುಧಾನಗರಕ್ಕೆ ಸೇರಿದ ಖಾನೇಷುಮಾರಿ (ಗ್ರಾಮಪಂಚಾಯ್ತಿಯ ದಾಖಲೆಗಳ ಪ್ರಕಾರ)-1/18, ಇ-ಖಾತಾ ಸಂಖ್ಯೆ- 150300700301600001ನೇ ನಂಬರಿನಲ್ಲಿ ಪೂರ್ವ-ಪಶ್ಚಿಮ:-12.192 ಮೀಟರ್, ಉತ್ತರ-ದಕ್ಷಿಣ:-9.144 ಮೀಟರ್ ಒಟ್ಟು 111.48 ಚದರ ಮೀಟರ್ (ಪೂರ್ವ-ಪಶ್ಚಿಮ:-40ಅಡಿ, ಉತ್ತರ-ದಕ್ಷಿಣ:-30 ಅಡಿ ಒಟ್ಟು 1200ಚದರ ಅಡಿ) ಉಳ್ಳ ಸ್ವತ್ತಿನಲ್ಲಿ ಕಟ್ಟಿರುವ ಆರ್.ಸಿ.ಸಿ. ರೂಫಿಂಗಿನ ಮನೆ ಸಹಿತವಾದ ಸ್ವತ್ತಿಗೆ ಒಟ್ಟು ಚಕ್ಕುಬಂದಿ: **ಪೂರ್ವಕ್ಕೆ:-** ರಸ್ತೆ, **ಪಶ್ಚಿಮಕ್ಕೆ:-** ಸುನಂದಮ್ಮನ ಮನೆ, **ಉತ್ತರಕ್ಕೆ:-** ಪುಟ್ಟಮ್ಮನ ಮನೆ, **ದಕ್ಷಿಣಕ್ಕೆ:-** ರಸ್ತೆ.

ಟಿ.ಎಸ್.ಲಕ್ಷ್ಮಿಷ, ವಕೀಲರು
ಕಚೇರಿ, ಕೆನರಾ ಬ್ಯಾಂಕ್ ರಸ್ತೆ,
ತ್ಯಾಮಗೊಂಡ್ಲು, ನೆಲಮಂಗಲ,
ಬೆಂಗಳೂರು ಗ್ರಾಮಾಂತರ ಜಿಲ್ಲೆ -562132
ಮೊಬೈಲ್ ಸಂಖ್ಯೆ.9036609912
E:mail: lakshmishadvocate@gmail.com

ಹಣ್ಣು, ಹೂವು ಮತ್ತು ತರಕಾರಿಗಳ
(ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬಿನ್ನಿಪೇಟೆ, ಬೆಂಗಳೂರು

ಸಂಖ್ಯೆ: ಹಹೂಮತ(ವಿ)/ಕೃಉಮಾಸ(ಬೆಂ)/3565/2025-26
ದಿನಾಂಕ: 18.03.2026

-: ಸಾರ್ವಜನಿಕ ಪ್ರಕಟಣೆ :-

ಸಮಿತಿಯ ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ರೈತ ಬಾಂಧವರು, ಪೇಟೆಕಾರ್ಯಕರ್ತರು ಹಾಗೂ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಈ ಸಮಿತಿ ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ, ಬೆಂಗಳೂರು ಇಲ್ಲಿ ವ್ಯವಹರಿಸಲು ಮೆ: ಓಂ ಶ್ರೀ ಬನಶಂಕರಿ ಮಂಡಿ, ಮಾಲೀಕರು: ಶ್ರೀ ಮಂಜುನಾಥ ಬಿ.ವಿ., ಮಳಿಗೆ ಸಂಖ್ಯೆ 323, ಎ ಬ್ಲಾಕ್, ಮೊದಲನೇ ಮಹಡಿ ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ, ಬೆಂಗಳೂರು ಇವರು ದಲ್ಲಾಲರು/ಸಂಗ್ರಹಣಗಾರರ ಲೈಸನ್ಸ್ ಪಡೆದು ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುತ್ತಿರುತ್ತಾರೆ.

ಪ್ರಸ್ತುತ ಸದರಿ ಸಂಸ್ಥೆಯ ಮಾಲೀಕರಾದ ಶ್ರೀ ಮಂಜುನಾಥ ಬಿ.ವಿ., ಇವರು ಸಮಿತಿಗೆ ಅರ್ಜಿ ಸಲ್ಲಿಸಿ ಸಂಸ್ಥೆಯ ವ್ಯಾಪಾರ ಅಭಿವೃದ್ಧಿ ಪಡಿಸುವ ಸಲುವಾಗಿ ಶ್ರೀ ಸೂರ್ಯಮೂರ್ತಿ ನೆಲ್ಲರಸು ಬಿನ್ ನೆಲ್ಲರಸು, ನಂ.4, 3ನೇ ಮಹಡಿ, ಆರ್.ಆರ್.ಲೇನ್, ಕಲಾಸಿಪಾಳ್ಯಂ, ಬೆಂಗಳೂರು ಉತ್ತರ, ಬೆಂಗಳೂರು-02 ಎಂಬುವವರನ್ನು ಪಾಲುದಾರರಾಗಿ ಸೇರಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ.

ಆದುದರಿಂದ, ಸದರಿಯವರಿಂದ ಯಾರಿಗಾದರೂ ಬಾಕಿ ಇದ್ದಲ್ಲಿ ಹಾಗೂ ಈ ಬಗ್ಗೆ ಯಾರಿಂದಲಾದರೂ ಸಲಹೆ/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 07 ದಿನದೊಳಗಾಗಿ ದಾಖಲೆ ಸಹಿತ ಸಮಿತಿಗೆ ಸಲ್ಲಿಸಬಹುದೆಂದು ತಿಳಿಸಲಾಗಿದೆ ಮತ್ತು ನಿಗದಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಹಾಗೂ ಯಾವ ಆಕ್ಷೇಪಣೆಗಳು ಬಾರದಿದ್ದಲ್ಲಿ ನಿಯಮಾನುಸಾರ ಸದರಿಯವರ ಕೋರಿಕೆಯನ್ನು ಪರಿಗಣಿಸಲಾಗುವುದು.

ಸಹಿ/- ಕಾರ್ಯದರ್ಶಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ದೇವನಹಳ್ಳಿ ಟೌನ್, ಪ್ರಶಾಂತ್‌ನಗರ, ನಂ.127 ರಲ್ಲಿ ವಾಸವಾಗಿರುವ ವೆಂಕಟೇಶಪ್ಪ ರವರ ಮಗನಾದ **ಶ್ರೀ. ಕೇಶವಮೂರ್ತಿ.ವಿ** ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ವಿಜಯಪುರ ಟೌನ್, 3ನೇ ವಿಭಾಗ, 13ನೇ ವಾರ್ಡ್ ಅರಳೇಪೇಟೆಯಲ್ಲಿರುವ ವಿಜಯಪುರ ಪುರಸಭಾ ಸ್ವತ್ತಿನ ನಂ.15-506-61ಎ, ಖಾತಾ ನಂ.1973/1604/1030 ರ ವಿಸ್ತೀರ್ಣ ಪೂರ್ವ ಪಶ್ಚಿಮ 32 ಅಡಿಗಳು ಮತ್ತು ಉತ್ತರ ದಕ್ಷಿಣ 92 ಅಡಿಗಳು ಒಟ್ಟು 2944 ಚದರ ಅಡಿಗಳ ಅಳತೆಯುಳ್ಳ ಸ್ವತ್ತಿಗೆ ಮಾಲೀಕರಾಗಿದ್ದು, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ದೇವನಹಳ್ಳಿ ಉಪನೋಂದಣಾಧಿ-ಕಾರಿಗಳವರ ಕಚೇರಿಯಲ್ಲಿ ನೋಂದಾಯಿಸಲಾಗಿರುವ 1) ದಿನಾಂಕ: 18.03.2008 ರ ಶುದ್ಧಕ್ರಯಪತ್ರದ ನೋಂದಣಿ ಸಂಖ್ಯೆ:ಡಿಎನ್‌ಹೆಚ್-1-07690-2007-08 ರಂತೆ ಸಿಡಿ ನಂ.ಡಿಎನ್‌ಹೆಚ್‌ಡಿ151, 2) ದಿನಾಂಕ: 10.07.2008 ದಾನಪತ್ರದ ನೋಂದಣಿ ಸಂಖ್ಯೆ: ಡಿಎನ್‌ಹೆಚ್-1-01990-2008-09 ಆಗಿ ಸಿಡಿ ನಂಬರ್ ಡಿಎನ್‌ಹೆಚ್‌ಡಿ158, 3) ದಿನಾಂಕ: 23.12.2008 ರ ದಾನ ಪತ್ರದ ತಿದ್ದುಪಡಿ ಪತ್ರದ ನೋಂದಣಿ ಸಂಖ್ಯೆ: ಡಿಎನ್‌ಹೆಚ್-1-04951-2008-09 ಆಗಿ ಸಿ.ಡಿ. ನಂಬರ್ ಡಿಎನ್‌ಹೆಚ್‌ಡಿ167, 4) ದಿನಾಂಕ: 23.01.2009 ರ ಕ್ರಯದ ಕರಾರು ಪತ್ರದ ನೋಂದಣಿ ಸಂಖ್ಯೆ:ಡಿಎನ್‌ಹೆಚ್-1-05457-2008-09 ಆಗಿ ಸಿ.ಡಿ.ನಂಬರ್ ಡಿಎನ್‌ಹೆಚ್‌ಡಿ168 ಮತ್ತು 5) ದಿನಾಂಕ:19.08.2013 ಕ್ರಯದ ಕರಾರು ರದ್ದಿಯಾತಿ ಪತ್ರದ ನೋಂದಣಿ ಸಂಖ್ಯೆ: ಡಿಎನ್‌ಹೆಚ್-1-03974-2013-14 ಆಗಿ ಸಿಡಿ ನಂಬರ್ ಡಿಎನ್‌ಹೆಚ್‌ಡಿ341 ರ ಅಸಲು ಪತ್ರಗಳನ್ನು ದಿನಾಂಕ:12.03.2026 ರಂದು ದೇವನಹಳ್ಳಿಯಿಂದ ಬೆಂಗಳೂರಿಗೆ ಬರುವಾಗ ಕಳೆದು ಕೊಂಡಿರುತ್ತಾರೆ ತಕ್ಷಣವೆ ಹುಡುಕಲಾಗಿ ಸಿಕ್ಕಿರುವುದಿಲ್ಲ. ಈ ಬಗ್ಗೆ ನನ್ನ ಕಕ್ಷಿದಾರರು ದಿನಾಂಕ: 17.03.2026 ರಂದು ಇ-ಲಾಸ್ಟ್ ರಿಪೋರ್ಟ್ ನಂ.2114291/2026, 2114309/2026, 2114320/2026, 2114328/2026 ಮತ್ತು 2114333/2026 ರಂತೆ ದೂರನ್ನು ಸಹ ದಾಖಲಿಸಿರುತ್ತಾರೆ. ಸದರಿ ಅಸಲು ದಾಖಲಾತಿಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ತಕ್ಷಣವೇ ಮೇಲ್ಕಂಡ ವಿಳಾಸಕ್ಕಾಗಲೀ ಅಥವಾ ವಕೀಲರ ವಿಳಾಸಕ್ಕಾಗಲೀ ತಲುಪಿಸತಕ್ಕದ್ದು.

ಶ್ರೀಮತಿ. ಮಹದೇವಮ್ಮ. ಕೆ.ಎಸ್. ವಕೀಲರು
ನಂ.311, ಮೊದಲನೇ ಮಹಡಿ, ಪ್ರಭಾತ್ ಕಾಂಪ್ಲೆಕ್ಸ್,
ಕೆ.ಜಿ.ರಸ್ತೆ, ಬೆಂಗಳೂರು- 560 001.
ಮೊ.ಸಂ. 9663749194

BEFORE THE MOTOR ACCIDENT CLAIMS TRIBUNAL (SCCH -14) ADDITIONAL SMALL CAUSES JUDGE AND ACJM BENGALURU
M.V.C. No. 3778/2024

BETWEEN: Sri. Francis Panakkal... PETITIONER
AND: Sri. Shabbir Ahmed... RESPONDENTS

NOTICE/SUMMONS TO RESPONDENT No.1

Sri. Shabbir Ahmed, S/o Nazeer Ahmed Shaik, aged about 40 years, R/At No 21/2, Sini House, 5th Cross, Dinooru, R.T. Nagara Post, Bengaluru-560032.

WHEREAS, the petitioner above named has preferred the above petition against you before the Hon'ble Motor Accident Claims Tribunal, SCCH -14 XVI Additional Small Causes Judge and ACJM Bengaluru at Bengaluru seeking the relief of death compensation. You are here by summoned to appear before the Hon'ble XVI Additional Small Causes Judge and ACJM Bengaluru in person or through a pleader on **10-04-2026** at 11:00 A.M to answer the same, failing which the petitioner will be heard and decided in your absence.

- Place, Date and Time of accident on 15-12-2021 at about 10:45 A.M, Footpath, Laskar Main Road, opposite to Adugodi Star Bazaar, Bengaluru-560030.
- 2-wheeler Scooter No. KA-02-JZ-8517
- Amount of Compensation Claimed: Rs.50 Lakhs.

Given under my hand and seal of this Court at Bengaluru on the day 16-03-2026.

By order of the Court, Assistant Registrar, Court of Small Causes, Bengaluru.

K.G. SADASHIVAIAH, Advocate.
S & S ASSOCIATES
186/1, 2nd Floor, Abhishek Complex, Behind Natraja Theatre, Sheshadripuram, Bengaluru-560020.

IN THE COURT OF THE ADDITIONAL CITY CIVIL JUDGE AT BANGALORE CCH-2
P & SC. 67/2026

BETWEEN: 1. Smt. Kairali.O.K W/o Late P.N. Ramakrishnan, aged about 62 years, Aadhar : 603499760333
2. **Sri. Rajith.P.R** S/o Late P.N.Ramakrishnan, aged About 42 Years, Aadhar : 339395546440
3. **Jijin.P.R.**, S/o Late.P.N.Ramakrishnan, Aged about 40 Years, Aadhar : 590271272644, All are residing at # 4, 2nd Main Road , 4th Cross Hongasandra, Bhomanahalli, Bangalore- 560068 ... **PETITIONERS**
AND: NIL RESPONDENT

PUBLIC NOTICE

WHEREAS, the above named Petitioners have made petition to this court under section 372 Indian Succession Act for grant of Succession Certificate in favor of the Petitioners in respect of the schedule mentioned below. The below mentioned schedule has been held by Late P.N. Ramakrishnan the husband of the 1st petitioner and father of petitioners 2 and 3 who died on 22/4/2025.

The interested parties are hereby called upon to appear before this court in person or by pleader duly instructed on **15-04-2026** at 11 am informed to show cause against the petitioners, failing wherein the appearance will be held and declared as ex parte.

SCHEDULE PROPERTY

Schedule No 1: The Mutual fund holdings in the name of Late.P.N. Ramakrishnan in Demat Account Number 1203600003165091 and it is more fully described hereunder:

ISIN Type	ISIN Name Rate	Company Name	Balance Type	Rate Type	Qty	Value
INF209K01462	ABSL FOCUS FD GROW	ADITYA BIRLA SUN LIFE AMC LTD #ABSL MF-ABSL FOCUSED FUND	Beneficiary	149.21	2081.074	310517.05
INF209K01BR9	ABSL LCF AGR	ADITYA BIRLA SUN LIFE AMC LTD #ABSL FRONTLINE EQUITY FUND PLAN-A	Beneficiary	541.15	550.796	298063.26
INF760K01167	CANROB LMCF GROWTH	CANARA ROBECO ASSET MANAGEMENT LTD-CANARA ROBECO MUTUAL FUND-CANARA ROBECO LARGE AND MID CAP FUND	Beneficiary	247.90	1268.582	314481.48
INF090I01569	FRANK FISCF GROWTH	FRANKLIN TEMPLETON ASSET MANANGEMENT (INDIA) PRIVATE LTD-FRANKLIN INDIA SMALLER COMPANIES FUND	Beneficiary	162.64	1955.899	318105.46
INF917K01QC7	HSBC SCF R-GROWTH	HSBC ASSET MANAGEMENT (1) PVT LTD #HSBC MUTUAL FUND-HSBC SMALL CAP FUND	Beneficiary	75.64	14296.933	325028.61
INF109K01431	ICICI L&MDF GROW	ICICI PRUDENTIAL AMC LTD#ICICI PRUDENTIAL MF-ICICI PRUDENTIAL LARGE & MID CAP FUND	Beneficiary	1040.32	215.896	224600.93
INF200K01180	SBI LCF GRW	SBI FUNDS MANAGEMENT LIMITED #SBI MF BLUE CHIP FUND - DIVIDEND	Beneficiary	95.77	3151.081	301791.63
					Total	**2092588.42**

Given under my hand and seal of this Hon'ble Court, this the 17th day of March 2026.
By Order Of the Court, Assistant Registrar, City Civil Court, Bangalore

Advocate for petitioners: **Sudheer. K**
BSPS Associates
#207, 2nd Floor, Swiss Complex, Race Course Road, Bangalore 560 001.

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-1 /2025-26/4375 ದಿ:-17.03.2026

ಅಲ್ಪಾವಧಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2025-26/IND0217	200.00	7	PWD/2025-26/RD/WORK_INDENT32937	157.88
2	PWD/2025-26/IND0219	300.00	8	PWD/2025-26/RD/WORK_INDENT29666	140.00
3	PWD/2025-26/IND0216	240.00	9	PWD/2025-26/RD/WORK_INDENT32903	200.36
4	PWD/2025-26/IND0215	260.00	10	PWD/2025-26/RD/WORK_INDENT32169/CALL-2	100.00
5	PWD/2025-26/RD/WORK_INDENT34539	105.00	11	PWD/2025-26/BD/WORK_INDENT29214	400.00
6	PWD/2025-26/RD/WORK_INDENT34614	100.00			

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **27.03.2026 (16.00 ಗಂಟೆಗೆ)**. 3.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ: **ದಿನಾಂಕ: 30.03.2026 (10.30 ಗಂಟೆಗೆ)**. 4.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: KPP Portal** ನಲ್ಲಿ ಇರುವಂತೆ

ವಿಶೇಷ ಸೂಚನೆ:- ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ , ಮರುಟೆಂಡರ್ ಅಹ್ವಾನಿಸಿದ್ದಲ್ಲಿ ಹಾಗೂ ಇನ್ನೀತರೆ ಬದಲಾವಣೆಇದ್ದಲ್ಲಿ ಗುತ್ತಿಗೆದಾರರು **KPP Portal** ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/600

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025-26 ದಿನಾಂಕ: 27.02.2026 ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 17(1)/2025-26 ದಿನಾಂಕ: 13.03.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- III & IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ದತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. **(1)** E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 26.03.2026** ರ **16.30** ರವರೆಗೆ **(2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 27.03.2026** ರಂದು **16.35** ನಂತರ **(3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 30.03.2026** ರಂದು ಬೆಳಿಗ್ಗೆ **11.30** ನಂತರ (ಸಾಧ್ಯವಾದಲ್ಲಿ) **(4)** ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Dibburahalli-Shidlaghatta main road to Tatahalli village Shidlaghatta taluk. Chikkaballapur district (VR 261) **(RDPR/2025-26/RD/WORK_INDENT25318)**	168.09	252135.00	9 ತಿಂಗಳು
2	Improvements to road from fromT. Gollahalli-KY Road Via Tuluvanur chainage 0.00 Km to 3.40 Km Chintamani Taluk Chikkaballapur District. **(RDPR/2025-26/RD/WORK_INDENT25150)**	169.13	253695.00	9 ತಿಂಗಳು
3	Improvements to road from Pendlivarahalli cross to Kambarahalli Doddagummanahalli road to the border. Shidlaghatta taluk. Chikkaballapur District. **(RDPR/2025-26/RD/WORK_INDENT25320)**	117.63	200000.00	6 ತಿಂಗಳು
4	Improvements to road from From Muduganakunte Cross via Jakkenahalli to Kadaburu village in Gowribidanur Taluk Chikkaballapur District **(RDPR/2025-26/RD/WORK_INDENT25322)**	168.19	252285.00	9 ತಿಂಗಳು
5	Improvements to road from Kadabur village to Saragondlu village in Gowribidanur Taluk Chikkaballapur District **(RDPR/2025-26/RD/WORK_INDENT25323)**	99.80	199600.00	6 ತಿಂಗಳು
6	Improvements to road from NH 234 road via Bhaktarahalli village to Colonyin Gowribidanur Taluk Chikkaballapur District **(RDPR/2025-26/RD/WORK_INDENT25324)**	125.14	200000.00	6 ತಿಂಗಳು
7	Improvements to road from Huduguru village to Virupasandra Lakshmipur road via fishermens houses in Gowribidanur Taluk Chikkaballapur District **(RDPR/2025-26/RD/WORK_INDENT25326)**	100.51	200000.00	6 ತಿಂಗಳು
	Total	**948.49**		

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:496/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ
E.mail:koppaacf@gmail.com

ಸಂಖ್ಯೆ: ಸ.ಅ.ಸಂ:ಕೊಪ್ಪ:ಟೆಂಡರ್:18/2025-26 ದಿನಾಂಕ:13-03-2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ ಕೊಪ್ಪ ಅರಣ್ಯ ವಿಭಾಗದ, ಚಿಕ್ಕಗ್ರಹಾರ ವಲಯ ವ್ಯಾಪ್ತಿಯ ಸಾರ್ಯದಿಂದ ಕರ್ಕೂಟ ಪ್ರದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸುವ ಸಂಬಂಧ 2.810 ಕಿ.ಮೀ ರೈಲ್ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಗಳ ಬಾಬ್ತು **ದಿನಾಂಕ:18-04-2026** ರಂದು ಇ-ಟೆಂಡರ್ ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿರುವ ಕಾಮಗಾರಿಯ ಅಂದಾಜು ಮೊತ್ತ 3,99,03,111/- (ಜಿ.ಎಸ್‌ಟಿ ಹೊರತುಪಡಿಸಿ) ಆಗಿರುತ್ತದೆ. ಈ ಕಛೇರಿಯ ದಿನಾಂಕ:13-03-2026ರ ಟೆಂಡರ್ ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳಿಗೆ ಒಳಪಟ್ಟು ಇ-ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಪೋರ್ಟಲ್ ನಲ್ಲಿ ಪಡೆಯಬಹುದಾಗಿದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಗಜೇಂದ್ರಗಡ

ಕ್ರಸಂ:ಪುಸಗ/ಕಾವಿ/15ನೇ ಹಣಕಾಸು/ಉಳಿಕೆ ಮೊತ್ತ/ವಹಿ/ವಿ.ಅ/2025-26 ದಿನಾಂಕ:17-03-2026

(ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಇ-ಪ್ರೋಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ ಸರ್ಕಾರದಿಂದ ಬಿಡುಗಡೆಯಾದ ಸನ್-2023-24 ಮತ್ತು 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ **1) DMA/2025-26/BR/WORK_INDENT56546, ರೂ. 9.33 ಲಕ್ಷ, 2) DMA/2025-26/BR/WORK_INDENT56543 ರೂ.14.15ಲಕ್ಷ,** ಒಟ್ಟು 02 ಕಾಮಗಾರಿಗಳ ಮೊತ್ತ **ರೂ. 23.48 ಲಕ್ಷಗಳ** ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯೂ-1 ದಸ್ತಾವೇಜ್‌ನಲ್ಲಿ ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ **http://eproc.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1. ಇ-ಪ್ರ್ಯೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 25-03-2026 ಸಾಯಂಕಾಲ 4:30 ಗಂಟೆಯ** ವರೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ: **26-03-2026ರಂದು ಸಮಯ ಸಂಜೆ 4:30.00 ಗಂಟೆಗೆ.**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್. **http://eproc.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/-ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ | ಸಹಿ/-ಆಡಳಿತಾಧಿಕಾರಿ ಪುರಸಭೆ ಗಜೇಂದ್ರಗಡ

ವಾ.ಸಾ.ಇ/ಗದಗ/718/ದೇಶಪಾಂಡೆಪಬ್ಲಿಸಿಟಿ/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-432/24-25/4488/2025-26 ದಿನಾಂಕ: 18.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಸಿ.ಚೇತನ್‌ಕುಮಾರ್	ಯಲಹಂಕ	ಜಾಲ	ಸಾತನೂರು	127	9-32	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ ಹಾಗೂ ಈ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 17-03-2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:-1267 ದಿನಾಂಕ:- 20-02-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ ವಾರ್ಡ ವಾರು ಅನುದಾನ ಹಾಗೂ ಸನ್ 2025-26ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 1) ಇಂಡೆಂಟ್ ನಂ-56542 ರೂ. 35.00ಲಕ್ಷ
ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 2) ಇಂಡೆಂಟ್ ನಂ-55934 ರೂ. 3.92ಲಕ್ಷ
(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 3) ಇಂಡೆಂಟ್ ನಂ-56095 ರೂ. 4.85ಲಕ್ಷ
(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 4) ಇಂಡೆಂಟ್ ನಂ-56539 ರೂ. 20.00ಲಕ್ಷ
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 5) ಇಂಡೆಂಟ್ ನಂ-55933 ರೂ. 11.00ಲಕ್ಷ, 6) ಇಂಡೆಂಟ್ ನಂ-49820 ರೂ. 5.00ಲಕ್ಷ, 7) ಇಂಡೆಂಟ್ ನಂ-55902 ರೂ. 20.53ಲಕ್ಷ, 8) ಇಂಡೆಂಟ್ ನಂ-56550 ರೂ. 16.50ಲಕ್ಷ, 9) ಇಂಡೆಂಟ್ ನಂ-56552 ರೂ. 22.00ಲಕ್ಷ, 10) ಇಂಡೆಂಟ್ ನಂ-55935 ರೂ. 9.50ಲಕ್ಷ

ಮರು ಕರೆ ಕಾಮಗಾರಿ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 11) ಇಂಡೆಂಟ್ ನಂ-55394 ರೂ. 20.00ಲಕ್ಷ (2ನೇ ಕರೆ)
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 12) ಇಂಡೆಂಟ್ ನಂ-53042 ರೂ. 10.00ಲಕ್ಷ (3ನೇ ಕರೆ), 13) ಇಂಡೆಂಟ್ ನಂ-53039 ರೂ. 24.00ಲಕ್ಷ (3ನೇ ಕರೆ), 14) ಇಂಡೆಂಟ್ ನಂ-44230 ರೂ. 8.95ಲಕ್ಷ (5ನೇ ಕರೆ), 15) ಇಂಡೆಂಟ್ ನಂ-46141 ರೂ. 5.00ಲಕ್ಷ (6ನೇ ಕರೆ), 16) ಇಂಡೆಂಟ್ ನಂ-37838 ರೂ. 4.00ಲಕ್ಷ (7ನೇ ಕರೆ), 17) ಇಂಡೆಂಟ್ ನಂ-44536 ರೂ. 6.45ಲಕ್ಷ (7ನೇ ಕರೆ) 18) ಇಂಡೆಂಟ್ ನಂ-46020 ರೂ. 18.00ಲಕ್ಷ (7ನೇ ಕರೆ), 19) ಇಂಡೆಂಟ್ ನಂ-45540 ರೂ. 17.60ಲಕ್ಷ (7ನೇ ಕರೆ), 20) ಇಂಡೆಂಟ್ ನಂ-45514 ರೂ. 8.20ಲಕ್ಷ (7ನೇ ಕರೆ), 21) ಇಂಡೆಂಟ್ ನಂ-44209 ರೂ. 3.75ಲಕ್ಷ (7ನೇ ಕರೆ), 22) ಇಂಡೆಂಟ್ ನಂ-40855 ರೂ. 5.23ಲಕ್ಷ (2ನೇ ಕರೆ), 23) ಇಂಡೆಂಟ್ ನಂ-44210 ರೂ. 4.10ಲಕ್ಷ (3ನೇ ಕರೆ), 24) ಇಂಡೆಂಟ್ ನಂ-52872 ರೂ. 15.00ಲಕ್ಷ (3ನೇ ಕರೆ), 25) ಇಂಡೆಂಟ್ ನಂ-52387 ರೂ. 3.10ಲಕ್ಷ (3ನೇ ಕರೆ), 26) ಇಂಡೆಂಟ್ ನಂ-53504 ರೂ. 7.70ಲಕ್ಷ (3ನೇ ಕರೆ), 27) ಇಂಡೆಂಟ್ ನಂ-53963 ರೂ. 6.90ಲಕ್ಷ (3ನೇ ಕರೆ), 28) ಇಂಡೆಂಟ್ ನಂ-54176 ರೂ. 10.00ಲಕ್ಷ (3ನೇ ಕರೆ), 29) ಇಂಡೆಂಟ್ ನಂ-54259 ರೂ. 12.31ಲಕ್ಷ (3ನೇ ಕರೆ), 30) ಇಂಡೆಂಟ್ ನಂ-52870 ರೂ. 4.13ಲಕ್ಷ (3ನೇ ಕರೆ), 31) ಇಂಡೆಂಟ್ ನಂ-52391 ರೂ. 13.25ಲಕ್ಷ (3ನೇ ಕರೆ), 32) ಇಂಡೆಂಟ್ ನಂ-52868 ರೂ. 8.60ಲಕ್ಷ (3ನೇ ಕರೆ), 33) ಇಂಡೆಂಟ್ ನಂ-54260 ರೂ. 7.80ಲಕ್ಷ (3ನೇ ಕರೆ), 34) ಇಂಡೆಂಟ್ ನಂ-52389 ರೂ. 6.00ಲಕ್ಷ (3ನೇ ಕರೆ), 35) ಇಂಡೆಂಟ್ ನಂ-53982 ರೂ. 7.00ಲಕ್ಷ (3ನೇ ಕರೆ), 36) ಇಂಡೆಂಟ್ ನಂ-53984 ರೂ. 2.35ಲಕ್ಷ (3ನೇ ಕರೆ). 37) ಇಂಡೆಂಟ್ ನಂ-42614 ರೂ. 130.80ಲಕ್ಷ (2ನೇ ಕರೆ).

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **23-03-2026** ಪಡೆಯಬಹುದಾಗಿದೆ.

ಕ್ರ. ಸಂ 01, 10 ರಿಂದ 21 ಹಾಗೂ 37ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:02-04-2026 ರಂದು ಸಾಯಂಕಾಲ 4.00 ಗಂಟೆಯವರೆಗೆ
ಕ್ರ. ಸಂ 01, 10 ರಿಂದ 21 ಹಾಗೂ 37ರ ಟೆಂಡರ್ ತೆರೆಯುವ ದಿನಾಂಕ:04-04-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು
ಕ್ರ. ಸಂ 37 ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 08-04-2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.
ಕ್ರ. ಸಂ 02 ರಿಂದ 09, 22 ರಿಂದ 36ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:06-04-2026 ರಂದು ಸಾಯಂಕಾಲ 4.00 ಗಂಟೆಯವರೆಗೆ
ಕ್ರ. ಸಂ 02 ರಿಂದ 09, 22 ರಿಂದ 36ರ ಟೆಂಡರ್ ತೆರೆಯುವ ದಿನಾಂಕ:07-04-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/1370/ದೇಶಪಾಂಡೆಪಬ್ಲಿಸಿಟಿ/2025-26

ಸೈಬರ್ ಅಪರಾಧಗಳ ಬಗ್ಗೆ ಯುವಜನತೆಗೆ ಜಾಗೃತಿ ಕಾರ್ಯಕ್ರಮ

ನೈತಿಕ ಜಾಗೃತಿ ಮೂಡಿಸಿ

ಮೈಸೂರು: ನೈತಿಕ ಜಾಗೃತಿ ಮತ್ತು ಜವಾಬ್ದಾರಿಯುತ ವರ್ತನೆಯಿಂದ ಸೈಬರ್ ಅಪರಾಧಗಳನ್ನು ತಡೆಯಲು ಸಾಧ್ಯ ಎಂದು ರೆಸ್ಕ್ಯೂ ಚಾರಿಟಬಲ್ ಟ್ರಸ್ಟ್‌ನ ಕರ್ನಾಟಕ ಟೀಮ್ ಲೀಡರ್‌ಡಿ. ಆರ್ .ಸುನಿಲ್‌ಕುಮಾರ್ ಅವರು ತಿಳಿಸಿದರು.

ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜ್‌ನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ವತಿಯಿಂದ ಏರ್ಪಡಿಸಿದ್ದ ಸಮಾಜದಲ್ಲಿ ಹೆಚ್ಚುತ್ತಿರುವ ನೈತಿಕ ಸವಾಲುಗಳು ಮತ್ತು ಸೈಬರ್ ಅಪರಾಧಗಳ ಬಗ್ಗೆ ಯುವಜನತೆಗೆ ಅರಿವು ಮೂಡಿಸ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಅವರು, ಇಂದಿನ ಯುವಕರು ಎದುರಿಸುತ್ತಿರುವ ನೈತಿಕ ಸಮಸ್ಯೆಗಳು, ಸೈಬರ್ ನೈತಿಕತೆಗಳ ಮಹತ್ವವನ್ನು ವಿವರಿಸಿ, ಈಸ್ಟ್ ಇಂಡಿಯಾ ಕಂಪನಿಯ ಐತಿಹಾಸಿಕ ಹಿನ್ನೆಲೆಯನ್ನು ಉದಾಹರಣೆಯಾಗಿ ನೀಡಿ, ಅದರ ಪರಿಣಾಮವು ಭಾರತೀಯ ಸಮಾಜದ ಮೇಲೆ ಹೇಗಾಯಿತು ಎಂದು ವಿವರಿಸಿದರು. ಇದನ್ನು ಇಂದಿನ ಕಾಲದ ಸೈಬರ್ ಅಪರಾಧಗಳು ಮತ್ತು ಸಾಮಾಜಿಕ ಮಾಧ್ಯಮದ ದುರುಪಯೋಗದೊಂದಿಗೆ ಮಾಹಿತಿ ನೀಡಿದರು.

ಬೆಂಗಳೂರು ಮುಂತಾದ ನಗರಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿರುವ ಪ್ರಕರಣಗಳನ್ನು ಚರ್ಚಿಸಿದರು. ಯುವಜನತೆಗೆ ನೈತಿಕ ಶಿಕ್ಷಣ ಮತ್ತು ಸಮಾಲೋಚನೆಯ ಮಹತ್ವವನ್ನು ಒತ್ತಿ ಹೇಳಿದರು.



ಅವರು ಅಶ್ಲೀಲತೆಯ ಅಪಾಯಗಳ ಕುರಿತು ವಿಶದವಾಗಿ ಮಾತನಾಡಿ, ಅದನ್ನು ಮಾದಕ ವಸ್ತುಗಳಿಗಿಂತಲೂ ಹೆಚ್ಚು ಹಾನಿಕಾರಕವಾದ ಒಂದು ವ್ಯಸನವೆಂದು ವಿವರಿಸಿದರು. ಸಮೀಕ್ಷೆಗಳ ಪ್ರಕಾರ, 84% ಜನರು ಅಶ್ಲೀಲತೆ ಕ್ರಮೇಣ ಹೆಚ್ಚಾಗುವ ವ್ಯಸನವಾಗಿದ್ದು, 52% ಜನರು, ಮೃದು ಅಶ್ಲೀಲ ವಿಷಯಗಳ ಸಂಪರ್ಕ ಹಿಂಸಾತ್ಮಕ ವಿಷಯದಿಂದ ಹೊರಳುತ್ತಿದ್ದಾರೆ ಎಂದು ತಿಳಿಸಿದರು. ಈ ಸಮಸ್ಯೆಗಳನ್ನು ಭಾರತೀಯ ಕಾನೂನು ಕಾಯ್ದೆ 56ರ ಅಡಿಯಲ್ಲಿ ಪರಿಹರಿಸಲಾಗುತ್ತದೆ ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಕುಟುಂಬ ಮತ್ತು ಪೋಷಕರ ಕಾಳಜಿಯ ಮಹತ್ವವನ್ನು ಮತ್ತಷ್ಟು ಒತ್ತಿಹೇಳಲಾಯಿತು. ಯುವಕರಿಗೆ ಮಾರ್ಗದರ್ಶನ ನೀಡುವುದು ಹಾಗೂ ಭಾವನಾತ್ಮಕ ದುರುಪಯೋಗದ ವಿರುದ್ಧ ಎಚ್ಚರಿಕೆ ವಹಿಸುವುದು ಅತ್ಯಗತ್ಯ ಎಂದು ತಿಳಿಸಲಾಯಿತು. ಇಂತಹ ನೈತಿಕ ತಪ್ಪುಗಳು ಕುಟುಂಬದ ಮೇಲೆ ಆಗುವ ಪರಿಣಾಮ, ವಿಚ್ಛೇದನ, ಮಾನಸಿಕ ಸಮಸ್ಯೆಗಳು ಮತ್ತು ಆತ್ಮಹತ್ಯೆ ಮುಂತಾದ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಸತೀಶ್ ಕುಮಾರ್ ಉಪಸ್ಥಿತರಿದ್ದರು.

ಡಿ.ವಿ.ಗುಂಡಪ್ಪರ ಹಾದಿ ಎಲ್ಲರಿಗೂ ಮಾದರಿ

ಮೈಸೂರು: ಕನ್ನಡ ಸಾರಸ್ವತ ಲೋಕದ ಭೀಷ್ಮ ಹಾಗೂ ಕನ್ನಡದ ಆಧುನಿಕ ಸರ್ವಜ್ಞ ಎಂದು ಹೆಸರಾದ ಡಿ.ವಿ.ಗುಂಡಪ್ಪನವರ ಹಾಕಿಕೊಟ್ಟಿರುವ ಸಮಾಜದ ಸೇವೆಯ ಹಾದಿಯಲ್ಲಿ ಎಲ್ಲರೂ ನಡೆಯಬೇಕಾಗಿದೆ ಎಂದು ವಿಜಯ ವಿಠಲ ವಿದ್ಯಾ ಶಾಲೆಯ ಗೌರವ ಕಾರ್ಯದರ್ಶಿ ಸಿ.ಎ.ವಿಶ್ವನಾಥ ಹೇಳಿದರು.

ಶಾಲೆಯಲ್ಲಿ ಆಯೋಜಿಸಿದ್ದ ಡಿ.ವಿ.ಗುಂಡಪ್ಪನವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿ.ವಿ.ಗುಂಡಪ್ಪನವರು ನುಡಿದಂತೆ ನಡೆದ ವ್ಯಕ್ತಿತ್ವವುಳ್ಳವರು. ಅವರು ಮಾಡಿದ್ದೆಲ್ಲ ಪೂಜೆ ಬಂದಿದ್ದೆಲ್ಲ ಪ್ರಸಾದ ಎಂದು ತಮ್ಮನ್ನು ತಾವು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು. ನಾವು ಕೂಡ ಅದೇ ದಾರಿಯಲ್ಲಿ ಸಾಗಬೇಕು ಎಂಬುದನ್ನು ತಿಳಿಸಿದರು.

ಡಿ.ವಿ.ಗುಂಡಪ್ಪನವರು ಕನ್ನಡ ಕಂಡ ಮಹಾನ್ ಸಾಹಿತಿ, ಚಿಂತಕ, ತತ್ವಜ್ಞಾನಿ. ಇವರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು. ಡಿವಿಜಿಯವರು ಸ್ವತ: ತಾವು ಸಂಕಷ್ಟದಲ್ಲಿದ್ದರೂ ತಮಗೆ ಒದಗಿ ಬಂದಂತಹ ಗೌರವ ಧನವನ್ನು ಸಮಾಜ ಸೇವೆಗಾಗಿ ನಿಸ್ವಾರ್ಥ ಭಾವದಿಂದ ನೀಡಿದ್ದು, ಅವರ ವನಸುಮದೊಳೆನ್ನ ಮನವು ವಿಕಸಿಸುವಂತೆ ಎಂಬ ಅವರ ಕವನಕ್ಕೆ ಅವರ ಜೀವನವೇ ಸ್ಫೂರ್ತಿಯಾಗಿದೆ. ಅವರ ಜೀವನದ ಮೌಲ್ಯಯುತ ವ್ಯಕ್ತಿತ್ವವನ್ನು ನಿದರ್ಶನಗಳ ಮೂಲಕ ತಿಳಿಸಿದರು.



ಕಾರ್ಯಕ್ರಮದಲ್ಲಿ ವಿಜಯ ವಿಠಲ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಚ್.ಸತ್ಯಪ್ರಸಾದ್ ಮಾತನಾಡಿ, ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗ ಮಾತ್ರವಲ್ಲ, ಅವರೇ ಬರೆದ ಬೇರೆ ಬೇರೆ ಕೃತಿಗಳು ಶ್ರೇಷ್ಠವಾಗಿದ್ದು, ಅವರ ವ್ಯಕ್ತಿತ್ವ ವಿಕಸನವನ್ನು ತಿಳಿಸುವಂತಿವೆ. ಅವರು ಬರೆದಂತಹ ಕೃತಿಗಳನ್ನು ಓದುವಂತೆ ಸಲಹೆ ನೀಡಿದರು. ಡಿ.ವಿ.ಜಿಯವರು ತಮ್ಮ ಜೀವನದಲ್ಲಿ ಮಾಡಿದಂತಹ ಸಮಾಜ ಸೇವೆ ಹಾಗೂ ಅವರ ಆದರ್ಶ ಜೀವನವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ವಿಜಯ ವಿಠಲ ವಿದ್ಯಾ ಶಾಲೆಯ ಪ್ರಾಂಶುಪಾಲರಾದ ವೀಣಾ.ಎಸ್.ಎ ಹಾಗೂ ಶಿಕ್ಷಕ ಶಿಕ್ಷಕಿಯರು ಪಾಲ್ಗೊಂಡಿದ್ದರು.



ಮೂರು ಚಿರತೆ ಮರಿಗಳು ಪತ್ತೆ

ಮಂಡ್ಯ: ತಾಲೂಕಿನ ಭೂತನಹೊಸೂರು ಗ್ರಾಮದ ಕಬ್ಬಿನ ಗದ್ದೆಯಲ್ಲಿ ಮೂರು ಚಿರತೆ ಮರಿಗಳು ಪತ್ತೆಯಾಗಿರುವುದು ಅನ್ನದಾತರ ಆತಂಕಕ್ಕೆ ಕಾರಣವಾಗಿದೆ.

ಕಳೆದ ಹಲವಾರು ದಿನಗಳಿಂದಲೂ ಗ್ರಾಮದ ಸುತ್ತಮುತ್ತ ಚಿರತೆ ಓಡಾಡುತ್ತಿರುವುದನ್ನು ಗ್ರಾಮಸ್ಥರು ನೋಡಿದ್ದರು. ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ತಿಳಿಸಿ ಚಿರತೆ ಸೆರೆಗೆ ಒತ್ತಾಯಿಸಿದ್ದರು. ಗ್ರಾಮಕ್ಕೆ ಆಗಮಿಸಿದ್ದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದ ವೇಳೆ ಚಿರತೆಯ ಹೆಜ್ಜೆ ಗುರುತುಗಳು ಪತ್ತೆಯಾಗಿರಲಿಲ್ಲ. ಹೀಗಾಗಿ ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಇಂದು ಗ್ರಾಮಸ್ಥರು ಕಬ್ಬಿನ ಗದ್ದೆಯ ಕಡೆಗೆ ಹೋಗಿದ್ದ ವೇಳೆ ಚಿರತೆ ಮರಿಗಳನ್ನು ಕಂಡು ತಕ್ಷಣ ಅರಣ್ಯಾಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಚಿರತೆ ಮರಿಗಳನ್ನು ರಕ್ಷಿಸಿ ಕೊಂಡೊಯ್ದಿದ್ದಾರೆ.

ಲಾಭದ ಆಸೆಗೆ 26.90 ಲಕ್ಷ ರೂ. ಕಳೆದುಕೊಂಡ ಮಹಿಳೆ

ಮೈಸೂರು: ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭ ಗಳಿಸಲು ಹೋದ ಮಹಿಳೆಯೊಬ್ಬರ 26.90 ಲಕ್ಷ ರೂ. ಹಣ ಕಳೆದುಕೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಮೈಸೂರಿನ ರಾಘವೇಂದ್ರ ನಗರದ ಮಹಿಳೆ ಹಣ ಕಳೆದುಕೊಂಡವರು. ಇವರಿಗೆ ಗೋ ಬ್ರಿಡ್ಜ್ ಎಂಬ ನಕಲಿ ಸಂಸ್ಥೆಯಿಂದ ವಾಟ್ಸಾಪ್ ಸಂದೇಶ ಬಂದಿದೆ. ಅಲ್ಲಿನ ಸಿಬ್ಬಂದಿ ಆಕೆಯನ್ನು ಸಂಪರ್ಕಿಸಿ ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ನೀಡಿದ್ದಾರೆ. ಹಣ ಹೂಡಿಕೆ ಮಾಡಿದಲ್ಲಿ ಲಕ್ಷಾಂತರ ರೂ. ಗಳಿಸಿಬಹುದು ಎಂದು ಆಸೆ ಹುಟ್ಟಿಸಿದ್ದಾರೆ. ಅವರ ಮಾತನ್ನು ನಂಬಿದ ಆಕೆ ಹಂತ ಹಂತವಾಗಿ ದುಷ್ಕರ್ಮಿಗಳು ಹೇಳಿದ ಖಾತೆಗೆ 26.90 ಲಕ್ಷ ರೂ. ಹಣವನ್ನು ಹಾಕಿ ಕೊನೆಗೆ ಮೋಸ ಹೋಗಿದ್ದಾರೆ. ಈ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಡೇನಹಳ್ಳಿ ಲೋಕೇಶ್ ಬೆಂಬಲಿಸಿ



ಹಾಸನ: ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಮಹನೀಯರ ಮಹತ್ತರ ಆಶಯದೊಂದಿಗೆ ಹುಟ್ಟಿಕೊಂಡ ದೀರ್ಘ ಇತಿಹಾಸವಿರುವ ಸಂಸ್ಥೆಯಾಗಿದೆ. ಆ ಮಹನೀಯರ ಆಶಯಕ್ಕೆ ಚ್ಯುತಿ ತರದಂತೆ ಪರಿಷತ್ತನ್ನು ಮುನ್ನಡೆಸಬೇಕಾದ್ದು ಮೊದಲ ಆದ್ಯತೆಯಾಗಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್. ಎಲ್ ಮಲ್ಲೇಶಗೌಡ ಹೇಳಿದರು.

ನಗರದಖಾಸಗಿಹೋಟೇಲ್‌ನಲ್ಲಿನಡೆದ ಮುಂಬರುವ ಕಸಾಪ ಚುನಾವಣೆಯ ಜಿಲ್ಲಾ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಎಚ್. ಎನ್ ಲೋಕೇಶ್ ಹಡೇನಹಳ್ಳಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿ, ಪರಿಷತ್ತಿನ ಘನತೆಯನ್ನು ಎತ್ತಿ ಹಿಡಿಯುವ ಆರ್ಥಿಕ ಪರಿಶುದ್ಧತೆಯನ್ನು ಕಾಪಾಡುವ ವ್ಯಕ್ತಿತ್ವದವರು ಆ ಸ್ಥಾನಕ್ಕೆ ಬರಬೇಕೆಂಬುದು ನನ್ನ ಆಸೆ. ಆ ನಿಟ್ಟಿನಲ್ಲಿ ಎಲ್ಲರೊಂದಿಗೆ ಚರ್ಚೆ ನಡೆಸಿ ಕ್ರಿಯಾಶೀಲ ವ್ಯಕ್ತಿತ್ವದ ಲೋಕೇಶ್ ಅವರನ್ನು ಮುಂಬರುವ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಬೆಂಬಲಿಸಲು ನಿರ್ಧರಿಸಿದ್ದೇನೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಹಾಗೂ ಡಾ.ರಾಜ್ ಕುಮಾರ್ ಸಂಘದ ಜಿಲ್ಲಾಧ್ಯಕ್ಷ ಬಾಳ್ಳುಗೋಪಾಲ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಗೌರವತಂದುಕೊಡುವವರುಅಧ್ಯಕ್ಷಸ್ಥಾನಕ್ಕೆ ಬರಬೇಕು. ಬೇರ್ಯಾವುದೊ ಉದ್ದೇಶದಿಂದ ಬರುವವರನ್ನು ಮತದಾರರು ದೂರ ಇಡಬೇಕು ಎಂದರು.

ಕಸಾಪ ಮಾಜಿ ಅಧ್ಯಕ್ಷಡಾ.ಎಚ್.ಎಲ್. ಜನಾರ್ದನ್ ಮಾತನಾಡಿ, ಹಡೇನಹಳ್ಳಿ ಲೋಕೇಶ್ ಅವರು 2 ಬಾರಿ ತಾಲೂಕು ಅಧ್ಯಕ್ಷರಾಗಿ ಕ್ರಿಯಾಶೀಲರಾಗಿ ಕೆಲಸಮಾಡಿದ್ದಾರೆ. 81ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಸಿಕ್ಕ ಕಡಿಮೆ ಅವಧಿಯಲ್ಲಿ ಇಡೀ ತಾಲೂಕಿನಾದ್ಯಂತ ಯುವ ಜನತೆಯನ್ನು ಸಂಘಟಿಸಿ ಶ್ರವಣಬೆಳಗೊಳದಲ್ಲಿ ನಡೆದ ಸಮ್ಮೇಳನವನ್ನು ಯಶಸ್ವಿಗೊಳಿಸಿದ ಕೀರ್ತಿ ಲೋಕೇಶ್ ಅವರಿಗೆ ಸಲ್ಲುತ್ತದೆ ಎಂದರು. ನೌಕರರ ಸಂಘದ ಮಾಜಿ ನಿರ್ದೇಶಕ ಬಸವರಾಜು, ಸಿ.ಕೆ ಹರೀಶ್,ರೈತ ಸಂಘದ ಯೋಗೇಶ್, ಜನಪದ ಕಲಾವಿದ ದೊಡ್ಡಳ್ಳಿ ರಮೇಶ್ ಇದ್ದರು.

ಭ್ರಷ್ಟಾಚಾರ ಮುಕ್ತ ದೇಶ ನಿರ್ಮಿಸೋಣ

ಆನೇಕಲ್: ವಿದ್ಯಾರ್ಥಿಗಳು ಭ್ರಷ್ಟಾಚಾರ ಮುಕ್ತ ಭಾರತವನ್ನು ನಿರ್ಮಾಣ ಮಾಡಬೇಕು ಆ ದಿಸೆಯಲ್ಲಿ ಸಂಕಲ್ಪವನ್ನು ಮಾಡಬೇಕೆಂಬ ಲೋಕಾಯುಕ್ತ ನಿವೃತ್ತ ನ್ಯಾ.ಸಂತೋಷ್ ಹೆಗಡೆ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ವಿಶ್ವ ಚೇತನ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶಾಲ ಆರಾಧ್ಯ ಅವರ ಅಂದದ ಉಡುಗೊರೆ ಹಾಗೂ ಆದೂರು ಪ್ರಕಾಶ್ ಅವರ ಕುಂಜರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗ ವಹಿಸಿ ಅವರು ಮಾತನಾಡಿ, ಮೊಬೈಲ್‌ನ ಅಬ್ಬರದಲ್ಲಿ ಪುಸ್ತಕಗಳು ಕಳೆದುಹೋಗಿ ಆಪತ್ತಿನ ಸಮಾಜವನ್ನು ನಿರ್ಮಾಣ ಮಾಡುತ್ತಿದ್ದೇವೆ. ಮಾನವೀಯತೆಯನ್ನ ಮರೆತು ಏನನ್ನು ಸಾಽಸಲಾಗುವುದಿಲ್ಲ. ಸರ್ಕಾರಗಳು ಜನಸಾಮಾನ್ಯರ ಬಗ್ಗೆ ಯೋಚನೆ ಮಾಡಿ ಯೋಜನೆಗಳನ್ನು ತಂದು ಕಲ್ಯಾಣ ರಾಷ್ಟವನ್ನಾಗಿ ಮಾಡಬೇಕೆಂದರು.

ವಿದ್ಯಾವಂತರು ಉನ್ನತ ಹುದ್ದೆಗಳನ್ನು ಅಲಂಕರಿಸಿ ಜನರ ತೆರಿಗೆಯನ್ನು ಲೂಟಿ ಮಾಡುವ ಕೆಲಸವನ್ನು ಮಾಡುವುದು ಮಹಾ ಅಪರಾಧವಾಗಿದೆ. ಇದಕ್ಕೆ ಕಡಿವಾಣ ಹಾಕಲು ಎಲ್ಲರೂ ಒಗ್ಗಟ್ಟಾಗಬೇಕಾಗಿದೆ ಎಂದು ತಿಳಿಸಿದರು.

ಸಂಪಾದಕೀಯ

ವರ್ಷಂಪ್ರತಿಯ ಬೊಗಳುವಿಕೆ

ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಮೆರಿಕನ್ ಆಯೋಗಕ್ಕೆ (ಯುಎಸ್‌ಸಿಐಆರ್‌ಎಫ್) ವರ್ಷಂಪ್ರತಿ ಭಾರತದತ್ತ ನೋಡಿ ಬೊಗಳುವ ಚಟ. ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದೆಲ್ಲಾ ಆರೋಪಿಸುತ್ತಿರುತ್ತದೆ. ಮೊದಲೆಲ್ಲ ಈ ಬೊಗಳಿಕೆ ದೊಡ್ಡ ಸುದ್ದಿ ಮಾಡುತ್ತಿದ್ದುದಿತ್ತು. ಆದರೆ ವರ್ಷ ಕಳೆದಂತೆ ಎಲ್ಲರಿಗೂ ಅದರ ಬೊಗಳುವಿಕೆಯ ಹಿಂದಿನ ಉದ್ದೇಶ ಅರ್ಥವಾಗತೊಡಗಿದೆ.



ಹಾಗಾಗಿ ಅದರ ವರದಿಗೆ ಈಗ ಯಾರೂ ಮಹತ್ವ ಕೊಡುತ್ತಿಲ್ಲ. ಕೇವಲ ಭಾರತದಲ್ಲಿರುವ ತಥಾಕಥಿತ ಜಾತ್ಯತೀತರು, ಕಾಂಗ್ರೆಸಿಗರು, ಕೆಲವು ಎಡಪಂಥೀಯ ಮಾಧ್ಯಮಗಳು ಮಾತ್ರ ಇದೇನೋ ಬಹಳ ದೊಡ್ಡ ಸುದ್ದಿ ಎಂಬಂತೆ ಅರಚಾಡುವುದಿದೆ. ಹಿಂದುಗಳ ಮೇಲೆ ಪ್ರತಿವರ್ಷವೂ ವಿಷ ಕಾರುವ ಹಾಗೂ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲವೆಂದು ವಾದಿಸುವ ಯುಎಸ್‌ಸಿಐಆರ್‌ಎಫ್‌ಗೆ ಪಾಕಿಸ್ತಾನ, ಬಾಂಗ್ಲಾ ದೇಶ ಮುಂತಾದ ಇಸ್ಲಾಮಿಕ್ ದೇಶಗಳಲ್ಲಿ ಅಲ್ಲಿನ ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯಗಳು ಕಾಣುವುದೇ ಇಲ್ಲ. ಅಲ್ಲಿ ಹಿಂದುಗಳ ಸಂಖ್ಯೆ ಕುಸಿಯುತ್ತಿರುವುದು ಕೂಡಾ ಪರಿಗಣನೆಗೆ ಬರುವುದಿಲ್ಲ. ಅಮೆರಿಕದಲ್ಲೇ ಭಾರತೀಯರು ಎದುರಿಸುತ್ತಿರುವ ಪಕ್ಷಪಾತ, ಹಿಂದುಗಳ ಮೇಲೆ ನಡೆಯುತ್ತಿರುವ ದಾಳಿಗಳ ಕುರಿತೂ ಅದು ಗಮನ ಹರಿಸುವುದಿಲ್ಲ.

ಈ ಬಾರಿಯಂತೂ ಯುಎಸ್‌ಸಿಐಆರ್‌ಎಫ್ ಭಾರತದ ಗುಪ್ತಚರ ಸಂಸ್ಥೆ 'ರಾ' ಮತ್ತು ಆರೆಸ್ಸೆಸ್ಸನ್ನು ನಿಷೇಧಿಸಬೇಕೆಂದು ಅಮೆರಿಕನ್ ಸರಕಾರಕ್ಕೆ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಇವೆರಡೂ ಹಿಂದುಯೇತರರ ಧಾರ್ಮಿಕ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿದೆ ಎಂದು ಆರೋಪಿಸಿದೆ. ಯುಎಸ್‌ಸಿಐಆರ್‌ಎಫ್‌ನಲ್ಲಿ ಇರುವುದು ಯಾರೆಂಬುದನ್ನು ತಿಳಿದರೆ ಅದು ನಿರಂತರವಾಗಿ ಹಿಂದೂ ದ್ವೇಷ ಹಾಗೂ ಆರೆಸ್ಸೆಸ್ ಮೇಲೆ ರೋಷ ಹೊಂದಿರುವುದು ಏಕೆಂಬುದು ತಿಳಿಯದಿರದು. ಪಾಕಿಸ್ತಾನಿ-ಅಮೆರಿಕನ್ ಆ್ಯಕ್ಟಿವಿಸ್ಟ್ ಆಸಿಫ್ ಮೊಹಮ್ಮದ್ ಇದರ ಕಮಿಷನರ್ ಮತ್ತು ಉಪಾಧ್ಯಕ್ಷ. ಇನ್ನೊಬ್ಬ ಕಮಿಷನರ್ ಮೊಹಮ್ಮದ್ ಎಲನೌಸಿ ಪಾಕಿಸ್ತಾನದ ಇಸ್ಲಾಮಿಕ್ ವಿವಿಯಲ್ಲಿ ಕಲಿತವನು ಹಾಗೂ ಶರೀಯಾ ಕಾನೂನಿನಲ್ಲಿ ಪದವಿ ಪಡೆದವನು. ನೀತಿ ವಿಶ್ಲೇಷಣಕಾರ ಸೆಮಾ ಹಸನ್ ಕೂಡಾ ಪಾಕಿಸ್ತಾನಿ. ಮೌರೀನ್ ಫರ್ಗುಸನ್ ಮತ್ತು ವಿಕಿ ಹಾರ್ಟ್‌ಜ್ಲರ್ ಎಂಬಿಬ್ಬರು ಸದಸ್ಯರು ಮತಾಂತರ ನಡೆಸುವ ಮಿಷನರಿಗಳೊಡನೆ ಸಂಪರ್ಕ ಹೊಂದಿರುವವರು. ಒಟ್ಟಿನಲ್ಲಿ ಆ ಸಮಿತಿಯಲ್ಲಿ ಇರುವವರೆಲ್ಲರೂ ಇಸ್ಲಾಮಿಕ್‌ವಾದಿಗಳು ಮತ್ತು ಕ್ರೈಸ್ತ ಮಿಷನರಿಗಳ ಪರವಾಗಿರುವವರು. ಅವರಿಂದ ಇಂತಹ ವರದಿ ಮೂಡುವುದು ಸಹಜವೇ ಆಗಿದೆ.

ಯುಎಸ್‌ಸಿಐಆರ್‌ಎಫ್ ವರದಿಯು ಪ್ರತಿವರ್ಷವೂ ಕಸದಬುಟ್ಟಿಗೆ ಎಸೆಯಲಷ್ಟೇ ಯೋಗ್ಯವಾದುದಾಗಿದೆ. ಆದರೆ ನಮ್ಮಲ್ಲಿನ ಕೆಲವು ದೇಶವಿರೋಧಿಗಳು ಇದೇ ವರದಿಯನ್ನು ಹಿಡಿದು ಜಗಿಯುತ್ತಾ ವಿಕೃತಾನಂದ ಪಡೆಯುತ್ತಾರೆನ್ನುವುದೇ ದುರಂತ.

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ
ಸೋಮಶೇಖರ ಸಿ.ಜಿ.
sompreethi@gmail.com



ಯುಗಾದಿ ಹಬ್ಬ ಕೇವಲ ಪಂಚಾಂಗ ಬದಲು, ಬೇವು-ಬೆಲ್ಲ, ಹೋಳಿಗೆ-ಒಬ್ಬಟ್ಟಿನ ಹಬ್ಬವಲ್ಲ. ಅದು ಕಾಲಚಕ್ರದ ಒಂದು ಪವಿತ್ರ ತಿರುವು. ಹಳೆಯ ವರ್ಷದ ನೋವು-ನಲಿವುಗಳ ನೆನಪಿನ ಚೀಲವನ್ನು ಕೆಳಗಿಳಿಸಿ, ಹೊಸ ವರ್ಷದ ಆಶಯಗಳ ಬುತ್ತಿಯನ್ನು ಹೆಗಲೇರಿಸಿಕೊಂಡು ಮುಂದೆ ಸಾಗುವ ಸಮಯವಿದು. ಚೈತ್ರ ಶುಕ್ಲ ಪಾಡ್ಯಮಿಯ ಈ ಶುಭ ಮುಹೂರ್ತದಲ್ಲಿ ವಿಶ್ವವಸು ಸಂವತ್ಸರಕ್ಕೆ ವಿದಾಯ ಹೇಳಿ, ಪರಾಭವ ಸಂವತ್ಸರವನ್ನು ಸ್ವಾಗತಿಸುತ್ತಿರುವ ಈ ಹೊತ್ತಿನಲ್ಲಿ, ಜಗತ್ತಿನ ಕಡೆಗೊಂದು ನೋಟ ಹರಿಸುವುದು ಅವಶ್ಯ.

ಇದಕ್ಕೆ ಕಾರಣಗಳೂ ಇವೆ. ಕಳೆದ ವಿಶ್ವವಸು ಸಂವತ್ಸರ ಜಗತ್ತಿಗೆ ಹಲವು ಕಹಿ ಅನುಭವಗಳನ್ನು ಕೊಟ್ಟಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕಗಳ ರಾಜಕೀಯ ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲಗೊಳಿಸಿತು. ನನ್ನ ಮಾತು ಕೇಳದಿದ್ದರೆ ಟ್ಯಾರಿಫ್ ಹಾಕುತ್ತೇನೆ ಎಂಬ ಧೋರಣೆ ಅಂತಾರಾಷ್ಟ್ರೀಯ ಸಂಬಂಧಗಳನ್ನು ಕಲುಷಿತಗೊಳಿಸಿತು. ಮಿತ್ರ ರಾಷ್ಟ್ರಗಳನ್ನೂ ಬಿಡದೆ, ನ್ಯಾಟೋ ಒಕ್ಕೂಟದ ದೇಶಗಳನ್ನೂ ಬೆದರಿಸುವ ಮಾತುಗಳು ಬಂದವು. ಈ ವ್ಯಕ್ತಿಗೆ ತನ್ನ ಮಿತ್ರರು ಯಾರು? ಶತ್ರುಗಳು ಯಾರು ಎಂಬುದೂ ಗೊತ್ತಾಗದಂತಾಯಿತು. ಫ್ರಾನ್ಸ್ ಅಧ್ಯಕ್ಷರನ್ನೂ ಹೀಯಾಳಿಸಲಾಯಿತು. ಎಲ್ಲವೂ ನಾನೇ, ಎಲ್ಲವನ್ನೂ ನಾನೇ ಮಾಡಿದೆ, ಅಲ್ಲಿ ಯುದ್ಧ ನಿಲ್ಲಿಸಿದೆ, ಇಲ್ಲಿ ಶಾಂತಿ ತಂದೆ ಎಂಬ ಅಹಂಕಾರದ ನುಡಿಗಳು ವಿಶ್ವದ ಕಿವಿಗಳಲ್ಲಿ ಅನುರಣಿಸಿದವು. ಈ ಅಹಂಕಾರದ ಪರಾಕಾಷ್ಠೆ ಎಂದರೆ, ಓಮಾನ್ ಮಧ್ಯಸ್ಥಿಕೆಯಲ್ಲಿ ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಕಡಿಮೆ ಮಾಡಲು ಒಪ್ಪಿ, ಶಾಂತಿಯ ಹಾದಿ ತೆರೆದಿದ್ದಾಗಲೇ, ಫೆಬ್ರವರಿ ಇಪ್ಪತ್ತೆಂಟರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಮಿಲಿಟರಿ ದಾಳಿ ನಡೆಸಿದವು. ಯುಗಾದಿ ಹಬ್ಬದ ಈ ಹೊತ್ತಿನಲ್ಲೂ ಆ ಯುದ್ಧ ಮುಂದುವರಿದಿದೆ. ಸಾವಿರಕ್ಕೂ ಹೆಚ್ಚು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಗಲ್ಫ್ ಪ್ರದೇಶದಲ್ಲಿ ಕ್ಷಿಪಣಿಗಳ ಮಳೆ ಸುರಿಯುತ್ತಿದೆ. ದುಬೈ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆ ಸ್ಥಗಿತಗೊಂಡಿತ್ತು. ಇಡೀ ಮಧ್ಯಪ್ರಾಚ್ಯ ಮತ್ತೊಮ್ಮೆ ಕಂಪಿಸುತ್ತಿದೆ. ದುರಂತವೆಂದರೆ, ಈ ಯುದ್ಧ ಅರಿವಿಲ್ಲದೆಯೇ ಎಲ್ಲ ದೇಶಗಳನ್ನೂ ತನ್ನ ಸುಳಿಯೊಳಗೆ ತೆಗೆದುಕೊಂಡಿದೆ. ಒಂದಲ್ಲ ಒಂದು ರೀತಿಯಲ್ಲಿ ಕಷ್ಟ ಕೊಡುತ್ತಲೇ ಇದೆ.

ಆದರೆ ಈ ಕತ್ತಲೆಯ ನಡುವೆಯೇ ಪರಾಭವ ಎಂಬ ಹೆಸರಿನ ಸಂವತ್ಸರ ಬಂದಿದೆ. ಪರಾಭವ ಎಂದರೆ ಸೋಲು ಎಂಬ ಅರ್ಥವಿದ್ದರೂ, ವೈದಿಕ ಪರಂಪರೆಯಲ್ಲಿ ಈ ಪದಕ್ಕೆ ಹೆಚ್ಚು ಆಳವಾದ ಅರ್ಥವಿದೆ. ಅಹಂಕಾರದ ಸೋಲು, ಅಹಮಿಕೆಯ ಪತನ, ಜಂಭದ ಅಂತ್ಯ ಎಂಬುದೇ ಪರಾಭವ ಸಂವತ್ಸರದ ನಿಜವಾದ ಸಂದೇಶ. ಅರವತ್ತು ಸಂವತ್ಸರಗಳ ಚಕ್ರದಲ್ಲಿ ನಲವತ್ತನೇ ಸ್ಥಾನದಲ್ಲಿರುವ ಈ ಸಂವತ್ಸರ, ಜಗತ್ತಿಗೆ ವಿನಮ್ರತೆಯ ಪಾಠ ಕಲಿಸಲು ಬಂದಿದೆ ಎಂದು ಭಾವಿಸಬಹುದು. ತಾನೇ ಶ್ರೇಷ್ಠ, ತನ್ನ ಮಾತೇ ಅಂತಿಮ, ತನ್ನ ಬಲವೇ ಸರ್ವಸ್ವ ಎಂಬ ಭ್ರಮೆಯನ್ನು ಈ ಸಂವತ್ಸರ ಹೊಗಲಾಡಿಸಬೇಕಿದೆ.

ಹಾಗಾದರೆ ಈ ಹೊಸ ಸಂವತ್ಸರದಲ್ಲಿ ಜಗತ್ತಿಗೆ ಏನು ಬೇಕು? ಮೊದಲನೆಯದಾಗಿ, ಶಾಂತಿ.ಯುದ್ಧಗಳು ನಿಲ್ಲಬೇಕು. ಯಾವುದೇ ದೇಶ ಎಷ್ಟೇ ಬಲಶಾಲಿಯಾದರೂ, ಇನ್ನೊಂದು ದೇಶದ ಮೇಲೆ ದಾಳಿ ನಡೆಸಿ ಆಡಳಿತ ಬದಲಾವಣೆ ಮಾಡುವ ಹಕ್ಕು ಯಾರಿಗೂ ಇಲ್ಲ. ಬಾಂಬುಗಳಿಂದ ಬದಲಾವಣೆ ಬರುವುದಿಲ್ಲ, ಸಂವಾದದಿಂದ ಬರಬೇಕು. ಓಮಾನ್ ಮಧ್ಯಸ್ಥಿಕೆಯಲ್ಲಿ ಮುರಿದುಹೋದ ಶಾಂತಿ ಮಾತುಕತೆಯನ್ನು ಮತ್ತೆ ಕಟ್ಟಬೇಕಿದೆ. ರಾಜತಾಂತ್ರಿಕ ಮಾರ್ಗವನ್ನು ಪುನಃ ಆಯ್ಕೆ ಮಾಡಿಕೊಳ್ಳುವುದೇ ಪರಾಭವ ಸಂವತ್ಸರದ ಮೊದಲ ಆಶಯ. ಹಾಗೆಯೇ, ರಷ್ಯಾ-ಉಕ್ರೇನ್, ಇಸ್ರೇಲ್-ಪ್ಯಾಲೇಸ್ತೀನ್ ಮತ್ತು ಆಫ್ಘಾನಿಸ್ತಾನ-ಪಾಕಿಸ್ತಾನ ನಡುವಿನ ಯುದ್ಧಗಳೂ ನಿಲ್ಲಬೇಕು.

ಎರಡನೆಯದಾಗಿ, ಜಾಗತಿಕ ವ್ಯಾಪಾರ ವ್ಯವಸ್ಥೆ ಮತ್ತೆ ನ್ಯಾಯಸಮ್ಮತವಾಗಬೇಕು. ಸುಂಕಗಳನ್ನು ಆಯುಧವಾಗಿ ಬಳಸುವ ಪ್ರವೃತ್ತಿ ನಿಲ್ಲಬೇಕು. ಒಂದು ದೇಶದ ರೈತರ ಬೆವರು ಇನ್ನೊಂದು ದೇಶದ ರಾಜಕೀಯ ಲಾಭಕ್ಕೆ ಬಲಿಯಾಗಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಯನ್ನು ಹಿಂಡಿ ಹಿಪ್ಪೆ ಮಾಡುವ ಸುಂಕ ನೀತಿ ಬದಲಾಗಬೇಕು. ಜಗತ್ತಿನ ಎಲ್ಲ ದೇಶಗಳೂ ಸಮಾನ ಗೌರವದಿಂದ ವ್ಯಾಪಾರ ಮಾಡುವಂಥ ವಾತಾವರಣ ನಿರ್ಮಾಣವಾಗಬೇಕು. ಇದು ಕೇವಲ ಆರ್ಥಿಕ ಬೇಡಿಕೆಯಲ್ಲ, ಮಾನವೀಯ ಬೇಡಿಕೆ.



ಮೂರನೆಯದಾಗಿ, ಹವಾಮಾನ ಬದಲಾವಣೆಯ ವಿಷಯದಲ್ಲಿ ಜಗತ್ತು ಇನ್ನಷ್ಟು ಗಂಭೀರವಾಗಬೇಕಿದೆ. ಯುದ್ಧಗಳಿಗೆ ಸುರಿಯುವ ಹಣದ ಒಂದು ಭಾಗವನ್ನಾದರೂ ಪರಿಸರ ಸಂರಕ್ಷಣೆಗೆ ಮೀಸಲಿಟ್ಟರೆ, ಮುಂದಿನ ಪೀಳಿಗೆಗೆ ಬದುಕಲು ಯೋಗ್ಯವಾದ ಭೂಮಿಯನ್ನು ಉಳಿಸಬಹುದು. ಕ್ಷಿಪಣಿಗಳ ಬದಲು ಮರಗಳನ್ನು ನೆಡುವ, ಬಾಂಬುಗಳ ಬದಲು ನೀರಿನ ಯೋಜನೆಗಳನ್ನು ಕಟ್ಟುವ ಸಂಕಲ್ಪ ಈ ಪರಾಭವ ಸಂವತ್ಸರದ ಆಶಯವಾಗಬೇಕಿದೆ. ಭೂಮಿ ತಾಯಿಯ ಆರೋಗ್ಯ ಕಾಪಾಡುವುದು ಪ್ರತಿಯೊಂದು ರಾಷ್ಟ್ರದ ಕರ್ತವ್ಯ.

ನಾಲ್ಕನೆಯದಾಗಿ, ವಿಶ್ವಸಂಸ್ಥೆಯಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಹೊಸ ಜೀವ ಪಡೆಯಬೇಕಿದೆ. ಒಂದು ದೇಶ ಇನ್ನೊಂದು ದೇಶದ ಮೇಲೆ ಯುದ್ಧ ಸಾರಿದಾಗ, ಭದ್ರತಾ ಮಂಡಳಿ ಮೌನವಾಗಿರುವುದು ನೋವಿನ ಸಂಗತಿ. ವಿಟೋ ಅಧಿಕಾರ ಎಂಬ ವಿಶೇಷ ಹಕ್ಕು ನ್ಯಾಯಕ್ಕೆ ಅಡ್ಡಗಾಲಾಗುತ್ತಿರುವುದನ್ನು ಜಗತ್ತು ಕಾಣುತ್ತಿದೆ. ಅಂತಾರಾಷ್ಟ್ರೀಯ ಕಾನೂನಿಗೆ ಬಲ ಬರಬೇಕು, ದೊಡ್ಡ ದೇಶಗಳಿಗೂ ಚಿಕ್ಕ ದೇಶಗಳಿಗೂ ಒಂದೇ ನಿಯಮ ಅನ್ವಯಿಸಬೇಕು ಎಂಬ ಕೂಗು ಬಲಗೊಳ್ಳಬೇಕಿದೆ.

ಐದನೆಯದಾಗಿ, ಭಾರತದ ಪಾತ್ರ ಈ ಸಂದರ್ಭದಲ್ಲಿ ಬಹಳ ಮಹತ್ವದ್ದಾಗಿದೆ. ಭಾರತ ಸದಾ ಅಹಿಂಸೆ ಮತ್ತು ಶಾಂತಿಯ ಧ್ವಜವಾಹಕನಾಗಿ ನಿಂತಿರುವ ದೇಶ. ಬುದ್ಧ ಮತ್ತು ಗಾಂಧಿಯ ನಾಡಿನಿಂದ ಜಗತ್ತಿಗೆ ಶಾಂತಿಯ ಸಂದೇಶ ಹೋಗಬೇಕು. ಇರಾನ್ ಸಂಕಷ್ಟದ ಸಮಯದಲ್ಲಿ ಮಧ್ಯಸ್ಥಿಕೆಯ ಪಾತ್ರ ವಹಿಸಬಹುದಾದ ದೇಶಗಳ ಸಾಲಿನಲ್ಲಿ ಭಾರತ ಮುಂದೆ ಬರಬೇಕಿದೆ. ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಕೇವಲ ಆರ್ಥಿಕ ಬೆಳವಣಿಗೆಯಲ್ಲಿ ಮಾತ್ರ ಮುಂದೆ ಹೋಗದೆ, ನೈತಿಕ ನಾಯಕತ್ವದಲ್ಲೂ ಮುಂಚೂಣಿಯಲ್ಲಿ ನಿಲ್ಲಬೇಕಿದೆ. ವಸುಧೈವ ಕುಟುಂಬಕಂ ಎಂಬ ಮಾತು ಕೇವಲ ಶಿಖರ ಸಮ್ಮೇಳನಗಳ ಘೋಷಣೆಯಾಗದೆ, ನಿಜ ಜೀವನದ ಆಚರಣೆಯಾಗಬೇಕಿದೆ.

ಯುಗಾದಿಯ ಬೇವು-ಬೆಲ್ಲ ನಮಗೆ ಕಲಿಸುವ ಪಾಠ ಏನೆಂದರೆ, ಜೀವನ ಸಿಹಿ-ಕಹಿಗಳ ಮಿಶ್ರಣ ಎಂಬುದು. ಕಳೆದ ವರ್ಷ ಕಹಿ ಹೆಚ್ಚಿತ್ತು, ಯುದ್ಧ-ಸಂಘರ್ಷ-ಅಹಂಕಾರಗಳ ಬೇವಿನ ರುಚಿ ಬಹುವಾಗಿತ್ತು. ಆದರೆ ಈ ಹೊಸ ಸಂವತ್ಸರದಲ್ಲಿ ಬೆಲ್ಲದ ಸಿಹಿ ಹೆಚ್ಚಾಗಲಿ ಎಂಬ ಆಸೆ ಪ್ರತಿಯೊಬ್ಬರದು.

ಪರಾಭವ ಸಂವತ್ಸರ ಕೇವಲ ಅಹಂಕಾರಿಗಳ ಸೋಲನ್ನು ಸೂಚಿಸುವುದಿಲ್ಲ, ಅದು ವಿನಮ್ರತೆಯ ವಿಜಯವನ್ನೂ ಸೂಚಿಸುತ್ತದೆ. ಯಾವ ರಾಷ್ಟ್ರ ತನ್ನ ಸೈನಿಕ ಬಲದಿಂದ ಜಗತ್ತನ್ನು ಆಳಬಯಸುತ್ತದೋ ಆ ರಾಷ್ಟ್ರ ಅಂತಿಮವಾಗಿ ಸೋಲನ್ನೇ ಅನುಭವಿಸುತ್ತದೆ ಎಂಬುದನ್ನು ಇತಿಹಾಸ ಮತ್ತೆ ಮತ್ತೆ ಹೇಳಿದೆ. ರೋಮನ್ ಸಾಮ್ರಾಜ್ಯದಿಂದ ಹಿಡಿದು ಬ್ರಿಟಿಷ್ ಸಾಮ್ರಾಜ್ಯದವರೆಗೆ, ಎಲ್ಲ ಅಹಂಕಾರಿ ಶಕ್ತಿಗಳೂ ಕೊನೆಗೆ ಪರಾಭವವನ್ನೇ ಕಂಡಿವೆ. ಇಂದಿನ ಅಮೆರಿಕವೂ ಈ ಪಾಠ ಕಲಿಯಲೇಬೇಕಿದೆ. ಬಲವಂತದಿಂದ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ, ಬಾಂಬುಗಳಿಂದ ಪ್ರಜಾಪ್ರಭುತ್ವ ನಿರ್ಮಿಸಲಾಗದು ಎಂಬುದನ್ನು ಇರಾಕ್, ಅಫ್ಘಾನಿಸ್ತಾನ, ಲಿಬಿಯಾಗಳ ಉದಾಹರಣೆಗಳು ಸಾಬೀತುಪಡಿಸಿವೆ.

ಪರಾಭವ ಸಂವತ್ಸರದ ವಸಂತ ಋತುವಿನೊಂದಿಗೆ ಹೊಸ ಚಿಗುರುಗಳು ಮೂಡುತ್ತಿವೆ. ಪ್ರಕೃತಿ ಪ್ರತಿ ವರ್ಷ ಹೊಸದಾಗಿ ಹೂವರಳಿಸುತ್ತದೆ. ಅದೇ ರೀತಿ ಮಾನವ ಸಮಾಜವೂ ಹೊಸ ಆಶಾವಾದದಿಂದ ಚಿಗುರಬೇಕಿದೆ. ಈ ಸಂವತ್ಸರದಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಆರೋಗ್ಯ ತುಂಬಿರಲಿ, ಪ್ರತಿ ಮಗುವಿನ ಕೈಯಲ್ಲಿ ಪುಸ್ತಕವಿರಲಿ, ಪ್ರತಿ ರೈತನ ಹೊಲದಲ್ಲಿ ನೀರಿರಲಿ. ಯುದ್ಧಗಳ ಶಬ್ದ ಮಾಯವಾಗಿ, ಮಕ್ಕಳ ನಗುವಿನ ಶಬ್ದ ಕೇಳಿಸಲಿ. ಬಂದೂಕುಗಳ ಜಾಗದಲ್ಲಿ ಪುಸ್ತಕಗಳು, ಕ್ಷಿಪಣಿಗಳ ಜಾಗದಲ್ಲಿ ರೋಗಿಗಳಿಗೆ ಔಷಧಿ ಇರಲಿ.

ಶ್ರೀ ಪರಾಭವ ನಾಮ ಸಂವತ್ಸರ ಅಹಂಕಾರಿಗಳಿಗೆ ಎಚ್ಚರಿಕೆಯ ಗಂಟೆ, ಆದರೆ ಸಜ್ಜನರಿಗೆ ಆಶಾಕಿರಣ. ಬೇವಿನ ಕಹಿಯನ್ನು ಸ್ವೀಕರಿಸಿ, ಬೆಲ್ಲದ ಸಿಹಿಯನ್ನು ಹಂಚಿ ತಿನ್ನೋಣ. ಈ ವರ್ಷ ಜಗತ್ತು ಸ್ವಲ್ಪವಾದರೂ ಒಳ್ಳೆಯದಾಗಲಿ, ಅಹಂಕಾರ ಕಳಚಲಿ, ವಿನಮ್ರತೆ ತುಂಬಲಿ, ಯುದ್ಧ ನಿಲ್ಲಲಿ, ಶಾಂತಿ ಹರಡಲಿ ಎಂಬ ಸಂಕಲ್ಪದೊಂದಿಗೆ ಎಲ್ಲರಿಗೂ ಪರಾಭವ ಸಂವತ್ಸರದ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಶಾಂತಿಯತ್ತ ಮನಸ್ಸಿರಲಿ

ರತ್ನೋದಾರಚತುಃಸಮುದ್ರರಶನಾಂ ಭುಕ್ತ್ವಾ ಭುವಂ ಕೌರವೋ
ಭಗ್ನೋರುಃ ಪತಿತಃ ಸ ನಿಷ್ಪರಿಜನೋ ಜೀವನ್ಸ್ವಕೈರ್ಭಕ್ಷಿತಃ।
ಗೋಪೈರ್ವಿಶ್ವಜಯೀ ಜಿತಃ ಸ ವಿಜಯಃ ಕಕ್ಷೈಃ ಕ್ಷಿತಾ ವೃಷ್ಣಯಃ
ತಸ್ಮಾತ್ ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈ ಮನೋಽಯತಾಮ್॥

-ಕ್ಷೇಮೇಂದ್ರ, ಭಾರತ ಮಂಜರಿ

ಚತುಸಮುದ್ರ ಮುದ್ರಿತವಾದ ಭೂಮಿಯ ಒಡೆತನವನ್ನು ಭೋಗಿಸಿದ ದುರ್ಯೋಧನನು ಕೊನೆಗೆ ತೊಡೆ ಮುರಿದು ಬಿದ್ದು, ಪರಿಜನರೊಬ್ಬರೂ ಇಲ್ಲದೆ ಜೀವವಿರುವಾಗಲೇ ತೋಳಗಳಿಗೆ ತುತ್ತಾದನು. ಜಗತ್ತನ್ನೇ ಜಯಿಸಿದ ಅರ್ಜುನನು ಗೊಲ್ಲರಿಗೆ ಸೋತು ಹೋದನು. ವೃಷ್ಣಿ ಕುಲದವರು ಜೊಂಡು ಹುಲ್ಲುಗಳಿಂದ ಹೊಡೆದಾಡಿ ನಾಶ ಹೊಂದಿದರು.ಇವೆಲ್ಲವನ್ನೂ ದೀರ್ಘಕಾಲ ವಿಚಾರ ಮಾಡಿ ಶಾಂತಿಯ ಕಡೆ ಮನಸ್ಸನ್ನು ಕೊಡಿ- ಎಂಬುದು ಶ್ಲೋಕಾರ್ಥ.



ಡಾ.ಸೋಂದಾ ಭಾಸ್ಕರ ಭಟ್

ಎಲ್ಲರೂ ಬಯಸುವುದು ಶಾಂತಿ-ನೆಮ್ಮದಿಯ ಬದುಕನ್ನು. ಇದು ಹೊರಗೆ ಸಿಗುವಂಥದ್ದಲ್ಲ, ಹಣ ಕೊಟ್ಟು ಕೊಂಡು ಕೊಳ್ಳುವಂಥದ್ದೂ ಅಲ್ಲ, ನಾವು ನಮ್ಮಲ್ಲಿಯೇ ಕಂಡುಕೊಳ್ಳಬೇಕಾದದ್ದು. ತನ್ನೊಳಗೆ ಕಂಡುಕೊಳ್ಳಲಾಗದವನು ಹೊರಗಡೆ ಕಂಡುಕೊಳ್ಳಲು ಮುಂದಾಗಿ ಸೋಲುತ್ತಾನೆ. ನಮ್ಮೊಳಗೆ ನಾವು ಕಂಡುಕೊಳ್ಳುವುದು ಹೇಗೆ? ನಿರಂತರ ಸಾಧನೆ, ಉತ್ತಮ ಸಂಸ್ಕಾರ, ತ್ಯಾಗದ ಮನೋಭಾವ, ಅಲ್ಪತೃಪ್ತಿ... ಇತ್ಯಾದಿ ಸದಂಶಗಳನ್ನು ಅಳವಡಿಸಿಕೊಳ್ಳುವುದರಿಂದ ಸಾಧ್ಯವಿದೆ. ಸಂಪತ್ತಿನ ಬೆನ್ನೇರಿ ಸಾಗುವುದು, ಅಧಿಕಾರದ ಮದವೇರುವುದು, ಸೌಂದರ್ಯದ ದಾಸರಾಗುವುದು ಅಶಾಂತಿಯನ್ನು ತಂದುಕೊಡುತ್ತದೆಯೇ ವಿನಾ ಶಾಂತಿಯನ್ನು ತಂದುಕೊಡದು.

ಸುಯೋಧನನಿಗೆ ಯಾವ ಕೊರತೆಯಿತ್ತು? ಅಪಾರ ಭೂಮಿಯ ಒಡೆಯನಾತ. ವೈಭೋಗಗಳ ಕೊರತೆಯೇ ಇಲ್ಲ. ಆಳು-ಕಾಳುಗಳು, ರಕ್ಷಕ ಭಟರು ಯಾವುದೂ ಇಲ್ಲವೆಂದಿಲ್ಲ. ಇಷ್ಟೆಲ್ಲ ಇದ್ದು ಶಾಂತಿ ಮಾತ್ರ ಇರಲಿಲ್ಲ. ಜೀವನದ ಕೊನೆ ಭೀಭತ್ಸವಾಗಿ ಹೋಯಿತು. ರಣಾಂಗಣದಲ್ಲಿ ತೊಡೆ ಮುರಿದು ಬಿದ್ದು, ಸುಖದಲ್ಲಿ ಜತೆಯಲ್ಲಿದ್ದವರಾರೂ ಇಲ್ಲ. ಪರಿಜನರು ಇಲ್ಲದೇ ಒದ್ದಾಡುವ ಸ್ಥಿತಿ. ಒಂಟಿಯಾಗಿ, ಅಸಹಾಯಕನಾಗಿ ಬಿದ್ದಿರುವಾಗ ತೋಳಗಳಿಗೆ ಆಹಾರವಾಗಬೇಕಾಯ್ತು.

ಜಗತ್ತನ್ನೇ ಜಯಿಸಿದ ತ್ರಿಲೋಕ ವಿಜಯಿಯಾದ ಅರ್ಜುನನ ಕಥೆಯೂ ಅಷ್ಟೆ! ಮೂರು ಲೋಕದ ಗಂಡನೆನಿಸಿ, ದಶನಾಮಗಳಿಂದ ಖ್ಯಾತನಾದ ಅವನು ಗೊಲ್ಲರಿಗೆ ಸೋತುಹೋದ. ಕಣ್ಣೆದುರೇ ಸ್ತ್ರೀಯರನ್ನು ಹಿಂಸಿಸುತ್ತಿರುವಾಗ ಏನೂ ಮಾಡಲಾರದ ಅಸಹಾಯಕನಾದ. ಅವನ ಪರಾಕ್ರಮದ ಕಥೆ ಶಾಂತಿಯನ್ನು ತಂದುಕೊಡಲಿಲ್ಲ.ಯಾದವರು ಜೊಂಡು ಹುಲ್ಲಿನಿಂದ ಹೊಡೆದಾಡಿಕೊಂಡು ತಮ್ಮನ್ನು ತಾವೇ ನಾಶಪಡಿಸಿಕೊಂಡರು. ಅಶಾಂತಿಯ ಬದುಕಾಗಿ ಬದಲಾಯಿತು. ಈ ಎಲ್ಲ ಘಟನೆಗಳನ್ನು ಅವಲೋಕಿಸಿದಾಗ ಬಾಹ್ಯ ವಸ್ತುಗಳಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗದು ಎಂಬುದು ಸುಸ್ಪಷ್ಟ. ದೀರ್ಘಕಾಲ ಯೋಚಿಸಬೇಕು; ಆತ್ಮಾವಲೋಕನ ಮಾಡಿ ಕೊಳ್ಳಬೇಕು. ಅಂತರ್‌ಮುಖಿಯಾಗುವುದನ್ನು ಅರಿತುಕೊಳ್ಳಬೇಕು ಆಗ ಶಾಂತಿಯತ್ತ ಮನಸ್ಸಲು ಹೊರಳಲು ಪ್ರಾರಂಭವಾಗುತ್ತದೆ. ಜೀವನದಲ್ಲಿ ಶಾಂತಿ ಲಭಿಸುತ್ತದೆ. 'ಶಾಂತಿ ತುಲೋಲ ತಪೋನಾಸ್ತಿ' ಶಾಂತಿಯೆಂಬ ಅಸ್ತ್ರವನ್ನು ಕಂಡುಕೊಂಡು ಧರಿಸಿದರೆ ನಿತ್ಯ ನೆಮ್ಮದಿ.

ವಿಷಾದವೆಂಬ ವರ್ತುಲದೊಳಗೆ

ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ ಕಲಿಯಬೇಕು. ಅದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.

ಆ-ಲೋಚನ
ರಾಧಾಕೃಷ್ಣ ಕಲ್ಚಾರ್
rkkalchar@gmail.com



ಸದಾ ಸಂತೋಷವಾಗಿರಬೇಕು ಎಂಬುದು ಎಲ್ಲರ ಬಯಕೆ. ಅದು ಜೀವಿಯ ಸ್ವಭಾವ. ಅದಕ್ಕಾಗಿ ನಿತ್ಯ ಪ್ರಯತ್ನ. ದುಃಖ ಬೇಕು ಎಂದು ಯಾರೂ ಬಯಸುವುದಿಲ್ಲ. ಆದರೂ ಜೀವನದಲ್ಲಿ ನೋವಿನ, ದುಃಖದ ಗಳಿಗೆಗಳು ಬಂದೇ ಬರುತ್ತವೆ. ಪ್ರಮಾಣದಲ್ಲಿ, ತೀವ್ರತೆಯಲ್ಲಿ ವ್ಯತ್ಯಾಸವಿರಬಹುದು. ದುಃಖವೇ ಇಲ್ಲ ಎನ್ನುವ ಭಾಗ್ಯ ಯಾರಿಗೂ ಇಲ್ಲ. ಕೆಲವು ಸಲ ನಮ್ಮ ಜೀವನದ ಸಂಕಟಗಳಿರಲಿ, ವೈಯಕ್ತಿಕವಲ್ಲದ ಕಾರಣಗಳಿಗೂ ನಾವು ವಿಷಾದವನ್ನು ಅನುಭವಿಸುತ್ತೇವೆ. ಅದು ಕಣ್ಣೀರಿಳಿಸುವ ದುಃಖವಲ್ಲ. ಎದೆಯನ್ನು ಭಾರವಾಗಿಸುವ ಭಾವ. ಕುರುಕ್ಷೇತ್ರದಲ್ಲಿ ಉಭಯ ಸೇನಾ ಮಧ್ಯದಲ್ಲಿ ನಿಂತು ಎದುರಾಳಿಗಳನ್ನು ಕಂಡಾಗ ಅರ್ಜುನನಲ್ಲಿ ಹುಟ್ಟಿದಂತಹ ವಿಷಾದ. ಅವನು ಏನೋ ಮಾಡಿದ್ದಕ್ಕಾಗಿ ಅದರ ಪರಿಣಾಮವನ್ನು ನೆನೆದು ಹುಟ್ಟಿದ ಪಶ್ಚಾತ್ತಾಪದ ದುಃಖವು ಅದಲ್ಲ. ಮಾಡಬೇಕಾಗಿರುವ ಕಾರ್ಯದ ಪರಿಣಾಮವನ್ನು ನೆನೆದು ಹುಟ್ಟಿದ್ದು. ಅದಕ್ಕೆ ಅರ್ಜುನ ಕಾರಣನಲ್ಲ. ಅಲ್ಲಿ ಸಂಭವಿಸಿದ್ದರ ಅಥವಾ ಸಂಭವಿಸಲಿರುವ ಯಾವುದಕ್ಕೂ ಅವನಿಗೆ ಉತ್ತರದಾಯಿತ್ವವಿಲ್ಲ. ಆದರೂ ವಿಷಾದ ಆವರಿಸಿತು. ಕೃಷ್ಣ ಆ ವಿಷಾದವನ್ನು ತೊಡೆದು ಕರ್ತವ್ಯಕ್ಕೆ ಸಿದ್ಧನಾಗಿಸಿದ. ಅದು ನಮ್ಮ ವಿವಕ್ಷೆಯಲ್ಲ. ನಮ್ಮನ್ನು ಸಾಂತ್ವನಗೊಳಿಸುವುದಕ್ಕೆ ಯಾವ ಕೃಷ್ಣನೂ ಬರಲಾರ.

ಹಾಗೆಂದು ತೀವ್ರವಾದ ವಿಷಾದ ಅಥವಾ ವಿಷಣ್ಣತೆಗೆ ಮನಶ್ಶಾಸ್ತ್ರದಲ್ಲಿ ಇನ್ನೊಂದು ಹೆಸರಿದೆ. ಅದು ಖಿನ್ನತೆ ಅಥವಾ ಡಿಪ್ರೆಷನ್. ಅದು ಮನೋರೋಗ. ಅದು ಉಲ್ಬಣಿಸಿದರೆ ಅದರ ಪರಿಣಾಮಗಳು ಗಂಭೀರ. ತಾನು ನಿರುಪಯುಕ್ತ, ಯಾರಿಗೂ ತಾನು ಬೇಡದವನು ಎಂಬ ಅನಿಸಿಕೆ ಪ್ರಬಲಿಸಿ, ಯಾರಿಗೂ ಬೇಡದ ತಾನು ಯಾಕಿರಬೇಕು ಎನ್ನುವಲ್ಲಿಗೆ ತಲುಪಿ, ಜೀವ ಕಳೆದುಕೊಳ್ಳುವ ಪ್ರಯತ್ನಕ್ಕೂ ರೋಗಿ ಕೈಯಿಕ್ಕಬಹುದು. ಈ ಖಿನ್ನತೆಯು ತನ್ನಲ್ಲಿದೆ ಎಂಬ ಅರಿವೂ ಅದಕ್ಕೆ ಒಳಗಾದವನಿಗೆ ತಿಳಿಯುವುದೇ ಇಲ್ಲ. ಬೇರೆಯವರು ಹೇಳಿದರೂ ಅವನು ಸುಲಭದಲ್ಲಿ ಒಪ್ಪುವುದಿಲ್ಲ. ಇರಲಿ, ಇದಕ್ಕೆ ಕಾರಣಗಳಿರುತ್ತವೆ. ಕಾರಣಗಳಿರುವುದರಿಂದ ಚಿಕಿತ್ಸೆಯೂ ಇರುತ್ತದೆ. ಚಿಕಿತ್ಸೆಯಿಂದ ವ್ಯಕ್ತಿ ಚೇತರಿಸಿ, ಆರೋಗ್ಯಪೂರ್ಣ ಜೀವನವನ್ನು ನಡೆಸುವಂತಾಗುತ್ತದೆ. ಇಲ್ಲಿ ಹೇಳುತ್ತಿರುವ ವಿಷಾದ ಆ ಬಗೆಯದ್ದಲ್ಲ.

ನಾವು ಕಾರಣವಲ್ಲದ, ಎಷ್ಟೋ ಸಲ ನಮಗೆ ಸಂಬಂಧವೂ ಇಲ್ಲದ ಜಗತ್ತಿನ ವಿದ್ಯಮಾನಗಳ ಪರಿಣಾಮದಿಂದ ನಮ್ಮಲ್ಲಿ ಬೇಸರ ಹುಟ್ಟುತ್ತದೆ. ಆ ಬೆಳವಣಿಗೆಯಿಂದ ಎಷ್ಟೋ ಜೀವಗಳು ಸಂಕಟ ಪಡುತ್ತವಲ್ಲ ಎಂದು ನೆನೆದು ತಳಮಳವಾಗುತ್ತದೆ. ಹಾಗೆಂದು ಅದನ್ನು ಬದಲಾಯಿಸಲಾಗದ ಅಸಹಾಯಕತೆಯ ಅರಿವು ನಮಗಿರುತ್ತದೆ. ಅದರ ಅರಿವು ಇರುವುದರಿಂದಲೇ ವಿಷಾದವು ಗಾಢವಾಗುವುದು. ಒಮ್ಮೆ ಉಂಟಾದರೆ ಗಂಟೆಗಳೋ, ದಿನಗಳೋ ಅದು ಕಾಡುವುದು. ನಮ್ಮ ಖಾಸಗಿ ಬದುಕಿನಲ್ಲಿ ಸುಖವಾಗಿದ್ದಾಗಲೂ ಈ ವಿಷಾದವು ಬಿಡುವುದಿಲ್ಲ. ಉದಾಹರಣೆಗೆ ನಮಗೆ ಸಂಬಂಧಿಸದ ಎರಡು ದೇಶಗಳ ನಡುವೆ ಯುದ್ಧವಾಗುತ್ತಿದೆ ಎಂದು ಭಾವಿಸೋಣ. ಅದರಿಂದಾಗಿ ಆ ದೇಶಗಳಿಗಾಗುವ ನಷ್ಟ, ಭಯಂಕರವಾದ ಕ್ಷಿಪಣಿಗಳ, ಸ್ಫೋಟಕಗಳ ಪ್ರಯೋಗ, ಅದರಿಂದಾಗುವ ವಿನಾಶ, ಸೈನಿಕರ ಸಾವು, ನೋವುಗಳು ನಮ್ಮ ಕಣ್ಣೆದುರು ಕಾಣಿಸುತ್ತವೆ. ಮಾಧ್ಯಮಗಳು ಅಷ್ಟು ದೃಶ್ಯಗಳನ್ನು ನಮ್ಮ ಮನೆಯಲ್ಲಿ ಸಿನಿಮಾದಂತೆ ತೋರಿಸುತ್ತವೆ. ಆ ಭಯಾನಕತೆ ನಮ್ಮನ್ನು ನಡುಗಿಸುತ್ತದೆ. ಏನೇನೂ ಅಪರಾಧ ಮಾಡದ ನಮ್ಮಂತಿರುವ ಸಾಮಾನ್ಯ ಜನ ಯುದ್ಧದ ಬೆಂಕಿಗೆ ಬಲಿಯಾಗುವುದನ್ನು ಕಂಡು 'ಅಯ್ಯೋ ಯಾಕೆ ಹೀಗಾಗುತ್ತದೆ?' ಎಂದು ಕೇಳಿಕೊಳ್ಳುತ್ತೇವೆ. ಅಷ್ಟೇ ನಮ್ಮಿಂದ ಸಾಧ್ಯವಿರುವುದು. ಈ ಮಿತಿಯನ್ನೆಣಿಸಿ ವಿಷಾದವು ಕಾಣಿಸುವುದು.



ಅದಕ್ಕಿಂತ ಹೆಚ್ಚು ಆ ದೃಶ್ಯಗಳನ್ನು ಕಂಡು ಸಂಭ್ರಮಿಸುವ ಸಮೂಹದ ಆವೇಶ ಉಂಟಲ್ಲ, ಅದು ಇನ್ನೂ ಭಯಾನಕವಾದುದು. ನಮ್ಮ ಜತೆಗಿರುವ ಮಂದಿಯೇ, ಸಾಮಾಜಿಕ ಕೂಟಗಳಲ್ಲಿ ನಮ್ಮೊಂದಿಗೆ ಸೇರಿಕೊಳ್ಳುವವರೇ, ಗೆಳೆಯರೇ, ಬಂಧುಗಳೇ ಈ ನೆತ್ತರಿನ ಓಕುಳಿಯನ್ನು ಕಂಡು ಕೇಕೆ ಹಾಕುತ್ತಾರಲ್ಲ, ಆಗ ಉಂಟಾಗುವ ವಿಷಾದ ಇದಕ್ಕಿಂತ ಅಧಿಕವಾದುದು, ಗಾಢವಾದುದು. ಈ ಮನುಷ್ಯರು ಯಾಕಿಷ್ಟು ಕಠೋರವಾದ ಮನಸ್ಸನ್ನು ಹೊಂದಿದ್ದಾರೆ ಎಂಬ ಪ್ರಶ್ನೆ ಮೂಡುವುದು. ನಾವೆಷ್ಟು ಅಸಹಾಯಕರು, ಅಮಾಯಕರು ಎನ್ನುವುದನ್ನು ಭಾವಿಸಿ ಕಾಡುವ ನೋವು ಅದು. ಇದು ನಮ್ಮ ಕೈಮೀರಿದ ಸಂಗತಿ. ಇದನ್ನು ನಿಲ್ಲಿಸಲು ಅಥವಾ ಬದಲಾಯಿಸಲು ನಾವು ಶಕ್ತರಲ್ಲ. ಮನುಷ್ಯರು ಸಾಯುವುದನ್ನೂ, ಅದಕ್ಕಾಗಿ ಸಂಭ್ರಮಿಸುವವರನ್ನೂ ಸುಮ್ಮನೆ ನೋಡುತ್ತಿರುವ ನಮ್ಮ ಸ್ಥಿತಿಯನ್ನು ನೆನೆದು ಹುಟ್ಟುವ ವಿಷಾದ. ಇದಕ್ಕೆ ಕಾರಣ ನಾವಲ್ಲ ಎಂಬುದು ತಿಳಿದಿದೆ. ಅದರ ಹೊಣೆಯನ್ನು ನಮ್ಮ ಹೆಗಲ ಮೇಲೆ ಹೊರಬೇಕಾದ ಅಗತ್ಯವಿಲ್ಲ, ನಿಜವೇ. ಹಾಗಿದ್ದಾಗಲೂ ಇದನ್ನು ತಡೆಯುವುದಕ್ಕೆ ನಮ್ಮಿಂದಾಗುವುದಿಲ್ಲವಲ್ಲ ಎಂಬ ಚಿಂತೆಯಿಂದ ಹುಟ್ಟುವ ವಿಷಾದ.

ನಾವೇನೂ ಮಾಡಲಾರೆವು ಎಂಬ ಪರಿಸ್ಥಿತಿಯಲ್ಲಿ ಮನಸ್ಸು ವಿಷಾದವನ್ನು ಅನುಭವಿಸುತ್ತ ಇರಬೇಕೇ? ಹೀಗೇ ಚಿಂತಿಸಿದಷ್ಟೂ ಗಾಢವಾಗುವ ವಿಷಾದ ವರ್ತುಲದಿಂದ ಹೊರಗೆ ಬರುವ ದಾರಿಯೇ ಇಲ್ಲವೇ? ಉಂಟು. ಮನಸ್ಸಿನ ಈ ಕುಗ್ಗುವಿಕೆಗೆ ಹೊರ ಜಗತ್ತಿನ ಬೆಳವಣಿಗೆಗಳು ಅಹಿತಕರವಾಗಿರುವುದು ಕಾರಣ. ಜಗತ್ತಿನಲ್ಲಿ ಅಹಿತ ಮಾತ್ರವಲ್ಲ, ಹಿತಕರವಾದುದು ಇದೆಯಷ್ಟೆ? ಅದನ್ನು ಗುರುತಿಸಿಕೊಂಡರೆ ಈ ವಿಷಾದ ಮರೆಯಾಗುತ್ತದೆ.

ಡಿವಿಜಿ ಅವರು ಹೇಳಿದ ಮಾತು ನೆನಪಾಗುತ್ತದೆ. 'ಗುರುತಿಸೊಳಿತಿರುವುದನು ಕೇಡುಗಳ ನಡುವೆ' ಅನ್ನುತ್ತಾರೆ ಅವರು. ಕೆಟ್ಟದ್ದು ತುಂಬ ಇದೆ, ನಿಜ. ಆದರೆ ಅವುಗಳ ನಡುವೆ ಒಳಿತೂ ಇದೆ. ಅದನ್ನು ಗುರುತಿಸು. 'ಹರುಷಕಿದೆ ದಾರಿ'. ಎಲ್ಲವೂ ಕೆಡುಕಲ್ಲ, ಒಳ್ಳೆಯದೂ ಇದೆ ಎನ್ನುವ ಭರವಸೆ ವಿಷಾದದ ಪ್ರವಾಹವನ್ನು ದಾಟುವುದಕ್ಕೆ ಸಹಾಯಕವಾಗುತ್ತದೆ.

ಇನ್ನೊಂದು ದಾರಿಯೂ ಇದೆ. ತತ್ಕಾಲಕ್ಕೆ ಇದನ್ನು ಮರೆಯುವುದು. ಆಡಳಿತದ ಭ್ರಷ್ಟಾಚಾರವೋ, ಯಾರದೋ ಅಮಾನವೀಯ ವರ್ತನೆಯೋ ಮನಸ್ಸಿಗೆ ಘಾಸಿಯುಂಟು ಮಾಡಿದೆ ಒಂದು ಎಂದಿಟ್ಟುಕೊಳ್ಳಿ. ವ್ಯಾವಹಾರಿಕವಾಗಿ ಅದು ನಮಗೆ ಬಾಧಕವಲ್ಲ, ಎಲ್ಲೋ ನಡೆದುದು. ಅದನ್ನು ಒಮ್ಮೆ ಮರೆತರೆ ಮತ್ತೆ ಅದರ ಪರಿಣಾಮ ಗಾಢವಾಗಿರುವುದಿಲ್ಲ. ಅದಕ್ಕಾಗಿ, ಒಂದಿಷ್ಟು ಹೊತ್ತು ಇಂಪಾದ ಹಾಡು ಸಂಗೀತ ಕೇಳಿ. ಅದಾಗುವುದಿಲ್ಲವೆ? ಆತ್ಮೀಯರಾದ ಯಾರಿಗಾದರೂ ಕರೆ ಮಾಡಿ. ಸುಮ್ಮನೆ ಅದೂ ಇದೂ ಮಾತನಾಡಿ. ಏನೋ ತಮಾಷೆಯ ಸಂದರ್ಭವನ್ನು ನೆನೆದುಕೊಳ್ಳಿ. ಸುಮ್ಮನೆ ಅಡುಗೆ ಮನೆಯೊಳಗೆ ಹೋಗಿ ಏನೋ ಒಂದು ತಿಂಡಿ ಮಾಡಿ. ನೀವು ಸಾಕಿದ ನಾಯಿಯೋ, ಬೆಕ್ಕೋ ಇದ್ದರೆ ಅದರೊಂದಿಗೆ ಆಟವಾಡಿ. ಎಳೆಯ ಮಗುವನ್ನು (ಇದ್ದರೆ) ಎತ್ತಿಕೊಂಡು ಓಡಾಡಿ.

ಹತ್ತಿರದಲ್ಲಿ ದೇವಸ್ಥಾನ ಇದ್ದರೆ ಅಲ್ಲಿ ಹೋಗಿ. ಮೌನವಾಗಿ ಕೊಂಚ ಹೊತ್ತು ಕುಳಿತುಕೊಳ್ಳಿ. ಯಾರೋ ಬಾರಿಸಿದ ಘಂಟೆಯ ನಾದಕ್ಕೆ ಕಿವಿಗೊಡಿ. ಅದರ ಅನುರಣನ ನಿಮ್ಮಲ್ಲಿಯೂ ಪ್ರತಿಧ್ವನಿಸುವುದ ನೋಡಿ.

ಇದಾವುದೂ ಆಗುವುದಿಲ್ಲವೆ? ಸುಮ್ಮನೆ ಕುಳಿತಲ್ಲಿಯೇ ಕಣ್ಣು ಮುಚ್ಚಿ ಕಲ್ಪನೆಯ ದಾರಿಯಲ್ಲಿ ಪ್ರಯಾಣ ಹೊರಡಿ. ಮನಸ್ಸು ಅದಕ್ಕಿಷ್ಟ ಬಂದತ್ತ ನಿಮ್ಮನ್ನು ಕರೆದೊಯ್ಯಲಿ. ಕಾಲ್ಪನಿಕ ಪ್ರಯಾಣವು ಕಾಣಿಸುವ ಬಣ್ಣಬಣ್ಣದ ಚಿತ್ರಗಳನ್ನು ನೋಡಿ ಆನಂದಿಸಿ. ಮುಖ್ಯವಾಗಿ ನಿಮ್ಮನ್ನು ಕಾಡುವ ವಿಷಾದಕ್ಕಿಂತ ಬೇರೆಯಾದ ಏನನ್ನಾದರೂ ಧ್ಯಾನಿಸಿ. ಕಾಲುಗಂಟೆ, ಅರ್ಧಗಂಟೆ... ಈಗ ನೋಡಿ ಆ ವಿಷಾದದ ಜಾಗದಲ್ಲಿ ಏನೋ ಉಲ್ಲಾಸದ ಸಂಗತಿ ನಿಮ್ಮ ಮನಸ್ಸನ್ನು ಹಗುರಾಗಿಸಿರುತ್ತದೆ.

ಇಂತಹ ಉಪಾಯಗಳು ನಮ್ಮ ಮನಸ್ಸನ್ನು ಪ್ರಕ್ಷುಬ್ಧಗೊಳ್ಳದಂತೆ ಕಾಯತಕ್ಕವು. ಯಾಕೆಂದರೆ ಸಮಸ್ಯೆಗಳಿಲ್ಲದ ಜಗತ್ತು ಇಲ್ಲ. ಮುಂದೆಯೂ ಇನ್ನಷ್ಟು ಜಟಿಲ ಸಮಸ್ಯೆಗಳು ಉದ್ಭವಿಸಿಯಾವೇ ಹೊರತು ಕಡಿಮೆಯಾಗಲಾರವು. ಹಾಗಾಗಿ ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ, ಅದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.

ಕಾಲಗಣನೆಯ ಕನ್ನಡಿ ಈ 'ಯುಗಾದಿ'

ಡಾ. ಮೈತ್ರಿ ಭಟ್, ವಿಟ್ಲ




'ವರುಷ ವರುಷವೂ ಮತ್ತೆ ಯುಗಾದಿ;
ಕಾಲವಿದಂತು ಅನಂತ ಅನಾದಿ,
ತೋರಣ ಕಟ್ಟಿದೆ ಬದುಕಿನ ಬೀದಿ;
ಏಳುಬೀಳುಗಳ ಬಳಸಿನ ಹಾದಿ'' (ಕೆ.ಎಸ್.ನ)

ಹಾದಿಯುದ್ದಕ್ಕೂ ಹೊಂಗೆ ಮರಗಳ ಹೂವು ಚೆಲ್ಲಿದ ಹಾದಿ... ಕೆಳಗೆ ಕಣ್ಣಾಡಿಸಿದರೆ ಬಿದ್ದ ನಾಜೂಕಿನ ಹೂಗಳು... ಮೇಲೆ ಕಣ್ಣೆತ್ತಿದ್ದರೆ ನಳನಳಿಸುವ ಹಸಿರು ಎಲೆಗಳ ಮುಚ್ಚುವಂತೆ ಹೂಗಳ ರಾಶಿ ರಾಶಿ. ಮೇಲೂ ವರ್ಣ.. ಕೆಳಗೂ ಬಣ್ಣ.. ಆಹಾ.. ಚೈತ್ರದ ಸೊಬಗು... ಹೌದು. ಯುಗಾದಿ ಎಂದರೆ ಹೀಗೇ. ಕಣ್ಣಿಗೂ ಮನಸ್ಸಿಗೂ ಹೊಸ ಹುರುಪು, ಉಲ್ಲಾಸ ತುಂಬುವ ಕ್ಷಣ. ಎಲೆಗಳು ಚಿಗುರಿ, ಮೊಗ್ಗು ಮೂಡಿ, ಹೂ ಅರಳಿ ಕಂಗೊಳಿಸುವ ಗಿಡಮರಗಳು ಕಣ್ಣಿಗೆ ಹಬ್ಬವಾಗುತ್ತವೆ. ಬಣ್ಣ-ಬಣ್ಣದ ಪಕ್ಷಿಗಳು ಗಿಡಮರಗಳ ರೆಂಬೆ-ಕೊಂಬೆಗಳನ್ನು ಅಲಂಕರಿಸುತ್ತವೆ.

ಚೈತ್ರ ಮಾಸ ಬಂತೆಂದರೆ ಸಾಕು.. ಇಡೀ ವಾತಾವರಣವೇ ಬದಲಾಗಿ ಹೊಸತನದಿಂದ ತುಂಬಿ ತುಳುಕುತ್ತದೆ. ಬಿಸಿಲಿನ ತಾಪ ಹೆಚ್ಚಾದರೂ, ಬೀಸುವ ತಂಗಾಳಿ ಮನಸ್ಸಿಗೆ ತಂಪೆರೆಯುತ್ತದೆ. ಹೊಸ ಚೈತನ್ಯವನ್ನು ಮನ ಮನಗಳಲ್ಲಿ ಮೂಡಿಸುವ, ನೋವು-ನಲಿವುಗಳಿಗೆ ವಿರಾಮ ಹೇಳುವ ಈ ಹಬ್ಬದ ಆಗಮನದ ಕ್ಷಣ ಪ್ರಕೃತಿಯೇ ಮೈದುಂಬಿ ಅಲಂಕೃತಳಾಗುತ್ತಾಳೆ. ಹೇಮಂತ ಋತುವಿನಲ್ಲಿ ಎಲೆಯುದುರಿಸಿಕೊಂಡು ಬೋಳಾಗಿ ನಿಂತ ಮರಗಿಡಗಳು, ಶಿಶಿರಋತುವಿನಲ್ಲಿ ಪ್ರಕೃತಿಯ ಕಠಿಣತೆಯನ್ನು ಎದುರಿಸಿ, ವಸಂತಾಗಮನದಿಂದ ಮತ್ತೆ ಚಿಗುರಿ ಹಸುರುಡುಗೆಯನ್ನುಟ್ಟು ಕಂಗೊಳಿಸುವ ಈ ಕ್ಷಣ ಜೀವನದ ಪಾಠವಾಗಿಯೂ ಕಂಡುಬರುತ್ತದೆ. ಪ್ರಕೃತಿಯಲ್ಲೂ ನವಚೈತನ್ಯವಿರುವ ಈ ಹಬ್ಬ ನಮ್ಮಲ್ಲಿಯೂ ನವಚೈತನ್ಯ ತುಂಬುವಂತದ್ದಾಗಿದೆ.

ಎರಡು ತುದಿಗಳ ನಡುವೆ ಸಾಗುವುದಕ್ಕೆ ಒಂದು ಅಂತ್ಯವಿದೆ. ಅನಂತವೇ ಆಗಿದ್ದರೂ, ಅದಕ್ಕೊಂದು ಅಂತ್ಯದ ಸಾಧ್ಯತೆ ಇದೆ. ವೃತ್ತ ಅಥವಾ ಚಕ್ರದಲ್ಲಿ ಹಾಗಲ್ಲ. ಕಾಲ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಮರುಕಳಿಸುತ್ತಲೇ ಇರುವುದರಿಂದ ಅದು 'ಚಕ್ರ'ವಾಗಿದೆ. ಇಂತಹ ಕಾಲವೊಂದು ಅನಾದಿ ಅನಂತಗಳ ನಡುವಿನ ತಂತು. ಓಡುವ ಕಾಲವ ಹಿಡಿದು ನಿಲ್ಲಿಸುವ ಭರದಿ ನಮ್ಮ ಕೈಗೆ ನಿಲುಕಿದ್ದು ಈ ಯುಗಾದಿ ಹಬ್ಬ.

ಯುಗಾದಿ ಕಾಮನಬಿಲ್ಲಿನ ಹಾಗೆ. ಆ ಕ್ಷಣಕ್ಕೆ ಮನಕ್ಕೆ ಮುದವನ್ನೂ, ಭರವಸೆಯನ್ನೂ ತುಂಬುವುದು. ಬುದ್ಧಿ-ಭಾವಗಳ ಪ್ರಯತ್ನಗಳಲ್ಲಿ ಏನನ್ನೇ ಮಾಡಿದರೂ ಕಾಲನ ಗಾಣದಲ್ಲಿ ನಾವು ಸುತ್ತುವ ಎತ್ತುಗಳಷ್ಟೇ. ಹೊರಟ ಬಿಂದುವಿಗೇ ಮತ್ತೆ ಸೇರುವುದಷ್ಟೆ ಈ ಬದುಕಿನ ಪಯಣ.



ಈ ಯುಗಾದಿ ಹಬ್ಬದ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ರಂಗವಲ್ಲಿ ಇಟ್ಟು, ಮಾವು-ಬೇವಿನ ತೋರಣಗಳಿಂದ ಸಿಂಗರಿಸಿ, ಅಭ್ಯಂಜನ ಮಾಡಿ, ದೇವರಿಗೆ ಪೂಜೆ ಮಾಡಿ, ಬೇವು-ಬೆಲ್ಲಗಳ ನೈವೇದ್ಯವನ್ನು ಪ್ರಸಾದರೂಪದಲ್ಲಿ ಸ್ವೀಕರಿಸಿ, ಪಂಚಾಂಗಶ್ರವಣ ಮಾಡುತ್ತಾರೆ. ಬೇವು-ಬೆಲ್ಲ ನಮ್ಮ ಬದುಕಿನ ಸಿಹಿ-ಕಹಿಗಳ ಪ್ರತೀಕ. ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡನ್ನೂ ನಮ್ಮ ಜೀವನದಲ್ಲಿ ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವವು ಇದರಲ್ಲಿದೆ. ಬೇವು ಕಹಿಯ ಸಂಕೇತವಾದರೆ, ಬೆಲ್ಲ ಸಿಹಿಯ ಸಂಕೇತ. ಮನುಷ್ಯರ ಬದುಕಿನಲ್ಲಿ ಸುಖ-ದುಃಖಗಳು ಯಾವ ಕಾಲಕ್ಕೂ ಇರುವುದೇ. ಪ್ರತಿಯೊಬ್ಬರ ಜೀವನದಲ್ಲಿಯೂ ಕೇವಲ ಸುಖವೊಂದೇ ಬರುವುದು ಸಾಧ್ಯವಿಲ್ಲ. ಆಗಾಗ ಕಷ್ಟಗಳು ಬರುತ್ತಿರುತ್ತವೆ. ಆಗ ನಾವು ಜೀವನದಲ್ಲಿ ನಿರಾಶೆ ಹೊಂದಬಾರದು ಎನ್ನುವುದರ ಸೂಚಕವಾಗಿ ಬೇವು-ಬೆಲ್ಲ ಎರಡನ್ನೂ ಸೇವಿಸುವುದು.

ಯುಗಾದಿ ಎಂದರೆ ಚಿಗುರಿನೆಲೆಗಳು ಹಾಡುವ ಪಲ್ಲವಿ. ಹಳೆಯ ನೋವ ನೆನಪಿನ ಕೊನೆ. ಹೊಸತಿನ ಆಗಮನ. ಕಳೆದ ದಿನಗಳಿಗೆ ವಿದಾಯ ಮತ್ತು ಮುಂದಿನ ದಿನಗಳ ಬಗೆಗಿನ ಆಕಾಂಕ್ಷೆ. ಅಚ್ಚುಕಟ್ಟಾಗುವ ಮನೆ, ಬಾಗಿಲಿಗೆ ತಳಿರು ತೋರಣ, ದೇವರ ಮನೆಯ ಬಾಗಿಲಿಗೆ ಹಸಿರಿನ ಚಿಗುರು ಮಾವಿನ ಎಲೆಯ ಸಿಂಗಾರ, ಮನೆಯ ಮುಂದೆ ಚಿಕ್ಕಿಯ ಬಣ್ಣದ ರಂಗೋಲಿ, ಶುಭ್ರವಾಗುವ ರಾಸುಗಳು, ಅಭ್ಯಂಜನದ ಸ್ನಾನ, ಬೆಳಗುವ ಮನಸ್ಸು, ಪೂಜೆ-ಪುನಸ್ಕಾರ, ಮುಂದಿನ ಶುಭ ದಿನಗಳಿಗಾಗಿ ದೇವರಲ್ಲಿ ಪ್ರಾರ್ಥನೆ, ಹೊಸ ಬಟ್ಟೆ, ಒಬ್ಬಟ್ಟಿನ ತಟ್ಟೆ, ಒಳ್ಳೆಯ ಮಾತು, ಶುಭ ಹಾರೈಕೆ, ಸಂಕಲ್ಪಗಳ ಹೂಮಾಲೆಯನ್ನು ಹೊಸೆಯುವ ಮತ್ತು ಕಳೆದ ಕಾಲದ ಪುನರಾವಲೋಕನಕ್ಕೆ ಅವಕಾಶ- ಎಲ್ಲವೂ ಹೌದು.

ಹೀಗೆ ಹಳೆಯ ನೆನಪುಗಳೊಂದಿಗೆ ಹೊಸ ಭರವಸೆಯೊಂದು ಚಿಗುರೊಡೆಯುವ ಯುಗಾದಿ ಮತ್ತೆ ಬಂದಿದೆ. ಬದುಕಿನ ಅನಂತ ಸಾಧ್ಯತೆಗಳು ಹೇಗೆ, ಎಲ್ಲಿ ಅಡಗಿರಬಹುದು, ಯಾವ ಬೆಳಕಿನ ಹಾದಿ, ಯಾವ ಹೊಸ ಬೆಳಕು, ಯಾವ ಯುಗಾದಿ ಅದನ್ನು ನಮಗೆ ಕಾಣಿಸಬಹುದು ಎಂದು ಕಾಯಬೇಕು. ಈ ಕ್ಷಣ ನಮ್ಮ ಪರಿಸರ, ಸಮುದಾಯ ಇವೆಲ್ಲವನ್ನು ಜವಾಬ್ದಾರಿಯುತವಾಗಿ ಎಚ್ಚರಿಕೆಯಿಂದ ನೋಡಿಕೊಳ್ಳುವ, ಸ್ಪಂದಿಸುವ ಮನೋಭಾವ ನಮ್ಮದಾಗಲಿ. ಎಲ್ಲ ನೋವು-ನಗೆಗಳ ಜೊತೆಗೆ ಹೊಸತಿಗೆ, ಹೊಸ ನಾಳೆಗೆ, ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುತ್ತ ಈ ಯುಗಾದಿಯನ್ನು ಬರಮಾಡಿಕೊಳ್ಳೋಣ. ಮನದಲ್ಲಿ ಬೆರೆತಿರುವ ವಿರಸವೆಂಬ ವಿಷಯವನ್ನು ಕಳೆದು, ಸೌಹಾರ್ದತೆಯನ್ನು ಈ ಯುಗಾದಿಯು ನೆಲೆಗೊಳಿಸಲಿ.

ಹಳೆ ನೆನಪುಗಳುದರಲಿ ಬಿಡುಬೀಸುವ ಚಳಿಗಾಳಿಗೆ. ತರಗೆಲೆಗಳ ಚಿತೆಯುರಿಯಲಿ ಚೈತ್ರೋದಯ ಜ್ವಾಲೆಗೆ. ಹೊಸ ಭರವಸೆ ಚಿಗುರುವಂತೆ ಎಲೆಯುದುರಿದ ಕೊಂಬೆಗೆ. ಅರಳಿ ನಗುವ ಹೂಗಳಲ್ಲಿ ಮೊಳೆಯಲಿ ಹೊಸ ನಂಬಿಕೆ. ಒಟ್ಟಿನಲ್ಲಿ, ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲಾಗಲಿ ನವ ಸಂವತ್ಸರ ಅಷ್ಟೇ.


ಕಿರುಸುದ್ದಿ

ಮಲ್ಲೇಪುರ ಬಡವರ ಜಮೀನಿಗೆ ಸಂಚಕಾರ

ದೇವನಹಳ್ಳಿ: ಮಲ್ಲೇಪುರ ಗ್ರಾಮಸ್ಥರಿಂದ ಜಮೀನಿಗಾಗಿ ಹೋರಾಟ ಮಲ್ಲೇಪುರ ಗ್ರಾಮದ ಜಮೀನಿನ ಮೇಲೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಬಲಾಢ್ಯ ಭೂಗಳ್ಳರ ಹೆಸರಿಗೆ ಮಾಡಲು ಹೊರಟಿರುವ ಅಽಕಾರಿಗಳು, ಸೂಕ್ತ ಕ್ರಮ ವಹಿಸಲು ತಹಶೀಲ್ದಾರ್‌ಗೆ ಮನವಿ ನೀಡುತ್ತಿದ್ದೇವೆ ಎಂದು ಬಹುಜನ ಸಮಾಜ ಪಕ್ಷದ ತಾಲೂಕು ಅಧ್ಯಕ್ಷ ಎಂ.ಡಿ. ರಾಮಾಂಜಿನಪ್ಪ ತಿಳಿಸಿದರು. ಬೆಂ.ಗ್ರಾ. ಜಿಲ್ಲೆ ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿ ಮಲ್ಲೇಪುರ ಗ್ರಾಮಸ್ಥರ ಹೋರಾಟದ ನೇತೃತ್ವ ವಹಿಸಿ ಮಾತನಾಡಿ ಮಲ್ಲೇಪುರ ಗ್ರಾಮದ ಸರ್ವೆ ನಂಬರ್ 50 ರ ಗೋಮಾಳ 16 ಎಕರೆ 34 ಗುಂಟೆ ಜಮೀನಿಗೆ ಬಲಾಢ್ಯ ರಾಜಕಾರಣಿಗಳ ಕುಮ್ಮಕ್ಕಿನಿಂದ ಅಕ್ರಮ ಸುಳ್ಳು ದಾಖಲೆ ಸೃಷ್ಟಿಸಿ ಅಲ್ಲಿನ ಮೂಲ ನಿವಾಸಿಗಳು ಬದುಕು ಕಟ್ಟಿಕೊಂಡಿದ್ದ ಪ್ರದೇಶದಲ್ಲಿ ಅನೇಕ ಕುಟುಂಬದವರು 94ಸಿಸಿ, 60, 53 ಅರ್ಜಿಯನ್ನು ನೀಡಲಾಗಿದ್ದರು ಬಡಜನರಿಗೆ ಅವುಗಳ ಹಕ್ಕನ್ನು ನೀಡದೆ ಬಲಾಢ್ಯರ ಪರವಾಗಿ ಕೆಲಸ ಮಾಡುತ್ತಿದ್ದಾರೆಂದು ದೂರಿದರು.

ಅಂತಹ ಅಽಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ದೇವನಹಳ್ಳಿ ತಾಲೂಕಿನಲ್ಲಿ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾಗಿದ್ದರಿಂದ ಜಮೀನಿನ ಬೆಲೆ ಹೆಚ್ಚಿದೆ. ಇದೀಗ ಕೈಗಾರಿಕಾ ಪ್ರದೇಶವಾಗಿ ರೂಪಿತವಾಗಿರುವುದರಿಂದ ಕೆಲವು ರಾಜಕಾರಣಿಗಳ ಕುಮ್ಮಕ್ಕಿನಿಂದ ಅಽಕಾರಿಗಳೊಂದಿಗೆ ಶಾಮಿಲ್ ಆಗಿ ಕೆಲವು ವ್ಯಕ್ತಿಗಳ ಹೆಸರಿಗೆ ಪೋಡಿ ಮಾಡಿಕೊಡಲು ಹೊರಟಿರುವುದು ಖಂಡನಾರ್ಹ . ಈ ಕೂಡಲೆ ತಹಶೀಲ್ದಾರ್ ಅವರು, ಜಿಲ್ಲಾಽಕಾರಿಗಳು ಪರಿಶೀಲನೆ ನಡೆಸಿ ಬಡ ಜನರಿಗೆ ನ್ಯಾಯ ಒದಗಿಸಬೇಕು ಎಂದರು. ಅಂಬೇಡ್ಕರ್ ಸೇವಾ ಸಮಿತಿ ಬೆಂ.ಗ್ರಾ.ಜಿಲ್ಲಾ ಉಪಾಧ್ಯಕ್ಷ ನರಸಿಂಹಮೂರ್ತಿ ಮಾತನಾಡಿ , ಸ್ವಾತಂತ್ರ ಬಂದು ಸುಮಾರು ವರ್ಷಗಳೇ ಕಳೆದರೂ ಮಲ್ಲೇಪುರ ಗ್ರಾಮದ ಬಡಜನರಿಗೆ ಸ್ವತಂತ್ರವಾಗಿ ಬದುಕಲು ಕೆಲವು ಬಲಾಢ್ಯ ರಾಜಕಾರಣಿಗಳು ಅಡ್ಡಗಾಲು ಹಾಕುತ್ತಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ಬಿಎಸ್ಪಿ ಮುಖಂಡರು ಅಽಕಾರಿಗಳ ಗಮನಕ್ಕೆ ತಂದರೂ ಗಮನ ಹರಿಸದ ಅಽಕಾರಿಗಳು ಬಲಾಢ್ಯರ ಹೆಸರಿಗೆ ಪೋಡಿ ದುರಸ್ತಿ ಮಾಡುತ್ತಿರುವುದು ಸರಿಯಲ್ಲ . ಈ ಕೂಡಲೇ ಕಂದಾಯ ಸಚಿವರು ಇತ್ತ ಗಮನಹರಿಸಬೇಕು. ಮುಂದಿನ ದಿನದಲ್ಲಿ 'ನಮ್ಮ ಭೂಮಿ ನಮ್ಮ ಹಕ್ಕು' ಎಂದು ಗ್ರಾಮಸ್ಥರ ಸಮ್ಮುಖದಲ್ಲಿ ಡಿ.ಸಿ. ಕಚೇರಿ ಮುಂದೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ವಾಣಿಜ್ಯ ಗ್ಯಾಸ್ ಸರಬರಾಜಿಗೆ ಸರಕಾರಕ್ಕೆ ಒತ್ತಾಯ



ಬೆಂಗಳೂರು: ಆತಿಥ್ಯ ವಲಯದ ಮೇಲೆ ಪರಿಣಾಮ ಬೀರುವ ವಾಣಿಜ್ಯ ಎಲ್‌ಪಿಜಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಮಾಡುವಂತೆ ಸೌತ್ ಇಂಡಿಯಾ ಹೋಟೆಲ್ಸ್ ಮತ್ತು ರೆಸ್ಟೋರೆಂಟ್ಸ್ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘಗಳ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿವೆ. ದಕ್ಷಿಣ ಭಾರತ ಹೋಟೆಲ್‌ಗಳ ಸಂಘದ ಅಧ್ಯಕ್ಷ ಕೆ. ಶ್ಯಾಮ ರಾಜು ಮತ್ತು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ನವದೆಹಲಿಯಲ್ಲಿ ಕೇಂದ್ರ ಪ್ರವಾಸೋದ್ಯಮ ಮತ್ತು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಮನವಿಯನ್ನು ಸ್ವೀಕರಿಸಿದ ಸಚಿವರು ಪರಿಸ್ಥಿತಿಯನ್ನು ಸರಾಗಗೊಳಿಸುವ ಸಲುವಾಗಿ ಸರ್ಕಾರವು ಈಗಾಗಲೇ ಕೆಲವು ತಕ್ಷಣದ ಕ್ರಮಗಳನ್ನು ಪ್ರಾರಂಭಿಸಿದೆ ಎಂದು ತಿಳಿಸಿದ್ದಾರೆ. ಸರಾಸರಿ ಮಾಸಿಕ ವಾಣಿಜ್ಯ ಎಲ್‌ಪಿಜಿಯನ್ನು ಅವಶ್ಯಕತೆಯ ಶೇ.20 ರಷ್ಟು ತಕ್ಷಣ ಪ್ರಾರಂಭವಾಗುವ ವ್ಯವಹಾರಗಳಿಗೆ ಹಂಚಲಾಗುತ್ತದೆ. ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳನ್ನು ಬೆಂಬಲಿಸಲು ಹೆಚ್ಚುವರಿ ಪೂರೈಕೆ ಕ್ರಮಗಳನ್ನು ರೂಪಿಸಲಾಗುತ್ತಿದೆ.ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಕಳವಳಗಳನ್ನು ಪರಿಹರಿಸಲು ಪೆಟ್ರೋಲಿಯಂ ಮತ್ತು ಪ್ರವಾಸೋದ್ಯಮ ಸಚಿವಾಲಯಗಳು ಮತ್ತು ಉದ್ಯಮದ ಪಾಲುದಾರರ ನಡುವೆ ನಿಕಟ ಸಮನ್ವಯವನ್ನು ಕಾಯ್ದುಕೊಳ್ಳಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ ಎಂದು ಹೋಟೆಲುಗಳ ಸಂಘ ತಿಳಿಸಿದೆ.

ಹೂವಿನ ಬೆಳೆಗಾರರಿಗೆ ಯುಗಾದಿ ಬಂಪರ್ | ತರಕಾರಿ ಬೆಳೆಗಾರರಿಗೆ ಎಂದಿನಂತೆ ನಷ್ಟ

ಗ್ಯಾಸ್ ಟ್ರಬಲ್‌ಗೆ ತರಕಾರಿ ಬೆಲೆ ಕುಸಿತ

▸ ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ

ತಾವರೆಕೆರೆ: ಚಳಿಗಾಲ ಹೋಗಿ ಬಿಸಿಲು ಪ್ರಾರಂಭವಾಗಿ ಕೆರೆಕುಂಟೆಗಳಲ್ಲಿ ನೀರಿಲ್ಲದೆ ನೀರಿನ ಅಭಾವದಲ್ಲೂ ಕಷ್ಟಪಟ್ಟು ತರಕಾರಿ, ಸೊಪ್ಪು ಬೆಳೆದ ಬೆಳೆಗಾರರಿಗೆ ಎಂದಿನಂತೆ ನಷ್ಟ ಉಂಟಾಗಿದೆ. ಆದರೆ, .ಹೂವು ಬೆಳೆಗಾರರ ಅದೃಷ್ಟ ಚೆನ್ನಾಘಿಗಿರುವುದರಿಂದ ಬೆಳೆ ಗಗನಕ್ಕೇರಿದೆ.

ತರಕಾರಿ ಬೆಳೆಯಲು ಹೆಚ್ಚಾಗಿ ನೀರಿನ ಅವಶ್ಯಕತೆ ಇದೆ. ಬಹುತೇಕ ರೈತರು ಹೆಚ್ಚಿನ ಪ್ರಮಾಣದಲ್ಲಿ ತರಕಾರಿ ಬೆಳೆದಿದ್ದಾರೆ. ಯಾವುದೇ ಬೆಳೆಗೆ ರೋಗ ಭಾದೆ ಇಲ್ಲದಿದ್ದರೂ ಬಂಪರ್ ಬೆಳೆಯಾಗಿದೆ. ಆದರೆ, ಹೋಟೆಲ್‌ಗಳಲ್ಲಿ ಮದುವೆ ಸಮಾರಂಭದಲ್ಲಿ ಗ್ಯಾಸ್ ಇಲ್ಲದೆ ಪರದಾಡುತ್ತಿದ್ದಾರೆ. ಕೆಲವೊಂದು ತಿಂಡಿ ಮಾಡುವುದನ್ನು ಹೋಟಲ್‌ಗಳಲ್ಲಿ ನಿಲ್ಲಿಸಿದ್ದಾರೆ.

ತರಕಾರಿ ಬಿಸಿಲಿನ ತಾಪದಿಂದ ರಾಜ್ಯದಿಂದ ಹೊರರಾಜ್ಯಕ್ಕೆ ಸರಬರಾಜು ಮಾಡುವಲ್ಲಿ ಬಾಡಿಗೆಯೂ ಹೋಗುತ್ತದೆ. ಇದರಿಂದ ಹೊರ ರಾಜ್ಯದ ವ್ಯಾಪಾರಿಗಳು ರಾಜ್ಯಕ್ಕೆ ಬಂದು ತರಕಾರಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಇದರಿಂದ ಬೇಸತ್ತ ರೈತ ವ್ಯವಸಾಯ ಮಾಡುವುದೆ ಬೇಡಎನ್ನುವಂತಾಗಿದೆ. ಇನ್ನೂವಸಂತ ಕಾಲ ಆಗಮನವಾಗುತ್ತಿದ್ದಂತೆ ಹಿಂದು ಪಂಚಾಂಗದ ಪ್ರಕಾರ ಯುಗಾದಿ ಹಬ್ಬ ಇದು ಹಿಂದುಗಳ ಹೊಸ ವರ್ಷ ಆದ ಕಾರಣ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಬೇಕೆಂದು ಎಲ್ಲರ ಆಶಯವಾಗಿದೆ. ಎಲ್ಲರ ಮನದಲ್ಲಿ ಹಬ್ಬದ ಸಂಭ್ರಮವೋ ಸಂಭ್ರಮ. ಆದರೆ, ಈ ಭಾರಿ ಯುಗಾದಿ ಹಬ್ಬಕ್ಕೆ ತುಂಬಾ ದುಬಾರಿ ಹೂವಿನ ದರ ಏರಿಕೆಯಾಗಿದೆ. ಆದರೂ ಜನತೆ ಹೂವಿನ ಅಂಗಡಿಗಳ ಮುಂದೆ ತುಂಬಿ ತುಳುಕುತ್ತಿದ್ದಾರೆ. ಹಬ್ಬದ ವ್ಯಾಪಾರ ಭರಾಟ ಬಲು ಜೋರಾಗಿದೆ.



> ಈ ಭಾರಿ ಬಿಸಿಲನ ತಾಪಕ್ಕೆ ರಾಜ್ಯದಲ್ಲಿ ಬರ ಆವರಿಸಿದೆ.ಹೂವು ಬೆಳೆಗಾರರು ಬೆಳೆ ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿದ್ದಾರೆ. ಇದರ ಜತೆಗೆ ನೀರಿನ ಸಮಸ್ಯೆ, ತಾಪಮಾನ ಹೆಚ್ಚಳದಿಂದ ಎಲ್ಲಾ ಬೆಳೆಗಳು ಹಾಳಗುತ್ತಿದೆ. ಈ ಹಿನ್ನೆಲೆಯಲ್ಲಿ ಹೂವು ಹಣ್ಣುಗಳ ಬೆಲೆ ಹಬ್ಬದ ಸಮಯದಲ್ಲಿ ಗಗನಕ್ಕೇರಿದೆ.
> ■ ಕೆಂಪ್ಪಮ್ಮ , ಹೂವಿನ ವ್ಯಾಪಾರಿ, ತಾವರೆಕೆರೆ

ಬೇವು ಬೆಲ್ಲದ ಹಬ್ಬಕ್ಕೆ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಮಾರುಕಟ್ಟೆಯಲ್ಲಿ ಹೂವು ಹಣ್ಣುಗಳ ದರ ಗಗನಕ್ಕೇರಿದೆ. ಒಂದು ವಾರದ ಹಿಂದೆ ಇದ್ದ ಬೆಲೆಕ್ಕಿಂತ ಇದೀಗ ಹೂವು ಮತ್ತು ಹಣ್ಣುಗಳ ದರ ದುಪ್ಪಟ್ಟಾಗಿದೆ. ಹಣ್ಣಗಳ ದರದಲ್ಲೂ ಏರಿಕೆಯಾಗಿದೆ. ಕಳೆದ ಕೆಲವು ದಿನಗಳ ಹಿಂದೆ ಹೋಲಿಸಿದರೆ ಕೆಲವು ಹಣ್ಣಿನ ದರ ದುಪ್ಪಟ್ಟು ಹೆಚ್ಚಾಗಿದೆ.

ಇಂದಿನ ತರಕಾರಿ ದರ

ಟೊಮೆಟೊ 100ರೂ. ನಿಂದ 10ರೂಗೆ ಕುಸಿದಿದೆ. ಬದನೇಕಾಯಿ 60ರಿಂದ 20ರೂ, ಮೂಲಂಗಿ 40ರಿಂದ 15ರೂ, ನವೀಲುಕೋಸು 65ರಿಂದ 20ರೂ, ಸೌತೆಕಾಯಿ 40ರಿಂದ 20ರೂ, ಈರುಳ್ಳಿ 60ರಿಂದ 25ರೂ, ಬೆಳ್ಳುಳ್ಳಿ 180ರೂ ನಿಂದ 80ರೂ. ಆಗಿದೆ. ಶುಂಠಿ 30ರೂ ನಂತೆಯಿದೆ. ಸೊಪ್ಪಿಗೆ 30ರೂ.ನಿಂದ 10ರೂ. ಆಗಿದೆ.

ಮಲ್ಲಿಗೆ 1050 ರೂ, ಕನಕಾಂಬರ 1,150ರೂ.

ಕೆಜಿಗೆ ಗುಲಾಬಿ ಹೂವಿಗೆ 80ರೂ ಇತ್ತು, ಈಗ 220ರೂ. ಆಗಿದೆ. 200 ರೂ ಇದ್ದ ಸೇವಂತಿಗೆ 250ರೂ ಆಗಿದೆ. ಚೆಂಡು ಹೂವು 50 ರೂಪಾಯಿಂದ 100ರೂ. ಆಗಿದೆ. ಸುಗಂಧರಾಜ 60ರೂ. ಈಗ 160 ರೂ. ಆಗಿದೆ. ಮಲ್ಲಿಗೆ 720 ರೂ ಇತ್ತು. ಈಗ ದಿಢೀರನೆ 1050 ರೂ. ಆಗಿದೆ. ಕನಕಾಂಬರ 800 ರೂ ಇದ್ದಿದ್ದು 1,150 ರೂ.ಗೆ ಏರಿಕೆಯಾಗಿದೆ.

ಕಿತ್ತಳೆ ಹಣ್ಣಿಗೆ 120 ರೂ.

ಒಂದು ಕೆಜಿ ಕಿತ್ತಳೆ ಹಣ್ಣಿಗೆ 60ರೂ.ನಿಂದ' 120ರೂ. ರಿಂದ 140ರೂ.ಗೆ ಏರಿಕೆಯಾಗಿದೆ. ಪಪ್ಪಾಯ ಹಣ್ಣಿನ ಬೆಲೆ 30ರೂ ನಿಂದ 80ರೂಗೆ .ಏರಿಕೆಯಾಗಿದೆ. ಮಾವಿನ ಹಣ್ಣಿನ ದರ 130ರೂ. ನಿಂದ 200 ರೂ. ನಾಟಿ ಬಾಳೆಹಣ್ಣು 40ರೂ .ನಿಂದೆ 80ರೂ. ಗೆ ಏರಿಕೆಯಾಗಿದೆ. ಇತರೆ ಹಣ್ಣುಗಳ ಸಹ ಬೆಲೆ ಏರಿಕೆ ಕಂಡಿದೆ. ಪೂಜೆಗೆ ತೆಂಗಿನ ಕಾಯಿ ಬಾಳೆಹಣ್ಣು ನಿಂಬೆ ಹಣ್ಣಿನ ಬೆಲೆ ಸಹ ಹೆಚ್ಚಾಗಿದೆ.

ವಿಜಯಪುರದಲ್ಲಿ ಭರ್ಜರಿ ವ್ಯಾಪಾರ



ವಿಜಯಪುರ: ಚಾಂದ್ರಮಾನ ಯುಗಾದಿ ಪ್ರಯುಕ್ತ ಪಟ್ಟಣದಲ್ಲಿ ಬುಧವಾರ ಮಾವು ಮತ್ತು ಬೇವಿನ ಸೊಪ್ಪು, ಮಲ್ಲಿಗೆ ಹೂವು, ಸೇವಂತಿಗೆ ಹೂವು, ಬಾಳೆ ಎಲೆ ಸೇರಿದಂತೆ ಹಲವು ತರಹದ ಹಣ್ಣುಗಳ ವ್ಯಾಪಾರದ ಭರಾಟೆ ಜೋರಾಗಿತ್ತು.

ಪಟ್ಟಣದ ಬಸ್ ನಿಲ್ದಾಣ, ಹಳೆ ಸರ್ಕಾರಿ ಆಸ್ಪತ್ರೆ ರಸ್ತೆ, ವೆಂಕಟರಮಣಸ್ವಾಮಿ ದೇವಾಲಯದ ರಸ್ತೆ, ಗಾಂಽ ಚೌಕ, ಬಜಾರ್ ರಸ್ತೆ, ಮಾರುಕಟ್ಟೆ ಸೇರಿದಂತೆ ಹಲವೆಡೆ ಜನರು ಹಬ್ಬಕ್ಕಾಗಿ ಮಾವು, ಬೇವಿನ ಸೊಪ್ಪು, ಹೂವು, ಹಣ್ಣು, ತರಕಾರಿ, ಪೂಜಾ ಹಾಗೂ ದಿನಸಿ ಸಾಮಗ್ರಿವನ್ನು ಖರೀದಿಸಿದರು. ಮಾರುಕಟ್ಟೆಯಲ್ಲಿ ಕಳೆದ ವಾರಕ್ಕೂ ಈ ವಾರಕ್ಕೂ ಹೋಲಿಸಿದರೆ ಹೂವಿನ ಬೆಲೆಯಲ್ಲಿ ವ್ಯತ್ಯಾಸ ಕಂಡು ಬಂತು. ಹಬ್ಬದ ಅಂಗವಾಗಿ ಹೂವಿನ ಬೆಲೆ ಏರಿಕೆ ಕಂಡಿದೆ. ಚೆಂಡು ಹೂ ಕೆ.ಜಿ 50-60, ಮಲ್ಲಿಗೆ ಕೆ.ಜಿ 1000 ರೂ., ಕಾಕಾಡ ಕೆ.ಜಿ 1200 ರೂ, ಬಟನ್ಸ್ ಕೆ.ಜಿ 200, ಚಾಮಂತಿ ಕೆ.ಜಿ 250 ರೂ ಗಳಿಗಿದೆ. ಮಾವಿನ ಮತ್ತು ಬೇವಿನ ಸೊಪ್ಪು ಒಂದು ಗಂಟಿಗೆ 40 ರಿಂದ 50 ರೂ ರವರೆಗೆ ದೊಡ್ಡಬಾಳೆ ಕೆ.ಜಿ 50 ರೂ.ಏಲಕ್ಕಿ ಬಾಳೆ ಕೆ.ಜಿ 80-100 ರೂ.ದ್ರಾಕ್ಷಿ ಕೆ.ಜಿ 160 ರೂ. ದಾಳಿಂಬೆ 250-300 ರೂ. ಮೋಸಂಬಿ 160 ರೂ. ಕಲ್ಲಂಗಡಿ ಕೆ.ಜಿ 30-40, ಕರಬೂಜ 25-30 ರೂ. ಮಾರಾಟವಾಗುತ್ತಿದ್ದವು.

ಹಾರ್ವರ್ಡ್ ಶಾಲೆಯಲ್ಲಿ ಚಾಲಕರು, ಸಿಬ್ಬಂದಿಗೆ ಅಭಿನಂದನೆ

ಪ್ರಾಕೃತಿಕ ಉತ್ಸವವೇ ಯುಗಾದಿ ಸಂಭ್ರಮ

ನೆಲಮಂಗಲ: ಯುಗಾದಿ ಕೇವಲ ಮನುಷ್ಯನಿಗೆ ಹೊಸ ಅನುಭವ ನೀಡದೆ ಪ್ರಕೃ ತಿಯೇ ಹೊಸ ಉತ್ಸಾಹದಲ್ಲಿ ಹೊಸತನದ ಅನುಭವ ನೀಡುತ್ತದೆ ಎಂದು ಹಾರ್ವರ್ಡ್ ಶಾಲೆಯ ಆಡಳಿತ ಮಂಡಳಿ ಟ್ರಸ್ಟಿ ರಾಜಣ್ಣ ತಿಳಿಸಿದರು.



ನಗರ ಸಮೀಪದ ದಾಸನಪುರ ಹೋಬಳಿಯ ಅಡಕಮಾರನಹಳ್ಳಿ ಸಮೀಪದ ಹಾರ್ವರ್ಡ್ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಯಗಾದಿಯ ಸಂಭ್ರಮ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ನಮ್ಮ ಸನಾತನ ಸಂಸ್ಕೃತಿಯ ವೈಭವ ಇಂದಿನ ಮಕ್ಕಳಿಗೆ ತಿಳಿಯಬೇಕಾದರೆ ಯುಗಾದಿಯ ಶ್ರೇಷ್ಟತೆ ಅರಿವಾಗಬೇಕು ಎಂದರು. ನಮ್ಮ ಸಂಸ್ಕೃತಿಯಲ್ಲಿ ಯುಗಾದಿ ಹೊಸವರ್ಷ ವಾಗಿದ್ದು , ನಮ್ಮ ಪೂರ್ವಜರು ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಪ್ರಕೃತಿಯ ಬದಲಾವಣೆಯನ್ನು ಗಮನಿಸಿಯೇ ಯುಗಾದಿ ಹೊಸವರ್ಷವಾಗಿ ನೀಡಿದ್ದಾರೆಂದು ಹೇಳಿದರು. ನಾವು ಪಾಶ್ಚಿಮಾತ್ಯ ಸಂಸ್ಕೃತಿಯ ಕಡೆ ಮುಖ ಮಾಡಿ ನಮ್ಮ ಸಂಸ್ಕೃತಿಯನ್ನು ಮರೆಯುತ್ತಿರುವ ಅಪಾಯದ ಸ್ಥಿತಿ ದೂರ ಮಾಡಲು ನಮ್ಮ ಶ್ರೇಷ್ಟತೆಯನ್ನು ನಾವು ಅರಿಯಬೇಕು ಆದ್ದರಿಂದ ವಿದ್ಯಾರ್ಥಿಗಳಿಗೆ ಯುಗಾದಿಯ ಶ್ರೇಷ್ಟತೆ ತಿಳಿಸಲಾಗಿದೆ ಎಂದರು. ಶಾಲೆಯಲ್ಲಿ ಕೆಲಸ ಮಾಡುವ ಬಸ್ ಚಾಲಕರು ಹಾಗೂ ಸಿಬ್ಬಂದಿಗಳು,ಕೆಲಸಗಾರರ ಶ್ರಮವನ್ನು, ಕೆಲಸದ ಶ್ರೇಷ್ಟತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಮೂಲಕ ಅವರಿಗೆ ಅಭಿನಂದನೆ ಸಲ್ಲಿಸಿದರು. ಮಹಿಳಾ ಸಿಬ್ಬಂದಿಗಳಿಗೆ ಸೀರೆ, ಅರಿಶಿನಕುಂಕುಮ,ಬಳೆ ಸೇರಿದಂತೆ ಬಾಗಿನ, ಸಿಹಿ ತಿಂಡಿ ನೀಡಿ ವಿದ್ಯಾರ್ಥಿಗಳು ಧನ್ಯವಾದ ತಿಳಿಸಿದರು. ಚಾಲಕರು, ಸಿಬ್ಬಂದಿಗಳಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು. ವಿವಿಧ ಚಟುವಟಿಕೆಗಳಲ್ಲಿ ಸಾಧನೆ ಮಾಡಿದವರಿಗೆ ಬಹುಮಾನ ವಿತರಣೆ ನೀಡಲಾಯಿತು. ಶಾಲೆಯ ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಭೋಧಕ ಹಾಗೂ ಭೋಧಕೇತರ ವರ್ಗ, ಪೋಷಕರು ಉಪಸ್ಥಿತರಿದ್ದರು.

ಕರ್ನಾಟಕ ಬ್ಯಾಂಕ್‌ನಲ್ಲಿ ಯುಗಾದಿ



ತಾವರೆಕೆರೆ: ಹೊಸಕೋಟೆ ತಾಲೂಕಿನ ಮುಗಬಾಳ ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಗ್ರಾಹಕರು ಹಾಗೂ ಬ್ಯಾಂಕ್ ಸಿಬ್ಬಂದಿ ಜತೆಯಲ್ಲಿ ಯುಗಾದಿ ಉತ್ಸವ.

ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕರಾದ ನಾಗೇಶ್ವರ್ ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ಅನುಕೂಲಕರವಾಗುವ ಒಂದು ಬ್ಯಾಂಕ್ ಅದು ಕರ್ಣಾಟಕ ಗ್ರಾಮೀಣ ಬ್ಯಾಂಕ್ ಮುಗಬಾಳ ಶಾಖೆಯಲ್ಲಿ ಎಲ್ಲಾ ತರಹದ ಸರ್ಕಾರಿ ಹಾಗೂ ರಾಷ್ಟ್ರೀಯ ಹಬ್ಬವನ್ನು ಚಾಚು ತಪ್ಪದೇ ಗ್ರಾಹಕರ ಸಮ್ಮುಖದಲ್ಲಿ ಅರ್ಥಪೂರ್ಣವಾಗಿ ಆಚರಣೆ ಮಾಡಿಕೊಂಡು ಬಂದಿದ್ದೇವೆಂದರು. ಕೆಲ ದಿನಗಳ ಹಿಂದೆ ಎಷ್ಟೇ ರಂಜಾನ್ ಹಬ್ಬದ ಪ್ರಯುಕ್ತ ಎಲ್ಲಾ ನಮ್ಮ ಮುಸ್ಲಿಮ್ ಸಹೋದರಿಗೆ ಔತಣ ಕೂಟ ಏರ್ಪಡಿಸಿ ರಂಜಾನ್ ಹಬ್ಬವನ್ನು ಕೂಡ ಶಾಖೆಯಿಂದ ಆಚರಿಸಲಾಯಿತು. ಅದೇ ರೀತಿ ಇಂದು ಮುಗಬಾಳ ಶಾಖೆಯ ಕೇಂದ್ರ ಕಚೇರಿಯಲ್ಲಿ ಲಕ್ಷ್ಮಿ ಪೂಜೆ ಹಾಗೂ ನೆರದಿದ್ದ ಮಹಿಳೆ ಮಣಿಗಳಿಗೆ ಅರಿಶಿನ ಕುಂಕುಮ ನೀಡಿ ವಿಶೇಷ ಉಡುಗೊರೆ ನೀಡುವುದರ ಮೂಲಕ ಹಾಗೂ ಎಲ್ಲಾ ಗ್ರಾಹಕರಿಗೆ ಹಬ್ಬದ ಊಟ ವ್ಯವಸ್ಥೆ ಮಾಡಿ ಶಾಖೆಯಲ್ಲಿ ಅರ್ಥಪೂರ್ಣವಾಗಿ ಹಾಗೂ ಕೇಂದ್ರ ಹಾಗೂ ಜಿಲ್ಲಾ ಶಾಖೆಗಳ ಸಮಿತಿಯ ವ್ಯವಸ್ಥಾಪಕರ ಸಮ್ಮುಖದಲ್ಲಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡಲಾಯಿತು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಗೂ ಸ್ಥಳೀಯರು ಗ್ರಾಮಸ್ಥರು ಯುಗಾದಿ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದರು.

ನಟ ಪುನೀತ್ ಜಯಂತಿ: ಅನ್ನದಾಸೋಹ

ದೊಡ್ಡಬಳ್ಳಾಪುರ: ಸರಳ ಸಜ್ಜನಿಕೆಯ ಸರದಾರ ಕರ್ನಾಟಕ ರತ್ನ ಡಾ. ಪುನೀತ್ ರಾಜ ಕುಮಾರ್ ಅವರ 51ನೇ ಜನ್ಮದಿನಾಚರಣೆಯ ಅಂಗವಾಗಿ ನಿರಂತರ ಅನ್ನದಾಸೋಹ ಸಮಿತಿ, ಪ್ರಾಣವೈದ್ಯ ಆಯುರ್ವೇದಿಕ್ ಆಸ್ಪತ್ರೆಯ ಸಹ ಭಾಗಿತ್ವದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕಾ ಪರಿಕರಗಳ ವಿತರಣೆ ಕಾರ್ಯಕ್ರಮವನ್ನು ವಿಶೇಷವಾಗಿ ನಗರದ ದರ್ಗಾ ಜೋಗಿಹಳ್ಳಿಯಲ್ಲಿ ಆಚರಿಸಲಾಯಿತು.



ಚಿರಋಣಿ ಕನ್ನಡಾಂಬೆ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ರವಿ ಮಾವಿನಕುಂಟೆ ಮಾತನಾಡಿ, ನಾಡು ಕಂಡ ಅತ್ಯದ್ಭುತ ನಟ ಪುನೀತ್ ರಾಜಕುಮಾರ್ ಅವರು ಕೇವಲ ನಟನೆಗೆ ಸೀಮಿತವಾಗದೆ ತಮ್ಮ ಜೀವನ ಶೈಲಿ ಮುಖಾಂತರ ಯುವ ಸಮುದಾಯ ಉತ್ತಮ ಸಮಾಜ ಕಟ್ಟಲು ಮುಂದಾಗುವಂತೆ ಮಾಡಿದ ಕೀರ್ತಿ ಅವರದ್ದಾಗಿದೆಂದರು.

ಅವರ ಜೀವಿತ ಕಾಲದಲ್ಲಿ ತೋರಿದ ಭಾಷಾಭಿಮಾನ,ಕಲಾ ಸೇವೆ, ಸಮಾಜಮುಖಿ ಕಾರ್ಯಗಳು, ನೊಂದವರಿಗೆ ಸಹಾಯ ಇವೆಲ್ಲವೂ ಎಂದಿಗೂ ಸ್ಫೂರ್ತಿದಾಯಕ. ಅವರ 51ನೇ ಜನ್ಮದಿನಾಚರಣೆಯ ಅಂಗವಾಗಿ ಚಿರಋಣಿ ಕನ್ನಡಾಂಬೆ ಹೋರಾಟ ಸಮಿತಿಯಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ಮಾಡಲಾಗಿದೆಂದರು. ಬೆಳಗಿ ನಿಂದಲೇ ನೂರಾರು ಸ್ಥಳೀಯರು ಈ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಕಾರ್ಯ ಕ್ರಮವನ್ನು ಸದುಪಯೋಗ ಪಡಿಸಿಕೊಂಡಿದ್ದಾರೆ. ಕಾರ್ಯಕ್ರಮದ ನೇತೃತ್ವ ವಹಿಸಿರುವ ಅನ್ನದಾಸೋಹಿ ಮಲ್ಲೇಶ್ ಹಾಗೂ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೂ ಶುಭವಾಗಲಿ ಎಂದು ಹೇಳಿದರು. ಚಿರಋಣಿ ಕನ್ನಡಾಂಬೆ ಹೋರಾಟ ಸಮಿತಿ ತಾಲೂಕು ಅಧ್ಯಕ್ಷ ಶ್ರೀರಾಮ್ ಮಾತನಾಡಿ, ಇಂದು ನಮ್ಮ ನೆಚ್ಚಿನ ನಟರಾದ ಪುನೀತ್ ರಾಜಕುಮಾರ್ ಅವರ ಜನ್ಮ ದಿನಾಚರಣೆಯನ್ನು ವಿಶೇಷವಾಗಿ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಸಾರ್ವಜನಿಕರ ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡುವ ಮೂಲಕ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ಮಾಡಲಾಗಿದೆ. ಹಸಿದವರಿಗೆ ಆಹಾರ ವಿತರಣೆ ಮಾಡಲಾಗಿದೆಂದು ತಿಳಿಸಿದರು. ಕಾರ್ಯಕ್ರಮದ ಆಯೋಜಕ ಅನ್ನದಾಸೋಹಿ ಮಲ್ಲೇಶ್ ಮಾತನಾಡಿ, ದಾನಿಗಳ ನೆರವಿನಿಂದ ಕಳೆದ 2183 ದಿನಗಳಿಂದ ನಿಲ್ಲದೆ ನಿರಂತರವಾಗಿ ಅನ್ನದಾಸೋಹ ಕಾರ್ಯಕ್ರಮ ನಡೆಯುತ್ತಾ ಬಂದಿದೆ. ವಯೋ ವೃದ್ಧರಿಗೆ ವಸ್ತ್ರ ವಿತರಣೆ ಶಾಲಾ ಮಕ್ಕಳಿಗೆ ಕಲಿಕಾ ಪರಿಕರಗಳ ವಿತರಣೆ ಮಾಡಲಾಗಿದೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಎಲ್ಲಾ ದಾನಿಗಳಿಗೆ ಹೃದಯಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ದಾನಿಗಳಾದ ಚಿತ್ರನಟಿ ಮೇಘನಾ ಶೆಟ್ಟಿಗಾರ್, ಸಮಾಜಸೇವಕರಾದ ಎಚ್. ಶಿವಕುಮಾರ್, ಎಚ್ ರಾಘವೇಂದ್ರ, ಸೇಲ್ವಮ್, ಚಿರಋಣಿ ಕನ್ನಡ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಸುಬ್ರ ಹ್ಮಣಿ , ದರ್ಗಾಜೋಗಹಳ್ಳಿ ಗ್ರಾಪಂ ಅಧ್ಯಕ್ಷ ಶಶಿಕಲಾ ನಾಗರಾಜ್, ನಮ್ಮ ಕರ್ನಾಟಕ ಜನ ಸೈನ್ಯ ಜಿಲ್ಲಾಧ್ಯಕ್ಷ ಎನ್. ವೈ. ನಾಗರಾಜ್, ಆರಕ್ಷಕರಾದ ಕೆ.ಶ್ರೀನಿವಾಸುಲು ಸೇರಿದಂತೆ ಹಲವರಿದ್ದರು.

ಪ್ರತಿ ಲೀಟರ್ ಹಾಲಿಗೆ ಒಂದು ರೂ. ಬೋನಸ್: ಬಿ.ವಿ.ಸತೀಶ್‌ಗೌಡ

ಬಮುಲ್‌ನಿಂದ ವಹಿವಾಟು ಹೆಚ್ಚಳ

ಸೂಲಿಬೆಲೆ: ಇತ್ತೀಚಿಗೆ ಡಿ.ಕೆ.ಸುರೇಶ್ ಅವರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಬಮುಲ್ ನಲ್ಲಿ ವ್ಯಾಪಾರ ವಹಿವಾಟ ಹೆಚ್ಚಳ ಕಂಡಿದೆ ಎಂದು ಬಮುಲ್ ನಿರ್ದೇಶಕಬಿ.ವಿ.ಸತೀಶ್ ಗೌಡಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇವಲ 8 ತಿಂಗಳ ಆಡಳಿತ ಅವಧಿಯಲ್ಲಿ ಅನೇಕ ಮಹತ್ವದ ಬದಲಾವಣೆಯನ್ನು ತಂದಿದೆ. ಬಮುಲ್ ಆಡಳಿತ ಇತಿಹಾಸದಲ್ಲಿ ಹೊಸ ಮೈಲುಗಲ್ಲಾಗಿದೆ ಎಂದರು.




ಕಳೆದ ವರ್ಷ 14.50 ಕೋಟಿ ರೂ. ನಷ್ಟದಲ್ಲಿದ್ದ ಬಮುಲ್ ಸಂಸ್ಥೆ ಡಿ.ಕೆ.ಸುರೇಶ್ ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಆಡಳಿತದಲ್ಲಿ ಸುಧಾರಣೆ ತಂದು ಸೋರಿಕೆಯನ್ನು ತಡೆದ ಪರಿಣಾಮ ನಷ್ಟದಲ್ಲಿದ್ದ ಸಂಸ್ಥೆ ಲಾಭಾಂಶದತ್ತ ಮುನ್ನುಗ್ಗುತ್ತಿದಂದು ಹೇಳಿದರು. ಈವರ್ಷ 60 ಕೋಟಿ ರೂ. ಲಾಭಗಳಿಸಿದೆ. ಹೈನುಗಾರರು ಸಾಕಷ್ಟು ಕಷ್ಟಪಟ್ಟು ಹೈನುಗಾರಿಕೆಯನ್ನು ಮಾಡುತ್ತಿದೆ. ಅವರ ಹಿತವನ್ನು ಗಮನದಲ್ಲಿಟ್ಟುಕೊಂಡು 2025-26ನೇ ಸಾಲಿನಲ್ಲಿ ಸಹಕಾರ ಸಂಘಗಳ ಮೂಲಕ ರೈತರು ಪೂರೈಸಿರುವ ಪ್ರತಿ ಲೀಟರ್ ಹಾಲಿಗೆ 1 ರೂ.ಬೋನಸ್ ನೀಡಲಾಗುತ್ತಿದೆಂದರು. ಇದರಿಂದ ರೈತರಿಗೆ ಸಾಕಷ್ಟು ಅನುಕೂಲವಾಗಿದೆ. ಬಮುಲ್ ಸಂಸ್ಥೆಯು ಲಾಭವನ್ನು ಹಾಲು ಉತ್ಪಾದಿಸುವ ರೈತರು, ಸಿಬ್ಬಂದಿ, ಕಾರ್ಮಿಕರು ಹಾಗೂ ಸಂಘಗಳಿಗೆ ಹಂಚುವ ಮೂಲಕ ಆರ್ಥಿಕ ಶಕ್ತಿಯನ್ನು ತುಂಬಲು ಬಮುಲ್ ಮುಂದಾಗಿದೆ ಎಂದರು. ಬಮುಲ್ ಸಂಸ್ಥೆಯಲ್ಲಿ ದುಡಿಯುತ್ತಿರುವ 1800 ಗುತ್ತಿಗೆ ಕಾರ್ಮಿಕರಿಗೆ ತಲಾ 5 ಸಾವಿರದಂತೆ ಉಡುಗೊರೆ ನೀಡ ಲಾಗುವುದು. 90 ಲಕ್ಷ ರೂ. ವೆಚ್ಚದಲ್ಲಿ ಯುಗಾದಿ ಹಬ್ಬಕ್ಕೆ ಉಡುಗೊರೆ ರೂಪದಲ್ಲಿ ವಿತರಣೆ ಮಾಡಲಾಗುವುದು. 2300 ಪ್ರಾಥಮಿಕ ಹಾಲು ಉತ್ಪಾದಕ ಸಂಘಗಳಿಗೆ 15 ಸಾವಿರದಂತೆ ಒಟ್ಟು 3.45 ಕೋಟಿ ವಿತರಣೆ ಮಾಡಿದೆ. ಈ ಮೂಲಕ ಸದಸ್ಯ ಸಂಘಗಳ ಬಲವರ್ಧನೆಗೆ ಅನುದಾನ,ಸಂಘಗಳ ಕಾರ್ಯಕ್ಷಮತೆ ಹೆಚ್ಚಿಸಿ ಉತ್ತಮ ಸೌಲಭ್ಯ ಒದಗಿಸಲು ಕ್ರಮಕೈಗೊಂಡದೆ. ಸಂಘಗಳ ಸಮೃದ್ದಿಯೇ ಬಮುಲ್ ಶಕ್ತಿ ಯಾಗಿದೆ ಎಂದರು. ಗ್ರಾಪಂ ಸದಸ್ಯ ಹೊಸಹಳ್ಳಿ ಜಯರಾಮಣ್ಣ, ದೊಡ್ಡನಲ್ಲಾಳ ಗ್ರಾಪಂ ಮಾಜಿ ಅಧ್ಯಕ್ಷ ಸಂಜೀವೇಗೌಡ, ಯುವ ಮುಖಂಡ ಹಸಿಗಾಳ ಜಗದೀಶ್ ಹಾಜರಿದ್ದರು.

ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಪೂರ್ವಭಾವಿ ಸಭೆ: ಅಗತ್ಯ ಸಿದ್ಧತೆಗೆ ಸೂಚನೆ

ಏ.6ಕ್ಕೆ ಬಸವೇಶ್ವರ ಪುತ್ಥಳಿ ಅನಾವರಣ

ದೇವನಹಳ್ಳಿ: ತಾಲೂಕಿನ ಜಿಲ್ಲಾಡಳಿತ ಭವನದ ಆವರಣದಲ್ಲಿ ಏಪ್ರಿಲ್ 6ರಂದು ಜಗಜ್ಯೋತಿ ಬಸವೇಶ್ವರರ ಕಂಚಿನ ಪ್ರತಿಮೆ ಲೋಕಾರ್ಪಣೆಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ಎನ್ . ಅನುರಾಧಾ ತಿಳಿಸಿದರು.



ತಾಲೂಕು ಬೀರಸಂದ್ರ ಬಳಿಯ ಜಿಲ್ಲಾಡಳಿತ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಬಸವೇಶ್ವರ ಪುತ್ಥಳಿ ಕಾಮಗಾರಿ ಮುಗಿದಿದ್ದು ಏಪ್ರಿಲ್6ರಂದು ಉದ್ಘಾಟನೆಗೆ ಸಿದ್ಧವಾಗಿದ. ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಬಸವಣ್ಣನವರ ಪುತ್ಥಳಿ ಲೋಕಾರ್ಪಣೆಗೊಳ್ಳಲಿದೆ. ನಂತರ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು. ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಸೇರಿದಂತೆ ಹಲವಾರು ಸಚಿವರು, ಸಂಸದರು, ಗಣ್ಯರು, ಮಠಾಽಶರು ಆಗಮಿಸಲಿದ್ದು ಕಾರ್ಯಕ್ರಮ ಜಿಲ್ಲಾಡಳಿತದಿಂದ ಅಗತ್ಯ ಸಿದ್ಧತೆ ಕೈಗೊಳ್ಳಲಾಗುವುದು ಎಂದರು. ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಗಣ್ಯರಿಗೆ, ಜನಪ್ರತಿನಿಧಿಗಳಿಗೆ ತಲುಪಿಸಬೇಕು. ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡಗಳ ಮೆರುಗು, ಸಂಗೀತ ಕಾರ್ಯಕ್ರಮ ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೂಚಿಸಿದರು. ವೇದಿಕೆ ಅಲಂಕಾರಕ್ಕೆ ತೋಟಗಾರಿಕೆ ಇಲಾಖೆ, ಉಪಹಾರ ವ್ಯವಸ್ಥೆಗೆ ಘಾಟಿ ದೇವಾಲಯ ಸಮಿತಿಗೆ ಸೂಚಿಸಲಾಯಿತು. ಕಾರ್ಯಕ್ರಮಕ್ಕೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲು ಪೊಲೀಸ್ ಇಲಾಖೆಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಬಸವಣ್ಣ ಅವರ ಮಂಟಪ 28ಅಡಿ. ಕಂಚಿನ ಪ್ರತಿಮೆ 5 ಅಡಿ ಉದ್ದವಾಗಿದ್ದು 450 ಕೆಜಿ ಕಂಚು ಬಳಕೆ ಮಾಡಿ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಪ್ರತಿಮೆ ನಿರ್ಮಿಸಲಾಗಿದೆ.

ಸಭೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಸಹಾಯಕ ರಾಜೀವ್ ಸುಲೋಚನಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಅಶೋಕ್ ಕುಮಾರ್ ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರವಿಕುಮಾರ್, ದೇವನಹಳ್ಳಿ ತಹಶೀಲ್ದಾರ್ ಜಯಕುಮಾರ್ (ಗ್ರೇಡ್-2) ಜಗಜ್ಯೋತಿ ಬಸವೇಶ್ವರರ ಪ್ರತಿಮೆ ನಿರ್ಮಾಣ ಸಮಿತಿ ಗೌರವಾಧ್ಯಕ್ಷ ವಿ.ಮಂಜುನಾಥ್, ಅಧ್ಯಕ್ಷರಾದ ಎಸ್.ರಮೇಶ್ ಸೇರಿದಂತೆ ಸಮಿತಿ ಸದಸ್ಯರು, ಅಧಿಕಾರಿಗಳಿದ್ದರು.

ಕಿರುಸುದ್ದಿ

ಉಪಚುನಾವಣೆ ಕಾಂಗ್ರೆಸ್ ಪ್ರತಿಷ್ಠೆ: ಹೆಬ್ಬಾಳ್ಕರ್

• **ಬೆಂಗಳೂರು:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕಾಂಗ್ರೆಸ್ ಪಕ್ಷದ ಪಾಲಿಗೆ ಪ್ರತಿಷ್ಠೆಯಾಗಿದೆ. ನಮಗೆ ಗೆಲುವೇ ಮಾನದಂಡ ಆಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.



ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆ ಉಸ್ತುವಾರಿ ಸಮಿತಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಂದಿನ ಸಭೆಯಲ್ಲಿ 8 ಜನರ ಹೆಸರು ಚರ್ಚೆಯಾಗಿದೆ ಎಂದರು. ಜಿಲ್ಲಾ ಹಾಗೂ ತಾಲೂಕು ಪಂಚಾಯತ್, ಜಿಬಿಎ ಹಾಗೂ 2028ರ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಿದೆ. ಸಿಎಂ, ಡಿಸಿಎಂ ಹೈಕಮಾಂಡ್ ಜತೆ ಚರ್ಚಿಸಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಿದ್ದಾರೆ ಎಂದು ಹೇಳಿದರು. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಹೆಸರು ಘೋಷಣೆಯಾದ ಮೇಲೆ ಗೊಂದಲ ಸರಿ ಹೋಗುತ್ತದೆ. ಎಲ್ಲರನ್ನ ವಿಶ್ವಾಸಕ್ಕೆ ತೆಗೆದುಕೊಂಡು ಅಭ್ಯರ್ಥಿ ಘೋಷಣೆ ಮಾಡಲಾಗುತ್ತದೆ. ಯಾರೆ ಆಗಲಿ ಟಿಕೆಟ್ ಕೇಳೋದರಲ್ಲಿ ತಪ್ಪಿಲ್ಲ. ಟಿಕೆಟ್ ಘೋಷಣೆ ಬಳಿಕ ಎಲ್ಲರೂ ನಿರ್ಧಾರಕ್ಕೆ ಬದ್ಧರಾಗಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಜಾತಿ-ಆದಾಯ ಪತ್ರಕ್ಕೆ ಮೊಬೈಲ್‌ನಲ್ಲೇ ಅರ್ಜಿ

ವಿಧಾನ ಪರಿಷತ್: ಜಾತಿ-ಆದಾಯ, ನಿವಾಸಿ ದೃಢೀಕರಣ ಪ್ರಮಾಣ ಪತ್ರಗಳಿಗಾಗಿ ಮನೆಯಿಂದಲೇ ಮೊಬೈಲ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.ಪ್ರಶ್ನೋತ್ತರ ವೇಳೆ ಸದಸ್ಯ ಕೆ. ಅಬ್ದುಲ್ ಜಬ್ಬರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಜನ ಸಾಮಾನ್ಯರು ನಮ್ಮ ಕಚೇರಿಗೆ ಆಗಮಿಸಿದರೆ ಮಾತ್ರ ಈ ಎಲ್ಲಾ ಸಮಸ್ಯೆಗಳು ಉಂಟಾಗುತ್ತವೆ ಎಂಬ ಕಾರಣಕ್ಕಾಗಿ ಅವರು ಮನೆಯಿಂದಲೇ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಜಾತಿ-ಆದಾಯ, ನಿವಾಸಿ ದೃಢೀಕರಣ ಪ್ರಮಾಣ ಪತ್ರಗಳಿಗಾಗಿ ಅವರು ಮನೆಯಿಂದಲೇ ಮೊಬೈಲ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅಲ್ಲದೇ, ಅವರ ಅರ್ಜಿ ಪ್ರತಿಯೊಂದು ಹಂತ ದಾಟುವಾಗಲೂ ಅದರ ಮಾಹಿತಿಯನ್ನು ಮೊಬೈಲ್‌ಗಳಲ್ಲಿ ಸಂದೇಶ ಮೂಲಕ ತಲುಪಿಸುವ ವ್ಯವಸ್ಥೆ ಇದೆ. ಕೊನೆಗೆ ಜನ ಮನೆಯಲ್ಲೇ ಕುಳಿತು ಅವರ ಕೋರಿಕೆಯ ಪ್ರಮಾಣ ಪತ್ರಗಳನ್ನು ಪ್ರಿಂಟ್ ಔಟ್ ತೆಗೆದುಕೊಳ್ಳಬಹುದು ಎಂದು ತಿಳಿಸಿದರು.

ವಿಧಾನಪರಿಷತ್ ಕಲಾಪದಲ್ಲಿ ಶಾಸಕ ಡಾ.ಗೋವಿಂದರಾಜ್ ಪ್ರಶ್ನೆಗೆ ವಸತಿ ಸಚಿವ ಜಮೀರ್ ಅಹಮದ್ ಉತ್ತರ

ಕೊಳೆಗೇರಿ ಅಭಿವೃದ್ಧಿಗೆ 50 ಕೋಟಿ ರೂ. ಅನುದಾನ

• **ವಿಧಾನ ಪರಿಷತ್:** ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗಳಿಗೆ ಪ್ರಸ್ತುತ ಕನಿಷ್ಠ 500 ಕೋಟಿ ರೂ.ಗಳನ್ನು ಒದಗಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದು, ಪೂರಕ ಆಯವ್ಯಯದಲ್ಲಿ ಈ ಅನುದಾನ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ತಿಳಿಸಿದರು.




ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಡಾ.ಕೆ. ಗೋವಿಂದರಾಜ್ ಅವರ ಪ್ರಶ್ನೆಗೆ ಉತ್ತರಿಸಿದರು. ರಾಜ್ಯದಲ್ಲಿ ಒಟ್ಟು 2,866 ಸ್ಲಂ ಪ್ರದೇಶಗಳಿವೆ, ಸ್ಲಂ ಬೋರ್ಡ್‌ಗೆ ನೀಡಲಾಗಿರುವ 50 ಕೋಟಿ ರೂ. ಅನುದಾನದಲ್ಲಿ ಯಾವ ರೀತಿ ಅಭಿವೃದ್ಧಿಗೊಳಿಸಲು ಸಾಧ್ಯ, ಕನಿಷ್ಠ 10 ಕೋಟಿ ರೂ. ಪ್ರತಿ ಸ್ಲಂಗಳಿಗೆ ಖರ್ಚು ಮಾಡಿದರೆ ಅಲ್ಲಿ ಕೆಲವೊಂದು ಮೂಲ ಸೌಕರ್ಯಗಳನ್ನು ಒದಗಿಸಬಹುದಾಗಿದೆ. ಹೀಗಾಗಿ 500 ಕೋಟಿ ರೂ. ಅನುದಾನವನ್ನು ಹೆಚ್ಚುವರಿಯಾಗಿ ನೀಡುವಂತೆ ಕೋರಲಾಗಿದೆ ಎಂದರು.

ಸ್ಲಂ ಪ್ರದೇಶಗಳ ಸರ್ವತೋಮುಖ ಪ್ರಗತಿಗಾಗಿ ಹಲವಾರು ಕಾರ್ಯಯೋಜನೆ ರೂಪಿಸುತ್ತಿವೆ. ವಿಶೇಷವಾಗಿ ಇನ್ಫೋಸಿಸ್, ವಿಪ್ರೋದಂತಹ ಸಂಸ್ಥೆಗಳ ಸಿಎಸ್‌ಆರ್ ಅನುದಾನವನ್ನು ಸ್ಲಂ ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗಿಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಈ ಕಂಪನಿಗಳ ಜತೆ ಶೀಘ್ರವೇ ಸಭೆ ನಡೆಸಿ ಸಿಎಸ್‌ಆರ್ ಅನುದಾನವನ್ನು ಸ್ಲಂ ಪ್ರದೇಶಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲಿದ್ದೇವೆ ಎಂದು ಹೇಳಿದರು.

ಈ ವೇಳೆ ಮಧ್ಯಪ್ರವೇಶಿಸಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ನೀವು ಮುಖ್ಯಮಂತ್ರಿಗಳಿಗೆ ಆತ್ಯಾಪ್ತರು. ನೀವೇ ಅನುದಾನವಿಲ್ಲ ಎಂದು ಅಸಹಾಯಕ ವ್ಯಕ್ತಪಡಿಸಿದರೆ ಹೇಗೆ? ನೀವು ಆಪ್ತರು ಎಲ್ಲ ಎನ್ನುವ ಕಾರಣಕ್ಕೆ ಅನುದಾನ ನೀಡಿಲ್ಲವೇ ಎಂದು ತಿಳಿಸಿದರು.

ಬಲವಂತದ ಮದುವೆಗೆ ವಿಚ್ಛೇದನ: ದೇವೇಗೌಡರು

• **ಬೆಂಗಳೂರು:** ನಾನು ಕಾಂಗ್ರೆಸ್ ಜೊತೆಗೆ ಇದಿದ್ದು, ಒಂದು ಬಲವಂತದ ಮದುವೆಯಲ್ಲಿ. ಆದರೆ ಆ ಸಂಬಂಧವು ಅತ್ಯಂತ ಹಿಂಸಾದಾಯಕವಾಗಿದ್ದರಿಂದ ನಾನು ಅವರಿಗೆ ವಿಚ್ಛೇದನ ನೀಡಬೇಕಾಯಿತು ಎಂದು ಎಚ್.ಡಿ ದೇವೇಗೌಡ ಅವರು ಹೇಳಿದ್ದಾರೆ.



ರಾಜ್ಯಸಭೆಯಲ್ಲಿ ವಿದಾಯದ ಭಾಷಣದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ದೇವೇಗೌಡರು ನಮ್ಮನ್ನು ಪ್ರೀತಿಸಿ ಮೋದಿ ಅವರನ್ನು ಮದುವೆಯಾದರು ಎಂಬ ಹೇಳಿಕೆಗೆ ಪ್ರತಿಕ್ರಿಸಿರುವ ಅವರು, ನಾನು ಕಾಂಗ್ರೆಸ್ ಮೈತ್ರಿಯನ್ನು ಕೈಬಿಡಲಿಲ್ಲ, ಅವರೇ ನಮ್ಮಿಂದ ದೂರ ಹೋದರು. ಅನಿವಾರ್ಯವಾಗಿ ನಾನು ಅವರಿಗೆ ವಿಚ್ಛೇದನ ನೀಡಿ, ಹೆಚ್ಚು ಸ್ಥಿರವಾದ ಮೈತ್ರಿಯನ್ನು ಹುಡುಕಿಕೊಳ್ಳಬೇಕಾಯಿತು ಎಂದಿದ್ದಾರೆ. ಮದುವೆಯ ಸಂಭ್ರಮದ ನಂತರ 2019ರಲ್ಲಿ ಅವರು ಮಾಡಿದ್ದೇನು, ನಮ್ಮನ್ನು ಅರ್ಧ ದಾರಿಯಲ್ಲೇ ಕೈಬಿಟ್ಟರು. ಎಷ್ಟು ಜನ ಕಾಂಗ್ರೆಸ್ ಶಾಸಕರು ಬಿಜೆಪಿಗೆ ಹೋದರು ಮತ್ತು ಅವರನ್ನು ಅಲ್ಲಿಗೆ ಕಳುಹಿಸಿದವರು ಯಾರು ಎಂಬುದು ಇಂದು ಜಗಜ್ಜಾಹೀರಾಗಿದೆ. ಅಂದು ಪಕ್ಷಾಂತರಕ್ಕೆ ಪ್ರಚೋದನೆ ನೀಡಿದ ವ್ಯಕ್ತಿಯ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡಿದ್ದರೆ, ಇಂದು ನನ್ನ ಗೆಳೆಯ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿ ಇನ್ನೂ ಗೌರವಯುತ ಹಾಗೂ ಉತ್ತಮ ಸ್ಥಿತಿಯಲ್ಲಿರುತ್ತಿದ್ದರು ಎಂದು ಟಾಂಗ್ ನೀಡಿದ್ದಾರೆ.

• **ವಿಧಾನ ಪರಿಷತ್ :** ಕೇವಲ ಗೆಜೆಟ್ ಆಧರಿಸಿ ಆರ್‌ಟಿಸಿಯಲ್ಲಿ ವಕ್ಫ್ ಎಂದು ನಮೂದಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಆ ಜಮೀನು ವಾಪಾಸ್ ಪಡೆದುಕೊಳ್ಳಬೇಕೋ ಅಥವಾ ಇನ್ನಾವ ಕ್ರಮ ಕೈಗೊಳ್ಳಬೇಕೆಂಬುದರ ಕುರಿತು ಅಡ್ವೋಕೇಟ್ ಜನರಲ್ ಅವರ ಕಾನೂನಾತ್ಮಕ ಅಭಿಪ್ರಾಯ ಪಡೆದುಕೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೆಗೌಡ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ವಕ್ಫ್ ವಿಷಯವಾಗಿ ರೈತರು ಎದುರಿಸುತ್ತಿರುವ ತೊಂದರೆಯ ಕುರಿತು ಮೇಲ್ಮನೆ ಬಿಜೆಪಿ ಸದಸ್ಯ ಪಿ.ಎಚ್. ಪೂಜಾರ್ ಅವರು ಪ್ರಸ್ತಾಪಿಸಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶಾಲೆಗಳು, ಸರ್ಕಾರಿ ಕಚೇರಿಗಳು, ದೇವಾಲಯಗಳು ಹಾಗೂ ಸ್ಮಶಾನಗಳ ಪಹಣಿಯಲ್ಲಿ ವಕ್ಫ್ ಎಂದು ದಾಖಲಾಗಿದ್ದರೆ ಅದನ್ನು ತೆರವುಗೊಳಿಸಲು ಸರ್ಕಾರ ಈಗಾಗಲೇ ಸ್ಪಷ್ಟವಾದ ಆದೇಶ ಹೊರಡಿಸಿದೆ ಎಂದರು. ಯಾವ ದಾನಪತ್ರವೂ ಇಲ್ಲದೇ ಕೇವಲ ಗೆಜೆಟ್ ಆಧರಿಸಿ ಆರ್‌ಟಿಸಿಯಲ್ಲಿ ವಕ್ಫ್ ಎಂದು ನಮೂದಾಗಿರುವ ಪ್ರಕರಣಗಳು ಬೆಂಗಳೂರು, ವಿಜಯಪುರ-ಬಾಗಲಕೋಟೆಯಲ್ಲಿ ಮಾತ್ರ ದಾಖಲಾಗಿವೆ. ಬೆಂಗಳೂರು ನಗರದಲ್ಲಿ 21.1 ಎಕರೆ ಸರ್ಕಾರಿ ಜಮೀನು, ವಿಜಯಪುರ ಜಿಲ್ಲೆಯಲ್ಲಿ 28.0 ಎಕರೆ ಸರ್ಕಾರಿ ಜಮೀನು ಹಾಗೂ 3,903.11 ಎಕರೆ ಖಾಸಗಿ ಜಮೀನು, ಬಾಗಲಕೋಟೆ ಜಿಲ್ಲೆಯಲ್ಲಿ 315.19 ಎಕರೆ ಸರ್ಕಾರಿ ಜಮೀನು ಹಾಗೂ 73.01 ಖಾಸಗಿ ಜಮೀನುಗಳಲ್ಲಿ ವಕ್ಫ್ ಎಂದು ನಮೂದಿಸಲಾಗಿದೆ, ಈ ವಕ್ಫ್ ತೆರವುಗೊಳಿಸುವ ಮೊದಲಾದ ವಿಷಯಗಳ ಬಗ್ಗೆ ಕಾನೂನಾತ್ಮಕ ಸಲಹೆ ಪಡೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದರು.

ಅಂಬೇಡ್ಕರ್ ಸ್ಮೃತಿ ಸಂಚಯ ಕಾರ್ಯಾಗಾರ: ಮಲ್ಲೇಪುರಂ

ಸಮಷ್ಟಿ ಚಿಂತನೆ ಸಮಾಜಕ್ಕೆ ಒಳಿತು

• **ಬೆಂಗಳೂರು:** ಒಳಗೊಳ್ಳುವ ಸಮಾಜ ಇದ್ದರೆ, ಇತರೆ ದೇಶದ ಜತೆ ನಿಲ್ಲಲು ಸಾಧ್ಯ.. ಆದ್ದರಿಂದ ನಾವು ವ್ಯಕ್ತಿಗತವಾಗಿ ಯೋಚಿಸದೇ, ಸಮಷ್ಟಿಗತವಾಗಿ ಚಿಂತಿಸಬೇಕು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಲಗಿದ್ದ ಅಂಬೇಡ್ಕರ್ ಸ್ಮೃತಿ ಸಂಚಯ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಇಂದಿನ ಲೋಕ ಬೇರೆ ವಿನ್ಯಾಸದಲ್ಲಿದೆ. ಈ ವಿನ್ಯಾಸದಲ್ಲಿ ಅಂಬೇಡ್ಕರ್ ಅವರನ್ನು ನಾವು ಹೇಗೆ ನೋಡಿಕೊಳ್ಳಬಹುದು, ಅವರ ಕೆಲಸ ಕಾರ್ಯ ನಾವು ಹೇಗೆ ಮುಂದುವರಿಸಬಹುದು ಹಾಗೂ ಅದರ ಮೂಲಕ ನಾವು ಭಾರತದ ಸಮಾಜವನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದು ಮುಖ್ಯ.. ಒಳ್ಳಗೊಳ್ಳುವ ಸಮಾಜ ಇಂದು ಭಾರತಕ್ಕೆ ಬೇಕಿದೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ರಾಷ್ಟ್ರ ಎಂಬುದು ಮೊದಲ ಚಿಂತನೆಯಾಗಿತ್ತು. ರಾಷ್ಟ್ರ ಎಂಬುದು ಮುಖ್ಯ.. ಆ ಮೇಲೆ ವ್ಯಕ್ತಿ, ಸಮುದಾಯ, ಸಮಾಜ ಇತ್ಯಾದಿಗಳೆಲ್ಲವೂ ನಂತರದ್ದಾಗಿದೆ. ಒಳಗೊಳ್ಳುವ ಸಮಾಜ ಇದ್ದರೆ, ಇತರೆ ದೇಶದ ಜತೆ ನಿಲ್ಲಲು ಸಾಧ್ಯ ಎಂದರು.

60ರ ದಶಕದ ನಂತರ ಅಂಬೇಡ್ಕರ್ ಅವರು ಈ ಸಾಮಾಜಕ್ಕೆ, ರಾಜ್ಯ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗೆ ಅಗತ್ಯ ಎನ್ನುವುದು ಬಂತು. ಬರು ಬರುತ್ತಾ ಮಾದರಿ ವ್ಯಕ್ತಿಯಾಗಿ ಅಂಬೇಡ್ಕರ್ ನಿಂತರು. ಕೃತಿಕ ಬುದ್ಧಿಮತ್ತೆಯ ಈ ಕಾಲದಲ್ಲಿ ಅಂಬೇಡ್ಕರ್ ಅವರಿಂದ ನಾವು ಏನು ಪಡೆಯಬಹುದು ಎಂಬುದನ್ನು ನೋಡಬೇಕು ಎಂದರು.



ಕಾರ್ಯಕ್ರಮದಲ್ಲಿ ಕಲಬುರಗಿ ವಿವಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ, ಕರ್ನಾಟಕ ಸಂಸ್ಕೃತ ವಿವಿಯ ಕುಲಪತಿ ಡಾ.ಎಸ್.ಅಹಲ್ಯಾ, ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಸಬೀರ ಅಹ್ಮದ ಮುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

1.60 ಲಕ್ಷ ಪಹಣಿ ತಿದ್ದುಪಡಿಗೆ ಕ್ರಮ

• **ವಿಧಾನ ಪರಿಷತ್:** ಮೋಜಣಿ ತಂತ್ರಾಂಶದ ಮೂಲಕ ಈವರೆಗೂ ಸ್ವೀಕೃತವಾದ 5.70 ಲಕ್ಷ ಅರ್ಜಿಗಳಲ್ಲಿ 1.60 ಲಕ್ಷ ಅರ್ಜಿಗಳು ಪಹಣಿ ತಿದ್ದುಪಡಿಯಾಗಿ ತಾಲೂಕು ಕಚೇರಿಗಳಲ್ಲಿ ಪರಿಶೀಲನೆ ಹಂತದಲ್ಲಿವೆ. ವಿವಿಧ ಹಂತದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ವೇಳೆ ಸದಸ್ಯ ಪ್ರತಾಪಸಿಂಹ ನಾಯಕ್ ಅವರು ಪೋಡಿಗಾಗಿ ಜನರು ಅಲೆಯುತ್ತಿದ್ದಾರೆ. ಸಚಿವರ ವೇಗಕ್ಕೆ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 4.09 ಲಕ್ಷ ಅರ್ಜಿಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂ-ಮಾಪನ ಇಲಾಖೆಯಲ್ಲಿ ಬಾಕಿಯಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 60,943 ಅರ್ಜಿಗಳಿಗೆ ಪೋಡಿ ಮಾಡಲು ಆದೇಶಿಸಲಾಗಿದೆ. ಈ ಪೈಕಿ 23,621 ಅರ್ಜಿಗಳು ಪೋಡಿ ಆಗಿವೆ. ಉಳಿದ ಬಾಕಿ ಪೋಡಿ ಅರ್ಜಿಗಳು ಡಿಸೆಂಬರ್‌ನೊಳಗೆ ಮುಗಿಸಲಾಗುವುದು ಎಂದು ಭರವಸೆ ನೀಡಿದರು.

ಈಗಾಗಲೇ 590 ರೋವರ್ಸ್‌ಗಳನ್ನು ಭೂ-ಮಾಪಕರಿಗೆ ನೀಡಲಾಗಿದೆ. ಈ ಹಿಂದೆ ಭೂ ಮಾಲೀಕರು ಅರ್ಜಿ ಸಲ್ಲಿಸಿ ಪೋಡಿ ಪಡೆಯಬೇಕಾಗಿತ್ತು. ಆದರೆ ಕಳೆದ ಜನವರಿಯಿಂದ ರಾಜ್ಯ ಸರ್ಕಾರವೇ ರೈತರ ಜಮೀನುಗಳ ಪೋಡಿ ಕಾರ್ಯಕ್ಕೆ ಮುಂದಾಗಿದೆ ಎಂದು ತಿಳಿಸಿದರು.

ಗಿಳಿಶಾಸ್ತ್ರ ಹೇಳಿದವನ ಬಂಧನ

• **ಬೆಂಗಳೂರು:** ವೃತ್ತಿಯಲ್ಲಿ ಮುಂಬಡ್ತಿ ಹಾಗೂ ವರ್ಗಾವಣೆಯ ಆಸೆ ತೋರಿಸಿ, ಗಿಣಿಶಾಸ್ತ್ರದ ಹೆಸರಿನಲ್ಲಿ ಆದಾಯ ತೆರಿಗೆ (ಐಟಿ) ಅಧಿಕಾರಿಯೊಬ್ಬರಿಗೆ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ವಂಚಿಸಿದ್ದ ಹೊರರಾಜ್ಯದ ಆರೋಪಿಯನ್ನು ಭಾರತಿನಗರ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಶೇಖರ್ (54) ಬಂಧಿತ ಆರೋಪಿ. ಈತ ನಿಂದ 20.60 ಲಕ್ಷ ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿಯ ವಸ್ತು ಗಳನ್ನು ವಶಪಡಿಸಿಕೊಂಡು ಪೊಲೀಸರು ಆರೋಪಿಯನ್ನು ನ್ಯಾಯಾಂಗ ಬಂಧಕ್ಕೆ ಒಪ್ಪಿಸಿದ್ದಾರೆ. ಗಿಣಿಶಾಸ್ತ್ರ ಹೇಳುವ ವ್ಯಕ್ತಿಯೊಬ್ಬ ಅಧಿಕಾರಿಯನ್ನು ಮಾತನಾಡಿಸಿ, ಮುಖ ನೋಡಿ ಭವಿಷ್ಯ ನುಡಿಯುವುದಾಗಿ ನಂಬಿಸಿದ್ದನು. ಆರಂಭದಲ್ಲಿ ಪೂಜೆಗಾಗಿ 50,000 ರೂ. ಪಡೆದಿದ್ದ ಆರೋಪಿ, ನಂತರ ನಿಮ್ಮ ವೃತ್ತಿ ಜೀವನ ಸುಧಾರಿಸಲು ಹಾಗೂ ಉತ್ತಮ ವರ್ಗಾವಣೆಗಾಗಿ ಪೂಜೆ ಮಾಡಬೇಕೆಂದು ಹೆದರಿಸಿದ್ದನು. ಒಂದು ವೇಳೆ ಪೂಜೆ ಮಾಡಿಸದಿದ್ದರೆ ಕೆಟ್ಟದಾಗಲಿದೆ ಎಂದು ಭಯ ಹುಟ್ಟಿಸಿ, ಅವರಿಂದ 194 ಗ್ರಾಂ ಚಿನ್ನ ಹಾಗೂ 1.300 ಕೆ.ಜಿ. ಬೆಳ್ಳಿಯ ಆಭರಣಗಳನ್ನು ಪೂಜೆ ಮಾಡಿ ಮರಳಿಸುವುದಾಗಿ ಪಡೆದುಕೊಂಡು ಪರಾರಿಯಾಗಿದ್ದನು. ಅಧಿಕಾರಿ ತನ್ನ ಒಡವೆಗಳನ್ನು ವಾಪಸ್ ಕೇಳಿದಾಗ ಆರೋಪಿಯು ಜೀವ ಬೆದರಿಕೆ ಹಾಕಿದ್ದ ಎಂದು ದೂರಿನಲ್ಲಿ ತಿಳಿಸಿದ್ದರು.

ಹಲಸೂರಿನ ಜ್ಯುವೆಲ್ಲರಿ ಅಂಗಡಿಯೊಂದರಲ್ಲಿ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ. ಈ ಮಾಹಿತಿಯ ಮೇರೆಗೆ ಪೊಲೀಸರು 124 ಗ್ರಾಂ ಚಿನ್ನ ಹಾಗೂ 796 ಗ್ರಾಂ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಹಾಜರಾತಿ ಸಮಯ ಬದಲಾವಣೆ ಸರಿಯಲ್ಲ

• **ಬೆಂಗಳೂರು:** ನಗರದ ತ್ಯಾಜ್ಯ ವಿಲೇವಾರಿಗಾಗಿ ಸ್ಥಾಪಿಸಲಾದ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ(ಬಿಎಸ್‌ಡಬ್ಲ್ಯೂಎಂಎಲ್)ದ ಅವೈಜ್ಞಾನಿಕ ತೀರ್ಮಾನಗಳಿಂದ ಉದ್ಯಾನ ನಗರಿ ಬೆಂಗಳೂರು ದಿನೇ ದಿನೇ ಕಸದ ನಗರಿಯಾಗಿ ಬದಲಾಗುತ್ತಿದೆ ಎಂದು ಬೆಂಗಳೂರು ಕೇಂದ್ರ ಜಿಲ್ಲೆಯ ಬಿಜೆಪಿ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ವಾಗ್ದಾಳಿ ನಡೆಸಿದ್ದಾರೆ.

ಮಾಧ್ಯಮ ಹೇಳಿಕೆ ನೀಡಿರುವ ಅವರು, ಬಿಎಸ್‌ಡಬ್ಲ್ಯೂಎಂಎಲ್ ಇತ್ತೀಚೆಗೆ ಪೌರಕಾರ್ಮಿಕರ ಬಯೋಮೆಟ್ರಿಕ್ ಹಾಜರಾತಿ ಸಮಯದಲ್ಲಿ ಬದಲಾವಣೆ ಮಾಡಿದೆ. ಈ ಮೊದಲು ಬೆಳಗ್ಗೆ 7 ಗಂಟೆಯೊಳಗೆ ಹಾಜರಾತಿ ನೀಡಬೇಕಿತ್ತು,



ಆದರೆ ಈಗ ಬೆಳಗ್ಗೆ 5:30 ರಿಂದ 6:30ರ ನಡುವೆ ಹಾಜರಾತಿ ಕಡ್ಡಾಯಗೊಳಿಸಲಾಗಿದೆ. ಈ ಹೊಸ ನಿಯಮದಿಂದ ಪೌರಕಾರ್ಮಿಕರು ತೀವ್ರ ಒತ್ತಡದಲ್ಲಿ ಕೆಲಸ ಮಾಡುವಂತಾಗಿದೆ. ಇದಲ್ಲದೆ, ಗುತ್ತಿಗೆದಾರರು ಕಸದ ಆಟೋಗಳಿಗೆ ನೀಡಿರುವ ಕ್ಯೂ.ಆರ್ ಕೋಡ್ ಮೂಲಕವೇ ಹಾಜರಾತಿ ಹಾಕಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಹೇಳಿದ್ದಾರೆ.

ಹಾಜರಾತಿ ಸಮಯ ಬದಲಾದ ಹಿನ್ನೆಲೆಯಲ್ಲಿ ಕಸದ ಆಟೋಗಳು ಮನೆ ಮನೆಗೆ ತೆರಳುವ ಸಮಯವೂ ಬದಲಾಗಿದೆ. ನಾಗರಿಕರು ಶಾಲೆ ಅಥವಾ ಕಚೇರಿಗಳಿಗೆ ಹೊರಡುವ ತಯಾರಿಯಲ್ಲಿರುವಾಗ ಅಥವಾ ವಾಕಿಂಗ್ ಹೋಗುವ ಸಮಯದಲ್ಲಿ ಆಟೋಗಳು ಬರುವುದರಿಂದ ಸಾರ್ವಜನಿಕರಿಗೆ ಕಸ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ನಗರದ ವಿವಿಧೆಡೆ ರಸ್ತೆಬದಿಯಲ್ಲೇ ಕಸ ಸುರಿಯುವ ಬ್ಲಾಕ್ ಸ್ಪಾಟ್‌ಗಳು ನಿರ್ಮಾಣವಾಗುತ್ತಿವೆ.ಈ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಆಟೋ ಡ್ರೈವರ್ ಮತ್ತು ಹೆಲ್ಪರ್‌ಗಳನ್ನೆ ಬಳಸಿಕೊಳ್ಳಲಾಗುತ್ತಿದ್ದು, ಇದರಿಂದ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸುವ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗುತ್ತಿದೆ ಎಂದು ಆರೋಪಿಸಿದ್ದಾರೆ.

530 ಕೋಟಿ ರೂ. ಬಾಕಿ: ಮುನೀಶ್ ಮೌದ್ಗಿಲ್

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ರುವ 5 ನಗರ ಪಾಲಿಕೆಗಳಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 503 ಸುಸ್ತಿದಾರರಿಂದ 135,69,42,307 ರೂ. ಹಾಗೂ 509 ಆಸ್ತಿ ತೆರಿಗೆ ಬೇಬಾಕಿ ಪರಿಷ್ಕರಣೆ ಪ್ರಕರಣಗಳಿಂದ 394,44,63,135 ರೂ. ಸೇರಿ ಒಟ್ಟು 530 ಕೊಟಿ ರೂ. ಬಾಕಿ ಉಳಿದಿದೆ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.



ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಜಿಬಿಎ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಬಾಕಿ ಹೆಚ್ಚು ಉಳಿಸಿಕೊಂಡಿರುವ ಸುಸ್ತಿದಾರರು ಹಾಗೂ ಬಾಕಿ ಪರಿಷ್ಕರಣೆ ಪ್ರಕರಣಗಳ ಮೇಲೆ ನಗರ ಪಾಲಿಕೆಗಳು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದು, ಪಾಲಿಕೆಗಳಿಗೆ ಬರಬೇಕಿರುವ ಆಸ್ತಿ ತೆರಿಗೆಯನ್ನು ತೆರಿಗೆದಾರರಿಂದ ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ಹೆಚ್ಚು ಬಾಕಿ ಹೊಂದಿರುವ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಂದ ಬಾಕಿ ತೆರಿಗೆಯನ್ನು ತ್ವರಿತಗತಿಯಲ್ಲಿ ಸಂಗ್ರಹಿಸಲು ಸಂಬಂಧಿತ ನಗರ ಪಾಲಿಕೆಗಳ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಆಯಾ ನಗರ ಪಾಲಿಕೆಗಳಲ್ಲಿ 50 ಪ್ರಮುಖ ಸುಸ್ತಿದಾರರು ಹಾಗೂ 50 ಪರಿಷ್ಕರಣೆ ಪ್ರಕರಣಗಳ ಪಟ್ಟಿಯನ್ನು ಜಿಬಿಎ ಜಾಲತಾಣದಲ್ಲಿ https://gba.karnataka.gov.in ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರು ಕೂಡಲೇ ಪಾಲಿಕೆಗಳಿಗೆ ಬಾಕಿ ತೆರಿಗೆಯನ್ನು ಪಾವತಿಸಿ, ಮುಂದಾ ಗುವ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ತೋಟಗಾರಿಕೆ ಇಲಾಖೆ ಗಮನಕ್ಕೆ ಬಾರದಂತೆ ಹೊಸ ಟೊಮೆಟೊ ತಳಿ ಮಾರಾಟ

ಕಂಪನಿಗಳ ವಿರುದ್ಧ ಕ್ರಮಕ್ಕೆ ರೈತರ ಆಗ್ರಹ

• **ಕೋಲಾರ:** ತೋಟಗಾರಿಕೆ ಇಲಾಖೆಗೆ ಮಾಹಿತಿ ಇಲ್ಲದೆ ಹೊಸ ಟೊಮೆಟೋ ತಳಿಯನ್ನು ಅನಧಿಕೃತ ನರ್ಸರಿ ಮಾಲೀಕರ ಜತೆ ಸೇರಿ ರೈತದ ಮೇಲೆ ಪ್ರಯೋಗ ಮಾಡುತ್ತಿರುವ ಬೀಜ ಕಂಪನಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಆಗ್ರಹಿಸಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿ, ಬೆಲೆ ಕುಸಿತದಿಂದ ಕಂಗಾಲಾಗಿರುವ ಆಲೂಗಡ್ಡೆ ಬೆಳೆಗಾರರ ರಕ್ಷಣೆಗೆ ಧಾವಿಸಬೇಕು. ಪ್ರತಿ ಕೆಜಿಗೆ 10 ರೂ. ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದರು.

ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ದೇಶದಲ್ಲಿರುವ ಸಾವಿರಾರು ಬಿತ್ತನೆ ಬೀಜ ಕೀಟನಾಶಕ ಕಂಪನಿಗಳು ನಾಯಿಕೊಡೆಗಳಂತೆ ಗಲ್ಲಿಗಲ್ಲಿಯಲ್ಲೂ ನಮ್ಮ ಕಂಪನಿಯ ಬಿತ್ತನೆ ಬೀಜ ಉಪಯೋಗಿಸಿ ನಮ್ಮ ಕಂಪನಿ ಕೀಟನಾಶಕ ಉಪಯೋಗಿಸಿ ರೋಗಗಳಿಂದ ಬೆಳೆಯನ್ನು ರಕ್ಷಣೆ ಮಾಡಿ ಶ್ರೀಮಂತರಾಗಿ ನಮ್ಮ ಕಂಪನಿ ನಮ್ಮ ರೈತರು ಎಂಬ ಜಾಹಿರಾತಿನಲ್ಲಿ ಕರ ಪತ್ರವನ್ನು ಗಲ್ಲಿಗಲ್ಲಿಯಲ್ಲೂ ಅಂಟಿಸಿ ಪ್ರಚಾರ ಮಾಡುವ ಕಂಪನಿಗಳಿಗೆ ಕಡಿವಾಣ ಹಾಕುವಲ್ಲಿ ತೋಟಗಾರಿಕೆ ಇಲಾಖೆ ವಿಫಲವಾಗಿದೆ ಎಂದು ದೂರಿದರು.

ಕಡ್ಡಾಯವಾಗಿ ತೋಟಗಾರಿಕೆ ಇಲಾಖೆಯಿಂದ ಪರವಾನಿಗೆ ಪಡೆದು ನರ್ಸರಿ ನಡೆಸಿ ರೈತರು ಕೊಳ್ಳುವ ಪ್ರತಿ ಸಸ್ಯಕ್ಕೂ ಕಡ್ಡಾಯವಾಗಿ ನೊಂದಣಿಯಾಗಿರುವ ಬಿಲ್ ನೀಡಬೇಕಾದ ನರ್ಸರಿಗಳು ಯಾವುದೇ ಬಿಲ್ ನೀಡದೆ ರೈತರನ್ನು ವಂಚನೆ ಮಾಡುತ್ತಿವೆ ಎಂದರು.



ಹೊಸ ತಳಿಯ ಬಿತ್ತನೆ ಬೀಜವನ್ನು ಜಿಲ್ಲಾಡಳಿತ ತೋಟಗಾರಿಕೆ ಅಧಿಕಾರಿಗಳ ಗಮನಕ್ಕೆ ತರದೆ ಏಕಾಏಕಿ ಕೆಲವು ನರ್ಸರಿ ಮಾಲೀಕರ ಜೊತೆ ಶಾಮೀಲಾಗಿ ರೈತರಿಗೆ ಹೊಸ ತಳಿಯ ಟೊಮೆಟೋ, ಕ್ಯಾಪ್ಸಿಕಂ ಮತ್ತಿತರ ತಳಿಗಳ ಸಸಿಗಳನ್ನು ನೀಡಿ ವಂಚನೆ ಮಾಡಿ ಬೆಳೆದ ರೈತ ಬೆಳೆ ನಷ್ಟವಾದಾಗ ಸಮಸ್ಯೆಯೆಂದು ತೋಟಗಾರಿಕೆ ಅಧಿಕಾರಿಗಳಿಗೆ ದೂರು ನೀಡಲು ಹೋದರೆ ಬಿಲ್ ಕೊಡಿ ಎಂದು ರೈತರನ್ನೇ ಪ್ರಶ್ನೆ ಮಾಡುವ ಅಧಿಕಾರಿಗಳ ವರ್ತನೆ ಖಂಡನೀಯ ಎಂದರು.

ರೈತಸಂಘದ ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಮಾತನಾಡಿ, ರೈತರೇ ದೇಶದ ಬೆನ್ನೆಲಬು ಅನ್ನದಾತ ಹಸಿದ ಹೊಟ್ಟೆಗೆ ಅನ್ನ ನೀಡುವ ಧರ್ಮ ಪ್ರಭು ಎಂದು ವರ್ಣನೆ ಮಾಡುವ ಸರ್ಕಾರಗಳು ರೈತರ ಬೆನ್ನನ್ನು ಮುರಿದು ರೈತರ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆಂದು ಆರೋಪಿಸಿದರು.

ಉತ್ತಮ ಬೆಳೆ ಬೆಳೆದಿರುವ ಆಲೂಗಡ್ಡೆ ಬೆಳೆಗಾರರು ಬೆಲೆ ಇಲ್ಲದೆ ಸಂಕಷ್ಟದಲ್ಲಿದೆ. ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರದ ಗಮನಕ್ಕೆ ತಂದು ರೈತ ಕುಲವನ್ನು ರಕ್ಷಣೆ ಮಾಡಬೇಕಾದ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯ ರೈತರ ಪಾಲಿಗೆ ಇದ್ದು, ಇಲ್ಲದಂತಾಗಿದ್ದಾರೆ ಎಂದು ಲೇವಡಿ ಮಾಡಿದರು.

ಮನವಿ ಸ್ವೀಕರಿಸಿ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಶಿವಾರೆಡ್ಡಿ ಮಾತನಾಡಿ, ಹೊಸ ತಳಿಗಳನ್ನು ರೈತರ ಮೇಲೆ ಪ್ರಯೋಗ ಮಾಡುವ ಕಂಪನಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ ಅನಧಿಕೃತ ನರ್ಸರಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಆಲೂಗಡ್ಡೆ ಬೆಂಬಲ ಬೆಲೆ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಮನವಿ ನೀಡುವಾಗ ಜಿ.ಕಾ.ಅ.ವಕ್ಕಲೇರಿ ಹನುಮಯ್ಯ, ಚಂದ್ರಪ್ಪ, ಕಮ್ಮದಟ್ಟಿ ಚಲಪತಿ, ಮಂಜುನಾಥ, ಮಂಗಸಂದ್ರ ತಿಮ್ಮಣ್ಣ, ಸುಪ್ರಿಂ ಚಲ, ಗಿರೀಶ್, ಮತ್ತೇರಿ ರಾಜು, ತೆರಹಳ್ಳಿ ಆಂಜಿನಪ್ಪ, ಯಲ್ಲಣ್ಣ, ರಾಮಸಾಗರ ವೇಣು, ಬಾಬು ಶೈಲಜ, ರತ್ನಮ್ಮ, ಸುನಿತಮ್ಮ, ಪವಿತ್ರ, ಗಿರಿಜ, ಮುಂತಾದವರು ಇದ್ದರು.

PUBLIC NOTICE

Please be advised that my client has entered into a Sale Agreement with Mr. Vinit Kumbra and Mr. Tarun Kumbra for the purchase of House No. 32, BBMP New PID No. 151-W0247-13 (Old PID No. 88-7-32), situated at 4th B Block, Koramangala, Bengaluru-560034, measuring 1600 sq. ft. The general public is hereby warned against any dealings or transactions with the owners regarding this property. Any such transactions shall not be binding upon my client and are subject to my client's prior rights under the aforementioned agreement. Any person having a claim against this property whether by sale, inheritance, mortgage, or otherwise is requested to notify the undersigned in writing with supporting documentary evidence within 15 days of this notice. Failure to do so will result in any such claims being deemed waived or abandoned and not binding upon my client.

TANUJA AKBAR, Advocate, 281, 17th F Main, 3rd Cross 6th Block, Koramangala, Bengaluru-560 095.

CHANGE OF NAME

I, **AISHWARYA BHARADWAJ**, aged about 29 years, W/o Bharadwaj K, Flat No. 223, Suraksha Tranquil Gardens Apartment Hulimavu Main Road, Hulimavu, Bengaluru-560076, do hereby declare that I have changed my name from **UDUPA AISHWARYA RAJESH** to **AISHWARYA BHARADWAJ**, vide affidavit dated 18.03.2026, sworn to before K.V. Mani, Advocate & Notary, Govt. of India, Bengaluru.

ಸಾರ್ವಜನಿಕ ಪ್ರಕಟಣೆ

[illegible]

IN THE COURT OF THE HON'BLE CIVIL JUDGE AND JMFC AT KOLAR

C.M.C.NO. 58/2025

BETWEEN: 1. Narayanappa S/o Late Ramana Bovi, Aged about 70 years, 2. Sumithramma W/o Late Krishnappa Aged about 50 years 3. Raju S/o Late Krishnappa ... Petitioners

AND: The Tahsildar, Kolar Taluk, Kolar ...Respondent

PUBLIC NOTICE

It is hereby notified for the information of that the petitioner's have filed above petition against the respondent for the relief that declaring the date of death of the 1st & 9 petitioner brother and 2nd and 8th petitioner's her husband brother and other petitioner's father deceased MUNIYAPPA S/O LATE RAMANA BOVI WHO DIED ON 28.07.2011 AT CHAKARASANAHALLI VILLAGE, NARASAPURA HOBLI, KOLAR TALUK and he was dead and buried, his dead body was buried in the said village.

Take Notice that if any interested persons including the respondent having any interest or claim of whatsoever Or hereby summoned to appear before this Hon'ble court in person Or Though an advocate on 21/04/2026 at 11 a.m otherwise the petition will be disposed off in accordance with law. Given under my hand and seal of the court this the day on 30.01.2026.

By Order of the Court, Chief Ministerial Officer, Prl. Civil Judge & JMFC Court, Kolar

Advocate for Petitioner: Nandini, Advocate, Kolar

IN THE COURT OF THE PRL.CIVIL JUDGE & JMFC AT MANDYA

O.S. NO. 116/2025

Plaintiffs: Sri. Boralingegowda S/o Late Karigowda Aged about 78 years ... Mandya Taluk, Mandya District.

Defendants: Smt.Jayamma and others ...

SUMMONS TO THROUGH PAPER PUBLICATION TO DEFENDANTS NO.6,7,8

Whereas the suit has been filed by the plaintiffs against the defendants for partition and separate possession in respect of suit schedule properties. Take summons that the above suit is posted to Before the Prl. Civil Judge and JMFC, Mandya for final hearing. The above case will be called at 11.00 AM, on that day you may appear in person or through an advocate duly instructed on the above date, take further notice/summons that if you fail to appear on the said date, the matter will be heard in your absence and disposed off exparte.

Given under my hand and seal of this Court this Day of March 2026.

By order of the Court, Sheristedar, Civil Judge and JMFC Court, Mandya

Advocates for the plaintiffs: K.J.Kumar, Advocate, Mandya.

IN THE COURT OF XXXVII ADDL CITY CIVIL AND SESSION JUDGE, AT BENGALURU (CCH-38)

O.S. No.11/2014

BETWEEN: 1. Sri.H.C. Rajappa Reddy ... PLAINTIFFS

AND: 1. Sri.K.R.Vinayan ... DEFENDANTS

SUMMONS/NOTICE TO DEFENDANT NOS. 2 TO 4 U/O V RULE 20(1-A) OF CPC

To, take notice Defendant Nos. 2 to 4, the Plaintiffs have filed the suit seeking relief of Specific Performance ... The said case is posted on 06-04-2026 at 11.00 A.M for your appearance. You are hereby directed to take notice and appear before above said court either in person or through duly instructed pleader failing which the above Plaint will be decided in your absence placing you exparte.

SCHEDULE PROPERTY

[illegible]

By order of the court, Senior Sheristedar, City Civil Court, Bengaluru

Sri.G.S.PRASAD REDDY, Advocate

BEFORE THE JOINT DIRECTOR OF LAND RECORDS BENGALURU RURAL DISTRICT

R.P.(SURVEY) No. 58/2025-26

NOTICE

[illegible]

Given under my hand and seal of the court on this the 17.03.2026

By order of the Court, Joint Director of Land Records, Bengaluru Rural District.

CHANGE OF NAME

"I hitherto known as **PREETHI KS**, D/o K S SHADAKSHARI, R/# 29,2nd Stage 3rd Main, 3rd Cross Maruthi Nagar, Near Vijay Mandir, Yelahanka Old Town, Bangalore North, PO: Yelahanka, DIST: Bangalore, Karnataka -560064, have changed my name and shall hereafter be known as **PREETHI KS**, vide affidavit dated 17th March 2026, sworn before Advocate and Notary **N. NAGAPPA** at Bangalore.

IN THE COURT OF VI ADDL. DISTRICT AND SESSIONS JUDGE OF D.K. AT MANGALURU

Crl. R. P. No.: 399/2022

BETWEEN
Pratheek Kamath ...Petitioner

AND

K. Usha Jeevanandam and Ayaaz Khan ...Respondents

NOTICE

2nd RESPONDENT
1. Mr. K. Jeevanandam,
Old Door No.6,
New Door No.28, 4th Cross Road, Kavegi Nagar,
R.T. Nagar, Bengaluru-560032.

3rd RESPONDENT
Ayaaz Khan,
S/o Mohammad Khan,
No.261-C, 7th Cross Road, Rashad Nagar, Arabic College Post, Bengaluru-560 045.

Please take notice that the above case has been filed against you by the petitioner and the said case stands posted to 24-04-2026 for your appearance in case if you fail to appear either personally or through an Advocate the matter will be decided in your absence placing your ex parte.

Given under my hand seal of the court on this 13th day of March 2026.

(By order of the Court)
Sd/- Chief Administrative Officer
District Court, D.K., Mangaluru

(B Purander Shetty & Soni V.)
Advocates for Petitioner
Mangalore
Date: 13-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

[illegible]

IN THE COURT OF THE HON'BLE I ADDL. CITY CIVIL & SESSION JUDGE, BENGALURU

O.S.No.1489/2013 (CCH-02)

BETWEEN: MR.RAMESH & OTHERS ... PLAINTIFFS

AND: SMT.LAKSHMAMMA & OTHERS ... DEFENDANTS

NOTICE/SUMMONS TO THE PROPOSED DEFENDANTS

Defendant No.14: SMT.S.VIJAYA ...
Defendant No.15: SRI.NAGARAJ ...
Defendant No.17: SRI.D.S.SATHYANARAYANA RAO ...
Defendant No.21: SMT.S.G.LALITHA ...
Defendant No.22: SRI. M.V.SRINIVASALU GUPTA ...
Defendant No.23: SRI.SRINIVASA.V ...
Defendant No.24: SRI.VENKATESH ...
Defendant No.26: SMT.VEENA K.R. ...
Defendant No.29: SRI.M.JEEVAN ...

Whereas the above named Plaintiffs instituted a suit against the Defendants for the relief of partition and separate possession in the suit schedule properties.

You are hereby summoned to appear in this Court either in person or through a pleader to answer the claim of the Plaintiffs on 04/04/2026 at 11.00 a.m., failing which the case will be heard and decided ex-parte on merits.

[illegible]

Given under my hand and seal of this Court on this the 18th day of March 2026.

By the Order of Court, Senior Sheristedar, City Civil Court, BENGALURU.

From, Vinayak S. Venkatnath, Advocate.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು

[illegible]

ದಿನಾಂಕ:18-03-2026

ಕರ್ನಾಟಕ ಸರ್ಕಾರ — ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಟೆಂಡರ್ ಪ್ರಕಟಣೆ

[illegible] ... https://kppp.karnataka.gov.in ... ದಿನಾಂಕ:24.03.2026 ... ದಿನಾಂಕ:25.03.2026 ... ದಿನಾಂಕ :26.03.2026 ...

ಸಹಿ/- ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕರ್ನಾಟಕ ಸರ್ಕಾರ — ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಇ-ಟೆಂಡರ್ ಪ್ರಕಟಣೆ

ದಿನಾಂಕ: 17-03-2026

[illegible] ... www.kppp.karnataka.gov.in ... ದಿನಾಂಕ : 25-03-2026 ...

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

website: www.mmcri.karnataka.gov.in

ಅಲ್ಪಾವಧಿ ಮರು-ಟೆಂಡರ್ ಅಧಿಸೂಚನೆ

[illegible] ... http://kppp.karnataka.gov.in ...

ಸಹಿ/- ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

ಜಿಲ್ಲಾ ಪಂಚಾಯತ್ ಕೋಲಾರ — ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ-563101. ದೂರವಾಣಿ ಸಂಖ್ಯೆ: 08152-222570, ಇ-ಮೇಲ್ ವಿಳಾಸ: eepredkolar1@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: SG05/25-26 ದಿನಾಂಕ:17.03.2026.

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KG-1 ರ ನಿಬಂಧನೆಗೊಳಪಟ್ಟು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

... (Two Cover System) ... ಮೊ: 5.94 ಲಕ್ಷಗಳಿಂದ 11.72 ಲಕ್ಷಗಳವರೆಗಿನ 09 ಸಂಖ್ಯೆ ... https://kppp.karnataka.gov.in ... ದಿನಾಂಕ: 24.03.2026 ರ ಸಂಜೆ 4.00 ಗಂಟೆವರೆಗೆ (2) ... ದಿನಾಂಕ: 25.03.2026 ರಂದು ಸಂಜೆ 4.30 ಗಂಟೆಯಿಂದ ... ಸಂಖ್ಯೆ: 91 8046000000 & +91 8022632000, 080-22230960 & 22234115, ...

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.60/2025-26 ದಿನಾಂಕ: 17.03.2026

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 60/2025-26 ದಿನಾಂಕ 17/03/2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 3054-03-337-0-05-200 ರಾಜ್ಯ ಹೆದ್ದಾರಿ ... 01 ಟೆಂಡರ್ ಅನ್ನು KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗುತ್ತದೆ. ... ರೂ: 29.60 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತ ರೂ. 74100/- ... 26/03/2026 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಗಳನ್ನು ದಿನಾಂಕ 18/03/2026 ರಿಂದ 27/03/2026 ರ 16.00 ಗಂಟೆವರೆಗೆ ... 27/03/2026 ರ 16-00 ... 30/03/2026 ರ 11-00 ಗಂಟೆಗೆ ... https://kppp.karnataka.gov.in ...

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

ಕರ್ನಾಟಕ ಸರ್ಕಾರ — ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್) KW-1, 2 & 4 ... https://kppp.karnataka.gov.in ...

[illegible]

ಕಿರುಸುದ್ದಿ

ರಾತ್ರೋರಾತ್ರಿ ಪ್ರತಿಭಟನೆ

ಬೇಲೂರು: ತಾಲೂಕಿನ ರಾಜನಸಿರಿಯೂರು, ಬಂಡಿಲಕ್ಷನಕೊಪ್ಪಲು, ಕಲ್ಲು ಶೆಟ್ಟಹಳ್ಳಿ (ಕೇರಕೊಡಿ) ಗ್ರಾಮಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಚಿಕ್ಕ ಅಂಗಡಿಗಳು ಹಾಗೂ ಶಾಲೆಗಳ ಸುತ್ತಮುತ್ತ ಮನೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿರುವುದರಿಂದ ಗ್ರಾಮೀಣ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆ ತಕ್ಷಣ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆಗಟ್ಟುವಂತೆ ರಾಜನಸಿರಿಯೂರು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ರಾಜನಸಿರಿಯೂರು ಗ್ರಾಮಸ್ಥೆ ಗೀತಾ ಮಾತನಾಡಿ, ಮದ್ಯದ ದುಷ್ಪರಿಣಾಮದಿಂದ ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಮನೆಮನೆಗಳಲ್ಲಿ ಕಲಹಗಳು ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಮದ್ಯ ಸೇವನೆಯಿಂದ ಅನೇಕರು ಆರೋಗ್ಯ ಕಳೆದುಕೊಂಡು, ಕೆಲವೊಂದು ಸಂದರ್ಭಗಳಲ್ಲಿ ಜೀವನವನ್ನೇ ಕಳೆದುಕೊಳ್ಳುವ ದುಃಖದ ಘಟನೆಗಳೂ ಸಂಭವಿಸುತ್ತಿವೆ. ಕುಡಿತದ ದಾಸರಾಗಿರುವ ಪುರುಷರಿಂದ ಮನೆಯ ನೆಮ್ಮದಿ ಹಾಳಾಗುತ್ತಿದೆ. ಮನೆಯಲ್ಲಿ ಸಣ್ಣಪುಟ್ಟ ಖರ್ಚುಗಳಿಗೆಂದು ತೆಗೆದಿಟ್ಟಿರುವ ಹಣವನ್ನು ತೆಗೆದುಕೊಂಡು ಹೋಗಿ ಕುಡಿಯುವುದಕ್ಕೆ ಬಳಸುತ್ತಿದ್ದಾರೆ. ಇದನ್ನು ನಿಯಂತ್ರಿಸಬೇಕಾದರೆ ಮದ್ಯ ಮಾರಾಟವನ್ನು ಮೊದಲು ನಿಯಂತ್ರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಂಬಂಧಿಸಿದ ಇಲಾಖೆಯ ಮುಂದೆ ಉಗ್ರವಾಗಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ರಾಜನಸಿರಿಯೂರು ಗ್ರಾಮ ಪಂಚಾಯತಿ ಮಾಜಿ ಸದಸ್ಯ ಜಯಶಂಕರ್ ಮಾತನಾಡಿ, ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದ್ದರೂ ಈ ಕುರಿತು ಅಬಕಾರಿ, ಪೊಲೀಸ್ ಇಲಾಖೆ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತು ಒಂದೆರಡು ಪ್ರಕರಣವು ದಾಖಲಿಸಿ ಕೈ ಚೆಲ್ಲುತ್ತಿದ್ದಾರೆ. ಈ ಬಗ್ಗೆ ಸೂಕ್ತವಾದ ತನಿಖೆ ಕೈಗೊಂಡು ಇದು ಎಲ್ಲಿಂದ ಸರಬರಾಜು ಆಗುತ್ತಿದೆ, ಮದ್ಯದ ಬಾಟಲ್‌ಗಳಲ್ಲಿ ಇರುವ ನಂಬರ್ ನಿಂದ ಇದು ಎಲ್ಲಿಂದ ಸರಬರಾಜಾಗಿತ್ತು ಎಂಬುದನ್ನು ನಿಖರವಾಗಿ ತಿಳಿಯುವ ಸಾಧ್ಯತೆ ಇದ್ದರೂ ಈ ಕೆಲಸ ನಡೆಯುತ್ತಿಲ್ಲ, ಇದರಿಂದ ಗ್ರಾಮೀಣ ಭಾಗದಲ್ಲಿ ಕುಡುಕರು ಹೆಚ್ಚಾಗಲು ಇಲಾಖೆಯವರೇ ಕಾರಣವಾಗಿದ್ದಾರೆ. ಅಬಕಾರಿ ಹಾಗೂ ಪೊಲೀಸ್ ಇಲಾಖೆ ಮೇಲಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಾಜನಸಿರಿಯೂರು ಗ್ರಾಮಸ್ಥರಾದ ನಿಂಗೇಗೌಡ, ಲತೇಶ್ ಆರ್ ಆರ್, ಗಂಗಾಧರ, ರಾಮನಹಳ್ಳಿ ಯೋಗೇಶ,ರಾಮನಹಳ್ಳಿ ಜಗದೀಶ್, ಮೋಹನಕುಮಾರ, ಸುಧಾಕರ, ಪರಮೇಶ್, ಮಣಿ, ರೂಪ, ಮೀನಾಕ್ಷಿ, ಸುಜಾತಾ, ನೀಲಾವತಿ, ಶಾರದಾ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಾಜರಿದ್ದರು.

ಮಾ.25ಕ್ಕೆ ಬೊಮ್ಮೇಗೌಡ ಪ್ರಶಸ್ತಿ ಪ್ರದಾನ

ಮಂಡ್ಯ: ಕರ್ನಾಟಕ ಸಂಘದ ವತಿಯಿಂದ ಮಾ. 25ರಂದು ಬೆಳಗ್ಗೆ 11 ಗಂಟೆಗೆ ನಗರದ ಕೆ.ವಿ.ಎಸ್. ಸಭಾಂಗಣದಲ್ಲಿ ಜಿ. ಎಸ್. ಬೊಮ್ಮೇಗೌಡ ಸಹಕಾರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮಾಜಿ ಶಾಸಕ ಜಿ.ಬಿ. ಶಿವಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಸಮಾರಂಭದ ಅಧ್ಯಕ್ಷತೆ ವಹಿಸುವರು. ಮೈಸೂರು ವಿವಿ ಪ್ರಸಾರಾಂಗದ ವಿಶ್ರಾಂತ ನಿರ್ದೇಶಕ ಕೆ.ಟಿ. ವೀರಪ್ಪ ಪ್ರಶಸ್ತಿ ಪ್ರದಾನ ಮಾಡುವರು ಎಂದರು. ರಾಜ್ಯ ಮಟ್ಟದ ಸಹಕಾರಿ ಕೆ.ಲಲಿತಾ ಅವರು ಜಿ.ಎಸ್. ಬೊಮ್ಮೇಗೌಡ ಸಹಕಾರ ಪ್ರಶಸ್ತಿ ಸ್ವೀಕರಿಸುವರು. ದಕ್ಷಿಣದ ಜಿ.ಬಿ. ಶಿವಕುಮಾರ್ ಸಮಾರಂಭದಲ್ಲಿ ಭಾಗವಹಿಸುವರು ಎಂದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಮಾತನಾಡಿ, ಮಾ. 21ರಂದು ಬೆಳಗ್ಗೆ 10.30ಕ್ಕೆ ನಗರದ ಕೆ.ವಿ.ಎಸ್. ಶತಮಾನೋತ್ಸವ ಭವನದಲ್ಲಿ ಮಹಿಳಾ ದಿನಾಚರಣೆ ನಡೆಯಲಿದ್ದು, ಜಾಗೃತಿ ಜಾಥಾ, ಹೋರಾಟದ ಹಾಡುಗಳು, ಬೀದಿ ನಾಟಕ ಹಾಗೂ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು. ಮಹಿಳಾ ದೌರ್ಜನ್ಯ ವಿರೋಧಿ ಜಾಥಾಗೆ ವೀಣಾ ಶ್ರೀಕಂಠೇಗೌಡ, ಕೆ.ಟಿ. ಶ್ರೀಕಂಠೇಗೌಡ ಚಾಲನೆ ನೀಡುವರು.

ಗುಡುಗು ಸಹಿತ ಭರ್ಜರಿ ಮಳೆ | ತಗ್ಗು ಪ್ರದೇಶದಲ್ಲಿ ನಿಂತ ನೀರು | ವಾಹನ ಸಂಚಾರಕ್ಕೆ ಅಡ್ಡಿ

(1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 16.03.2026 ರಿಂದ 06.04.2026 ರವರೆಗೆ ಸಂಜೆ 17.30 ಗಂಟೆಗೆ. (2) ಪ್ರಿ ಬಿಡ್ ಮೀಟಿಂಗ್ : 02.04.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 08.04.2026 ರಂದು 17.30 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority** (5) ಕಾಲಾವಧಿ : 18 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 36.52 ಕೋಟಿಗಳು 7) ಇಎಂಡಿ ಮೊತ್ತ : ರೂ. 0.36 ಕೋಟಿಗಳು.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜಿನೀಯರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.
ವಾ.ಸಾ.ಸಂ/ಡಿ/ಶಿ/ಸಂ.106-03/ದೇಂತಾಂ/2025-26

ನಗರಸಭಾ ಕಾರ್ಯಾಲಯ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.
Website: www.gowribidanurtown.gov.in
Email: ka.gouribidanur.cmc@gmail.com

ಸಂಖ್ಯೆ: ನಸಗೌ/ಆಡಳಿತ/ಟೆಂಡರ್/ಆರ್‌ಒ-06/2025-26 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅನುಭವಿ ಸರ್ಕಾರೇತರ ಸಂಸ್ಥೆಗಳಿಂದ/ಕಂಪನಿಗಳಿಂದ/ ಏಜನ್ಸಿಗಳಿಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.03.2026ರ ಸಂಜೆ 5.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ: **01.04.2026ರ ಸಂಜೆ 5.15 ಗಂಟೆಗೆ.**

ಕ್ರ ಸಂ	ಕಾಮಗಾರಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)
	ನಗರಸಭಾ ನಿಧಿ	
1	ಗೌರಿಬಿದನೂರು ನಗರಸಭೆಯ ಘನತ್ಯಾಜ್ಯ ನಿರ್ವಹಣೆ ಅಡಿಯಲ್ಲಿ ಖಾಯಂ ಹಾಗೂ ಹೊರ ಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವುದು	12.70

ಸಹಿ/- ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:491/ಕೆ.ಎಸ್.ಎಂ.ಸಿ.ಎ/2025-26

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ: ಉನಸ:ಬಿ4:ಸಿ.ಆರ್. :2025-26 ದಿನಾಂಕ : 18.03.2026

ಟೆಂಡರು ಪ್ರಕಟಣೆ

2025-26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W.-1 & K.W.-2 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್ ಸೈಟ್ https://kppp.karntaka.gov.in ನಿಂದ ಪಡೆದುಕೊಳ್ಳಬಹುದು.
1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 01.04.2026 ಸಂಜೆ 5.00 ಗಂಟೆಗೆ. 2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 02.04.2026 ಸಂಜೆ 5.01 ಗಂಟೆಗೆ

ಕ್ರ.ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1	1 DMA/2025-26/WS/WORK_INDENT 56560	495000.00	12375.00	2 ತಿಂಗಳು
2	2 DMA/2025-26/OW/WORK_INDENT56422	3690000.00	73800.00	2 ತಿಂಗಳು
3	3 DMA/2025-26/OW/WORK_INDENT56423	480000.00	12000.00	2 ತಿಂಗಳು

ಸಹಿ/- ಪೌರಾಯುಕ್ತರು
ಉಡುಪಿ ನಗರಸಭೆ

ಜಿಲ್ಲಾ ನಿರ್ಮಿತಿ ಕೇಂದ್ರ ಉತ್ತರಕನ್ನಡ, ಕಾರವಾರ
ಕಡಿಮೆ ವೆಚ್ಚದ ಕಟ್ಟಡ ಸಾಮಗ್ರಿಗಳ ಹಾಗೂ ತಾಂತ್ರಿಕತೆಯ ವರ್ಗಾವಣೆ ಕೇಂದ್ರ
ZILLA NIRMITHI, KENDRA, KARWAR
Cost Effective Building Materials & Technology Transfer Centre
(PROMOTED BY HUDCO & Govt. OF KARNATAKA)

Chairman
Deputy Commissioner,
Karwar-581301. Uttara Kannada

Executive Chairman.
Chief Executive Officer, Zilla Panchayat
Karwar-581301, Uttara Kannada

ನಂ:ಜಿನಿಕೇ/ಉ.ಕ/ಇ-ಟೆಂಡರ /2025-26/927 ದಿ : 17-03-2026

ಟೆಂಡರ ಪ್ರಕಟಣೆ

ಜಿಲ್ಲಾ ನಿರ್ಮಿತಿ ಕೇಂದ್ರ ಉತ್ತರ ಕನ್ನಡ ಕಚೇರಿಯಿಂದ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಕಾಮಗಾರಿಗಾಗಿ ಟೆಂಡರ ಪ್ರಕಟಣೆ

ಜಿಲ್ಲಾ ನಿರ್ಮಿತಿ ಕೇಂದ್ರ, ಉತ್ತರ ಕನ್ನಡ ಕಚೇರಿಗೆ ಅನುಮೋದನೆಗೊಂಡ ಈ ಕೆಳಗಿನ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರ ಆಯ್ಕೆ ಮಾಡಲು ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಕರೆಯಲಾಗಿದ್ದು, ಭಾಗವಹಿಸುವವರು ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸಿ ಕೆ.ಪಿ.ಪಿ.ಪಿ ಮೂಲಕ ಮಾತ್ರ ಬಿಡ್‌ನ್ನು ಸಲ್ಲಿಸುವುದು.

ಟೆಂಡರ್ ನಮೂದಿಸಿರುವ ಸಂಖ್ಯೆ	ಕಾಮಗಾರಿಗಳ ವಿವರ	ಟೆಂಡರ್ ಗಿಟ್ಟ ಮೊತ್ತ (ಜಿ. ಎಸ್. ಟಿ.ಹೊರತುಪಡಿಸಿ)
ZNK/2025-26/IND0012	ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಹಳಿಯಾಳ ಪಟ್ಟಣದ ಸರ್ಕಾರಿ ಶಿವಾಜಿ ಪದವಿ ಪೂರ್ವ ಕಾಲೇಜಿಗೆ ಡೆಸ್ಕ್ & ಬೆಂಚುಗಳ ನೀಡಿಕೆ ಕಾಮಗಾರಿ	1,69,440.00
ZNK/2025-26/RD/WORKINDENT9	ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಜಗಲಬೇಟ ಗ್ರಾಮ ಪಂಚಾಯತ ವ್ಯಾಪ್ತಿಯ ತಿಂಬೋಲಿ ಗ್ರಾಮದ ಪಾಟೀಲವಾಡ ಗ್ರಾಮ ವ್ಯಾಪ್ತಿಯ ರಸ್ತೆ ಖಡೀಕರಣ ಕಾಮಗಾರಿ	4,22,992.25
ZNK/2025-26/IND0013	ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನಲ್ಲಿರುವ ಭೂಸ್ವಾಧೀನಾಧಿಕಾರಿ ಕಚೇರಿಯಲ್ಲಿ ಮೊಬೈಲ್ ಫೈಲ್ ಕಾಂಪಾಕ್ಟರ್ ಶೇಖರಣಾ ವ್ಯವಸ್ಥೆಯ ಪೂರೈಕೆ ಮತ್ತು ಸ್ಥಾಪನೆ ಕಾಮಗಾರಿ	19,84,000.00

ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಗಳು/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	01-04-2026: 16.00.00
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	04-04-2026: 17.30.00
ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	06-04-2026: 11.30.00
ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	07-04-2026: 11.30.00

ಮೇಲಿನ ಟೆಂಡರ್‌ಗಳಿಗೆ ಸಂಬಂಧಪಟ್ಟ ಇ-ಪ್ರೋಕ್ಯೂರ್‌ಮೆಂಟ್ ನಿಬಂಧನೆಗಳನ್ನು ಇರುವ ನಿಬಂಧನೆಗಳನ್ನು ಇಲಾಖಾ ವೆಬ್ ಸೈಟ್: http:// kppp.karnataka.gov.in ರಲ್ಲಿ ನೋಡಬಹುದು, ಹೆಚ್ಚಿನ ಮಾಹಿತಿಗಾಗಿ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ, ಸಬ್ ರಜಿಸ್ಟರ್ ಕಚೇರಿ ಹಿಂದುಗಡೆ, ಆಜಾದ ಕೆರೆ ಪಕ್ಕದಲ್ಲಿ, ಉತ್ತರ ಕನ್ನಡ, ಕಾರವಾರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: (08382) 223184.

-ಸಹಿ ಇದೆ-
ಯೋಜನಾ ವ್ಯವಸ್ಥಾಪಕರು,
ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ, ಉತ್ತರ ಕನ್ನಡ



ಇಸ್ರೇಲ್ ವಿರುದ್ಧ ಪ್ರತೀಕಾರ ಇರಾನ್‌ನಿಂದ ಕ್ಷಿಪಣಿ ಸುರಿಮಳೆ

• **ದುಬೈ:** ಇಸ್ರೇಲ್ ನಡೆಸಿದ ಸರಣಿ ಹತ್ಯೆಗಳಿಗೆ ಪ್ರತಿಯಾಗಿ ಇರಾನ್ ಬುಧವಾರ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ತೀವ್ರ ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಪ್ರಭಾವಿ ನಾಯಕ ಅಲಿ ಲಾರಿಜಾನಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಹತರಾದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕ್ಷಿಪಣಿ ದಾಳಿ ಮತ್ತು ಸಾವು-ನೋವು: ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೇಂದ್ರ ಇಸ್ರೇಲ್ ಅನ್ನು ಗುರಿಯಾಗಿಸಿ 'ಖೋರಮ್‌ಶಹರ್ 4' ಮತ್ತು ಖಾದರ್ ಎಂಬ ಸುಧಾರಿತ ಮಲ್ಟಿ-ವಾರ್‌ಹೆಡ್ ಕ್ಷಿಪಣಿಗಳನ್ನು ಉಡಾಯಿಸಿದೆ. ಈ ದಾಳಿಯಿಂದಾಗಿ ಟೆಲ್ ಅವಿವ್ ಸಮೀಪದ ರಾಮತ್ ಗನ್‌ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಇಸ್ರೇಲಿ ವೈದ್ಯಕೀಯ ಮೂಲಗಳು ದೃಢಪಡಿಸಿವೆ. ಇರಾನ್‌ನ ಈ ಕ್ಷಿಪಣಿಗಳು ವಾಯು ರಕ್ಷಣಾ ವ್ಯವಸ್ಥೆಗಳನ್ನು ಭೇದಿಸುವ ಸಾಮರ್ಥ್ಯ ಹೊಂದಿದ್ದು, ಇಸ್ರೇಲ್‌ನಾದ್ಯಂತ ತೀವ್ರ ಆತಂಕ ಸೃಷ್ಟಿಸಿದೆ.

ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ: ಇಸ್ರೇಲ್ ಮಾತ್ರವಲ್ಲದೆ, ಇರಾನ್ ತನ್ನ ನೆರೆಯ ಗಲ್ಫ್ ರಾಷ್ಟ್ರಗಳಾದ ಸೌದಿ ಅರೇಬಿಯಾ, ಕುವೈತ್, ಯುಎಇ, ಬಹ್ರೇನ್ ಮತ್ತು ಕತಾರ್ ಮೇಲೆಯೂ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ನಡೆಸಿದೆ. ಸೌದಿ ಅರೇಬಿಯಾದ ತೈಲ ಸಮೃದ್ಧ ಪೂರ್ವ ಪ್ರಾಂತ್ಯ ಮತ್ತು ಅಮೆರಿಕದ ನೆಲೆ ಇರುವ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಅನ್ನು ಗುರಿಯಾಗಿಸಲಾಗಿತ್ತು. ದುಬೈ ಸಮೀಪದ ಆಸ್ಟ್ರೇಲಿಯಾದ ಸೇನಾ ನೆಲೆಯಲ್ಲೂ ಸ್ಫೋಟಗಳು ಸಂಭವಿಸಿದ್ದು, ಸಣ್ಣ ಮಟ್ಟದ ಬೆಂಕಿ ಕಾಣಿಸಿಕೊಂಡಿದೆ.


ಕ್ಷಿಪಣಿ ಅವಶೇಷ ಬಿದ್ದು 3 ಇಸ್ರೇಲಿ ವಿಮಾನಕ್ಕೆ ಹಾನಿ: ಇರಾನ್ ಕ್ಷಿಪಣಿಗಳಿಂದಾಗಿ ಟೆಲ್ ಅವೀವ್‌ನ ಬೆನ್ ಗುರಿಯನ್ ವಿಮಾನ ನಿಲ್ದಾಣದಲ್ಲಿ ನಿಲುಗಡೆಗೊಳಿಸಿದ್ದ ಮೂರು ಖಾಸಗಿ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ವಿಮಾನ ನಿಲ್ದಾಣ ಪ್ರಾಧಿಕಾರ ಬುಧವಾರ ದೃಢೀಕರಿಸಿವೆ. ಇರಾನ್ ಕ್ಷಿಪಣಿಗಳ ಅವಶೇಷ ಬಿದ್ದಿದ್ದರಿಂದ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಹಾರ್ಮುಜ್‌ನತ್ತ ಭಾರತದ ಹೆಚ್ಚುವರಿ ಯುದ್ಧನೌಕೆಗಳು

ಇರಾನ್ ಇನ್ನಷ್ಟು ಭಾರತೀಯ ತೈಲ ಟ್ಯಾಂಕರ್‌ಗಳಿಗೆ ಅನುಮತಿ ನೀಡುವ ಸಾಧ್ಯತೆ ಹಿನ್ನೆಲೆ ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತದತ್ತ ಸಂಚರಿಸುವ ತೈಲ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸುವುದಕ್ಕಾಗಿ ಗಲ್ಫ್ ಆಫ್ ಒಮನ್ ಮತ್ತು ಅರಬ್ಬಿ ಸಮುದ್ರಕ್ಕೆ ಸುಮಾರು 6ಕ್ಕೂ ಹೆಚ್ಚು ಹೆಚ್ಚುವರಿ ಯುದ್ಧನೌಕೆಗಳನ್ನು ಭಾರತೀಯ ವಾಯುಪಡೆ ಕಳುಹಿಸಿಕೊಟ್ಟಿದೆ. ಇವುಗಳೊಂದಿಗೆ ಸರಕು ಹಡಗುಗಳನ್ನೂ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲೆಬನಾನ್‌ನಲ್ಲಿ ಸಂಘರ್ಷ ಮತ್ತು ಸ್ಥಳಾಂತರ

ಇತ್ತ ಇಸ್ರೇಲ್ ತನ್ನ ದಾಳಿಯನ್ನು ಲೆಬನಾನ್ ಮೇಲೆಯೂ ತೀವ್ರಗೊಳಿಸಿದೆ. ಬುಧವಾರ ಬೆಳಗ್ಗೆ ಯಾವುದೇ ಮುನ್ಸೂಚನೆ ನೀಡದೆ ಮಧ್ಯ ಬೈರುತ್‌ನ ವಸತಿ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದ್ದು, ಕನಿಷ್ಠ 12 ಜನರು ಮೃತಪಟ್ಟಿದ್ದಾರೆ. ಫೆಬ್ರವರಿ 28 ರಿಂದ ಆರಂಭವಾದ ಈ ಸಂಘರ್ಷದಲ್ಲಿ ಇದುವರೆಗೆ ಲೆಬನಾನ್‌ನಲ್ಲಿ 912ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಈ ಮಧ್ಯೆ, ಇಸ್ರೇಲ್‌ನ ಮೊಸಾದ್ ಗುಪ್ತಚರ ಸಂಸ್ಥೆಗಾಗಿ ಗೂಢಚರ್ಯೆ ನಡೆಸಿದ ಆರೋಪದ ಮೇಲೆ ಇರಾನ್ ವ್ಯಕ್ತಿಯೊಬ್ಬನನ್ನು ಗಲ್ಲಿಗೇರಿಸಿದೆ ಎಂದು ಅಲ್ಲಿನ ನ್ಯಾಯಾಂಗದ ಮಿಜಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈತ ಇಸ್ರೇಲ್‌ಗೆ ಸೂಕ್ಷ್ಮ ಪ್ರದೇಶಗಳ ಚಿತ್ರಗಳು ಮತ್ತು ಮಾಹಿತಿಗಳನ್ನು ನೀಡಿದ್ದ ಎಂದು ವರದಿಯಲ್ಲಿ ತಿಳಿಸಲಾಗಿದೆ. ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಪ್ರಕಾರ, ಇರಾನ್‌ನ ಬುಶೆಹರ್ ಪರಮಾಣು ಸ್ಥಾವರದ ಮೇಲೆಯೂ ಕ್ಷಿಪಣಿಯೊಂದು ಬಿದ್ದಿದೆ. ಆದರೆ ಯಾವುದೇ ವಿಕಿರಣ ಸೋರಿಕೆ ಅಥವಾ ಹಾನಿ ಸಂಭವಿಸಿಲ್ಲ, ಎಂದು ವರದಿಯಾಗಿದೆ. ಯುದ್ಧವು ಈಗ ನಿರ್ಣಾಯಕ ಹಂತ ತಲುಪಿದ್ದು, ಜಾಗತಿಕ ಸಮುದಾಯವು ಆತಂಕದಿಂದ ಗಮನಿಸುತ್ತಿದೆ.



ಹಾರ್ಮುಜ್ ಸುರಕ್ಷತೆಗಾಗಿ ಸಹಾಯ ನಿರಾಕರಿಸಿದ ನ್ಯಾಟೋ
ನ್ಯಾಟೋ ವಿರುದ್ಧ ಟ್ರಂಪ್ ಆಕ್ರೋಶ

• **ವಾಷಿಂಗ್ಟನ್:** ಇಡೀ ಜಗತ್ತಿನ ಒಳಿತಿಗಾಗಿ ತಾನು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ಬೆಂಬಲಿಸದೆ ನ್ಯಾಟೋ ಮತ್ತದರ ಮಿತ್ರ ರಾಷ್ಟ್ರಗಳು ಮೂರ್ಖತನದ ಕೆಲಸ ಮಾಡುತ್ತಿವೆ. ನಮಗೆ ಯಾರ ಸಹಾಯವೂ ಬೇಕಾಗಿಲ್ಲ, ಯಾರ ಸಹಾಯವೂ ಇಲ್ಲದೆ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋ ಸದಸ್ಯರ ವಿರುದ್ಧ ಹರಿಹಾಯ್ದಿದ್ದಾರೆ.

ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು, ಅದನ್ನು ಮೊದಲಿನಂತೆ ಸುರಕ್ಷಿತಗೊಳಿಸಲು ಸಹಾಯ ಮಾಡಬೇಕೆಂಬ ನನ್ನ ಮನವಿಯನ್ನು ನ್ಯಾಟೋ ಮತ್ತದರ ಮೈತ್ರಿಕೂಟದ ರಾಷ್ಟ್ರಗಳು ತಿರಸ್ಕರಿಸಿವೆ. ಜಗತ್ತಿನ ಹಿತಕ್ಕಾಗಿ ಇರಾನ್ ವಿರುದ್ಧದ ಯುದ್ಧಕ್ಕೆ ಬೆಂಬಲಿಸುವಂತೆ ಕೋರಿದ್ದರೂ ನ್ಯಾಟೋ ಮೂರ್ಖತನದ ನಿಲುವು ತೆಗೆದುಕೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಮಂಗಳವಾರ ಹತಾಶೆ ವ್ಯಕ್ತಪಡಿಸಿದ್ದಾರೆ. ನಮಗೆ ಯಾರ ಸಹಾಯದ ಅಗತ್ಯವಿಲ್ಲ. ನಮ್ಮಿಂದ ಸಹಾಯ ಪಡೆದವರು ನಮಗೆ ಸಹಾಯ ಮಾಡಲು ಸಿದ್ಧರಿಲ್ಲ. ನಾವು ಅಮೆರಿಕದವರು ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿಗಳು. ನಿಮ್ಮ ಸಹಾಯವಿಲ್ಲದೆಯೂ ಇರಾನ್‌ನ ಭಯೋತ್ಪಾದಕ ಆಡಳಿತದ ವಿರುದ್ಧ ಹೋರಾಡುತ್ತೇವೆ. ಇರಾನ್ ಸೇನೆ, ನೌಕಾಪಡೆ, ವಾಯುಪಡೆ, ವಾಯು ರಕ್ಷಣಾ ವ್ಯವಸ್ಥೆ ಮತ್ತು ನಾಯಕತ್ವ ಸೇರಿ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ.




ಯುಎಇ ಮೇಲಿನ ದಾಳಿ ಖಂಡಿಸಿದ ಮೋದಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ಕುವೈತ್ ದೊರೆ ಶೇಖ್ ಸಬಾ ಅಲ್-ಖಲೀದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾ ಅವರೊಂದಿಗೆ ಮಾತನಾಡಿ, ಪಶ್ಚಿಮ ಏಷ್ಯಾದಲ್ಲಿ ಬದಲಾಗುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು ಮತ್ತು ಪ್ರಾದೇಶಿಕ ಸ್ಥಿರತೆಯ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದರು. ಅವರೊಂದಿಗೆ ಪಶ್ಚಿಮ ಏಷ್ಯಾ ಮತ್ತು ಹಾರ್ಮುಜ್ ಜಲಸಂಧಿಯ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಂಗಳವಾರ ಮಾತುಕತೆ ನಡೆಸಿದ್ದಾರೆ.

ತವರಿಗೆ 80,886 ಟನ್ ತೈಲ ಹೊತ್ತ ಜಗ್ ಲಾಡ್ಕಿ

ಅಹಮದಾಬಾದ್: ಫುಜೈರಾ ಬಂದರಿನ ಮೇಲೆ ಇರಾನ್ ದಾಳಿ ಹಿನ್ನೆಲೆ 80,886 ಟನ್ ಕಚ್ಚಾ ತೈಲ ಹೊತ್ತು ಯುಎಇನಿಂದ ಭಾನುವಾರ ಬೆಳಗ್ಗೆ ಹೊರಟಿದ್ದ ಜಗ್ ಲಾಡ್ಕಿ (ವಿಶ್ವದ ಮಗಳು) ತೈಲ ಟ್ಯಾಂಕರ್ ಹಡಗು ಬುಧವಾರ ಗುಜರಾತ್‌ನ ಮುಂದ್ರಾ ಬಂದರನ್ನು ತಲುಪಿದೆ. ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ದಾಳಿ ನಡೆಸಿದ್ದರಿಂದ ಭಾನುವಾರ ಬೆಳಗ್ಗೆ ಜಗ್ ಲಾಡ್ಕಿ ತೈಲ ಟ್ಯಾಂಕರ್ ಹಡಗು ಫುಜೈರಾ ಬಂದರಿನಿಂದ ಭಾರತದತ್ತ ಹೊರಟಿತ್ತು. ಯುಎಇಯಿಂದ ಇರಾನ್‌ನ ಖಾರ್ಗ್ ದ್ವೀಪದಲ್ಲಿನ ತೈಲ ಸಂಸ್ಕರಣಾ ಘಟಕಗಳ ಮೇಲೆ ಅಮೆರಿಕ ನಡೆಸಿದ ದಾಳಿಗೆ ಪ್ರತೀಕಾರವಾಗಿ ಮಾ.14ರ ಶನಿವಾರ ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ಪ್ರತಿದಾಳಿ ನಡೆಸಿದ್ದಾಗಿ ಒಪ್ಪಿಕೊಂಡಿದೆ. ಇದರಿಂದ ಫುಜೈರಾದಲ್ಲಿ ಕಚ್ಚಾ ತೈಲ ತುಂಬಿಸಿಕೊಳ್ಳುತ್ತಿದ್ದ ಭಾರತೀಯ ತೈಲ ಹಡಗು ಜಗ್ ಲಾಡ್ಕಿ ಭಾನುವಾರ ಬೆಳಗ್ಗೆ ಭಾರತದತ್ತ ಹೊರಟಿತ್ತು. 80,886 ಟನ್‌ಗಳಷ್ಟು ಮುರ್ಬನ್ ಕಚ್ಚಾ ತೈಲವನ್ನು ಹೊತ್ತ ಜಗ್ ಲಾಡ್ಕಿ ಹೊರ್ಮುಜ್ ಜಲಸಂಧಿಯನ್ನು ದಾಟಿ ಬಂದಿದೆ. ಹೊರ್ಮುಜ್ ಜಲಸಂಧಿಯನ್ನು ನಿರಾಯಾಸವಾಗಿ ದಾಟಿ ಭಾರತ ತಲುಪಿದ ಮೂರನೇ ತೈಲ ಹಡಗು ಇದಾಗಿದೆ.



ನಾನು ಜೀವಂತವಾಗಿದ್ದೇನೆ: ನೆತನ್ಯಾಹು

ಹೌದು ಮೈಕ್, ನಾನು ಜೀವಂತವಾಗಿದ್ದೇನೆ ಹೀಗೆಂದು ಇನ್ನೊಂದು ವಿಡಿಯೋ ಹರಿಯಬಿಟ್ಟಿದ್ದಾರೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು. ವಿಡಿಯೋದಲ್ಲಿ ನೆತನ್ಯಾಹು ತಾವು ಜೀವಂತವಾಗಿ ಇರುವುದನ್ನು ಸಾಬೀತುಪಡಿಸಿದ್ದು ಮಾತ್ರವಲ್ಲದೆ, ತಮ್ಮಲ್ಲೊಂದು ಪಂಚ್ ಕಾರ್ಡ್ ಇದೆ. ಅದರಲ್ಲಿ ಇನ್ನೂ ಹಲವು ಇರಾನ್ ನಾಯಕರ ಹೆಸರುಗಳಿವೆ. ಅವರನ್ನು ಹತ್ಯೆಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇರಾನ್ ನಾಯಕ ಅಲಿ ಲರಿಜಾನಿ, ರಾಷ್ಟ್ರೀಯ ಭದ್ರತಾ ಸಮಿತಿ ಮತ್ತು ಇರಾನ್ ಪಡೆಯ ಕಮಾಂಡರ್ ಘೋಲಮ್‌ರೆಜಾ ಸೋಲೈಮಾನಿ ಅವರ ಹತ್ಯೆ ನಡೆಸಿರುವುದಾಗಿ ನೆತನ್ಯಾಹು ಮಂಗಳವಾರ ಹೇಳಿದ್ದರು. ಇಸ್ರೇಲ್‌ನಲ್ಲಿನ ಅಮೆರಿಕ ರಾಯಭಾರಿ ಮೈಕ್ ಹಕ್ಕಬೀ ಅವರ ಜತೆಗಿನ ಮಾತುಕತೆ ವಿಡಿಯೋವನ್ನು ನೆತನ್ಯಾಹು ಹಂಚಿಕೊಂಡಿದ್ದಾರೆ.



ನೆತನ್ಯಾಹುರನ್ನು ವಿಚಾರಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶಿಸಿದ್ದರೆಂಬ ಮೈಕ್ ಮಾತಿಗೆ, ಹೌದು ಮೈಕ್, ನಾನು ಜೀವಂತವಾಗಿದ್ದೇನೆ. ನಾವು ಐದು ಬೆರಳುಗಳಿರುವ ಕೈಗಳಿಂದ ಹಸ್ತಲಾಘವ ಮಾಡಿದ್ದೇವೆ ಎಂದು ನೆತನ್ಯಾಹು ವ್ಯಂಗ್ಯ ಮಾಡಿದ್ದಾರೆ.

ಇದಾದ ನಂತರ ತಮ್ಮ ಜೇಬಿನಿಂದ ಕಾರ್ಡ್‌ವೊಂದನ್ನು ತೆಗೆದ ನೆತನ್ಯಾಹು, ನಾನು ಜೀವಂತವಾಗಿದ್ದೇನೆ, ನನ್ನಲ್ಲಿ ಈ ಪಂಚ್ ಕಾರ್ಡ್ ಇದೆ. ಇದರಿಂದ ಇಬ್ಬರ ಹೆಸರನ್ನು ಅಳಿಸಿಹಾಕಿದ್ದೇನೆ. ಇನ್ನೂ ಹಲವರ ಹೆಸರು ಇದರಲ್ಲಿದೆ ಎಂದು ಇನ್ನೂ ಹಲವು ಇರಾನ್ ನಾಯಕರ ಹತ್ಯೆ ನಡೆಯಲಿದೆ ಎಂದು ಇರಾನ್‌ಗೆ ಎಚ್ಚರಿಕೆ ಸಂದೇಶವನ್ನು ರವಾನಿಸಿದ್ದಾರೆ.

ಕಿರುಸುದ್ದಿ

ನೀತಾ ಅಂಬಾನಿಗೆ ಕಳಿಂಗ ಮಾನವೀಯ ಪ್ರಶಸ್ತಿ

• **ಮುಂಬೈ:** ರಿಲಯನ್ಸ್ ಫೌಂಡೇಷನ್ ಸ್ಥಾಪಕಿ ಹಾಗೂ ಅಧ್ಯಕ್ಷೆ ಆದ ನೀತಾ ಅಂಬಾನಿ ಅವರಿಗೆ ಪ್ರತಿಷ್ಠಿತ ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಕಿಸ್) ಹ್ಯುಮಾನಿಟೇರಿಯನ್ ಪ್ರಶಸ್ತಿ 2025ಕ್ಕೆ ಭಾಜನರಾಗಿದ್ದಾರೆ. ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ ಕ್ಯಾಂಪಸ್ ನಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ನೊಬೆಲ್ ಪ್ರಶಸ್ತಿ ವಿಜೇತರಾದ ಶ್ರೀಲಂಕಾದ ಪ್ರೊ .ಮೋಹನ್ ಮುನಸಿಂಘೆ ಅವರು ಈ ಪ್ರಶಸ್ತಿಯನ್ನು ನೀತಾ ಅಂಬಾನಿಯವರಿಗೆ ನೀಡಿದರು.

ಇರಾನ್‌ಗೆ ವೈದ್ಯಕೀಯ ನೆರವು ರವಾನೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಸಂಘರ್ಷ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಭಾರತ ಇರಾನ್‌ಗೆ ತನ್ನ ಮೊದಲ ಹಂತದ ಮಾನವೀಯ ವೈದ್ಯಕೀಯ ನೆರವನ್ನು ರವಾನಿಸಿದೆ. ಕಷ್ಟ ಕಾಲದಲ್ಲಿ ಬೆಂಬಲ ನೀಡಿದ ಭಾರತದ ಜನತೆಗೆ ಟೆಹ್ರಾನ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದೆ. ಸಾರ್ವಜನಿಕ ದೇಣಿಗೆಗಳನ್ನು ಸುಲಭಗೊಳಿಸಲು ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಅಧಿಕೃತ ಬ್ಯಾಂಕ್ ಖಾತೆ ಸಂಖ್ಯೆಯನ್ನು ಸಹ ಬಿಡುಗಡೆ ಮಾಡಿದೆ.

ಬೋರ್ಡೋಲಾಯಿ ಬಿಜೆಪಿಗೆ ಸೇರ್ಪಡೆ

• **ಗುವಾಹಟಿ:** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬರೇ 20 ದಿನಗಳು ಉಳಿದಿರುವಂತೆ, ಕಾಂಗ್ರೆಸ್ ಸಂಸದ ಪ್ರದ್ಯುತ್ ಬೋರ್ಡೋಲಾಯಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಚುನಾವಣೆ ಕಾವಿನ ಮಧ್ಯೆ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಡೆತ

ಮಿತಿಮೀರಿದ ಬೇಸರದಿಂದ ತಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಎಲ್ಲಾ ಹುದ್ದೆಗಳು, ಬಾಧ್ಯತೆಗಳು ಮತ್ತು ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಬೋರ್ಡೋಲಾಯಿ, ಖರ್ಗೆ ಅವರಿಗೆ ಸಲ್ಲಿಸಿರುವ ಒಂದು ವಾಕ್ಯದ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಭೂಪೆನ್ ಕುಮಾರ್ ಬೋರಾ ಎಪಿಸಿಸಿ ಅಧ್ಯಕ್ಷ ಗಾದಿಗೆ ರಾಜೀನಾಮೆ ನೀಡಿ ಆಳುವ ಬಿಜೆಪಿಗೆ ಸೇರಿದ ವಿದ್ಯಮಾನದ ಬೆನ್ನಲ್ಲೇ, ತಿಂಗಳವಧಿಯಲ್ಲಿ ಬೋರ್ಡೋಲಾಯಿ ಅವರೂ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ಎಪಿಸಿಸಿಯ ಇನ್ನೋರ್ವ ಹಿರಿಯ ನಾಯಕ , ಬೋರ್ಡೋಲಾಯಿ ಅವರ ನಿಕಟವರ್ತಿ ನಬಜ್ಯೋತಿ ತಾಲುಕ್‌ದಾರ್ ಕೂಡ ಮಂಗಳವಾರ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ. ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೊಗೊಯ್-ಜೋರ್ಹಟ್, ಬೋರ್ಡೋಲಾಯಿ ಮತ್ತು ರಕಿಬುಲ್ ಹುಸೇನ್ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಂದಿರುವ ಮೂವರು ಸಂಸದರು. ಇದೀಗ ಬೋರ್ಡೋಲಾಯಿ ರಾಜೀನಾಮೆಯಿಂದ ಅಸ್ಸಾಂನಲ್ಲಿ ಕಾಂಗ್ರೆಸ್ ಸಂಸದ ಬಲ ಎರಡಕ್ಕಿಳಿದಿದೆ.

ಇಡಿ ದಾಳಿ ವೇಳೆ ಸಿಎಂ ನುಗ್ಗಿದರೆ ಕಥೆ ಏನು?

• **ಹೊಸದಿಲ್ಲಿ:** ಐಪ್ಯಾಕ್ ಕಚೇರಿ ಮೇಲಿನ ದಾಳಿ ವೇಳೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನುಗ್ಗಿ ಹೋದ ಘಟನೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಮುಂದೆ ಬೇರೊಬ್ಬ ಮುಖ್ಯಮಂತ್ರಿಯೂ ಇದೇ ರೀತಿ ನುಗ್ಗಿ ಹೋದರೆ ಏನು ಮಾಡುವುದು ಎಂದು ಪ್ರಶ್ನಿಸಿದೆ.

» ಮಮತಾ-ಐಪ್ಯಾಕ್ ಪ್ರಕರಣದಲ್ಲಿ ಸುಪ್ರೀಂ ಗಂಭೀರ ಪ್ರಶ್ನೆ


ಇದು ಖುಷಿಯ ಸಂಗತಿ ಅಲ್ಲವೇ ಅಲ್ಲ ಎಂದಿರುವ ಕೋರ್ಟ್, ಇಂಥ ಅಸಮಾನ್ಯ ಸಂದರ್ಭಗಳಲ್ಲಿ ಕೇಂದ್ರ ತನಿಖಾ ಸಂಸ್ಥೆ ಏನು ಮಾಡಬೇಕು ಎಂಬಂಥ ಸ್ಥಿತಿ ಉದ್ಭವವಾಗಲಿದೆ ಎಂದಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು, 'ನಾಳೆ ಮತ್ತೊಬ್ಬ ಮುಖ್ಯಮಂತ್ರಿ ಇದೇ ರೀತಿಯಲ್ಲಿ ದಾಳಿಗೆ ನುಗ್ಗಿದರೆ ಏನು? ಆಗ ಇಡಿ ಕೈಕಟ್ಟಿ ಕುಳಿತುಕೊಳ್ಳಬೇಕೇ?' ಎಂದು ಗಂಭೀರವಾಗಿ ಪ್ರಶ್ನಿಸಿತು.

ಇಡಿ ತನ್ನ ಅರ್ಜಿಯಲ್ಲಿ, ಐಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ನಿವಾಸ ಮತ್ತು ಕಚೇರಿಗಳಲ್ಲಿ ನಡೆದ ದಾಳಿಯ ವೇಳೆ ಮುಖ್ಯಮಂತ್ರಿ ಬ್ಯಾನರ್ಜಿ ಲ್ಯಾಪ್‌ಟಾಪ್, ಮೊಬೈಲ್ ಮತ್ತು ಕೆಲವು ದಾಖಲೆಗಳನ್ನು ತೆಗೆದುಕೊಂಡು ಹೊರಟಿದ್ದಾರೆ ಎಂದು ಆರೋಪಿಸಿದೆ. ಇದನ್ನು ಅಧಿಕಾರದ ದುರುಪಯೋಗ ಎಂದು ಇಡಿ ಆಪಾದಿಸಿದೆ. ಈ ವೇಳೆ ಮುಖ್ಯಮಂತ್ರಿ ಕೇಂದ್ರ ಸಂಸ್ಥೆಯ ಕಾರ್ಯಕ್ಕೆ ಅಡ್ಡಿಯಾದರೆ ಅದರ ಪರಿಹಾರ ಯಾರು ನೀಡುತ್ತಾರೆ?'' ಎಂದು ನ್ಯಾಯಮೂರ್ತಿ ಮಿಶ್ರಾ ಪ್ರಶ್ನಿಸಿದ್ದಾರೆ. ಮುಂದಿನ ವಿಚಾರಣೆಯನ್ನು ಮಾ.24ಕ್ಕೆ ಮುಂದೂಡಲಾಗಿದೆ.

ರಾಷ್ಟ್ರಪತಿ ಸ್ವಾಗತಕ್ಕೆ ಸಜ್ಜಾದ ರಾಮ ನಗರಿ
ಅಯೋಧ್ಯೆಗೆ ಇಂದು ಮುರ್ಮು ಭೇಟಿ

• **ಅಯೋಧ್ಯೆ:** ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸಲಿದ್ದಾರೆ. ಗುರುವಾರ ಬೆಳಗ್ಗೆ 9 ಗಂಟೆಗೆ ದಿಲ್ಲಿಯಿಂದ ಹೊರಟು 10:15 ಕ್ಕೆ ಅಯೋಧ್ಯೆಯ ಮಹರ್ಷಿ ವಾಲ್ಮೀಕಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲ್ಲಿದ್ದು, ಅಲ್ಲಿಂದ ನೇರವಾಗಿ ಶ್ರೀ ರಾಮ ಜನ್ಮಭೂಮಿ ಮಂದಿರಕ್ಕೆ ತೆರಳಲಿದ್ದಾರೆ. ಶ್ರೀ ರಾಮರ ವಿಶೇಷ ದರ್ಶನ ಮತ್ತು ಆರತಿಯ ನಂತರ ಶ್ರೀ ರಾಮ ಜನ್ಮಭೂಮಿಯ ಆವರಣದಲ್ಲಿರುವ ಮಂದಿರಗಳ ದರ್ಶನವನ್ನು ಪಡೆಯಲಿದ್ದಾರೆ. ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪಿಸಿದ ನಂತರ ಪ್ರಥಮ ಮಹಡಿಯಲ್ಲಿರುವ ರಾಮ ಪರಿವಾರದ ಆರತಿ ದರ್ಶನ ಪಡೆದು, ಮಧ್ಯಾಹ್ನ 12:30 ರಿಂದ 1:15 ರವರಗೆ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ವಿಶೇಷ ಆಹ್ವಾನಿತರ ಸಭೆಯಲ್ಲಿ ಭಾಗವಹಿಸಿದ ನಂತರ ಸಪ್ತ ಮಂದಿರಗಳ ದರ್ಶನವನ್ನು ಪಡೆದು ಅಯೋಧ್ಯೆಯಿಂದ ನಿರ್ಗಮಿಸಲಿದ್ದಾರೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರು: ಉತ್ತರ ಪ್ರದೇಶ ಹಾಗೂ ಉತ್ತರಾಖಂಡನ ಸಂಘ ಪರಿವಾರದ ಹಿತೈಷಿಗಳು,ಕರಸೇವಕರು, ಶ್ರೀ ರಾಮ ಜನ್ಮಭೂಮಿ ಮಂದಿರದ ನಿರ್ಮಾಣ ಕಾರ್ಯದಲ್ಲಿ ಸೇವೆಯನ್ನು



ಸಲ್ಲಿಸಿದ ಕಟ್ಟಡ ಕಾರ್ಮಿಕರು, ಗುತ್ತಿಗೆದಾರರು, ಮಾತಾ ಅಮೃತಾನಂದಮಯಿ ಅವರ ಒಂದು ಸಾವಿರ ಜನ ಶಿಷ್ಯರು ಸೇರಿದಂತೆ ಈ ಕಾರ್ಯದಲ್ಲಿ ಏಳು ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ.

ವಿಶೇಷ ದರ್ಶನ, ಗಾಲಿ ಕುರ್ಚಿ ವ್ಯವಸ್ಥೆ ಸ್ಥಗಿತ: ಪ್ರತಿ ದಿನದಂತೆ ಸಾರ್ವಜನಿಕ ದರ್ಶನಕ್ಕೆ ಅವಕಾಶವಿದ್ದು, ಬೆಳಗ್ಗೆಯಿಂದ ಸಾಯಂಕಾಲ 5 ಗಂಟೆಯವರೆಗೂ ವಿಶೇಷ ದರ್ಶನ ಹಾಗೂ ಗಾಲಿ ಕುರ್ಚಿ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ತಿಳಿಸಿದೆ.

ರಾಜ್ಯಸಭೆಯಿಂದ ನಿವೃತ್ತ 59 ಸದಸ್ಯರಿಗೆ ಪ್ರಧಾನಿ ಮೋದಿ ಶುಭ ಹಾರೈಕೆ
ಸಂಸತ್ ಮುಕ್ತ ವಿಶ್ವವಿದ್ಯಾಲಯವಿದ್ದಂತೆ

• **ಹೊಸದಿಲ್ಲಿ:** ಸಂಸತ್ತು ಒಂದು ಮುಕ್ತ ವಿಶ್ವವಿದ್ಯಾಲಯವಿದ್ದಂತೆ. ರಾಜನೀತಿಯಲ್ಲಿ ಪೂರ್ಣ ವಿರಾಮ ಎಂಬುದಿಲ್ಲ. ರಾಷ್ಟ್ರೀಯ ಬದುಕಿನಲ್ಲಿ ಸದಾ ಸಕ್ರಿಯರಾಗಿರಿ ಎಂದು ಏಪ್ರಿಲ್-ಜುಲೈ ನಡುವಣ ಅವಧಿಯಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಲಿರುವ ಜೆಡಿಎಸ್ ಹಿರಿಯ ನಾಯಕ, ಮಾಜಿ ಪ್ರಧಾನಿ ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಪವಾರ್ ಸಹಿತ 59 ಸಂಸತ್ ಸದಸ್ಯರಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ ಮತ್ತವರ ಕೊಡುಗೆಗಳನ್ನು ರಾಜ್ಯಸಭೆಯಲ್ಲಿನ ದ್ವೈವಾರ್ಷಿಕ ವಿದಾಯಕೂಟದಲ್ಲಿ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.



ಮೂವರು ಬಲಿಷ್ಠ ನಾಯಕರ ನಿಷ್ಠೆಗೆ ಪ್ರಶಂಸೆ: ತಮ್ಮ ಬದುಕಿನ ಅರ್ಧಕ್ಕೂ ಮೀರಿ ಅವಧಿಯನ್ನು ಸಂಸದೀಯ ಕಲಾಪಗಳಿಗೆ ವ್ಯಯಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಶರದ್ ಪವಾರ್ ಬಲಿಷ್ಠ ನಾಯಕರು ಎಂದು ವಿಶೇಷವಾಗಿ ಪ್ರಶಂಸಿಸಿದರು. ತುಂಬು ಸ್ಫೂರ್ತಿ ಮತ್ತು ಸಮರ್ಪಣಾ ಭಾವದಿಂದ ಈ ನಾಯಕರು ಸದನದ ಕಲಾಪಗಳಿಗೆ ನಿರಂತರವಾಗಿ ಹಾಜರಾಗುತ್ತಿದ್ದ ಪರಿ ನಿಜಕ್ಕೂ ಅನುಕರಣೀಯ. ಎಲ್ಲಾ ಹೊಸ ಸಂಸದರಿಗೆ ಪ್ರೇರಣಾದಾಯಿ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗೃತಿ ಮೂಡಿಸುತ್ತಿದ್ದ ಹರಿವಂಶ್‌ಗೆ ನಮನ: ರಾಜ್ಯಸಭೆಯ ನಿರ್ಗಮನ ಅಧ್ಯಕ್ಷ ಹರಿವಂಶ್ ಅವರಿಗೆ ಪ್ರಧಾನಿ ಮೋದಿ ನಮನ ಸಲ್ಲಿಸಿದರು.

ಪಕ್ಷ ಭೇದ ಮರೆತು ವಿದಾಯ: ನಿವೃತ್ತರಾಗುತ್ತಿರುವ ತಮ್ಮ ಸಹೋದ್ಯೋಗಿಗಳಿಗೆ ರಾಜ್ಯಸಭಾ ಸದಸ್ಯರು ಬುಧವಾರ ಪಕ್ಷ ಭೇದ ಮರೆತು ವಿದಾಯ ಕೋರಿದರು ಮತ್ತು ನಿರ್ಗಮನ ಸದಸ್ಯರು ಮುಂದೆಯೂ ಸಾರ್ವಜನಿಕ ಬದುಕಲ್ಲಿ ನಿರಂತರ ಸೇವೆ ಸಲ್ಲಿಸಲಿರುವ ಭರವಸೆ ವ್ಯಕ್ತಪಡಿಸಿದರು.ನಿರ್ಗಮನ ಸದಸ್ಯರ ಪೈಕಿ ಬಹುತೇಕರು ತಮ್ಮ ಆರು ವರ್ಷಗಳ ಸೇವಾವಧಿಯಲ್ಲಿ ರಾಜ್ಯಸಭೆಯ ಮೂವರು ಅಧ್ಯಕ್ಷರಾದ ಎಂ.ವೆಂಕಯ್ಯ ನಾಯ್ಡು, ಜಗದೀಪ್ ಧನ್ಕರ್ ಮತ್ತು ಹಾಲಿ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವಧಿಯಲ್ಲೂ ಸೇವೆ ಸಲ್ಲಿಸಿದವರು ಎಂದು ಗಮನ ಸೆಳೆದರು.

ಖರ್ಗೆ ಹೇಳಿಕೆಗೆ ಸದನದಲ್ಲಿ ನಗೆ: ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ನಿವೃತ್ತಿ ಹೊಂದುತ್ತಿರುವ ಸದಸ್ಯರಿಗೆ ವಿದಾಯ ಹೇಳುವ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ಬಗ್ಗೆ ಖರ್ಗೆ ಅವರು ಪ್ರೇಮ್ ಹುಮಾರೆ ಸಾಥ್, ಶಾದಿ ಮೋದಿ ಜಿ ಕೆ ಸಾಥ್' (ನಮ್ಮೊಂದಿಗೆ ಪ್ರೀತಿ ಮಾಡಿದರು, ಆದರೆ ಪ್ರಧಾನಿ ಮೋದಿ ಅವರೊಂದಿಗೆ ಮದುವೆಯಾದರು) ಎಂಬ ಹೇಳಿಕೆ ನೀಡಿದ್ದಾರೆ. ಇದು ಇಡೀ ಸದನವನ್ನೇ ನಗೆಗಡಲಲ್ಲಿ ತೇಲುವಂತೆ ಮಾಡಿತು.

ಪ್ರತ್ಯೇಕ ಬೆಂಕಿ ಅವಘಡದಲ್ಲಿ 17 ಮಂದಿ ಸಾವು

ಇಂದೋರ್‌ನಲ್ಲಿ ಇವಿ ಸ್ಫೋಟ: ಭೀಕರ ಬೆಂಕಿಗೆ ಎಂಟು ಬಲಿ

• **ಇಂದೋರ್:** ಮೂರು ಅಂತಸ್ತಿನ ಮನೆಯಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ,. ಮನೆಯ ಹೊರಗೆ ಚಾರ್ಜ್ ಮಾಡಲಾಗುತ್ತಿದ್ದ ಎಲೆಕ್ಟ್ರಿಕ್ ವಾಹನ (ಇವಿ) ಸ್ಫೋಟಗೊಂಡಿದ್ದರಿಂದ ಈ ಬೆಂಕಿ ಕಾಣಿಸಿಕೊಂಡಿದೆ. ಮನೆಯ ಒಳಗಿದ್ದ ಗ್ಯಾಸ್ ಸಿಲಿಂಡರ್ ಕೂಡ ಸ್ಫೋಟಗೊಂಡಿದ್ದರಿಂದ ಜ್ವಾಲೆ ಕ್ಷಣಾರ್ಧದಲ್ಲಿ ಎಲ್ಲಾ ಮಹಡಿಗಳಿಗೆ ವ್ಯಾಪಿಸಿದೆ. ಮನೆಯ ಬಾಗಿಲುಗಳಿಗೆ ಎಲೆಕ್ಟ್ರಾನಿಕ್ ಲಾಕ್‌ಗಳಿದ್ದ ಕಾರಣ ಪೊಲೀಸರು ಒಳ ಪ್ರವೇಶಿಸಲು ಆರಂಭದಲ್ಲಿ ವಿಳಂಬವಾಗಿದೆ. ನಂತರ ಬಾಗಿಲು ಮುರಿದು ಸಿಲುಕಿಕೊಂಡಿದ್ದ ಮೂವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಒಬ್ಬರು ಮೃತಪಟ್ಟಿದ್ದಾರೆ. ಘಟನಾ ಸ್ಥಳದಿಂದ 7 ಮೃತ ದೇಹಗಳನ್ನು ವಶಪಡಿಸಿಕೊಂಡು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ಘಟನೆಯ ಕುರಿತು ಪ್ರಧಾನಿ ಮೋದಿ ಎಕ್ಸ್ ನಲ್ಲಿ ಪ್ರತಿಕ್ರಿಯಿಸಿದ್ದು, ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು ಎಂದಿದ್ದಾರೆ. ಮೃತರ ಕುಟುಂಬದವರಿಗೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50,000 ರೂ.ಗಳ ಪರಿಹಾರ ಘೋಷಿಸಲಾಗಿದೆ. ವಾಹನದಲ್ಲಿ ಉಂಟಾದ ತಾಂತ್ರಿಕ ವೈಫಲ್ಯದ ಬಗ್ಗೆ ಅಧಿಕಾರಿಗಳು ಪ್ರಸ್ತುತ ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಕಟ್ಟಡ ಅಗ್ನಿ ಅವಘಡ: ಒಂದೇ ಕುಟುಂಬದ 9 ಮಂದಿ ಸಾವು

• **ಹೊಸದಿಲ್ಲಿ:** ಪಾಲಂ ಪ್ರದೇಶದ ಬಹುಮಹಡಿ ಕಟ್ಟಡವೊಂದರಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ 70 ವರ್ಷದ ವೃದ್ಧೆ ಮತ್ತು ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಮೃತಪಟ್ಟಿದ್ದಾರೆ. ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿದ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ. ಜನಜಂಗುಳಿ ಮಾರುಕಟ್ಟೆಯಲ್ಲಿ ಈ ಘಟನೆ ನಡೆದಿದೆ.



ಬೆಳಿಗ್ಗೆ ಸುಮಾರು 6:15ಕ್ಕೆ ಕಟ್ಟಡದ ಕೆಳಮಹಡಿಯಲ್ಲಿದ್ದ ಬಟ್ಟೆ ಮತ್ತು ಸೌಂದರ್ಯವರ್ಧಕ ಮಳಿಗೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ವರದಿಯಾಗಿದೆ. ಅಂಗಡಿಯಲ್ಲಿದ್ದ ಸುಗಂಧ ದ್ರವ್ಯಗಳು ಮತ್ತು ಇತರ ದಹನಕಾರಿ ವಸ್ತುಗಳಿಂದಾಗಿ ಬೆಂಕಿ ವೇಗವಾಗಿ ಮೇಲಿನ ವಸತಿ ಮಹಡಿಗಳಿಗೆ ವ್ಯಾಪಿಸಿದೆ. ಮೆಟ್ಟಿಲುಗಳ ಬಳಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್ ಈ ಅವಘಡಕ್ಕೆ ಕಾರಣವಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,75,000(2,70,000) ಅಪರಂಜಿ ಚಿನ್ನ: 1,58,080(1,57,420) ಆಭರಣ ಚಿನ್ನ: 1,44,900(1,44,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ,(ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,070(567↑) ಎನ್‌ಎಸ್‌ಇ 23,581(172↑)

$1 = ₹92.36

ಅಧಿಕಾರಿಗಳಿಗೆ ಜಿಬಿಎ ಕೇಂದ್ರ ಮುಖ್ಯ ಆಯುಕ್ತ ಮಹೇಶ್ವರ ರಾವ್ ಸೂಚನೆ

ಮಳೆಗಾಲಕ್ಕೂ ಮುನ್ನ ರಾಜಕಾಲುವೆ ದುರಸ್ತಿ

ಬೆಂಗಳೂರು: ನಗರದಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಯನ್ನು ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ಪೂರ್ಣಗೊಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದಲ್ಲಿ ರಾಷ್ಟ್ರೀಯ ವಿಪತ್ತು ಉಪಶಮನ ನಿಧಿಯಡಿ 175 ಕೋಟಿ ರೂ. ಹಾಗೂ ವರ್ಲ್ಡ್ ಬ್ಯಾಂಕ್ ನೆರವಿನ ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮದಲ್ಲಿ 2000 ಕೋಟಿ ರೂ. ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳ ಕುರಿತು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದ್ದಾರೆ.

ಒಂದು ಕೆರೆಯಿಂದ ಮತ್ತೊಂದು ಕೆರೆಗೆ ಸಂಪರ್ಕ ಕಲ್ಪಿಸುವ ಮಳೆನೀರು ಕಾಲುವೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯ ಲ್ಲಿದ್ದು, ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ವೇಗ ಹೆಚ್ಚಿಸಿ, ಮೇ ತಿಂಗಳಲ್ಲಿ ಆರಂಭವಾಗುವ ಪೂರ್ವ ಮಾನ್ಸೂನ್ ಮಳೆ ಗಾಲಕ್ಕೂ ಮುನ್ನ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿ ಸಿದ್ದಾರೆ.ಪ್ರಕೃತಿ ಆಧಾರಿತ ಪರಿಹಾರಗಳಿಗೆ ಆದ್ಯತೆ: ನಗರದಲ್ಲಿರುವ ಕೆರೆಗಳಿಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಪ್ರಕೃತಿ ಆಧಾರಿತ ಪರಿಹಾರಗಳ ಮೂಲಕ ಯೋಜನೆ ರೂಪಿಸಿ ಅಭಿ ವೃದ್ಧಿ ಕಾರ್ಯ ಕೈಗೊಳ್ಳಬೇಕೆಂದರು.



ಜಕ್ಕೂರು ಕೆರೆಯಲ್ಲಿ ಈಗಾಗಲೇ ಪ್ರಕೃತಿ ಆಧಾರಿತ ಮಾದರಿಯಲ್ಲಿ ವೆಟ್‌ಲ್ಯಾಂಡ್ ಅಭಿವೃದ್ಧಿಪಡಿಸಲಾಗಿದೆ. ಇತರೆ ಕೆರೆಗಳಲ್ಲಿಯೂ ಇದೇ ಮಾದರಿಯನ್ನು ಅಳವಡಿಸಿಕೊಂಡು, ಕೆರೆಗೆ ಕೊಳಚೆ ನೀರು ಸೇರುವುದನ್ನು ತಡೆಯುವಂತೆ ಹಾಗೂ ಶುದ್ಧ ನೀರು ಹರಿಯುವಂತೆ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಹೊಸದಾಗಿ ಕೈಗೆತ್ತಿಕೊಳ್ಳಲಾಗುತ್ತಿರುವ ಮಳೆನೀರು ಕಾಲುವೆಗಳಲ್ಲಿಯೂ ಪ್ರಕೃತಿ ಆಧಾರಿತ ಪರಿಹಾರಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನೀರನ್ನು ಇಂಗಿಸುವ ಹಾಗೂ ಕೊಳಚೆ ನೀರನ್ನು ಹೀರಿಕೊಂಡು ಶುದ್ಧೀಕರಿಸುವ ಗುಣ ಹೊಂದಿರುವ ಕೊಲೊಕಾಸಿಯಾ ಮತ್ತು ಕ್ಯಾನ್ನಾ ಇಂಡಿಕಾ ಸಸಿಗಳನ್ನು ನೆಡಲು ಸಲಹೆ ನೀಡಿದ್ದಾರೆ.

ದಾಸರಹಳ್ಳಿ ಮುಖ್ಯರಸ್ತೆ ರಾಜಕಾಲುವೆ ಬದಿಯಲ್ಲಿರುವ ಹೆಚ್ಚುವರಿ ಬಫರ್ ವಲಯದ ಸೌಂದರ್ಯೀಕರಣ, ಚೊಕ್ಕನಹಳ್ಳಿ ಕೆರೆಯಿಂದ ಅಗ್ರಹಾರ ಕೆರೆಯವರೆಗೆ 670 ಮೀ., ರಾಚೇನಹಳ್ಳಿ ಮುಖ್ಯ ರಸ್ತೆಯಲ್ಲಿ 600ಮೀ., ಬೆಳ್ಳಳ್ಳಿ ಕೆರೆಯಿಂದ ಕಣ್ಣೂರು ಕೆರೆಯವರೆಗೆ 660 ಮೀ. ಉದ್ದದ ಹೊಸ ರಾಜಕಾಲುವೆ ಕಾಮಗಾರಿ, ಕೋಗಿಲು ಕೆರೆಗೆ ಸ್ಲೂಯಿಸ್ ಗೇಟ್ ಅಳವಡಿಕೆ, ಶ್ರೀನಿವಾಸಪುರ ಕೆರೆ ಪುನರುಜ್ಜೀವನಕ್ಕೆ ಕ್ರಮವಹಿಸಲು ನಿರ್ದೇಶನ ನೀಡಿದರು.

ಖರೀದಿ



ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಕೆ.ಆರ್. ಮಾರುಕಟ್ಟೆಗೆ ಬಂದಿರುವ ವಿವಿಧ ಬಗೆಯ ಹೂಗಳನ್ನು ಗ್ರಾಹಕರು ಖರೀದಿಸುತ್ತಿರುವುದು.

ಕಿರುಸುದ್ದಿ

ಮಾದಕವಸ್ತು ಮಾರಾಟ: ವಿದೇಶಿಗರ ಸೆರೆ



ಬೆಂಗಳೂರು: ನಗರ ಸಿಸಿಬಿ ಪೊಲೀಸರು ನಡೆಸಿದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಜಾಲವನ್ನು ಭೇದಿಸುವುದರ ಜತೆಗೆ, ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ನೆಲೆಸಿದ್ದ ವಿದೇಶಿ ಪ್ರಜೆಗಳನ್ನು ವಶಕ್ಕೆ ಪಡೆದಿದ್ದಾರೆ. ಚಾಮರಾಜಪೇಟೆಯ ವಿದೇಶಿ ಅಂಚೆ ಕಚೇರಿಯಲ್ಲಿ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ವಿಶೇಷ ಕಾರ್ಯಾಚರಣೆಯ ವೇಳೆ ವಿದೇಶದಿಂದ ಬಂದಿದ್ದ ಅನುಮಾನಾಸ್ಪದ ಪಾರ್ಸೆಲ್‌ಗಳನ್ನು ಪತ್ತೆ ಹಚ್ಚಿದ್ದರು. ಈ ಪಾರ್ಸೆಲ್‌ಗಳಲ್ಲಿ ಅಂದಾಜು 2.865 ಕೆ.ಜಿ. ಹೈಡ್ರೋಗಾಂಜಾ, 108 ಗ್ರಾಂ ಕ್ರಿಸ್ಟಲ್ ಮೆಥ್ ಹಾಗೂ 2 ಗ್ರಾಂ ಕೊಕೇನ್ ಪತ್ತೆಯಾಗಿತ್ತು. ಈ ಸಂಬಂಧ ಕೆ.ಜಿ.ನಗರ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಬೆನ್ನತ್ತಿದ ಅಧಿಕಾರಿಗಳು ಆಡುಗೋಡಿಯಲ್ಲಿ ಇಬ್ಬರು ಸ್ಥಳೀಯ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರು ಥೈಲ್ಯಾಂಡ್ ಸೇರಿದಂತೆ ವಿವಿಧ ದೇಶಗಳಿಂದ ನಕಲಿ ಹೆಸರು ಮತ್ತು ವಿಳಾಸಗಳನ್ನು ನೀಡಿ ಅಂಚೆ ಮೂಲಕ ಮಾದಕ ವಸ್ತುಗಳನ್ನು ತರಿಸಿಕೊಳ್ಳುತ್ತಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಅಕ್ರಮವಾಗಿ ನೆಲೆಸಿದ್ದ ವಿದೇಶಿ ಪ್ರಜೆಗಳ ಪತ್ತೆ: ವೀಸಾ ಅವಧಿ ಮುಗಿದಿದ್ದರೂ ನಗರದಲ್ಲಿ ಅಕ್ರಮವಾಗಿ ವಾಸವಿದ್ದ ವಿದೇಶಿ ಪ್ರಜೆಗಳ ವಿರುದ್ಧ ಸಿಸಿಬಿ ಸಮರ ಸಾರಿದೆ. ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇನ್ಸ್‌ಪೆಕ್ಟರ್ ವಿ.ಡಿ. ಶಿವರಾಜು ಮತ್ತು ತಂಡ ನಡೆಸಿದ ಕಾರ್ಯಾಚರಣೆಯಲ್ಲಿ ನೈಜೀರಿಯಾ, ಟಾಂಜಾನಿಯಾ ಹಾಗೂ ಜಿಬೂಟಿ ದೇಶಗಳಿಗೆ ಸೇರಿದ ಮೂವರು ಪ್ರಜೆಗಳನ್ನು ವಶಕ್ಕೆ ಪಡೆಯಲಾಗಿದೆ. ವಶಕ್ಕೆ ಪಡೆದವರನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಹುಳಿಮಾವು ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ಬಿಲ್ ತ್ವರಿತ ಪಾವತಿಗೆ ಕ್ರಮ

ಬೆಂಗಳೂರು: ಉತ್ತರ ನಗರ ಪಾಲಿಕೆಯಿಂದ ಪಾವತಿಸಬೇಕಾದ ಬಾಕಿಬಿಲ್‌ಗಳ ಪಾವತಿ ಹಾಗೂ ಅವುಗಳ ಸ್ಥಿತಿಗತಿಗಳನ್ನು ಪರಿಶೀಲಿಸಲು ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಅಧಿಕಾರಿಗಳ ಸಭೆ ನಡೆಸಿದೆ. ಬಾಕಿ ಇರುವ ಬಿಲ್ ಗಳನ್ನು ತ್ವರಿತವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.ಹೊರಗುತ್ತಿಗೆ ನೌಕರರ ಸಂಬಳ, ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಿಲ್‌ಗಳು ಹಾಗೂ ಇತರ ವಿವಿಧ ಹಂತಗಳ ಬಿಲ್‌ಗಳ ಕುರಿತು ಸಮಗ್ರವಾಗಿ ಚರ್ಚೆ ನಡೆಸಿದ್ದು, ಬಾಕಿ ಇರುವ ಬಿಲ್ಲುಗಳನ್ನು ಆದ್ಯತೆಯ ಆಧಾರದಲ್ಲಿ ಪಾವತಿಸಲು ನಿರ್ದೇಶನ ನೀಡಿದ್ದಾರೆ. ಬಿಲ್‌ಗಳನ್ನು ವಿಳಂಬ ಮಾಡದೇ ನಿಗದಿತ ಸಮಯದಲ್ಲಿ ಪಾವತಿಸುವುದರಿಂದ ಗುತ್ತಿಗೆದಾರರು, ಏಜೆನ್ಸಿಗಳು, ಪೂರೈಕೆದಾರರು ಹಾಗೂ ಪಾಲಿಕೆಯ ನಡುವೆ ಉತ್ತಮ ಸಹಕಾರ ಮತ್ತು ನಂಬಿಕೆ ಮೂಡುತ್ತದೆ ಎಂದು ತಿಳಿಸಿದ್ದಾರೆ. ಬೆಂಗಳೂರು ಉತ್ತರ ನಗರ ಪಾಲಿಕೆಗೆ ಸಂಬಂಧಿಸಿದಂತೆ ಬಾಕಿಬಿಲ್‌ಗಳ ಪಾವತಿ ಮತ್ತು ಸ್ಥಿತಿಗತಿಗಳ ಪರಿಶೀಲನೆಗಾಗಿ ಪ್ರತಿ ಬುಧವಾರ ಆಯುಕ್ತರ ಅಧ್ಯಕ್ಷತೆಯಲ್ಲಿ ನಿಯಮಿತ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಡಿಕೆಶಿಯಿಂದ ಕೇಂದ್ರ ವಿಮಾನಯಾನ ಸಚಿವರ ಭೇಟಿ | ವಿಮಾನ ನಿಲ್ದಾಣ ಸುತ್ತಮುತ್ತ ಅಭಿವೃದ್ಧಿ ಕುರಿತು ಚರ್ಚೆ

ಅಭಿವೃದ್ಧಿಗೆ ತೊಡಕು ಕಟ್ಟಡದ ಎತ್ತರದ ಮಿತಿ

ಹೊಸದಿಲ್ಲಿ: ಬೆಂಗಳೂರಿನಲ್ಲಿರುವ ಎಚ್‌ಎಎಲ್, ಜಕ್ಕೂರು ವಾಯುನೆಲೆ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಕಟ್ಟಡ ಎತ್ತರದ ಮಿತಿಯಿಂದ ಅಭಿವೃದ್ಧಿ ಕಾಮಗಾರಿಗೆ ತೊಡಕಾಗಿದ್ದು, ಈ ಮಿತಿಯ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಹಿತಿ ನೀಡಿದರು.

ಬುಧವಾರ ಕೇಂದ್ರ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿ, ಕೇಂದ್ರ ಸಚಿವರೊಂದಿಗೆ ನಾಗರೀಕ ವಿಮಾನಯಾನ ಸಚಿವಾಲಯ ಹಾಗೂ ಎಚ್‌ಎಎಲ್‌ನಿಂದ ಎತ್ತರದ ಮಿತಿ ಬಗ್ಗೆ ಚರ್ಚೆ ಮಾಡಿದ್ದೇವೆ. ಹೈದರಾಬಾದ್, ಮುಂಬೈ ಸೇರಿದಂತೆ ಬೇರೆ ಕಡೆಗಳಲ್ಲಿ ಮಿತಿ ಕಡಿಮೆ ಇದೆ. ಬೇರೆ ನಗರಗಳಲ್ಲಿರುವಂತೆ ಬೆಂಗಳೂರಿನಲ್ಲೂ ಎತ್ತರದ ಮಿತಿ ಇರಬೇಕು ಎಂದು ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ಕಟ್ಟಡ ಎತ್ತರದ ಮಿತಿಯಿಂದಾಗಿ ಬೆಂಗಳೂರಿನಲ್ಲಿ ನಾಗರೀಕರು ಪ್ರೀಮಿಯಂ ಎಫ್‌ಎಆರ್ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಹಣ ಬರುತ್ತಿಲ್ಲ. ಕೇಂದ್ರ ಸರ್ಕಾರವೇ ಪ್ರೀಮಿಯಂ ಎಫ್‌ಐಆರ್ ಹೆಚ್ಚಿಸಿ ಎಂದು ಹೇಳುತ್ತದೆ. ಹೀಗಾಗಿ ನಾವು ಅನೇಕ ತೀರ್ಮಾನ ಮಾಡಬೇಕಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದ್ದು, ಅವರು ರಕ್ಷಣಾ ಸಚಿವರ ಜತೆಗೆ ಮಾತನಾಡುವುದಾಗಿ ತಿಳಿಸಿದ್ದಾರೆ. ಅಲ್ಲದೇ, ನಮ್ಮ ಅಧಿಕಾರಿಗಳು ಹೆಚ್‌ಎಎಲ್ ಜತೆ ಚರ್ಚೆ ಮಾಡಿದ್ದಾರೆ. ನಾನು ಕೂಡ ರಕ್ಷಣಾ ಸಚಿವರ ಭೇಟಿಗೆ ಸಮಯ ತೆಗೆದುಕೊಂಡು ನಮ್ಮ ಈ ಸಮಸ್ಯೆಗಳನ್ನು ಅವರಿಗೆ ವಿವರಿಸುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



> ಬೆಂಗಳೂರು ಸಂಚಾರ ದಟ್ಟಣೆ ನಿವಾರಣೆ ಮಾಡಬೇಕಿದೆ. ಹೊರವಲಯದಲ್ಲಿ ಬಡಾವಣೆಗಳು ಹೆಚ್ಚುತ್ತಿವೆ. ಅಲ್ಲೆಲ್ಲಾ ವಾಹನಗಳ ಸಂಖ್ಯೆ ಹೆಚ್ಚಾಗಿವೆ. ಎಚ್ಎಎಲ್, ಜಕ್ಕೂರು, ಯಲಹಂಕದ ವಾಯುನೆಲೆ ಹಾಗೂ ದೇವನಹಳ್ಳಿಯಲ್ಲಿ ಕೆಂಪೇಗೌಡ ವಿಮಾನ ನಿಲ್ದಾಣ ಸುತ್ತಮುತ್ತಲ ಪ್ರದೇಶದಲ್ಲಿ ಎತ್ತರದ ಕಟ್ಟಡ ನಿರ್ಮಾಣ ಸಾಧ್ಯವಾಗುವುದಿಲ್ಲ.
> ■ ಡಿ.ಕೆ.ಶಿವಕುಮಾರ್, ಡಿಸಿಎಂ

ಎತ್ತರದ ಮಿತಿಯಿಂದ ಕಷ್ಟ

ಅಂತಾರಾಷ್ಟ್ರೀಯ ಮಟ್ಟದಲ್ಲಿರುವ ಮಾರ್ಗಸೂಚಿ ಹಾಗೂ ದೇಶದ ಇತರೆ ನಗರಗಳಲ್ಲಿ ಇರುವ ಮಾರ್ಗ ಸೂಚಿ ಬಗ್ಗೆ ಅಧ್ಯಯನ ಮಾಡುತ್ತಿರುವುದಾಗಿ ಕೇಂದ್ರ ಸಚಿವರು ತಿಳಿಸಿದ್ದಾರೆ. ಮುಂದಿನ ಒಂದು ವಾರದಲ್ಲಿ ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ನಮ್ಮ ಅಧಿಕಾರಿಗಳಿಗೂ ಭಾಗವಹಿಸಲು ಹೇಳಿದ್ದಾರೆ. ಬೆಂಗಳೂರು ಬಿಸಿನೆಸ್ ಕಾರಿಡಾರ್ ಬರುತ್ತಿದ್ದು, ಭೂ ಸಂತ್ರಸ್ತರು ತಮ್ಮ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಳ್ಳಲು ಮುಂದಾಗುತ್ತಾರೆ.

ಸರ್ಕಾರಕ್ಕೆ ಸಹಕಾರ ನೀಡದ ನೈಸ್ ಸಂಸ್ಥೆಗೆ ತಕ್ಕ ಉತ್ತರ

ನಾನು ಸ್ಕೈಡೆಕ್ ಮಾಡಲು ಎರಡೂವರೆ ವರ್ಷಗಳಿಂದ ಪ್ರಯತ್ನಪಟ್ಟ ಬಳಿಕ ಈಗ ಕೆಂಪೇಗೌಡ ಲೇಔಟ್ ನಲ್ಲಿ ನಿರ್ಮಿಸಲು ಮುಂದಾಗಿದ್ದೇವೆ. ವಿಮಾನ ನಿಲ್ದಾಣ ಸುತ್ತಮುತ್ತ 20 ಕಿ.ಮೀ ದೂರದಲ್ಲಿ ಇದನ್ನು ಮಾಡಲು ಸಾಧ್ಯವಿಲ್ಲ. ಎನ್‌ಜಿಇಎಫ್ ಬಳಿ ಸ್ಕೈಡೆಕ್ ಮಾಡಲು ಜಾಗ ಉತ್ತಮವಾಗಿತ್ತು. ಮೆಟ್ರೋ ಸೌಲಭ್ಯವಿತ್ತು. ಜತೆಗೆ ನೈಸ್ ರಸ್ತೆ ಬಳಿ ಸೋಂಪುರ ವೃತ್ತದ ಬಳಿ ನಿರ್ಮಾಣಕ್ಕೆ ಸಲಹೆ ನೀಡಿದ್ದರು. ಆದರೆ ನೈಸ್ ಸಂಸ್ಥೆಯವರು ಸಹಕಾರ ನೀಡಲಿಲ್ಲ. ನೈಸ್ ಸಂಸ್ಥೆ ವಿಚಾರವಾಗಿ ಏನು ಮಾಡಬೇಕು ಎಂದು ಮುಂದೆ ತೀರ್ಮಾನ ಮಾಡುತ್ತೇವೆ. ಅವರು ನಿರಾಕ್ಷೇಪಣ ಪತ್ರವನ್ನು ನೀಡಲಿಲ್ಲ. ಸರ್ಕಾರಕ್ಕೆ ಸಹಕಾರ ನೀಡದವರಿಗೆ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಎರಡನೇ ವಿಮಾನ ನಿಲ್ದಾಣದ ಬಗ್ಗೆ ರಾಜ್ಯ ಸರ್ಕಾರ ಚರ್ಚಿಸಿ ತೀರ್ಮಾನ

ಇನ್ನು ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ವಿಚಾರವಾಗಿ ಕೇಂದ್ರ ಸರ್ಕಾರ ತಮ್ಮ ಅಭಿಪ್ರಾಯ ಕಳುಹಿಸಿದ್ದು, ನೀವೇ ಜಾಗ ನಿಗದಿ ಮಾಡಿ ಎಂದು ಹೇಳಿದೆ. ನಮ್ಮ ಬಳಿ ಎರಡು ಮೂರು ಆಯ್ಕೆಗಳಿದ್ದು, ನಮ್ಮ ಸರ್ಕಾರ ಇದರ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ತೀರ್ಮಾನ ಮಾಡಲಿದೆ. ಬೆಂಗಳೂರಿಗೆ ತೆರಳಿದ ಬಳಿಕ ಕೇಂದ್ರ ಸರ್ಕಾರ ಕಳುಹಿಸಿರುವ ಅಭಿಪ್ರಾಯ ಪರಿಶೀಲನೆ ಮಾಡುತ್ತೇನೆ. ನಾನು ಬೆಂಗಳೂರು ದೃಷ್ಟಿಯಿಂದ ಈ ವಿಚಾರವನ್ನು ಕೇಂದ್ರ ಸಚಿವರ ಜತೆ ಪ್ರಸ್ತಾಪಿಸಿದೆ. ಈ ವಿಮಾನ ನಿಲ್ದಾಣ ನಿರ್ಮಾಣದ ಜವಾಬ್ದಾರಿ ಸಚಿವರಾದ ಎಂ.ಬಿ. ಪಾಟೀಲ್ ಅವರು ನೋಡಿಕೊಳ್ಳುತ್ತಾರೆ ಎಂದರು.

ಮಕ್ಕಳ ಮಾತನಾಡಿಸುವ ನೆಪದಲ್ಲಿ ಕಳವು: ಬಂಧನ

ಮದುವೆ ಸಮಾರಂಭದಲ್ಲಿ ಕಳ್ಳತನ

ಬೆಂಗಳೂರು: ಮದುವೆ ಸಮಾರಂಭಗಳಲ್ಲಿ ಸಲುಗೆಯಿಂದ ಮಾತನಾಡಿಸಿ ಮಕ್ಕಳ ಚಿನ್ನಾಭರಣ ಹಾಗೂ ವಾಹನಗಳನ್ನು ಕಳುವು ಮಾಡುತ್ತಿದ್ದ ಆರೋಪಿಯನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ಸುಮಾರು 42.38 ಲಕ್ಷ ರೂ.ಮೌಲ್ಯದ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಬಾಬು ಅಲಿಯಾಸ್ ಪಲ್ಸರ್ ಬಾಬು ಬಂಧಿತ ಆರೋಪಿ. ಈತ ಕಳೆದ 2025ರ ಮೇ 8 ಮತ್ತು 9ರಂದು ಅರಮನೆ ಮೈದಾನದಲ್ಲಿ ನಡೆದಿದ್ದ ವಿವಾಹ ಮಹೋತ್ಸವವೊಂದಕ್ಕೆ ಎಲೆಕ್ಟ್ರಾನಿಕ್ ಸಿಟಿಯ ನಿವಾಸಿಯೊಬ್ಬರು ಕುಟುಂಬ ಸಮೇತ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಅವರ ಮಗಳ ಕುತ್ತಿಗೆಯಲ್ಲಿದ್ದ ಚಿನ್ನದ ಪೆಂಡೆಂಟ್ ಹಾಗೂ ಚೈನ್ ಅನ್ನು ಅಪರಿಚಿತ ವ್ಯಕ್ತಿಯೊಬ್ಬ ಕಳವು ಮಾಡಿದ್ದನು. ಈ ಬಗ್ಗೆ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಮುಂದುವರೆಸಿದ್ದ ಪೊಲೀಸರಿಗೆ ಮಾ.7 ರಂದು ಅರಮನೆ ಮೈದಾನದಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದ ವ್ಯಕ್ತಿಯೊಬ್ಬ ಕಂಡುಬಂದಿದ್ದಾನೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಮದುವೆ ಮನೆಗಳಿಗೆ ಬರುವ ಮಕ್ಕಳನ್ನು ಸಲುಗೆಯಿಂದ ಮಾತನಾಡಿಸಿ ಅವರ ಒಡವೆಗಳನ್ನು ಹಾಗೂ ವಾಹನವನ್ನು ಕಳವು ಮಾಡುತ್ತಿದ್ದ ಎಂಬ ಮಾಹಿತಿ ತಿಳಿದಿದೆ.

ಆರೋಪಿ ನೀಡಿದ ಮಾಹಿತಿ ಮೇರೆಗೆ ಅಂದ್ರಹಳ್ಳಿಯ ಚಕ್ರ ನಗರದಲ್ಲಿರುವ ಆತನ ಮನೆಯಿಂದ 132 ಗ್ರಾಂ ಚಿನ್ನಾಭರಣ, 1.20 ಲಕ್ಷ ನಗದು, 7 ಮೊಬೈಲ್ ಫೋನ್‌ಗಳು ಹಾಗೂ 2 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೆ ಮನೆಯ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಲಾಗಿದ್ದ 2 ಕಾರು ಹಾಗೂ 4 ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಒಟ್ಟು ಮೌಲ್ಯ 42.38 ಲಕ್ಷ ರೂ.ಎಂದು ಅಂದಾಜಿಸಲಾಗಿದೆ.



ಈತನ ಬಂಧನದಿಂದ ಸದಾಶಿವನಗರ, ಜಾಲಹಳ್ಳಿ, ವರ್ತೂರು, ಬಾಗಲಗುಂಟೆ ಮತ್ತು ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯ ಒಟ್ಟು 8 ಕಳವು ಪ್ರಕರಣಗಳು ಬೆಳಕಿಗೆ ಬಂದಿವೆ. ಆರೋಪಿಯನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಧ್ಯಮ ವರದಿ ಬಳಿಕ ಎಚ್ಚೆತ್ತ ಜಿಬಿಎ | ವೋಟರ್ ಸರ್ವಿಸ್ ಪೋರ್ಟಲ್‌ನಲ್ಲಿ ಪ್ರಕಟ

ಎಪಿಕ್ ಸಂಖ್ಯೆ ಹುಡುಕಾಟದಲ್ಲಿ ಮತದಾರ

ಬೆಂಗಳೂರು: ಮಾಧ್ಯಮಗಳ ವರದಿ ಮತ್ತು ಸಾರ್ವಜನಿಕರ ಆಕ್ರೋಶ ನಂತರ ಎಚ್ಚೆತ್ತ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವೋಟರ್ ಸರ್ವಿಸ್ ಪೋರ್ಟಲ್‌ನಲ್ಲಿ ಎಪಿಕ್ ಸಂಖ್ಯೆ ಮೂಲಕ ಮತದಾರರ ವಿವರ ಹುಡುಕುವ ಆಯ್ಕೆಯನ್ನು ಸಕ್ರಿಯಗೊಳಿಸಿದೆ.

ಜಿಬಿಎ ಚುನಾವಣೆ ಸಂಬಂಧ ಕರಡು ಮತಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಹೆಸರು, ವಾರ್ಡ್ ಬದಲಾವಣೆ ಸೇರಿದಂತೆ ಮತ್ತಿತರ ದೋಷದ ಸಂಬಂಧ ಆಕ್ಷೇಪಣೆ ಸಲಹೆ ನೀಡಲು ಹೇಳಿದೆ. ಆದರೆ ಮತದಾರರು ಜಿಬಿಎ ವೋಟರ್ ಸರ್ವಿಸ್ ಪೋರ್ಟಲ್‌ನಲ್ಲಿ ತಮ್ಮ ಹೆಸರು ಹುಡುಕಲು ಹರಸಾಹಸ ಪಡಬೇಕಾಗಿತ್ತು. ಕಾರಣ ಸುಲಭ ವಾಗಿ ಎಪಿಕ್ ಸಂಖ್ಯೆ ಮೂಲಕ ಹೆಸರು ಹುಡುಕಿ ಮಾಹಿತಿ ಪಡೆಯುವ ಆಯ್ಕೆಯನ್ನು ನಿಷ್ಕ್ರೀಯಗೊಳಿಸಿತ್ತು. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ಮತ್ತು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಬಿಜೆಪಿ, ಬಿಎನ್‌ಪಿ ಸೇರಿದಂತೆ ಅನೇಕ ಸಂಘಟನೆಗಳು ಸರಿಪಡಿ ಸುವಂತೆ ಜಿಬಿಎಗೆ ಮನವಿಸಲ್ಲಿದ್ದರು.




ತೀವ್ರ ಆಕ್ರೋಶ ಮತ್ತು ಆಗ್ರಹದ ನಂತರ ಎಚ್ಚೆತ್ತ ಜಿಬಿಎ ಬುಧವಾರ ವೋಟರ್ ಸರ್ವಿಸ್ ಪೋರ್ಟಲ್‌ನ್ನು ಸರಿಪಡಿಸಿದೆ. ಎಪಿಕ್ ಸಂಖ್ಯೆ ಮೂಲಕ ಮತದಾರರ ವಿವರ ಹುಡುಕುವ ಆಯ್ಕೆಯನ್ನು ಸಕ್ರೀಯಗೊಳಿಸಿದೆ.

ಜಿಬಿಎ ಮತದಾರರ ಪಟ್ಟಿಯ ಪರಿಶೀಲನೆಯ ವೆಬ್ ಸೈಟ್ ಆರು ದಿನ ತಾಂತ್ರಿಕ ಕಾರಣಗಳಿಂದ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಇದರಿಂದ ನಾಗರಿಕರಿಗೆ ಅಪಾರ ತೊಂದರೆಯಾಗಿದೆ. ಮಾಹಿತಿ, ಹೆಸರು ಪರಿಶೀಲಿಸಲು ಸಾಧ್ಯವಾಗದೆ ಪರದಾಡಿದ್ದಾರೆ. ರಾಜಕೀಯ ಪಕ್ಷಗಳ ಕಚೇರಿಗೂ ಮತದಾರರ ಪಟ್ಟಿ ವಿಳಂಬವಾಗಿ ತಲುಪಿದೆ. ಆದ್ದರಿಂದ ಕರಡು ಪ್ರತಿಯ ಬಗ್ಗೆ ಆಕ್ಷೇಪಣೆ ಸಲ್ಲಿಸುವ ದಿನಾಂಕವನ್ನು ಮಾ.30 ರವರೆಗೆ ವಿಸ್ತರಿಸಿ ಎಂದು ಬಿಜೆಪಿ ನಿಯೋಗ ರಾಜ್ಯ ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿ ಸಲ್ಲಿಸಿತು.

ಅಂಗಡಿಗೆ ನುಗ್ಗಿ ಬಿಡಿಭಾಗಗಳ ಕಳವು: ತಂದೆ-ಮಗ ಸೆರೆ

ಬೆಂಗಳೂರು: ಕಂಪ್ಯೂಟರ್ ಅಂಗಡಿಯೊಂದರ ಬೀಗ ಮುರಿದು ಲಕ್ಷಾಂತರ ರೂಪಾಯಿ ಮೌಲ್ಯದ ಬಿಡಿಭಾಗ'ಗಳನ್ನು ಕಳವು ಮಾಡಿದ್ದ ತಂದೆ ಮತ್ತು ಮಗನನ್ನು ಗೋವಿಂದಪುರ ಪೊಲೀಸ್ ಠಾಣಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಯಾಗಿದ್ದಾರೆ. ನಾಗವಾರ ನಿವಾಸಿ ಮಂಜುನಾಥ್ (48), ಇವರ ಮಗ ಹೇಮಂತ್ (22) ಬಂಧಿತರು.. ಇವರಿಂದ ಸುಮಾರು 80 ಲಕ್ಷ ರೂ. ಮೌಲ್ಯದ 444 ಡಿಡಿಆರ್ (4) ರಾಮ್‌ಗಳು, 279 ಎಸ್‌ಎಸ್‌ಡಿ ಹಾರ್ಡ್ ಡಿಸ್ಕ್‌ಗಳು, 2,29,900 ರೂ.ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.



ನಾಗವಾರದ ಟಿ.ಚನ್ನಯ್ಯ ಲೇಔಟ್ ನಿವಾಸಿಯೊಬ್ಬರು ಎಚ್‌ಬಿಆರ್ ಲೇಔಟ್‌ನ 4ನೇ ಬ್ಲಾಕ್‌ನಲ್ಲಿ ಕಂಪ್ಯೂಟರ್ ಬಿಡಿಭಾಗಗಳ ಮಾರಾಟ ಮಳಿಗೆಯನ್ನು ಹೊಂದಿದ್ದರು. ಕಳೆದ ಮಾ.13ರ ಮಧ್ಯರಾತ್ರಿ ವ್ಯಾಪಾರ ಮುಗಿಸಿ ಅಂಗಡಿಗೆ ಬೀಗ ಹಾಕಿಕೊಂಡು ಮನೆಗೆ ತೆರಳಿದ್ದ ಮಾಲೀಕರು, ಮರುದಿನ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಠಾಣೆಗೆ ದೂರು ನೀಡಿದ್ದರು.

ಈ ಪ್ರಕರಣದ ಬೆನ್ನತ್ತಿದ ಪೊಲೀಸರು ಮಾ.15ರಂದು ಚಾಣಕ್ಯ ಲೇಔಟ್‌ನ ಹೋಟೆಲ್‌ವೊಂದರ ಮುಂದೆ ಓರ್ವ ಶಂಕಿತನನ್ನು ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದರು. ಆತನನ್ನು ವಿಚಾರಣೆಗೊಳಪಡಿಸಿದಾಗ, ತನ್ನ ತಂದೆಯ ಜತೆಗೂಡಿ ಈ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದಾನೆ.

35 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ: ಇಬ್ಬರ ಬಂಧನ

ಮಾಲೀಕನ ಅಂಗಡಿಯಲ್ಲೇ ಚಿನ್ನ ಕಳವು

ಬೆಂಗಳೂರು: ನಂಬಿ ಕೆಲಸಕ್ಕೆ ಇಟ್ಟುಕೊಂಡಿದ್ದ ಕೆಲಸಗಾರನೇ ತನ್ನ ಸ್ನೇಹಿತನೊಂದಿಗೆ ಸೇರಿ ಮಾಲೀಕನ ಅಂಗಡಿಯಿಂದ ಬೆಳ್ಳಿ ವಸ್ತುವನ್ನು ಕಳವು ಮಾಡಿದ್ದ ಪ್ರಕರಣ ವನ್ನು ಹಲಸೂರುಗೇಟ್ ಪೊಲೀಸರು ಭೇದಿಸಿ ದ್ದಾರೆ. ಬಂಧಿತರಿಂದ ಸುಮಾರು 35 ಲಕ್ಷ ರೂ. ಮೌಲ್ಯದ 10.120 ಕೆ.ಜಿ. ಬೆಳ್ಳಿಯ ಆಭರಣವನ್ನು ವಶಪಡಿಸಿಕೊಂಡಿದ್ದಾರೆ.

ರಾಜಸ್ಥಾನ ಮೂಲದ ನರೇಂದ್ರ (19), ಕುಲ್‌ದೀಪ್ (26) ಬಂಧಿತ ಆರೋಪಿಗಳು. ಸಿ.ಟಿ. ಸ್ಟ್ರೀಟ್ ಕ್ರಾಸ್‌ನ ಬೆಟ್ಟಪ್ಪ ಲೇನ್‌ನಲ್ಲಿ ಜ್ಯೂವೆಲ್ಲರಿ ಪಾಲಿಶಿಂಗ್ ಅಂಗಡಿ ನಡೆಸು ತ್ತಿರುವ ಮಾಲೀಕರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದಾಗಿ ತಿಳಿಸಿದ್ದಾರೆ. ಕಳೆದ ಒಂದು ತಿಂಗಳ ಹಿಂದೆಯಷ್ಟೇ ಕೆಲಸಕ್ಕೆ ಸೇರಿದ್ದ ಆರೋಪಿ, ಜ.29ರಂದು ಬೆಳಗ್ಗೆ ಅಂಗಡಿಯಲ್ಲಿದ್ದ ಸುಮಾರು 12 ಕೆ.ಜಿ ಬೆಳ್ಳಿ ವಸ್ತುಗಳನ್ನು ದೋಚಿ ಪರಾರಿಯಾಗಿದ್ದನು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು. ತನಿಖಾ ತಂಡವು ತಾಂತ್ರಿಕ ಮಾಹಿತಿ ಹಾಗೂ ಬಾತ್ಮೀದಾರರ ನೆರವಿನಿಂದ ಆರೋಪಿ ಗಳನ್ನು ರಾಜಸ್ಥಾನದ ಸೆಡ್ವಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಹಚ್ಚಿ ವಶಕ್ಕೆ ಪಡೆದಿರುವುದಾಗಿ ಮಾಹಿತಿ ನೀಡಿದ್ದಾರೆ. ಆರೋಪಿಗಳ ವಿಚಾರಣೆ ವೇಳೆ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದು, ಅವರ ಬಳಿಯಿದ್ದ 8.760 ಕೆ.ಜಿ. ಬೆಳ್ಳಿಯನ್ನು ಮೊದಲ ಹಂತದಲ್ಲಿ ವಶಪಡಿಸಿಕೊಂಡು ನಂತರ ಸ್ಥಳೀಯ ನ್ಯಾಯಾಲಯದ ಅನುಮತಿ ಪಡೆದು ಟ್ರಾನ್ಸಿಸ್ಟ್ ವಾರೆಂಟ್ ಮೂಲಕ ಆರೋಪಿಗಳನ್ನು ಮಾ.4ರಂದು ನಗರಕ್ಕೆ ಕರೆತರಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ, ಕಬ್ಬನ್‌ಪೇಟೆಯ ಮತ್ತೊಂದು ಪಾಲಿಶಿಂಗ್ ಅಂಗಡಿಯಲ್ಲಿ 1.360 ಕೆ.ಜಿ ಬೆಳ್ಳಿಯನ್ನು ನೀಡಿರುವುದು ಬೆಳಕಿಗೆ ಬಂದಿದೆ.ಕೂಡಲೇ ಕಾರ್ಯಾಚರಣೆ ನಡೆಸಿದ ಪೊಲೀಸರು ಮಾ.12ರಂದು ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.



ಕ್ಯಾನ್ಸರ್ ತಡೆಗಟ್ಟಲು ಸಹಕರಿಸಿ

ಬೆಂಗಳೂರು: ಹೆಣ್ಣುಮಕ್ಕಳಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ದಾಸರಹಳ್ಳಿ ವಿಭಾಗದಲ್ಲಿ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ದಾಸರಹಳ್ಳಿ ಕ್ಷೇತ್ರದ ಶಾಸಕ ಎಸ್. ಮುನಿರಾಜು ಅವರು ಚಾಲನೆ ನೀಡಿ ಶುಭ ಹಾರೈಸಿದರು.

ಮುದ್ದೇನಹಳ್ಳಿಯ ಶ್ರೀಮಧುಸೂದನ್ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಆರೋಗ್ಯ ಭಾರತಿ ಹಾಗೂ ಎನ್‌ಎಂಒ ಬೆಂಗಳೂರು ಘಟಕಗಳ ಸಂಯುಕ್ತ ಆಶ್ರಯದಲ್ಲಿ ಅಬ್ಬಿಗೆರೆಯ ಬಿಬಿಎಂಪಿ ನಗರ ಆರೋಗ್ಯ ಕೇಂದ್ರದಲ್ಲಿ ಲಸಿಕಾ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮೊದಲ ದಿನವೇ 23 ವಿದ್ಯಾರ್ಥಿನಿಯರಿಗೆ ಯಶಸ್ವಿಯಾಗಿ ಲಸಿಕೆ ವಿತರಿಸಲಾಯಿತು.

ಕಳೆದ ಮಾ.7ರಿಂದಲೇ ಬೆಂಗಳೂರು ಉತ್ತರದ ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿನಿಯರು ಹಾಗೂ ಪೋಷಕರಿಗೆ ಲಸಿಕೆಯ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿತ್ತು. ಈವರೆಗೆ ಒಟ್ಟು 6 ಶಾಲೆಗಳ ಸುಮಾರು 406 ಪೋಷಕರನ್ನು ಸಂಪರ್ಕಿಸಿ, ಕ್ಯಾನ್ಸರ್ ಮುಕ್ತ ಸಮಾಜದ ಕುರಿತು ಜಾಗೃತಿ ಮೂಡಿಸಲಾಗಿದೆ. ದಾಸರಹಳ್ಳಿ ವಲಯವೊಂದರಲ್ಲೇ ಒಟ್ಟು 1,000 ವಿದ್ಯಾರ್ಥಿನಿಯರಿಗೆ ಲಸಿಕೆ ನೀಡುವ ಮಹತ್ವಾಕಾಂಕ್ಷಿ ಗುರಿಯನ್ನು ಹೊಂದಿದೆ. ಈ ಅಭಿಯಾನದಲ್ಲಿ ಮುಖ್ಯವಾಗಿ 2011ರ ಮಾ.1 ರಿಂದ 2012ರ ಫೆ.28ರ ಅವಧಿಯಲ್ಲಿ ಜನಿಸಿದ ವಿದ್ಯಾರ್ಥಿನಿಯರನ್ನು (14 ವರ್ಷ ಪೂರೈಸಿದವರು) ಗುರಿಯಾಗಿಸಿಕೊಳ್ಳಲಾಗಿದೆ. ಅಲ್ಲದೆ, ಫೆ.28ರ ನಂತರ 90 ದಿನಗಳ ಒಳಗಾಗಿ 15 ವರ್ಷಕ್ಕೆ ಕಾಲಿಡುವವರಿಗೂ (ಮೇ 28, 2011 ರವರೆಗೆ ಜನಿಸಿದವರು) ವಿಶೇಷ ವಿನಾಯಿತಿ ನೀಡಿ ಲಸಿಕೆಗೆ ಅವಕಾಶ ಕಲ್ಪಿಸಲಾಗಿದೆ.

ರೀಲ್ಸ್‌ಗಾಗಿ ಕೊರಿಯರ್ ಮಾಡಲು ಬಂದ ಮಕ್ಕಳು

ತಂದೆಯನ್ನು ಗೋಣಿ ಚೀಲಕ್ಕೆ ತುಂಬಿದ ಮಕ್ಕಳಿಂದಲೇ ಕ್ಷಮೆ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಪ್ರಸಿದ್ಧಿ ಪಡೆಯಬೇಕು ಎನ್ನುವ ಹುಚ್ಚು ಯಾವ ಮಟ್ಟಕ್ಕೆ ತಲುಪಿದೆ ಎಂದರೆ, ಕೇವಲ ಒಂದು ರೀಲ್ಸ್‌ಗಾಗಿ ಸ್ವಂತ ತಂದೆಯನ್ನೇ ಗೋಣಿಚೀಲದಲ್ಲಿ ಕಟ್ಟಿ ಕೊರಿಯರ್ ಮಾಡಲು ಯತ್ನಿಸಿದ ಘಟನೆ ವೈಯಾಲಿಕಾವಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವೈಯಾಲಿಕಾವಲ್ ವ್ಯಾಪ್ತಿಯಲ್ಲಿರುವ ಕೊರಿಯರ್ ಕಚೇರಿಗೆ ಬಂದ ಐವರು ಯುವಕರ ತಂಡ, ದೊಡ್ಡದಾದ ಗೋಣಿಚೀಲವೊಂದನ್ನು ಹೊತ್ತು ತಂದಿದ್ದರು. ಅದನ್ನು ಬೇರೆ ರಾಜ್ಯಕ್ಕೆ ಪಾರ್ಸೆಲ್ ಮಾಡಬೇಕೆಂದು ಸಿಬ್ಬಂದಿಯನ್ನು ಒತ್ತಾಯಿಸಿದ್ದಾರೆ. ಆದರೆ, ಚೀಲದಲ್ಲಿ ಏನೋ ಅಲುಗಾಡುತ್ತಿರುವುದನ್ನು ಕಂಡು ಅನುಮಾನಗೊಂಡ ಸಿಬ್ಬಂದಿ ಅದನ್ನು ತೆರೆದು ನೋಡಿದಾಗ ಬೆಚ್ಚಿಬಿದ್ದಿದ್ದಾರೆ. ಚೀಲದ ಒಳಗೆ ಉಸಿರಾಡಲು ಕಷ್ಟಪಡುತ್ತಿದ್ದ ವೃದ್ಧ ರೊಬ್ಬರು ಪತ್ತೆಯಾಗಿದ್ದು, ಕೂಡಲೇ ಅವರಿಗೆ ನೀರು ಕುಡಿಸಿ ಉಪಚರಿಸಲಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ವೈಯಾಲಿಕಾವಲ್ ಪೊಲೀಸರು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿವನ್ನು ಪರಿಶೀಲಿಸಿ ಐವರನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆಯ ವೇಳೆ ಇದು ಕೇವಲ ಒಂದು ಪ್ರಾಂಕ್ ವಿಡಿಯೋಗಾಗಿ ಮಾಡಿದ ಸಾಹಸವೆಂದು ಆರೋಪಿಗಳು ಒಪ್ಪಿಕೊಂಡಿದ್ದಾರೆ.

ಉಗಾದಿ ಮತ್ತು ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಬಸ್ ದರ ಏರಿಕೆ ಹಾಗೂ ಸೀಟುಗಳ ಕೊರತೆಯನ್ನು ವ್ಯಂಗ್ಯವಾಗಿ ತೋರಿಸಲು ಈ ರೀತಿ ಮಾಡಿದ್ದಾಗಿ ಅವರು ತಿಳಿಸಿದ್ದಾರೆ. ಸದ್ಯ ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಘಟನೆ ಸಂಬಂಧಿಸಿದಂತೆ ತಪ್ಪು ಒಪ್ಪಿಕೊಂಡಿರುವ ಯುವತಿ ಹಾಗೂ ಇತರರು ವಿಡಿಯೋ ಮೂಲಕ ಕ್ಷಮೆಯಾಚಿಸಿದ್ದಾರೆ.

ಇಂದು ನಗರದಲ್ಲಿ...

- ಪ್ರಭುಜಯರಾಮ್ ಸೇವಾ ಟ್ರಸ್ಟ್: ಯುಗಾದಿ ಗಾನ-ಕಾವ್ಯಾನು ಸಂಧಾನ. ಸ್ಥಳ: ಬಯಲು ರಂಗಮಂದಿರ, ಕಲಾಗ್ರಾಮ, ಮಲ್ಲತ್ತಹಳ್ಳಿ. 5.30
- 26ನೇ ಶ್ರೀರಾಮ ನವಮಿ ಸಂಗೀತೋತ್ಸವ, ಸ್ಥಳ: ಶ್ರೀ ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ. ಸಂಜೆ 6.30
- ಕಲಾನೇಷನ್ ತಂಡ: ಶ್ರೀಕೃಷ್ಣನ ಲೀಲೆ ರಂಗಸಜ್ಜಿಕೆಯ ಭಕ್ತಿ ಪ್ರದಾನ ನಾಟಕ ಪ್ರದರ್ಶನ, ಸ್ಥಳ: ಪ್ರೆಸ್ಟಿಜ್ ಸೆಂಟರ್ –ರ್ ಪರ್ಫಾಮಿಂಗ್ ಆರ್ಟ್ಸ್, ಕೋಣನಕುಂಟೆ ಸಂಜೆ 7.00

ಕಿರುಸುದ್ದಿ

ಐಪಿಎಲ್ ಹೆಸರಿನ ವಿರುದ್ಧ ಪಿಐಎಲ್: ಅರ್ಜಿ ವಜಾ

ತಿರುವನಂತಪುರ: ಇಂಡಿಯನ್ ಪ್ರೀಮಿಯರ್ ಲೀಗ್ ಎಂಬ ಹೆಸರು ಬಳಸಿದ್ದಕ್ಕಾಗಿ ಭಾರತೀಯ ಕ್ರಿಕೆಟ್ ಸಂಸ್ಥೆ ವಿರುದ್ಧ ಸಲ್ಲಿಸಲಾಗಿದ್ದ ಸಾರ್ವಜನೀಕ ಹಿತಾಸಕ್ತಿ ಅರ್ಜಿಯನ್ನು ಕೇರಳ ಹೈಕೋರ್ಟ್ ವಜಾಗೊಳಿಸಿತು. ಎರ್ನಾಕುಲಮ್‌ನ ಆಶಿಖಿ ಎಂಬುವವರು, ಕೂಟ ಒಂದು ಫ್ರಾಂಚೈಸಿ ಆಧರಿತ ಪಂದ್ಯಾವಳಿಯಾದರೂ ಇದರ ಹೆಸರನ್ನು ಭಾರತದೊಂದಿಗೆ ಜೋಡಿಸಲಾಗಿದೆ. ಇದು ಪಂದ್ಯಾವಳಿಯನ್ನು ರಾಷ್ಟ್ರೀಯ ಕೂಟವೆಂಬಂತೆ ಸೂಚಿಸುತ್ತದೆ. ಹೀಗಾಗಿ ಬಿಸಿಸಿಐ ಈ ಇಂಡಿಯನ್ ಪ್ರೀಮಿಯರ್ ಲೀಗ್ ಹೆಸರಲ್ಲಿ ನಡೆಸುತ್ತಿರುವುದು ಅಕ್ರಮ ಎಂದು ಸಾರ್ವಜನೀಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಬುಧವಾರ ಈ ಬಗ್ಗೆ ವಿಚಾರಣೆ ನಡೆಸಿದ್ದ ನ್ಯಾ. ಸೌಮೆನ್ ಸೇನ್ ಹಾಗೂ ನ್ಯಾ. ಸ್ಯಾಮ್ ಕುಮಾರ್ ವಿ. ಎಮ್. ಅವರಿದ್ದ ವಿಭಾಗೀಯ ಪೀಠವು ಅರ್ಜಿಯನ್ನು ಆಧಾರರಹೀತ ಎಂದು ಪರಿಗಣಿಸಿ ವಜಾಗೊಳಿಸಿದೆ.



ಕಣಕ್ಕಿಳಿದ ಕಿಂಗ್ ಕೊಹ್ಲಿ



ಹೊಸದಿಲ್ಲಿ: ಮುಂದಿನ ವಾರದಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಬೆಂಗಳೂರಿಗೆ ಬಂದಿಳಿದರು. ಹಾಲಿ ಚಾಂಪಿಯನ್ ಬೆಂಗಳೂರು ಮತ್ತು ಹೈದರಾಬಾದ್ ಪಂದ್ಯದೊಂದಿಗೆ ಮಾರ್ಚ್ 28ಕ್ಕೆ ಐಪಿಎಲ್ ಶುರುವಾಗಲಿದೆ. ಇದಕ್ಕೂ ಮುನ್ನ ಲಂಡನ್‌ನಿಂದ ವಿರಾಟ್ ಕೊಹ್ಲಿ ಭಾರತಕ್ಕೆ ಆಗಮಿಸಿದ್ದಾರೆ. ಬೆಂಗಳೂರಿಗೆ ತಲುಪಿದ್ದು, ತಂಡ ಸೇರಿಕೊಂಡಿದ್ದಾರೆ. ಶೀಘ್ರದಲ್ಲೇ ಅಭ್ಯಾಸಕ್ಕಿಳಿಯಬಹುದು. ಇನ್ನೊಂದೆಡೆ ಚೆನ್ನೈ ತಂಡದ ಧೋನಿ ಮತ್ತು ಮುಂಬೈನ ರೋಹಿತ್ ಶರ್ಮ ಕೂಡ ನೆಟ್ಸ್‌ನಲ್ಲಿ ಕಾಣಿಸಿಕೊಂಡಿದ್ದು, ದೇಶದಲ್ಲಿ ಐಪಿಎಲ್ ಜ್ವರ ಶುರುವಾದಂತಿದೆ.

ಥಾಮಸ್ ಮತ್ತು ಉಬರ್ ಕಪ್: ಭಾರತ ಎ ಗುಂಪಿನಲ್ಲಿ

ಹೊಸದಿಲ್ಲಿ: ಥಾಮಸ್ ಮತ್ತು ಉಬರ್ ಕಪ್ ಚಾಂಪಿಯನ್‌ಶಿಪ್ ಡ್ರಾ ಬುಧವಾರ ನಡೆದಿದ್ದು ಏಪ್ರಿಲ್ 24ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆಯಲಿದೆ. ಭಾರತ ಪುರುಷರ ತಂಡವನ್ನು ಎ ಗುಂಪಿನಲ್ಲಿ ಹಾಲಿ ಚಾಂಪಿಯನ್ ಚೀನಾ, ಓಶಿಯಾನಿಯಾ ಚಾಂಪಿಯನ್ ಆಸ್ಟ್ರೇಲಿಯಾ ಮತ್ತು ಪ್ಯಾನ್‌ಅಮ್ ಚಾಂಪಿಯನ್ ಕೆನಡಾ ಜೊತೆ ಸೇರಿಸಲಾಗಿದೆ. ಮಹಿಳಾ ತಂಡಕ್ಕೆ ಇನ್ನಷ್ಟು ಕಠಿಣ ಸವಾಲು ಎದುರಾಗಿದ್ದು, ಚೀನಾ, ಯೂರೋಪಿನ ಬಲಿಷ್ಠ ತಂಡ ಡೆನ್ಮಾರ್ಕ್ ಹಾಗೂ ಉಕ್ರೇನ್ ತಂಡಗಳ ವಿರುದ್ಧ ಆಡಬೇಕಿದೆ. ನಾಲ್ಕು ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಲಿವೆ. 2022ರಲ್ಲಿ ಈ ಪ್ರಶಸ್ತಿ ಗೆದ್ದಿದ್ದ ಭಾರತ ಪುರುಷರ ತಂಡ, ಕಳೆದ ಬಾರಿ ಕ್ವಾರ್ಟರ್ ಫೈನಲ್‌ನಲ್ಲಿ ನಂತರದ ಚಾಂಪಿಯನ್ ಚೀನಾ ವಿರುದ್ಧ ಸೋತು ಹೊರಬಿದ್ದಿತ್ತು.

ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿ

ಅಯೋಧ್ಯೆ: ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿಯಾಗಿದೆ. ಅದು ಸಂಹಾರಕ್ಕಾಗಿ ಅಲ್ಲ ಸಂರಕ್ಷಣೆಗಾಗಿ, ಭಾರತ ಆದರ್ಶವನ್ನು ಮರೆತರೆ ಜಗತ್ತಿನಲ್ಲಿ ಆದರ್ಶ ಮರೆಯಾಗಿಬಿಡುತ್ತದೆ ಎಂದು ಆರ್‌ಎಸ್‌ಎಸ್ ನ ಪ್ರಮುಖರಾದ ಸುರೇಶ ಭಯ್ಯಾಜಿ ಜೋಶಿ ಹೇಳಿದ್ದಾರೆ. ಅಯೋಧ್ಯೆ, ಹಿಂದೂ ಹೊಸವರ್ಷದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕೂಡ ಸಂಜೆಯ ವೇಳೆ ನಡೆದ ರಾಮಕೋಟ್ ವಿಶೇಷ ಪರಿಕ್ರಮದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಶ್ವಕ್ಕೆ ಆದರ್ಶದ ಬಗ್ಗೆ ತಿಳುವಳಿಕೆ ನೀಡುವವರು ಇರುವುದಿಲ್ಲ ಎಂದು ಹೇಳಿದರು. ಹಿಂದೂ ಶಕ್ತನಾಗಿದ್ದು ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿ ಕೊಟ್ಟಿದ್ದಾನೆ ಎಂದರು. ಈ ಕಾರ್ಯಕ್ರಮದಲ್ಲಿ ಹಲವಾರು ಜನ ಸಾಧು,ಸಂತ ಮಹಾತ್ಮರು ಪಾಲ್ಗೊಂಡಿದ್ದರು, ಮತ್ ಗಜೇಂದ್ರ ಮಂದಿರದಿಂದ ಆರಂಭವಾದ ಪರಿಕ್ರಮ ಶ್ರೀ ರಾಮ ಜನ್ಮಭೂಮಿ ಸಮೇತವಾಗಿ ಹಲವಾರು ಮಂದಿರಗಳ ಪರಿಕ್ರಮದ ನಂತರ ಮರಳಿ ಮತ್ ಗಜೇಂದ್ರ ಮಂದಿರಕ್ಕೆ ತಲುಪಿದ ನಂತರ ಪರಿಕ್ರಮ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಕ್ಷೇತ್ರ ಪ್ರಚಾರಕರಾದ ಅನೀಲ ಜಿ, ವೈದೇಹಿ ವಲ್ಲಭ ಶರಣ, ರಾಜ ಕುಮಾರ ದಾಸ ಹೀಗೆ ಹಲವಾರು ಜನ ಪಾಲ್ಗೊಂಡಿದ್ದರು.

ಎಫ್‌ಐಎಚ್ ವಿಶ್ವಕಪ್ ಡ್ರಾ ಬಿಡುಗಡೆ | ಡಿ ಗುಂಪಿನಲ್ಲಿ ಭಾರತ | ಚೀನಾ ಮತ್ತಿತರ ತಂಡಗಳ ವಿರುದ್ಧ ಮಹಿಳೆಯರ ಆಟ

ಹಾಕಿ ವಿಶ್ವಕಪ್‌ನಲ್ಲಿ ಭಾರತ-ಪಾಕ್ ಪಂದ್ಯ

ಹೊಸದಿಲ್ಲಿ: ಭಾರತ ಹಾಗೂ ಪಾಕಿಸ್ತಾನ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗಲು ಸಜ್ಜಾಗಿದ್ದು, ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಹಾಕಿ ವಿಶ್ವಕಪ್ ಪಂದ್ಯಾವಳಿಯ ಪುರುಷರಲ್ಲಿ ಉಭಯ ತಂಡಗಳು ಎದುರಾಗಲಿವೆ. ಮಹಿಳೆಯರ ವಿಭಾಗದಲ್ಲಿ ಭಾರತ ಚೀನಾ ತಂಡವನ್ನು ಮೊದಲ ಪಂದ್ಯದಲ್ಲಿ ಎದುರಿಸಲಿದೆ.

ಎಫ್‌ಐಎಚ್ ಹಾಕಿ ವಿಶ್ವಕಪ್ ಪಂದ್ಯಾವಳಿಯ ಮುಖ್ಯ ಡ್ರಾ ಪಂದ್ಯಗಳ ವೇಳಾಪಟ್ಟಿ ಬಿಡುಗಡೆಯಾಗಿದೆ. ಭಾರತ ಮತ್ತು ಪಾಕಿಸ್ತಾನ ಹಾಕಿ ತಂಡಗಳು ಮತ್ತೆ ಮುಖಾಮುಖಿಯಾಗಲು ಸಜ್ಜಾಗಿವೆ. ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್‌ನಲ್ಲಿ ಈ ಎರಡು ಪೈಪೋಟಿ ತಂಡಗಳು ಡಿ ಗುಂಪಿನಲ್ಲಿವೆ. ಈ ಗುಂಪಿನಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್ ತಂಡಗಳೂ ಸೇರಿವೆ. ಈ ವಿಶ್ವಕಪ್ ಆಗಸ್ಟ್ ತಿಂಗಳಲ್ಲಿ ಬೆಲ್ಜಿಯಂ ಮತ್ತು ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯಲಿದೆ. ಪ್ರೋ ಲೀಗ್ ಪಂದ್ಯಾವಳಿಯಲ್ಲಿ ಹಿನ್ನಡೆ ಅನುಭವಿಸಿದರೂ ಭಾರತ ಏಷ್ಯಾಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಅರ್ಹತೆ ಪಡೆದಿದೆ. ಮಹಿಳೆಯರು ಕೂಡ ಏಷ್ಯಾಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಭಾರತ ಮತ್ತು ಪಾಕಿಸ್ತಾನ ಕೊನೆಯದಾಗಿ 2024ರಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಮುಖಾಮುಖಿಯಾಗಿದ್ದು, ಭಾರತ 2-1 ಅಂತರದಲ್ಲಿ ಜಯ ಸಾಧಿಸಿತ್ತು. ಇತ್ತೀಚಿನ ಪಂದ್ಯಗಳಲ್ಲಿ ಭಾರತ ಮೇಲುಗೈ ಸಾಧಿಸಿದ್ದರೂ, ಒಟ್ಟು ಮುಖಾಮುಖಿ ದಾಖಲೆಗಳಲ್ಲಿ ಪಾಕಿಸ್ತಾನ ಇನ್ನೂ ಮುನ್ನಡೆಯಲ್ಲಿದೆ. ವಿಶ್ವಕಪ್‌ಗೆ ಮುನ್ನ ಈ ಎರಡು ತಂಡಗಳು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿಯೂ ಮತ್ತೆ ಎದುರಾಗಲಿವೆ. ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ತಂಡವನ್ನು ಎ ಗುಂಪಿನಲ್ಲಿ ಅರ್ಜೆಂಟಿನಾ, ನ್ಯೂಜಿಲೆಂಡ್ ಮತ್ತು ಜಪಾನ್ ಜೊತೆ ಸೇರಿಸಲಾಗಿದೆ. ಹಾಲಿ ಚಾಂಪಿಯನ್ ಜರ್ಮನಿ ತಂಡ ಬಿ ಗುಂಪಿನಲ್ಲಿ ಬೆಲ್ಜಿಯಂ, ಫ್ರಾನ್ಸ್ ಮತ್ತು ಮಲೇಶಿಯಾ ಜೊತೆ ಇದೆ.



ಭಾರತಕ್ಕೆ ಯಾವ್ಯಾವ ತಂಡ ಎದುರಾಳಿ?: ಭಾರತ ಇರುವ ಗುಂಪಿನಲ್ಲಿ ಇಂಗ್ಲೆಂಡ್, ವೇಲ್ಸ್ ಹಾಗೂ ಪಾಕಿಸ್ತಾನ ತಂಡಗಳಿವೆ. ವೇಳಾಪಟ್ಟಿ ಇನ್ನೂ ಪ್ರಕಟವಾಗಬೇಕಿರುವ ಹೊತ್ತಿನಲ್ಲಿ ಭಾರತ ಎಫ್‌ಐಎಚ್ ನಲ್ಲಿ ಹಿನ್ನಡೆ ಅನುಭವಿಸಿದೆ. ಈ ಹಿಂದಿನ ಪಂದ್ಯಗಳಲ್ಲಿ ಭಾರತ ಭಾರೀ ಹಿನ್ನಡೆ ಅನುಭವಿಸಿದೆ. ಸತತ ಸೋಲು ಗಳಿಸಿದರೂ, ಪ್ರೋ ಲೀಗ್ ಬಿಟ್ಟು ಬೇರೆ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಮಹಿಳೆಯರಿಗೆ ದೊಡ್ಡ ಸವಾಲು: ಎಫ್‌ಐಎಚ್ ಪ್ರೋ ಲೀಗ್‌ನಲ್ಲಿ ಉತ್ತಮ ಪ್ರದರ್ಶನವನ್ನೇ ನೀಡಿರುವ ಭಾರತ ಮಹಿಳೆಯರ ತಂಡವು ಹೈದರಾಬಾದ್‌ನಲ್ಲಿ ನಡೆದಿದ್ದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಎಲ್ಲಿಲ್ಲದ ಉತ್ತಮ ಪ್ರದರ್ಶನ ನೀಡಿ ರನ್ನರ್-ಅಪ್ ಆಗಿತ್ತು. ಅರ್ಹತೆ ಕೂಡ ಗಿಟ್ಟಿಸಿಕೊಂಡಿತು. ಪ್ರತಿಯೊಬ್ಬ ಆಟಗಾರ್ತಿ ಕೂಡ ಭರ್ಜರಿ ಪ್ರದರ್ಶನ ನೀಡಿರುವುದು ತಂಡ ವಿಶ್ವಾಸದಲ್ಲಿದೆ. ಆದಾಗ್ಯೂ ವಿಶ್ವಕಪ್‌ನಲ್ಲಿ ಭಾರತ ಮಹಿಳಾ ತಂಡವು ಚೀನಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

ಯಾವ ಪಂದ್ಯ ಎಲ್ಲಿ?

ಪುರುಷರ ವಿಭಾಗದಲ್ಲಿ ಎ ಗುಂಪಿನಲ್ಲಿರುವ ತಂಡಗಳ ಪಂದ್ಯವು ನೆದರ್ಲೆಂಡ್ಸ್ ನಲ್ಲಿ ನಡೆಯಲಿವೆ. ಬಿ ಮತ್ತು ಸಿ ಗುಂಪಿನ ಪಂದ್ಯಗಳು ಬೆಲ್ಜಿಯಂನಲ್ಲಿ ಮತ್ತು ಡಿ ಗುಂಪಿನ ಪಂದ್ಯಗಳು ನೆದರ್ಲೆಂಡ್ಸ್ ನಲ್ಲೇ ನಡೆಯಲಿವೆ. ಮಹಿಳೆಯರ ವಿಭಾಗದಲ್ಲೂ ಇದೇ ಮಾದರಿಯಿದ್ದು, ಎ ಮತ್ತು ಡಿ ಪಂದ್ಯಗಳು ನೆದರ್ಲೆಂಡ್ಸ್, ಬಿ-ಸಿ ಪಂದ್ಯಗಳು ಬೆಲ್ಜಿಯಂನಲ್ಲಿ ನಡೆಯಲಿವೆ.

ಪುರುಷರ ಗುಂಪು

- ಎ ಗುಂಪು: ನೆದರ್ಲೆಂಡ್ಸ್, ಅರ್ಜೆಂಟಿನಾ, ನ್ಯೂಜಿಲೆಂಡ್, ಜಪಾನ್
- ಬಿ ಗುಂಪು: ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಮಲೇಶಿಯಾ
- ಸಿ ಗುಂಪು: ಆಸ್ಟ್ರೇಲಿಯಾ, ಸ್ಪೇನ್, ಐರ್ಲೆಂಡ್, ದಕ್ಷಿಣ ಆಫ್ರಿಕಾ
- ಡಿ ಗುಂಪು: ಇಂಗ್ಲೆಂಡ್, ಭಾರತ, ಪಾಕಿಸ್ತಾನ, ವೇಲ್ಸ್

ಮಹಿಳೆಯರ ವಿಭಾಗದಲ್ಲಿ

- ಪೂಲ್ ಎ: ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಚಿಲಿ, ಜಪಾನ್
- ಪೂಲ್ ಬಿ: ಅರ್ಜೆಂಟೀನಾ, ಜರ್ಮನಿ, ಯುಎಸ್‌ಎ, ಸ್ಕಾಟ್ಲೆಂಡ್
- ಪೂಲ್ ಸಿ: ಬೆಲ್ಜಿಯಂ, ಸ್ಪೇನ್, ನ್ಯೂಜಿಲೆಂಡ್, ಐರ್ಲೆಂಡ್
- ಪೂಲ್ ಡಿ: ಚೇನಾ, ಇಂಗ್ಲೆಂಡ್, ಭಾರತ, ದಕ್ಷಿಣ ಆಫ್ರಿಕಾ
- ಮಹಿಳೆಯರ ವಿಶ್ವಕಪ್ ಗುಂಪುಗಳು

ಬೂಮ್ರಾ ವೇತನ ಹೆಚ್ಚಳ?

ಮುಂಬೈ: ವಾರ್ಷಿಕ ಗುತ್ತಿಗೆಯಲ್ಲಿ ಎ ಗ್ರೇಡ್ ನಲ್ಲಿರುವ ಜಸ್‌ಪ್ರೀತ್ ಬೂಮ್ರಾ ಅವರ ವೇತನ ಹೆಚ್ಚುಗೊಳಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಭಾರತ ತಂಡ ಇತ್ತೀಚಿಗೆ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಗೆದ್ದುಕೊಂಡಿದೆ. ಈ ಗೆಲುವಿನಲ್ಲಿ ಬೂಮ್ರಾ ಪಾತ್ರ ಪ್ರಮುಖವಾಗಿರುವುದನ್ನು ಗಮನಿಸಿರುವ ಬಿಸಿಸಿಐ ಅವರಿಗೆ ಉಡುಗೊರೆಯಾಗಿ 2 ಕೋಟಿ ರೂ. ಹೆಚ್ಚುವರಿ ಮೊತ್ತ ನೀಡುವುದಕ್ಕೆ ಮುಂದಾಗಿದೆ ಎಂದು ವರದಿಯಾಗಿದೆ.

ಫೆಬ್ರವರಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಾರ್ಷಿಕ ಗುತ್ತಿಗೆಯ ಪಟ್ಟಿ ಬಿಡುಗಡೆ ಮಾಡಿತ್ತು. ಪ್ರಮುಖ ಬದಲಾವಣೆಯಲ್ಲಿ ಈ ಬಾರಿ ಮೂರೇ ದರ್ಜೆಗಳಲ್ಲಿ ಆಟಗಾರರನ್ನು ವಿಂಗಡಿಸಲಾಗಿದೆ. ಎ ಗ್ರೇಡ್‌ನಲ್ಲಿ ಶುಭಮನ್ ಗಿಲ್, ರವೀಂದ್ರ ಜಡೇಜಾ ಮತ್ತು ಜಸ್‌ಪ್ರೀತ್ ಬೂಮ್ರಾ ಇದ್ದು, ಬಿ ಮತ್ತು ಸಿ ಗ್ರೇಡ್ ನಲ್ಲಿ ಪ್ರಮುಖ ಆಟಗಾರರು ಸೇರಿಕೊಂಡಿದ್ದಾರೆ. ಮತ್ತೊಂದು ಬದಲಾವಣೆಯಲ್ಲಿ ಬಿಸಿಸಿಐ ವಾರ್ಷಿಕ ಮೊತ್ತವನ್ನೂ ಕಡಿತಗೊಳಿಸಿದೆ. ಎ ಗ್ರೇಡ್ ನಲ್ಲಿದ್ದವರಿಗೆ 5 ಕೋಟಿ ರೂ. ಬಿನಲ್ಲಿರುವವರಿಗೆ 3 ಮತ್ತು ಸಿನಲ್ಲಿರುವವರಿಗೆ 2 ಕೋಟಿ ನೀಡುವುದಾಗಿ ಘೋಷಿಸಿತ್ತು.



- ಬಿಸಿಸಿಐ ವಾರ್ಷಿಕ ಗುತ್ತಿಗೆಯಲ್ಲಿ ಬದಲಾವಣೆ ಸಾಧ್ಯತೆ
- ಅಕ್ಷರ್‌ಗೆ ಬಡ್ತಿ ಗಿಫ್ಟ್

ಆದರೆ ಈ ವೇತನದಲ್ಲಿ ಬದಲಾವಣೆ ಮಾಡಿ, ಬೂಮ್ರಾ ಅವರಿಗೆ ಮಾತ್ರ 7 ಕೋಟಿ ರೂ. ನೀಡುವ ಬಗ್ಗೆ ಬಿಸಿಸಿಐ ಚಿಂತನೆ ನಡೆಸುತ್ತಿದೆ. ಇದಲ್ಲದೆ, ಸಿ ಗ್ರೇಡ್‌ನಲ್ಲಿರುವ ಅಕ್ಷರ್ ಪಟೇಲ್ ಅವರಿಗೆ ಬಡ್ತಿ ನೀಡುವ ಕುರಿತು ವರದಿಯಾಗಿದ್ದು, ಕೆ.ಎಲ್. ರಾಹುಲ್, ಹಾರ್ದಿಕ್ ಪಾಂಡ್ಯ ಹಾಗೂ ರಿಷಭ್ ಪಂತ್ ಅವರನ್ನು ಎ ಗ್ರೇಡ್‌ನಲ್ಲಿ ಸೇರಿಸುವ ಚಿಂತನೆ ಕೂಡ ನಡೆಸಿದೆ ಎನ್ನಲಾಗಿದೆ.

ಆರ್‌ಸಿಬಿ ಖರೀದಿಗೆ ಎರಡು ಪಾರ್ಟಿ ನಡುವೆ ಪೈಪೋಟಿ

ಹೊಸದಿಲ್ಲ: ಐಪಿಎಲ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಾರಾಟ ಪ್ರಕ್ರಿಯೆ ಅಂತಿಮ ಹಂತಕ್ಕೆ ಪ್ರವೇಶಿಸಿದ್ದು, ಎರಡು ಪ್ರಮುಖ ಪಾರ್ಟಿಗಳು ಅಂತಿಮ ಪೈಪೋಟಿಗೆ ಉಳಿದಿವೆ ಎಂದು ವರದಿಯಾಗಿದೆ.

ಒಂದು ಕಡೆ ಸ್ವೀಡನ್ ಮೂಲದ ಖಾಸಗಿ ಇಕ್ವಿಟಿ ಸಂಸ್ಥೆ ಇಕ್ಯೂಟಿ ದೊಡ್ಡ ಮೊತ್ತದ ಬಿಡ್ ಸಲ್ಲಿಸಿದೆ. ಇನ್ನೊಂದು ಕಡೆ ಮಣಿಪಾಲ್ ಆಸ್ಪತ್ರೆಗಳ ರಂಜನ್ ಪೈ, ಅಮೆರಿಕದ ಖಾಸಗಿ ಹೂಡಿಕೆ ಸಂಸ್ಥೆ ಕೋಹ್ಲ್‌ಬರ್ಗ್ ಕ್ರಾವಿಸ್ ರಾಬರ್ಟ್ಸ್ ಅಂಡ್ ಕಂಪನಿ ಹಾಗೂ ಸಿಂಗಾಪುರದ ಟೆಮಸೆಕ್ ಸೇರಿಕೊಂಡ ಒಕ್ಕೂಟವೂ ಪೈಪೋಟಿಯಲ್ಲಿ ಇದೆ. ಇದರ ನಡುವೆ ಮ್ಯಾಂಚೆಸ್ಟರ್ ಯುನೈಟೆಡ್ ಸಹ ಮಾಲೀಕರಾದ ಗ್ಲೇಜರ್ ಕುಟುಂಬ ಹಾಗೂ ಆದಾರ್ ಪೂನವಾಲ್ಲಾ ಈ ರೇಸ್‌ನಿಂದ ಹಿಂದೆ ಸರಿದಿದ್ದಾರೆ. ಈ ಒಪ್ಪಂದದ ಮೌಲ್ಯ ಸುಮಾರು 2 ಬಿಲಿಯನ್ ಡಾಲರ್ ಮಟ್ಟದಲ್ಲಿ ಇರಬಹುದು ಎಂದು ಅಂದಾಜಿಸಲಾಗಿದೆ. ಗ್ಲೇಜರ್‌ಗಳು ಸುಮಾರು 14.9 ಸಾವಿರ ಕೋಟಿ ರೂ. ಮೊತ್ತದ ಆಫರ್ ನೀಡಿದ್ದರೆ, ಇಕ್ಯೂಟಿ ಅದರಿಗಿಂತ ಹೆಚ್ಚಾಗಿ ಸುಮಾರು 1.86 ಲಕ್ಷ ಕೋಟಿ ರೂ. ಮಟ್ಟದ ಬಿಡ್ ನೀಡಿದೆ ಎಂದು ವರದಿಯಾಗಿದೆ. ಡಿಯಾಜಿಯೋ ಗುಂಪು ಮಾರ್ಚ್ 31ರೊಳಗೆ ಈ ಒಪ್ಪಂದವನ್ನು ಅಂತಿಮಗೊಳಿಸಲು ಗಡುವು ನಿಗದಿ ಮಾಡಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ. ಇನ್ನೊಂದೆಡೆ, ರಾಜಸ್ಥಾನ್ ರಾಯಲ್ಸ್ ತಂಡಕ್ಕೂ ಸಾಕಷ್ಟು ಹೂಡಿಕೆದಾರರಿಂದ ಆಸಕ್ತಿ ವ್ಯಕ್ತವಾಗಿದೆ. ಈ ಫ್ರಾಂಚೈಸಿಗೆ ಮೂರು ಬಾಂಧವ್ಯ ಬಿಡ್‌ಗಳು ಬಂದಿದ್ದು, ಆದಿತ್ಯ ಬಿರ್ಲಾ ಗುಂಪು ಮುಂಚೂಣಿಯಲ್ಲಿದೆ.



ಹೈದರಾಬಾದ್‌ಗೆ ಕಿಶನ್ ಹಂಗಾಮಿ ನಾಯಕ

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಪ್ಯಾಟ್ ಕಮ್ಮಿನ್ಸ್ ಅವರು ಕೆಲವು ಪಂದ್ಯಗಳ ಮಟ್ಟಿಗೆ ಅಲಭ್ಯರಿರುವ ಬಗ್ಗೆ ಖಚಿತ ಪಡಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಇಶಾನ್ ಕಿಶನ್ ಅವರನ್ನು ಹಂಗಾಮಿ ನಾಯಕರನ್ನಾಗಿ ಮಾಡಿದೆ. ಇನ್ನು 9 ದಿನಗಳಲ್ಲಿ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ಅಭ್ಯಾಸಕ್ಕಿಳಿದಿವೆ. ಲೀಗ್‌ಗಾಗಿ ಎಲ್ಲಾ ಆಟಗಾರರು ಸಜ್ಜಾಗುತ್ತಿದ್ದಾರೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ಗಾಯದ ನಿಟ್ಟಿನಲ್ಲಿ ಕೆಲವು ಪಂದ್ಯಗಳ ಮಟ್ಟಿಗೆ ವಿಕೆಟ್ ಕೀಪರ್-ಬ್ಯಾಟರ್ ಇಶಾನ್ ಕಿಶನ್ ನಾಯಕರನ್ನಾಗಿ, ಅಭಿಷೇಕ್ ಶರ್ಮ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ ಎಂದು ಫ್ರಾಂಚೈಸಿ ಘೋಷಣೆ ಮಾಡಿದೆ. ಗಾಯದ ಬಿಸಿ ಬಹುತೇಕ ಎಲ್ಲ ಫ್ರಾಂಚೈಸಿಗಳಿಗೂ ತಟ್ಟುತ್ತಿದೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ತೀವ್ರ ಗಾಯದಿಂದ ಅಲಭ್ಯರಾಗಿದ್ದಾರೆಂದು ಹೇಳಲಾಗುತ್ತಿದೆ. ಹೀಗಿರುವಾಗ ವಿಶ್ವಕಪ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ಮಿಂಚಿರುವ ಇಶಾನ್ ಕಿಶನ್ ಅವರಿಗೆ ನಾಯಕತ್ವ ನೀಡಲಾಗಿದೆ. ವೈಯಕ್ತಿಕ ಪ್ರದರ್ಶನ ಹೊರತುಪಡಿಸಿ, ಅವರು ಜಾರ್ಖಂಡ್ ತಂಡವನ್ನು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ನಾಯಕರಾಗಿ ಗೆಲ್ಲಿಸಿದ್ದಾರೆ.



ಜಾಲತಾಣ ನಿರ್ಬಂಧ ಇನ್ನಷ್ಟು ವಿಸ್ತಾರ: ಸಚಿವ ಅಶ್ವಿನಿ ವೈಷ್ಣವ್

ಹೊಸದಿಲ್ಲಿ: ಐಟಿ ಮಾತ್ರವಲ್ಲ, ಸರಕಾರದ ಇತರ ಎಲ್ಲಾ ಮಹತ್ವಪೂರ್ಣ ಸಚಿವಾಲಯಗಳೂ ಸಾಮಾಜಿಕ ಜಾಲತಾಣ ನಿರ್ಬಂಧಿಸುವ ಅಧಿಕಾರವನ್ನು ಶೀಘ್ರವೇ ಪಡೆಯಲಿವೆ. ಐಟಿ ಕಾಯ್ದೆಯನ್ನೇ ಮಾರ್ಪಾಡು ಮಾಡುವ ಬದಲು, ಈಗಾಗಲೇ ಅಸ್ತಿತ್ವದಲ್ಲಿರುವ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನಕಲಿ ಅಥವಾ ಹಾನಿಕಾರಕ ವಿಚಾರಗಳ ಪ್ರಸಾರ ತಡೆಹಿಡಿವ ನಿಟ್ಟಿನಲ್ಲಿ , ಸರ್ಕಾರದ ಬಹುತೇಕ ಖಾತೆಗಳಿಗೂ ಸಾಮಾಜಿಕ ಜಾಲತಾಣ ಬ್ಲಾಕಿಂಗ್ ಆದೇಶ ಹೊರಡಿಸುವ ಅಧಿಕಾರವೀಗ ಪ್ರಸ್ತಾವವೊಂದು ಅಂತರ್ ಸಚಿವಾಲಯ ತಂಡದ ಪರಿಗಣನೆಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ಮುಖೇನ, ತಪ್ಪು ಮಾಹಿತಿಗಳ ಪ್ರಸಾರವನ್ನು ಪರಿಣಾಮಕಾರಿಯಾಗಿ ತಡೆ ಹಿಡಿಯುವುದು ಪ್ರಸ್ತುತ ಉಪಕ್ರಮ ಹಿಂದಿನ ಮೂಲೋದ್ದೇಶವಾಗಿದೆ. ಸರಕಾರದ ಪ್ರಸ್ತುತ ಉಪಕ್ರಮದಿಂದ ನಕಲಿ ಅಥವಾ ತಪ್ಪು ಮಾಹಿತಿಗಳು ವೈರಲ್ ಆಗುವುದನ್ನು ಯಶಸ್ವಿಯಾಗಿ ತಡೆಹಿಡಿಯಲು ಸಾಧ್ಯವೆಂದು ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಒಮ್ಮೆ ಡೀಪ್‌ಫೇಕ್‌ಗಳನ್ನು ಗುರುತಿಸಿ, ಪಿಐಬಿ ಮುಖೇನ ಸತ್ಯಶೋಧಿಸಿದಲ್ಲಿ, ಜನರಿಗೆ ತಪ್ಪು ಮಾಹಿತಿ ರವಾನೆಯಾಗೋದನ್ನು ತ್ವರಿತ ತಡೆಹಿಡಿಯಲು ಸಾಧ್ಯವಾಗುವುದು ಎಂದು ಸಚಿವರು ತಿಳಿಸಿದ್ದಾರೆ.



ರಕ್ಷಣೆ, ವಿದೇಶಾಂಗ ಖಾತೆಗೂ ವಿಸ್ತರಣೆ?: ಸದ್ಯ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ದ ಕಲಂ 69ಎ ಅನ್ವಯ ಬ್ಲಾಕ್ ಆದೇಶ ಹೊರಡಿಸುವ ಅಧಿಕಾರ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಗೆ ಸೀಮಿತವಾಗಿದೆ. ಈ ಅಧಿಕಾರವನ್ನು ವಿದೇಶ ವ್ಯವಹಾರಗಳ ಖಾತೆ, ಹಣಕಾಸು ಖಾತೆ ಮತ್ತು ರಕ್ಷಣೆಯಂತಹ ಪ್ರಮುಖ ಖಾತೆಗಳಿಗೂ ವಿಸ್ತರಿಸುವ ಬಗ್ಗೆ ಕೇಂದ್ರ ಸರ್ಕಾರ ಪರಾಮರ್ಶೆ ನಡೆಸುತ್ತಿದೆ.

ಬಹುತೇಕ ರಾಷ್ಟ್ರೀಯ ಭದ್ರತೆ, ವಿದೇಶ ವ್ಯವಹಾರಗಳು, ಆರ್ಥಿಕ ಸ್ಥಿರತೆ ಇತ್ಯಾದಿ ಸೂಕ್ಷ್ಮಸಂವೇದಿ ರಂಗಗಳನ್ನು ಟಾರ್ಗೆಟ್ ಮಾಡಿಕೊಂಡು ಡೀಪ್‌ಫೇಕ್ ಮಾಡಲಾಗುತ್ತಿದೆ. ಸರ್ಕಾರದ ಇತರ ಪ್ರಮುಖ ಖಾತೆಗಳಿಗೂ ಡೀಪ್‌ಫೇಕ್ ವಿರುದ್ಧ ಕಾರ್ಯಾಚರಿಸುವ ಅಧಿಕಾರವಿತ್ತಲ್ಲಿ, ಇಂತಹ ಬೆದರಿಕೆಗಳಿಗೆ ಸಕಾಲಿಕವಾಗಿ ಪ್ರತ್ಯುತ್ತರಿಸಲು ಸಾಧ್ಯವಾಗುವುದೆಂಬುದು ಸರ್ಕಾರದ ಭರವಸೆ. ಮಾಜಿ ಸೇನಾಧಿಕಾರಿ ಮನೋಜ್ ಪಾಂಡೆ ಕುರಿತು ನಕಲಿ ವಿಡಿಯೊ ವೈರಲ್ ಆದ ಹಿನ್ನೆಲೆಯಲ್ಲಿ ಸರಕಾರ ಪ್ರಸ್ತುತ ಅಧಿಕಾರ ವಿಕೇಂದ್ರೀಕರಣ ಚಿಂತನೆ ನಡೆಸಿದೆ.

ಭಾರತೀಯ ಸೇನೆ ನೈತಿಕ ಪಡೆಯಾಗೋ ಬದಲು ಜನಾಂಗೀಯ ಸ್ವರೂಪ ಪಡೆಯುತ್ತಿದೆ ಮತ್ತು ಶೀಘ್ರ ದಂಗೆ ಸಾಧ್ಯತೆಯೂ ಇದೆ ಎಂದು ಮನೋಜ್ ಪಾಂಡೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆಂದು ಆರೋಪಿಸುವ ಡೀಪ್‌ಫೇಕ್ ವಿಡಿಯೊ ಈಚೆಗೆ ವೈರಲ್ ಆಗಿತ್ತು. ವಿಡಿಯೋದಲ್ಲಿ ಅಸ್ಸಾಂ ಬಗ್ಗೆಯೂ ಉಲ್ಲೇಖವಿದೆ. ಅಸ್ಸಾಂನ ಸಶಸ್ತ್ರಪಡೆ ವಿದೇಶಿ ಪ್ರಭಾವಕ್ಕೀಡಾಗಿದೆ ಎಂದು ವಿಡಿಯೋದಲ್ಲಿ ಸುಳ್ಳು ಮಾಹಿತಿ ನೀಡಲಾಗಿತ್ತು. ಬೆನ್ನಲ್ಲೇ, ಈ ವಿಡಿಯೋ ನಕಲಿ, ಇಂತಹ ಮಿಥ್ಯೆಯನ್ನು ಪಾಕಿಸ್ತಾನ ಪ್ರಸಾರ ಮಾಡುತ್ತಿದೆ. ದೇಶದ ಸೇನೆ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಿಸುವುದು ಈ ರೀತಿಯ ನಕಲಿ ವಿಡಿಯೋ ಹಿಂದಿನ ದುರುದ್ದೇಶವೆಂದು ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋ (ಪಿಐಬಿ) ತಕ್ಷಣ ಸ್ಪಷ್ಟಪಡಿಸಿತ್ತು. ಇಂತಹ ವಿಡಿಯೋಗಳ ಶೇರ್ ಮಾಡೋ ಮುನ್ನ, ಮಾಹಿತಿಗಳ ಸತ್ಯಾಸತ್ಯತೆಯನ್ನು ನಂಬಲಾರ್ಹ ಮೂಲಗಳ ಮುಖೇನ ದೃಢೀಕರಿಸಿಕೊಳ್ಳುವಂತೆ ಸರಕಾರ ಜನರಿಗೆ ಸಲಹೆ ಮಾಡಿದೆ.

ಆಮಿಷಗಳಿಗೆ ಒಳಗಾಗಬೇಡಿ

ಬೆಂಗಳೂರು: ಪರೀಕ್ಷಾ ಸಿದ್ಧತೆಗಾಗಿ ಈಗಾಗಲೇ 3 ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗಿದ್ದು, ಇದು ಮಕ್ಕಳಲ್ಲಿನ ಭಯವನ್ನು ಹೋಗಲಾಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳು ಆಮಿಷಗಳಿಗೆ ಒಳಗಾಗಿ ತಪ್ಪು ದಾರಿ ಹಿಡಿದು ಮೋಸಹೋಗಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ವಿನಂತಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಆರಂಭದ ಹಿನ್ನೆಲೆಯಲ್ಲಿ ಬೆಂಗಳೂರಿನ ಮಲ್ಲೇಶ್ವರದ 13ನೇ ಅಡ್ಡರಸ್ತೆಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ (ಕೆಪಿಎಸ್) ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಪರೀಕ್ಷಾ ಅಕ್ರಮಗಳನ್ನು ತಡೆಯಲು ಎಲ್ಲ ಕೇಂದ್ರಗಳಲ್ಲೂ ವೆಬ್‌ಕ್ಯಾಸ್ಟಿಂಗ್ ಮೂಲಕ ನಿಗಾ ವಹಿಸಲಾಗಿದೆ. ಪ್ರತಿದಿನ ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿ ಪೊಲೀಸ್ ಸಿಬ್ಬಂದಿಯೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುತ್ತಿದೆ. ಆಯಾ ಜಿಲ್ಲಾ ಆಡಳಿತದ ಮೂಲಕ ಪರೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಹಾರೈಸಿದರು.

ಏ.7ಕ್ಕೆ ಪಿಯು ಫಲಿತಾಂಶ ನಿರೀಕ್ಷೆ: ಪದವಿ ಪೂರ್ವ ಶಿಕ್ಷಕರು ಮೌಲ್ಯಮಾಪನ ಬಹಿಷ್ಕಾರ ಮಾಡುತ್ತಿಲ್ಲ, ಆದ್ದರಿಂದ ತಾತ್ಕಾಲಿಕ ಗುರಿಯಂತೆ ಏ.7ಕ್ಕೆ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸುವ ನಿರೀಕ್ಷೆಯಿದೆ ಎಂದರು. ಹಾಗೆಯೇ 1ನೇ ತರಗತಿಗೆ ಸೇರಲು 6 ವರ್ಷ ಕಡ್ಡಾಯವಾಗಬೇಕು ಎಂಬ ನಿಯಮದ ಸಡಿಲಿಕೆಯ ಬಗ್ಗೆ ಮುಖ್ಯಮಂತ್ರಿಗಳು ಹೇಳಿದಂತೆ ನಡೆಯುತ್ತೇವೆ ಎಂದು ಸಚಿವರು ತಿಳಿಸಿದರು.

ಪರೀಕ್ಷೆಗೆ 12,175 ಮಂದಿ ಗೈರು

ಬುಧವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಪ್ರಥಮ ಭಾಷೆ ಪರೀಕ್ಷೆಗೆ 12,175 ಮಂದಿ ಗೈರಾಗಿದ್ದಾರೆ. ಈ ಪರೀಕ್ಷೆಗೆ 8,28,477 ಮಂದಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಈ ಪೈಕಿ 8,16,302 ಮಂದಿ ಪರೀಕ್ಷೆ ಬರೆದಿದ್ದಾರೆ. ಈ ಮೂಲಕ ಶೇ. 98.53 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಮಾ.23 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.15ರವರೆಗೆ ವಿಜ್ಞಾನ ಮತ್ತು ರಾಜ್ಯಶಾಸ್ತ್ರ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ ಪರೀಕ್ಷೆಗಳು ನಡೆಯಲಿವೆ.

ಪಾಲಿಕೆ ಗದ್ದುಗೆ ಹಿಡಿದ ಬಿಜೆಪಿ

ಬೆಳಗಾವಿ: ಕುತೂಹಲ ಕೆರಳಿಸಿದ ಬೆಳಗಾವಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ದಾಖಲಿಸಿದೆ. ಕಾಂಗ್ರೆಸ್ ನೀಡಿದ ಪೈಪೋಟಿ ನಡುವೆಯೂ ಸಂಖ್ಯಾಬಲ ಪ್ರದರ್ಶಿಸಿದ ಕೇಸರಿ ಪಡೆ, ಪಾಲಿಕೆಯ ಅಧಿಕಾರ ತನ್ನದಾಗಿಸಿಕೊಂಡಿದೆ.

ಬುಧವಾರ ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ನೇಕಾರ ಸಮುದಾಯದ ಪ್ರೀತಿ ಕಾಮಕರ್ ಹಾಗೂ ಉಪಮೇಯರ್ ಆಗಿ ಲಿಂಗಾಯತ ಸಮುದಾಯದ ಹನುಮಂತ ಕೊಂಗಾಲಿ ಆಯ್ಕೆಯಾಗಿದ್ದಾರೆ. ಪ್ರಾದೇಶಿಕ ಆಯುಕ್ತ ಜಾನಕಿ ಅವರ ಸಮ್ಮುಖದಲ್ಲಿ ನಡೆದ ಚುನಾವಣೆಯಲ್ಲಿ, ಬಿಜೆಪಿ ಅಭ್ಯರ್ಥಿಗಳು ತಲಾ 39 ಮತಗಳನ್ನು ಪಡೆಯುವ ಮೂಲಕ ಸ್ಪಷ್ಟ ಬಹುಮತ ಸಾಬೀತು ಪಡಿಸಿದರು. ಕಾಂಗ್ರೆಸ್ ಅಭ್ಯರ್ಥಿಗಳಾದ ಖುರ್ಷಿದಾ ಮುಲ್ಲಾ ಹಾಗೂ ಮೋದಿನಸಾಬ್ ಮತ್ತೇವಾಲೆ ತಲಾ 20 ಮತಗಳನ್ನು ಪಡೆದು ಪರಾಭವಗೊಂಡರು. ಅವಿರೋಧ ಆಯ್ಕೆಯ ನಿರೀಕ್ಷೆಯಲ್ಲಿದ್ದ ಬಿಜೆಪಿಗೆ ಕಾಂಗ್ರೆಸ್ ಸ್ಪರ್ಧೆಯೊಡ್ಡಿದರೂ ಅಂತಿಮವಾಗಿ ಸಂಖ್ಯಾಬಲದೊಂದಿಗೆ ಬಿಜೆಪಿ ವಿಜಯಮಾಲೆ ಧರಿಸಿತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಕೇವಲ ರಾಜಕೀಯ ಸಮೀಕರಣವನ್ನಷ್ಟೇ ಅಲ್ಲದೆ, ಪ್ರಾದೇಶಿಕ ಅಸ್ಮಿತೆಗೂ ಆದ್ಯತೆ ನೀಡಿದ್ದು ವಿಶೇಷ. ಆಯ್ಕೆಯಾದ ಇಬ್ಬರೂ ಅಭ್ಯರ್ಥಿಗಳು ಅಪ್ಪಟ ಕನ್ನಡಿಗರಾಗಿರುವುದು ಕನ್ನಡಪರ ಸಂಘಟನೆಗಳ ಮೆಚ್ಚುಗೆಗೆ ಪಾತ್ರವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಮಾತ್ರ ಭಾಗವಹಿಸಿದ್ದು, ಸಂಸದರು ಹಾಗೂ ಎಂಎಲ್ಸಿಗಳ ಗೈರು ಹಾಜರಿ ಕಂಡು ಬಂದಿತು. ಆದರೂ, ಎರಡೂ ಪ್ರಮುಖ ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಬೆಳಗಾವಿ ಪಾಲಿಕೆಯಲ್ಲಿ ತನ್ನ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದೆ ಎಂದು ಪಾಲಿಕೆಯ ನೂತನ ಮೇಯರ್-ಉಪಮೇಯರ್‌ಗೆ ಅಭಿನಂದನೆ ಸಲ್ಲಿಸಲಾಗುತ್ತಿದೆ.

ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣ


39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದು, ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಲೋಕಸಭೆ ಚುನಾವಣೆ ವೇಳೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಆಗಿತ್ತು. ಈ ಕುರಿತು 2024 ರ ಲೋಕಸಭಾ ಚುನಾವಣೆಯ ಜೆಡಿಎಸ್ ಚುನಾವಣೆ ಏಜೆಂಟ್ ವಕೀಲ ಪೂರ್ಣಚಂದ್ರ ಅವರು ಪೆನ್‌ಡ್ರೈವ್ ಹಂಚಿಕೆ ಮಾಡಿದವರ ವಿರುದ್ಧ ದೂರು ನೀಡಿದ್ದರು. ಆಧರಿಸಿ ತನಿಖೆ ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್ ಡ್ರೈವ್ ಖರೀದಿಸಿದ್ದರು. ಹಾಸನದಲ್ಲೇ 70 ಪೆನ್‌ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ. ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿತ್ತು. ಎಸ್‌ಐಟಿ ತನಿಖೆ ವೇಳೆ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ. 70 ಪೆನ್ ಡ್ರೈವ್ ಖರೀದಿಸಿ ವಿಡಿಯೋ ವೈರಲ್ ಮಾಡಿರುವುದು ತನಿಖೆ ವೇಳೆ ಬಹಿರಂಗವಾಗಿದೆ. ಈ ಸಂಬಂಧ 277 ಸಾಕ್ಷಿಗಳ ಹೇಳಿಕೆಯನ್ನು ಎಸ್‌ಐಟಿ ದಾಖಲಿಸಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್ ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ. ಪ್ರಕರಣದಲ್ಲಿ ಎರಡು ಪಕ್ಷದ ಕಾರ್ಯಕರ್ತರ ವಿರುದ್ಧ ಆರೋಪ ಕೇಳಿಬಂದಿದೆ. ವಿಡಿಯೋ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹೆಸರು ಕೈಬಿಡಲಾಗಿದೆ. ತನಿಖೆ ಪೂರ್ಣಗೊಳಿಸಿ ಹಾಸನ ಕೋರ್ಟ್‌ಗೆ ಎಸ್‌ಐಟಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಯಾರು ಪ್ರಮುಖ ವ್ಯಕ್ತಿಗಳು ಸಹ ಇದ್ದಾರೆ ಅವರ ಹೆಸರು ಬಹಿರಂಗಗೊಳಿಸಬೇಕು ಎಂದು ದೂರುದಾರ ಹಾಗೂ ವಕೀಲ ಪೂರ್ಣಚಂದ್ರ ಅವರು ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಲೋಕಸಭಾ ಚುನಾವಣೆ ವೇಳೆ ಜಾತ್ಯಾತೀತ ಜನತಾದಳದ ಅಭ್ಯರ್ಥಿ ಸೋಲಿಸಬೇಕು ಎಂದು ಸಂಚು ಹೂಡಿ ರಸ್ತೆ, ರಸ್ತೆಯಲ್ಲಿ ಪೆನ್‌ಡ್ರೈವ್ ಹಂಚಿದರು. ಹಾಸನ ಜಿಲ್ಲೆಗೆ ಅಂಟಿದ ಕಳಂಕವನ್ನು ತೊಡೆದು ಹಾಕಬೇಕೆಂದು ಯಾರು ಹಂಚಿದರು ಅವರ ವಿರುದ್ಧ ದೂರು ಸಲ್ಲಿಸಿದ್ದೆ, ಅದರ ತನಿಖೆ ಪೂರ್ಣಗೊಳಿಸಿ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಆದರೆ ನಾನು ಕೊಟ್ಟ ದೂರಿನಲ್ಲಿ ಇದ್ದಂತಹ ಹೆಸರಗಳನ್ನು ಚಾರ್ಜ್‌ಶೀಟ್‌ನಲ್ಲಿ ಎಸ್‌ಐಟಿ ತಂಡ ಕೈಬಿಟ್ಟಿದ್ದಾರೆ. ಇನ್ನಷ್ಟು ಆಳವಾಗಿ ತನಿಖೆ ನಡೆಸಿ ಅಡಿಷನಲ್ ಚಾರ್ಜ್‌ಶೀಟ್ ಸಲ್ಲಿಸಬೇಕು ಎಂದು ಒತ್ತಾಯಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5928

ಎಡದಿಂದ ಬಲಕ್ಕೆ
1.ಸಂಸಾರವೆಂಬ ಬಂಧನ (4)
3.ಶುಭಲಕ್ಷಣಗಳಿಂದ ಕೂಡಿದ ಆನೆ (4)
5.ಜನರ ಕಡೆಗೆ ತಿರುಗಿದ ಮಡಿವಾಳ (3)
7.ಲಿಖಿತವಾದ ಒಪ್ಪಂದವಿದು (4)
9.ಮನುಷ್ಯ ಜಾತಿಯಿಲ್ಲಿ ತಿರುಗಿದೆ (4)
11.ವಸ್ತು-ಹಣ ಕೊಡದೆ ಉಳಿಸಿಕೊಂಡವನು (4)
14.ವಿಷ್ಣು, ಶಿವರನ್ನು ಒಳಗೊಂಡ ನಗರ (4)
16.ಕಡೆಯ ಸಲ ನೋಡಿದಾಗ ಕಂಡ ಎಲ್ಲವೂ (3)
17.ಸ್ಥಿರವಾಗಿ ನೆಲೆಸು-ತಳವೂರು (4)
18.ಅನುಮಾನ ಬರದಂತಿರುವ ಸಂಚಿನ ರಹಸ್ಯ (4)

ಮೇಲಿನಿಂದ ಕೆಳಕ್ಕೆ
2.ಇದು ಅರಣ್ಯದಲ್ಲಿ ಹುಟ್ಟಿದುದು (4)
4.ಸಮಯ ತಿಳಿಸುವ ಸಾಧನ (4)
5.ಮೇರೆ ಮೀರಿ ಹೋದಾಗ ಕಂಡ ಲಕ್ಷ್ಮಿ (2)
6.ಕಲಹದಲ್ಲಡಗಿದ ಮಧುರವಾದುದು (2)
8.ತ್ರಿಲೋಕಸಂಚಾರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಕುರಿಯ ನಡುವೆ ಹುಲ್ಲಿನ ಮೆದೆಯಿದೆ (3)
12.ಕೋಪದಿಂದ ಕೆಟ್ಟಮಾತುಗಳನ್ನಾಡು (4)
13. ಇದು ಸತ್ವದಿಂದ ಕೂಡಿದ್ದು (2)
14. ಇದು ಬಲರಾಮನ ಆಯುಧ (2)
15. ಲೆಕ್ಕಹಾಕು-ಯೋಜಿಸು ಎಂಬರ್ಥದ ಶಬ್ದ (4)

5927 ಉತ್ತರ

ಎಡದಿಂದ ಬಲಕ್ಕೆ: 2.ಮರುತ 5.ಕೀರ್ತಿವಂತ 6.ಪಾಠಹೇಳು 7.ಕದನ 8.ವರಿಸು 10.ಸಂಚಾಲಕ 12.ಕುಂಜರಾರಿ 14.ಸಪಾಟು 15.ಸುಧಾಕರ 16.ಪರಿತ್ಯಕ್ತ

ಮೇಲಿನಿಂದ ಕೆಳಕ್ಕೆ : 1.ವಕೀಲ 2.ಮತದಾನ 3.ತಪಾಸಿಸು 4.ಬಾಳುವೆ 7.ಚಾಲಕ 9.ವಜೀರಾ 10.ಸಂಕೇತಿಸು 11.ಕಸವರ 12.ಕುಂಟುನೆಪ 13.ರಿಣಮುಕ್ತ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಕಿರು ಸುದ್ದಿ

ಉತ್ತಮ ಫಲಿತಾಂಶ ಬರಲು ಕ್ರಮ: ಬಿಇಒ ಗಂಗಾರೆಡ್ಡಿ



• ಗೌರಿಬಿದನೂರು: ಈ ವರ್ಷದ ಹತ್ತನೇ ತರಗತಿ ಪಬ್ಲಿಕ್ ಪರೀಕ್ಷೆ ಬುಧವಾರ ಕನ್ನಡ ಭಾಷಾ ಪರೀಕ್ಷೆಯೊಂದಿಗೆ ಪ್ರಾರಂಭವಾಗಿದೆ. ತಾಲೂಕಿನಲ್ಲಿ ಸರ್ಕಾರಿ ಅನುದಾನಿತ, ಅನುದಾನ ರಹಿತ 53 ಶಾಲೆಯಿಂದ 3214 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ ಗಂಡು ಮಕ್ಕಳು 1496 ಮಂದಿ ಹಾಗು ಹೆಣ್ಣು ಮಕ್ಕಳು 1718 ಮಂದಿ ಪರೀಕ್ಷೆಯನ್ನು ತೆಗದುಕೊಂಡಿದ್ದಾರೆ. ಏ.2ರಂದು ಸಮಾಜ ವಿಜ್ಞಾನ ಪರೀಕ್ಷೆ ಯೊಂದಿಗೆ ಮುಕ್ತಾಯವಾಗಲಿದೆ. ಇಂದಿನ ಕನ್ನಡ ಭಾಷಾ ಪರೀಕ್ಷೆ ಬರೆದು ಬಂದ ವಿದ್ಯಾರ್ಥಿಗಳನ್ನು ಪತ್ರಕರ್ತರು ಮಾತನಾಡಿಸಿದಾಗ ಪರೀಕ್ಷಾ ಕೇಂದ್ರಗಳ ಕೋಠಡಿಗಳಲ್ಲಿ ಉತ್ತಮ ವ್ಯವಸ್ಥೆ ಮಾಡಲಾಗಿದೆ. ಕುಡಿಯಲು ನೀರು, ಪ್ರಥಮ ಚಿಕಿತ್ಸಾ ವೈದ್ಯ ಸೌಲಭ್ಯವನ್ನು ಒದಿಗಿಸಲಾಗಿದೆ ಎಂದರು. ಇಂದಿನ ಕನ್ನಡ ಪರೀಕ್ಷಾ ಪ್ರಶ್ನ ಪತ್ರಿಕೆ ಸುಲಭವಾಗಿತ್ತು ಎಂದು ತಿಳಿಸಿದರು. ಪರೀಕ್ಷೆ ಕೊಠಡಿ ಮೇಲ್ವಿಚಾರಕರು ಪರೀಕ್ಷಾರ್ಥಿಗಳಿಗೆ ಸಲಹೆ, ಸೂಚನೆಯನ್ನು ನೀಡಿದರು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಗಳಾದ ಗಂಗರೆಡ್ಡಿ ಮಾತನಾಡುತ್ತಾ ಈ ಬಾರಿ ಉತ್ತಮ ಫಲಿತಾಂಶ ಬರಲು ಕ್ರಮ ಕೈಗೊಳ್ಳಲಾಗಿದೆ. ವಿಧ್ಯಾರ್ಥಿಗಳಿಗೆ ಭಾಷಾವಾರು ಪ್ರತ್ಯೇಕ ಬೋಧನೇ ನೀಡಲಾಗಿದೆ. ವಿದ್ಯಾರ್ಥಿಗಳು ಮನಸಿನಲ್ಲಿ ಭಯವನ್ನು ಬಿಟ್ಟು, ಪರೀಕ್ಷೆ ಬರೆಯಬೇಕೆಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು

ಮನೆಗಳಲ್ಲಿ ಸರಣಿ ಕಳವು: ಚಿನ್ನಾಭರಣ ವಶ

• ಬೆಂಗಳೂರು: ಸರಣಿ ಮನೆ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ನಂದಿನಿ ಲೇಔಟ್ ಪೊಲೀಸ್ ಠಾಣಾ ಪೊಲೀಸರು ಬಂಧಿಸಿ, ಆರೋಪಿಗಳಿಂದ ಸುಮಾರು 24.60 ಲಕ್ಷ ರೂ. ಮೌಲ್ಯದ 166 ಗ್ರಾಂ ಚಿನ್ನಾಭರಣ ಹಾಗೂ 480 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ನಂದಿನಿ ಲೇಔಟ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರತ್ಯೇಕ ಮನೆ ಕಳ್ಳತನ ಪ್ರಕರಣಗಳ ಬೆನ್ನಟ್ಟಿದ ಪೊಲೀಸರು, ಬಾತ್ಮೀದಾರರ ಮಾಹಿತಿ ಹಾಗೂ ತಾಂತ್ರಿಕ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದರು. ವಿಚಾರಣೆ ವೇಳೆ ಆರೋಪಿಗಳು ತಾವು ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದು, ನಂದಿನಿ ಲೇಔಟ್ ವ್ಯಾಪ್ತಿಯಲ್ಲೇ ಒಟ್ಟು ಐದು ಮನೆಗಳಲ್ಲಿ ಕಳ್ಳತನ ಮಾಡಿರುವುದಾಗಿ ಬಾಯ್ಬಿಟ್ಟಿದ್ದಾರೆ. ಕಳವು ಮಾಡಿದ ಮಾಲನ್ನು ಆರೋಪಿಗಳು ಶ್ರೀರಾಂಪುರದ ಜ್ಯುವೆಲ್ಲರಿ ಅಂಗಡಿ ಹಾಗೂ ಕೆಜಿಎಫ್‌ನ ಚಿನ್ನದ ಕೆಲಸ ಮಾಡುವ ಅಂಗಡಿಗಳಲ್ಲಿ ಮಾರಾಟ ಮಾಡಿದ್ದರು. ಆರೋಪಿಗಳು ನೀಡಿದ ಮಾಹಿತಿಯ ಮೇರೆಗೆ ವಿವಿಧೆಡೆ ದಾಳಿ ನಡೆಸಿ, ಕಳವಾಗಿದ್ದ ಒಟ್ಟು 166 ಗ್ರಾಂ ಚಿನ್ನ ಹಾಗೂ 480 ಗ್ರಾಂ ಬೆಳ್ಳಿಯನ್ನು ವಶಪಡಿಸಿಕೊಂಡಿದ್ದಾರೆ. ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಯಶಸ್ವಿ ಕಾರ್ಯಾಚರಣೆಯು ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಅವರ ಮಾರ್ಗದರ್ಶನದಲ್ಲಿ ಹಾಗೂ ಯಶವಂತಪುರ ಉಪವಿಭಾಗದ ಎಸಿಪಿ ಮೇರಿ ಶೈಲಜಾ ಅವರ ನೇತೃತ್ವದಲ್ಲಿ ನಡೆದಿದೆ.

ನಂದಿನಿ ಲೇಔಟ್ ಇನ್ಸ್‌ಪೆಕ್ಟರ್ ಗಣಪತಿ ಆರ್.ಎಲ್ ಮತ್ತು ಸಿಬ್ಬಂದಿ ತಂಡ ಯಶಸ್ವಿಯಾಗಿದೆ.

ಅಕ್ರಮ ಶಸ್ತ್ರಾಸ್ತ್ರ ಸರಬರಾಜು: ಭೂಪಾಲ್‌ನಲ್ಲಿ ಬಂಧನ

• ಬೆಂಗಳೂರು: ಅಕ್ರಮವಾಗಿ ಶಸ್ತ್ರಾಸ್ತ್ರವನ್ನು ಸರಬರಾಜು ಮಾಡುತ್ತಿದ್ದ ಜಾಲವನ್ನು ಬೇದಿಸುವಲ್ಲಿ ಸಿಸಿಬಿ ಪೊಲೀಸರು ಯಶಸ್ವಿಯಾಗಿದ್ದಾರೆ. ಮಧ್ಯಪ್ರದೇಶದ ಭೂಪಾಲ್‌ಲ್ಲಿ ಅಡಗಿದ್ದ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದ್ದು, ಆತನಿಂದ ಮೂರು ಕಂಟ್ರಿಮೇಡ್ ಪಿಸ್ತೂಲ್, ಒಂದು ರಿವಾಲ್ವರ್‌ನ ಬಿಡಿಭಾಗಗಳು ಹಾಗೂ ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಫೆ.25ರಂದು ಸಿಸಿಬಿಯ ಆರ್ಥಿಕ ಅಪರಾಧ ದಳದಲ್ಲಿ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣವೊಂದು ದಾಖಲಾಗಿತ್ತು. ಅಂದು ತನಿಖೆ ನಡೆಸಿದ್ದ ಪೊಲೀಸರು ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆದು, ಅವರಿಂದ ಒಂದು 0.32 ಎಂ.ಎಂ. ಕಂಟ್ರಿಮೇಡ್ ಪಿಸ್ತೂಲ್ ಹಾಗೂ 50 ಜೀವಂತ ಗುಂಡುಗಳನ್ನು ವಶಕ್ಕೆ ಪಡೆದಿದ್ದರು. ಈ ಇಬ್ಬರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದ ಮುಖ್ಯ ಆರೋಪಿಯು ತಲೆಮರೆಸಿಕೊಂಡಿದ್ದನು. ಇದನ್ನು ಬೆನ್ನತಿದ ಸಿಸಿಬಿ ಪೊಲೀಸರು ತನಿಖೆ ತೀವ್ರಗೊಳಿಸಿ, ಆರೋಪಿ ಮೂಲವನ್ನು ಹಿಡಿದು ಮಧ್ಯಪ್ರದೇಶಕ್ಕೆ ತೆರಳಿದ್ದರು. ಮಾ.12 ರಂದು ಭೂಪಾಲ್ ನಗರದಲ್ಲಿರುವ ಆರೋಪಿ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾದರು.

ತಮಿಳುನಾಡಿನ ವ್ಯಕ್ತಿಯ ಪ್ರಯೋಜಕತ್ವಕ್ಕೆ ವಿರೋಧ | ಜಾಲತಾಣದಲ್ಲಿ ಭಕ್ತರ ಅಸಮಾಧಾನ

ಕನ್ನಡಿಗರಿಗಿಲ್ಲ ವೈರಮುಡಿಯ ಸೇವೆ

• ಮೇಲುಕೋಟೆ: ವಿಶ್ವವಿಖ್ಯಾತ ಚಲುವನಾರಾಯಣಸ್ವಾಮಿ ವೈರಮುಡಿ ಕಿರೀಟ ಧಾರಣ ಮಹೋತ್ಸವವನ್ನೇ ತಮಿಳುನಾಡಿನ ವ್ಯಕ್ತಿ ಪ್ರಾಯೋಜಿಸುತ್ತಿದ್ದಾರೆಂಬ ಕರ್ನಾಟಕ ಸರ್ಕಾರದ ಚಿಹ್ನೆ ಇರುವ ಆಹ್ವಾನ ಪತ್ರಿಕೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವುದು ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ.

ತಿರುಪತಿಗೆ ಸಮಾನ ಮಹತ್ವವಿರುವ ಮೇಲುಕೋಟೆಯ ಪ್ರಖ್ಯಾತ ವೈರಮುಡಿ ಉತ್ಸವ ಸೇವೆ ಮಾಡಲು ಕರ್ನಾಟಕದವರಿಗೆ ಅವಕಾಶ ನೀಡದೆ ತಮಿಳುನಾಡಿನವರಿಗೆ ಪ್ರಾಯೋಜನೆ ಮಾಡಲು ಏಕೆ ಅವಕಾಶ ಮಾಡಿಕೊಡಲಾಗಿದೆ ಎಂಬ ಪ್ರಶ್ನೆ ಹುಟ್ಟುಹಾಕಿದೆ.

ವೈರಮುಡಿ ಜಾತ್ರಾಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದರೂ ದೇವಾಲಯದಿಂದ ವೈರಮುಡಿ ಜಾತ್ರೆಯ ಆಹ್ವಾನ ಪತ್ರಿಕೆ ಅಧಿಕೃತವಾಗಿ ಬಿಡುಗಡೆಯೇ ಆಗದಿರುವುದು ಅಚ್ಚರಿ ಮೂಡಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವೈರಮುಡಿ ಜಾತ್ರೆಯ ಆಹ್ವಾನ ಪತ್ರಿಕೆ ಜಿಲ್ಲಾಧಿಕಾರಿಗಳಿಂದ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಅನುಮೋದನೆಯಾಗಿರುವ ಬಗ್ಗೆ ಖಚಿತವಾಗಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಹ್ವಾನ ಪತ್ರಿಕೆಯಲ್ಲಿ ಪ್ರಖ್ಯಾತ ರಥೋತ್ಸವ, ತೆಪ್ಪೋತ್ಸವ, ಕಲ್ಯಾಣೋತ್ಸವ ಸೇರಿದಂತೆ ಎಲ್ಲಾ ಉತ್ಸವಕ್ಕೂ ಒಬ್ಬರು ಪ್ರಾಯೋಜಕರ ಹೆಸರು ಮುದ್ರಿತವಾಗಿದೆ. ಮೇಲುಕೋಟೆ ದೇವಾಲಯ ಉತ್ಸವವನ್ನು ನಡೆಸಲು ಸಾಧ್ಯವಾಗದಂತೆ ದಿವಾಳಿಯಾಗಿದೆಯೇ ಎಂಬ ಪ್ರಶ್ನೆ ಸೇರಿದಂತೆ ಇದರಲ್ಲಡಗಿದೆ. ಇದರ ಜತೆಗೆ ಧಾರ್ಮಿಕ





ಲಾಬಿ ನಡೆಸಲಾಗುತ್ತಿದೆಯೇ ಎಂಬ ಹತ್ತಾರು ಸಂಶಯವನ್ನು ಹುಟ್ಟುಹಾಕಿದೆ.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾರ ಕಾನೂನು ವಿರೋಧಿ ನಡವಳಿಕೆಯಿಂದಾಗಿ ಗೊಂದಲ ಸೃಷ್ಟಿಯಾಗಿದೆ ಎಂಬುದು ಪ್ರಾಥಮಿಕ ಮಾಹಿತಿಯಿಂದ ಲಭ್ಯವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಹ್ವಾನ ಪತ್ರಿಕೆ ಅಧೀಕೃತವೇ ಅಥವಾ ಅನಧಿಕೃತವೇ ಎಂಬ ಬಗ್ಗೆ ಯಾವುದೇ ಸ್ಪಷ್ಟಣೆ ನೀಡದಿರುವುದು ಅನುಮಾನಕ್ಕೆ ಮತ್ತಷ್ಟು ಇಂಬು ನೀಡುತ್ತಿದೆ.

ಇದರ ಜತೆಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಹ್ವಾನ ಪತ್ರಿಕೆಯನ್ನು ದೇಗುಲದ ಇಒ ಪರೋಕ್ಷವಾಗಿ ಸಮರ್ಥಿಸಿಕೊಳ್ಳುತ್ತಿರುವುದು ಅದನ್ನೇ ಅನುಷ್ಠಾನಕ್ಕೆ ತರಲು ತೆರೆಮರೆಯಲ್ಲಿ ಪ್ರಯತ್ನಿಸುತ್ತಿರುವುದು ಅಧಿಕಾರಿಗಳ ಕೈವಾಡ ಇರುವ ಬಗ್ಗೆ ಹಲವು ರೀತಿಯ ಅನುಮಾನ ಹುಟ್ಟುಹಾಕಿದೆ.

ದಾನಿ ಹೆಸರಲ್ಲಿ ಆಹ್ವಾನ ಪತ್ರಿಕೆ ಮುದ್ರಿಸಬಾರದು

ಆಹ್ವಾನ ಪತ್ರಿಕೆಯಲ್ಲಿ ಯಾವುದೇ ದಾನಿಗಳ ಹೆಸರನ್ನು ಮುದ್ರಿಸದಿರಲು ಸೂಚನೆ ನೀಡಲಾಗಿದೆ. ಪ್ರತಿ ಉತ್ಸವಕ್ಕೆ ದರ ನಿಗದಿಪಡಿಸಿ ಯಾವ ಸೇವೆಯಲ್ಲಿ ಭಕ್ತರು ಪಾಲ್ಗೊಳ್ಳಬಹುದು ಎಂಬುದನ್ನು ತಿಳಿಸಲಾಗುತ್ತದೆ . ಎಷ್ಟು ಸೇವಾರ್ಥದಾರರು ಬೇಕಾದರೂ ಪಾಲ್ಗೊಳ್ಳ ಬಹುದು.ದಾನಿಗಳು ನೀಡುವ ಸೇವಾ ಶುಲ್ಕಕ್ಕೆ ರಶೀತಿ ನೀಡಲಾಗುತ್ತದೆ ದೇವಾಲಯದ ವತಿಯಿಂದಲೇ ವೈರಮುಡಿ ಬ್ರಹ್ಮೋತ್ಸವದಲ್ಲಿ ಎಲ್ಲ ಉತ್ಸವಗಳನ್ನು ನಿರ್ವಹಿಸಲಾಗುತ್ತದೆಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದ್ದಾರೆ.

ದೇಗುಲದಿಂದಲೇ ಆಚರಣೆ

ವೈರಮುಡಿಜಾತ್ರೆಯಲ್ಲಿ ಉತ್ಸವಗಳನ್ನು ದಾನಿಗಳಿಗೆ ನೀಡದೆ ದೇವಾಲಯದಿಂದಲೇ ನಡೆಸಿ ಎಂದು ಮಂಡ್ಯ ಜಿಲ್ಲಾಧಿಕಾರಿ ಕುಮಾರ್ ಸೂಚಿಸಿದ್ದಾರೆ. ಹೊಸ ಆಹ್ವಾನ ಪತ್ರಿಕೆಯನ್ನೂ ಮುದ್ರಿಸಲಾಗುತ್ತದೆ. ದೇವಾಲಯದಿಂದಲೇ ವೈರಮುಡಿ ಬ್ರಹ್ಮೋತ್ಸವದ ಎಲ್ಲಾ ಉತ್ಸವವನ್ನು ನಿರ್ವಹಿಸಲಾಗುತ್ತದೆಂದು ದೇಗುಲದ ಇಒ ಶೀಲಾ ತಿಳಿಸಿದ್ದಾರೆ.

ದೇವನಹಳ್ಳಿಯಲ್ಲಿ ಡಿವಿಜಿ ಜಯಂತಿ, ಪತ್ರಕರ್ತರಿಗೆ ಸನ್ಮಾನ

ನಾಡಿಗೆ ಡಿವಿಜಿ ಕೊಡುಗೆ ಅಪಾರ

• ದೇವನಹಳ್ಳಿ: ಡಿ.ವಿ.ಗುಂಡಪ್ಪನವರು 1887, ಮಾರ್ಚ್ 17ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ದೇವನಹಳ್ಳಿಯಲ್ಲಿ ಜನಿಸಿದರು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಮಂಜುನಾಥ್ ತಿಳಿಸಿದರು.

ಪಟ್ಟಣದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಡಿವಿಜಿ ಅವರ 139ನೇ ಜನ್ಮದಿನಾಚರಣೆಯಲ್ಲಿ ಮಾತನಾಡಿ, ಇವರ ಪೂರ್ವಿಕರು ತಮಿಳುನಾಡಿನ ತಿರುಚಿನಾಪಳ್ಳಿಯ ಕಡೆಯವರು, ಅವರ ಮುತ್ತಜ್ಜ ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ವಲಸೆ ಬಂದವರು, ಶೇಗದಾರ ಕುಟುಂಬದ ಗುಂಡಪ್ಪನವರು. 1898ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾದರೆಂದು ವಿವರಿಸಿದರು.

ಆ ಸಂದರ್ಭದಲ್ಲೇ ಸಿಕ್ಕ ಇಂಗ್ಲಿಷ್ ಶಿಕ್ಷಣವನ್ನು ಪಡೆದರು, ಖಾಸಗಿಯಾಗಿ ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಮುಂದೆ ಸಂಬಂಧಿಕರೊಬ್ಬರ ಸಹಾಯದಿಂದ ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದರು. ಆದರೆ ,1905ರಲ್ಲಿ ಮೆಟ್ರಿಕ್ಯುಲೇಷನ್ ನಲ್ಲಿ ತೇರ್ಗಡೆಯಾಗಲಿಲ್ಲ, ಅಲ್ಲಿಗೆ ಶಾಲಾ ಶಿಕ್ಷಣವನ್ನು ನಿಲ್ಲಿಸಿದರೆಂದರು.

ಪ್ರೌಢಶಾಲೆಯಲ್ಲಿ ಓದುವಾಗಲೇ ಗುಂಡಪ್ಪನವರಿಗೆ ಮದುವೆಯಾಯಿತು, ಹೆಂಡತಿ ಭಾಗೀರಥಮ್ಮ, ಮುಂದೆ ಮುಳಬಾಗಿಲಿನ ಶಾಲೆಯಲ್ಲಿ ಅಧ್ಯಾಪಕರಾಗಿ ಕೆಲ ಕಾಲ ಕೆಲಸ ಮಾಡಿದರು. ಅದೇ ಅವರ ವೃತ್ತಿ ಜೀವನದ ನಾಂದಿ, ಆದರೂ ಅಲ್ಲಿರಲಾಗಲಿಲ್ಲ, ವೃತ್ತಿ ಬಿಟ್ಟು ಮುಂದೆ ಕೋಲಾರದ ಚಿನ್ನದ ಗಣಿಯಲ್ಲಿ, ಸೋಡಾ ಫ್ಯಾಕ್ಟರಿಯಲ್ಲಿ, ಕೆಲಸ ಮಾಡಿದರು. ನಂತರ ಬೆಂಗಳೂರಿಗೆ ಬಂದು ಕೆಲಸ ಹುಡುಕಿ ಅಲೆದಾಡಿದರೆಂದ ತಿಳಿಸಿದರು.

ದಿವಾನ್ ರಂಗಾಚಾರ್ಯ ಅವರ ಬಗ್ಗೆ ಇಂಗ್ಲಿಷಿನಲ್ಲಿ ಬರೆದ ಲೇಖನ ಡಿವಿಜಿ ಅವರ ಬದುಕಲ್ಲಿ ಹೊಸ ತಿರುವು ಪಡೆಯಿತು, ಮುಂದೆ ಪುಸ್ತಕ ರೂಪಕ್ಕೆ ತರಲು ಹಲವು ಮಾರ್ಪಾಡು ಮಾಡಿದರು. ಇದು ಪ್ರಕಟವಾಗುತ್ತಿದ್ದಂತೆ ಕೃತಿ ಪ್ರಕಟಣೆ ಮೂಲಕವೂ ಹಣ ಬರುವಂತಾ ಯಿತು. ಸಾಹಿತ್ಯ ಮಾತ್ರವಲ್ಲದೆ ಚರಿತ್ರೆ, ರಾಜನೀತಿ, ತತ್ವಜ್ಞಾನ, ಪ್ರಜಾ ಪ್ರಭುತ್ವ, ಸಮಾಜ ವಿಜ್ಞಾನ, ಸಾರ್ವಜನಿಕ ಜೀವನ, ಮುಂತಾದ ಹಲವಾರು ವಿಷಯ



ಕುರಿತು ಅವರು 66 ಕನ್ನಡ ಕೃತಿಯನ್ನು ರಚಿಸಿದರೆಂದು ತಿಳಿಸಿದರು.

ಬೆಂ.ಗ್ರಾ.ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜಿ. ಶ್ರೀನಿವಾಸ್ ಮಾತನಾಡಿ, ಸಾಹಿತಿಗಳಾಗಿ ಖ್ಯಾತಿ ಪಡೆದ ಗುಂಡಪ್ಪನವರು ಪತ್ರಿಕಾ ರಂಗದಲ್ಲಿ ಕೆಲಸವನ್ನು ನಿರ್ವಹಿಸಿ ಪತ್ರಿಕಾ ಸಂಘವನ್ನೆ ಹುಟ್ಟುಹಾಕಿದರು. ಪತ್ರಿಕಾ ಸಂಘ ಈಗ ಶತಮಾನದ ಕಡೆ ಮುನ್ನುಗ್ಗುತ್ತಿದೆಂದರು.

ಮಂಕುತಿಮ್ಮನ ಕಗ್ಗ ಪ್ರಸಿದ್ದ ಕವನವಾಗಿದೆ. ಅನೇಕ ಕವಿತೆ, ಕಥೆ, ನಾಟಕ ರಚಿಸಿ ಕನ್ನಡ ನಾಡಿಗೆ ಅಪಾರ ಕೊಡುಗೆ ನೀಡಿದ ಮಹಾಪುರುಷ, ಡಿ.ವಿ.ಗುಂಡಪ್ಪನವರು 1932ರಲ್ಲಿ ಮಡಿಕೇರಿಯಲ್ಲಿ ನಡೆದ 18ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದರು. 1961ರಲ್ಲಿ ಡಿವಿಜಿ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿತು. ಇದು ಡಿವಿಜಿ ಅವರು ಪತ್ರಿಕೋದ್ಯಮ ಹಾಗೂ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಸಂದ ಪುರಸ್ಕಾರ, 1974ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ ಎಂದು ತಿಳಿಸಿದರು.

ದೇವನಹಳ್ಳಿ ತಾಲೂಕಿನ ಸೋಮತ್ತನಹಳ್ಳಿ ಎಸ್.ಎಂ. ಬೈರೇಗೌಡ, ದೊಡ್ಡಬಳ್ಳಾಪುರ ತಾಲೂಕಿನ ಶ್ರೀಕಾಂತ್, ನೆಲಮಂಗಲ ತಾಲೂಕಿನ ಮಿಲ್ಟ್ರಿ ಮಾಮ ಎಂದೇ ಕರೆಯುವ ನಿರ್ವತ್ತ ಸೈನಿಕ ಎನ್.ಎಸ್. ಮೂರ್ತಿ, ಹೊಸಕೋಟೆ ತಾಲೂಕಿನ ಜ್ಯೋತೀಶ್ವರಪ್ಪ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರಮೇಶ್, ಅಗ್ನಿಶಾಮಕ ದಳದ ಇನ್ಸ್‌ಪೆಕ್ಟರ್ ನಾಗರಾಜು ಹಲವರಿದ್ದರು.

ಆದೇಶ ಪತ್ರ ವಿತರಿಸಿದ ಎಂಟಿಬಿ ನಾಗರಾಜ್

ತಳಮಟ್ಟದಲ್ಲಿ ಬಿಜೆಪಿ ಸಂಘಟಿಸಲಿ

• ತಾವರೆಕೆರೆ: ಮತ್ತೊಮ್ಮ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ತಳಮಟ್ಟದಲ್ಲಿ ಪಕ್ಷ ಸಂಘಟಿಸಿ ಎಂದು ಮಾಜಿ ಸಚಿವರು ಹಾಲಿ ವಿಧಾನಪರಿಷತ್ ಸದಸ್ಯರಾದಎಂಟಿಬಿ ನಾಗರಾಜ್‌ರವರು ತಿಳಿಸಿದರು.

ಬಿಜೆಪಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ತ.ರಾ.ವೆಂಕಟೇಶ್ ಅವರನ್ನು ಬಿಆಯ್ಕೆ ಮಾಡಿ ಆದೇಶ ಪತ್ರ ವಿತರಿಸಿ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ತಳಮಟ್ಟದಲ್ಲಿ ಪಕ್ಷ ಸಂಘಟಿಸಬೇಕು. ಅಲ್ಲದೆ ಈಗಾಗಲೇ ಪದಾಕಾರಿಗಳಾಗಿ ಆಯ್ಕೆಯಾಗಿರುವವರು ಬೂತ್‌ಮಟ್ಟದಲ್ಲಿ ಪಕ್ಷ ಸಂಘಟಿಸಿ ನಾವೂ ಕೂಡ ಸೂಕ್ತ ಸಮಯದಲ್ಲಿ ರಾಜಕೀಯ ಪ್ರವೇಶ ಮಾಡುತ್ತೇವೆಂದರು.

ಜಿಲ್ಲಾಧ್ಯಕ್ಷರಾದ ರಾಮಕೃಷ್ಣಪ್ಪ ಅವರು ನಮ್ಮ ಸೂಚನೆಯ ಮೇರೆಗೆ ಪಕ್ಷದಲ್ಲಿ ಹಲವಾರು ವರ್ಷ ದಿಂದ ಗುರುತಿಸಿಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿರುವ ವೆಂಕಟೇಶ್ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಕುಮಾರ್ ಅವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿ ಆದೇಶ ಪತ್ರ ನೀಡಲಾಗಿದೆ.ಅವರಿಗೆ ಶುಭಹಾರೈಸುತ್ತೇನೆಂದರು.

ನೂತನ ಪ್ರಧಾನ ಕಾರ್ಯಯಾಗಿ ಆಯ್ಕೆಯಾದ ತ.ರಾ. ವೆಂಕಟೇಶ್ ಮಾತನಾಡಿ, ಪಕ್ಷವೂ ನನ್ನ ಮೇಲೆ ನಂಬಿಕೆ ಇಟ್ಟು ನನಗೆ ದೊಡ್ಡಜವಾಬ್ದಾರಿ ನೀಡಿದೆ. ಅದನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತೇನೆ.

ಅಲ್ಲದೆ, ಸೂಕ್ತ ಪದಾಧಿಕಾರಿ ಗಳನ್ನು ಆಯ್ಕೆ ಮಾಡಿ ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕಲ್ಲಿ ಪಕ್ಷ ಸಂಘಟಿಸಲು ಒತ್ತು ನೀಡುತ್ತೇನೆಂದರು.

ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಸ್ವಾಮಿ, ಕುರುಬರ ಸಂಘದ ಅಧ್ಯಕ್ಷ ರಾಮಾಂಜಿನಿ, ನಗರ ಅಧ್ಯಕ್ಷ ಬಾಲಚಂದ್ರನ್, ಕಾರ್ಯದರ್ಶಿ ಕುಮಾರ್, ರೈತ ಮೋರ್ಚಾ ನಾಗೇಶ್ ಇನ್ನಿತರರಿದ್ದರು.



ಜಿಲ್ಲಾಧಿಕಾರಿಗೆ ಶಿಕ್ಷಕರ ಸಂಘ ಆಗ್ರಹ

• ಕೋಲಾರ: ರಾಜ್ಯಾದ್ಯಂತ ನಡೆಯಲಿರುವ 2026ರ ಜನಗಣತಿ ಕಾರ್ಯದಲ್ಲಿ ಗರ್ಭಿಣಿ, ವಿಕಲಚೇತನರು,ಅನಾರೋಗ್ಯ ಪೀಡಿತ 'ರು, 50ವರ್ಷ ಮೇಲ್ಪಟ್ಟ ಶಿಕ್ಷಕಿಯರು, 55 ಮೇಲ್ಪಟ್ಟ ಶಿಕ್ಷಕರಿಗೆ ವಿನಾಯತಿ ನೀಡುವಂತೆ ಆಗ್ರಹಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಶಾಖೆಯಿಂದ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಎಸ್ ನಾರಾಯಣಸ್ವಾಮಿ ಮನವಿ ಸಲ್ಲಿಸಿ ಮಾತನಾಡಿ, 2026 ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಕೋಲಾರ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ನೆರವಾಗಲು ಕೋರಿದರು.

» ಜನಗಣತಿಯಲ್ಲಿ ಗರ್ಭಿಣಿ, ಅನಾರೋಗ್ಯವುಳ್ಳವರಿಗೆ ವಿನಾಯಿತಿಗೆ ಮನವಿ

ಅದೇ ರೀತಿ ವಿಶಿಷ್ಟ ಚೇತನ ಶಿಕ್ಷಕರಿಗೆ ವಿನಾಯಿತಿ ನೀಡುವಕುರಿತು ಹಾಗೂ ಗಣತಿ ಕಾರ್ಯ ಮಾಡುವ ಶಿಕ್ಷಕರಿಗೆ ಅವರು ಕೆಲಸ ಮಾಡುವ ಸ್ಥಳದಲ್ಲೇ ಅವರ ಪತ್ನಿ ಶಿಕ್ಷಕಿಯಾಗಿದ್ದರೆ ಅಲ್ಲೇ ಕಾರ್ಯಕ್ಕೆ ನಿಯೋಜನೆ ಮಾಡುವ ಬಗ್ಗೆ, ಮತಗಟ್ಟೆ ಅಧಿಕಾರಿಗಳು ಸ್ವಯಿಚ್ಛೆಯಿಂದ ಮಾಡುವುದಾದರೇ ಅವರ ಕಾರ್ಯಕ್ಷೇತ್ರದಲ್ಲಿ ಗಣತಿ ಕಾರ್ಯಕ್ಕೆ ನಿಯೋಜಿಸುವ ಬಗ್ಗೆ, ಸೇವಾ ಹಿರಿತನ ಪರಿಗಣಿಸಿ ಗಣತಿ ಮೇಲ್ವಿಚಾರಕರಾಗಿ ನೇಮಕ ಮಾಡುವಂತೆ ಕೋರಿದರು.



ಬೆಂಗಳೂರು ಗ್ರಾಮಾಂತರ ಪರೀಕ್ಷಾ ಕೇಂದ್ರಕ್ಕೆ 14,314 ವಿದ್ಯಾರ್ಥಿಗಳು ಹಾಜರು

ಪರೀಕ್ಷಾರ್ಥಿಗಳಿಗೆ ಸಿಹಿ ನೀಡಿದ ಬಿಇಒ

• ದೊಡ್ಡಬಳ್ಳಾಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಿನ್ನೆಲೆಯಲ್ಲಿ ಬಾಶೆಟ್ಟಿಹಳ್ಳಿ ಸರ್ಕಾರಿ ಪ್ರೌಢಶಾಲ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಹೂ, ನೀಡಿ ಸಿಹಿ ಹಂಚಿ ಶುಭ ಹಾರೈಸುವ ಮೂಲಕ ಸ್ವಾಗತ ಕೋರಲಾಯಿತು.

ಬೆಳಿಗ್ಗೆ 10:15 ಗಂಟೆಯಿಂದ ಮಧ್ಯಾಹ್ನ 01:45 ಗಂಟೆಯ ವರೆಗೆ ನಡೆಯಲಿದ್ದು ಜಿಲ್ಲೆಯಲ್ಲಿ 14,314 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-01ಕ್ಕೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳು ದೇವನಹಳ್ಳಿ ತಾಲೂಕಿನಲ್ಲಿ 13, ದೊಡ್ಡಬಳ್ಳಾಪುರ ತಾಲೂಕಿನಲ್ಲಿ 14, ಹೊಸಕೋಟೆ ತಾಲೂಕಿನಲ್ಲಿ 12, ನೆಲಮಂಗಲ ತಾಲೂಕಿನಲ್ಲಿ 13 ಸೇರಿ ಒಟ್ಟು 52 ಪರೀಕ್ಷಾ ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಿತು. ಜಿಲ್ಲೆಯ ನಾಲ್ಕು ತಾಲೂಕಿನ 52 ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿಸಿ ಟಿವಿ ಕ್ಯಾಮೆರಾವನ್ನು ಅಳವಡಿಸಿ, ವೆಬ್ ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಪರೀಕ್ಷಾ ಕೇಂದ್ರ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.ದೊಡ್ಡಬಳ್ಳಾಪುರ ತಾಲೂಕಿನಲ್ಲಿ 17 ಸರ್ಕಾರಿ ಪ್ರೌಢಶಾಲೆಗಳು, 4 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಪ್ರೌಢಶಾಲೆಗಳು, 12 ಅನುದಾನಿತ ಪ್ರೌಢಶಾಲೆಗಳು, 36 ಅನುದಾನರಹಿತ ಪ್ರೌಢಶಾಲೆಗಳನ್ನು ಒಳಗೊಂಡಂತೆ ಒಟ್ಟು 69 ಪ್ರೌಢಶಾಲೆಗಳಿದ್ದು, ಈ ಪ್ರೌಢಶಾಲೆಗಳಿಂದ ತಾಲ್ಲೂಕಿನ 14 ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿದೆ.



3626 ಶಾಲಾ ವಿದ್ಯಾರ್ಥಿಗಳು, 285 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 53 ಖಾಸಗಿ ವಿದ್ಯಾರ್ಥಿಗಳು, 18 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಒಳ ಗೊಂಡಂತೆ ಒಟ್ಟು 3701 ರಲ್ಲಿ 3 676 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದರು 25 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಂಕರಯ್ಯ, ತಾಲೂಕು ಬಿ.ಆರ್‌ಸಿ ಆರ್.ನಾರಾಯಣಸ್ವಾಮಿ, ಎಂಡಿಎಂ ಸಹಾಯಕ ನಿರ್ದೇಶಕ ಶಶಿಶೇಖರಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಮಾಳಯ್ಯ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಯಲ್ಲಪ್ಪ ಎಸ್ ಬಡಣ್ಣವರ, ಎಸ್‌ಡಿಎಂಸಿ ಅಧ್ಯಕ್ಷರಾದ ಮಾಲಯ್ಯ, ಉಪಾಧ್ಯಕ್ಷ ಸುಧಾಮಣಿ, ನಿಕಟ ಪೂರ್ವ ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣಮೂರ್ತಿ, ಸದಸ್ಯರಾದ ಭಾರ್ಗವಿ ಶ್ರೀನಿವಾಸ್ ಸೇರಿದಂತೆ ಎಸ್‌ಡಿಎಂಸಿ ಸಮಿತಿ ಸದಸ್ಯರು, ಪರೀಕ್ಷಾ ಕರ್ತವ್ಯಕ್ಕೆ ಹಾಜರಿದ್ದ ಅಧಿಕಾರಿಗಳಿದ್ದರು.

ನೂತನ ನಾಮಫಲಕ ಅಭಿಮಾನಿಗಳಿಂದ ಅನಾವರಣ

ಎಳ್ಳುಪುರ ವೃತ್ತಕ್ಕೆ ನಟ ಪುನೀತ್ ಹೆಸರು

• ದೊಡ್ಡಬಳ್ಳಾಪುರ: ತಾಲೂಕಿನ ಎಳ್ಳುಪುರ ಗ್ರಾಮದ ವೃತ್ತದಲ್ಲಿ ಅಪ್ಪು ಅಭಿಮಾನಿ ಪುನೀತ್ ಪವರ್ ಆಲೂರು (ಅಪ್ಪು)ಹಾಗೂ ಸಂಗಡಿಗರ ನೇತೃತ್ವದಲ್ಲಿ ವಿಶೇಷ ಅನ್ನದಾಸೋಹ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬದ ಅಂಗವಾಗಿ ಎಳ್ಳುಪುರ ವೃತ್ತಕ್ಕೆ ಪುನೀತ್ ರಾಜಕುಮಾರ್ ಅವರ ಹೆಸರಿಟ್ಟು,ನೂತನ ನಾಮಫಲಕವನ್ನು ಲೋಕಾರ್ಪಣೆಗೊಳಿಸಲಾಯಿತು.



ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯತಿ ಅಧ್ಯಕ್ಷ ಪ್ರೇಮ್ ಕುಮಾರ್ ಮಾತನಾಡಿ, ನಟ ಪುನೀತ್ ರಾಜಕುಮಾರ್ ಅವರು ತಮ್ಮ ಸರಳ ಜೀವನ ಸೇವಾ ಕಾರ್ಯದಿಂದಲೇ ಅಭಿಮಾನಿಗಳ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದವರು. ನಮ್ಮ ಸೇವಾ ಕಾರ್ಯದಲ್ಲಿ ಅವರು ಸದಾ ಜೀವಂತ ಅವರ ನೆನಪಿಗಾಗಿ ಇಂದು ನಮ್ಮ ಗ್ರಾಮದ ವೃತ್ತಕ್ಕೆ ಅವರ ಹೆಸರಿಟ್ಟು ನೂತನ ನಾಮಫಲಕ ಅನಾವರಣ ಮಾಡಲಾಗಿದೆ ಇಂದಿನ ಯುವ ಸಮೂಹ ಪುನೀತ್ ರಾಜಕುಮಾರ್ ಅವರ ಸದ್ಗುಣಗಳನ್ನು ಸ್ಫೂರ್ತಿಯಾಗಿ ಪಡೆದು ಸಮಾಜದಲ್ಲಿ ಮಾದರಿ ಜೀವನ ಸಾಗಿಸುವಂತಾಗಲಿ ಎಂದರು. ನಗರಸಭೆ ಉಪಾಧ್ಯಕ್ಷ ಮಲ್ಲೇಶ್ ಮಾತನಾಡಿ, ಮಾರ್ಚ್ 17ರಂದು ಸ್ಫೂರ್ತಿ ದಿನ, ಯುವಕರನ್ನು ಸಮಾಜದ ಸೇವಾ ಕಾರ್ಯಗಳ ಕಡೆಗೆ ಕರೆದೊಯ್ದ ದಿನ, ಡಾಕ್ಟರ್ ಪುನೀತ್ ರಾಜಕುಮಾರ್ ಅವರು ಕೇವಲ ನಾಯಕ ನಟರಾಗದೆ ಸಮಾಜಕ್ಕೆ ಸ್ಪೂರ್ತಿಯಾದಂತವರೆಂದರು.

ತಮ್ಮ ಉತ್ತಮ ಸರಳ ಜೀವನಶೈಲಿಯಿಂದ ಹಾಗೂ ಸೇವಾ ಕಾರ್ಯಗಳಿಂದಲೇ ಅಪಾರ ಅಭಿಮಾನಿ ಬಳಗ ಹೊಂದಿದವರು. ಇಂದು ಅವರ 51ರ ಜನ್ಮದಿನಾಚರಣೆಯನ್ನು ಆಚರಿಸುವ ಮೂಲಕ ವಿಶೇಷ ರೀತಿಯಲ್ಲಿ ನಾವೆಲ್ಲರೂ ಅವರಿಗೆ ಗೌರವಸಮರ್ಪಣೆ ಮಾಡಿದ್ದೇವೆ. ಅಪ್ಪು ಸದಾ ಅಮರ ಅವರು ಸದಾ ನಮ್ಮೊಂದಿಗಿದ್ದಾರೆ ಎಂದರು.ಅಭಿಮಾನಿ ಪುನೀತ್ ಪವರ್ ಆಲೂರು ಮಾತನಾಡಿ, ಪ್ರತಿ ವರ್ಷವೂ ವಿಶೇಷ ರೀತಿಯಲ್ಲಿ ಅನ್ನ ದಾಸೋಹ ನೆಡೆಸುವ ಮೂಲಕ ನಟ ಪುನೀತ್ ರಾಜಕುಮಾರ್ ಅವರ ಹುಟ್ಟು ಹಬ್ಬವನ್ನು ಆಚರಿಸುತ್ತೇವೆ. ಕಳೆದ ಬಾರಿ ನಮ್ಮ ಎಳ್ಳುಪುರ ವೃತ್ತಕ್ಕೆ ಡಾ. ಪುನೀತ್ ರಾಜಕುಮಾರ್ ವೃತ್ತಾ ಎಂದು ನಾಮಕರಣ ಮಾಡಲಾಗಿತ್ತು ಎಂದರು.

ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯತಿ ಅಧ್ಯಕ್ಷ ಪ್ರೇಮ್ ಕುಮಾರ್, ಸದಸ್ಯರಾದ ಎಳ್ಳುಪುರ ಮುನಿ ಶಂಕರ್, ಮಧು, ವಾರದನಹಳ್ಳಿ ಅರುಣ್ ಕುಮಾರ್, ನಗರಸಭೆ ಉಪಾಧ್ಯಕ್ಷ ಮಲ್ಲೇಶ್, ಎಳ್ಳುಪುರ ಮುರಳಿ, ಯಲಹಂಕ ಬಾಲಕೃಷ್ಣ ನಾಯಕ್, ಸುವರ್ಣ ಕರ್ನಾಟಕ ಜನಶಕ್ತಿ ವೇದಿಕೆ ಪ್ರಮುಖರು, ಸ್ಥಳೀಯ ಮುಖಂಡರಾದ ಪುನೀತ್ ಪವರ್ ಆಲೂರು , ನರೇಂದ್ರ ಸೇರಿದಂತೆ ಹಲವರಿದ್ದರು.

ಕರುನಾಡ ಕನ್ನಡ ಸಂಘದಿಂದ ಡಿವಿಜಿ 139ನೇ ಜಯಂತಿ

ಮಂಕುತಿಮ್ಮನ ಕಗ್ಗ ಭಗವದ್ಗೀತೆಗೆ ಸಮ


• ಕೋಲಾರ: ಡಿವಿಜಿಯವರ ಮಂಕುತಿಮ್ಮನ ಕಗ್ಗ ಆಧುನಿಕ ಭಗವದ್ಗೀತೆಯಾಗಿದೆ. ಅದು ಸಮಾಜದಲ್ಲಿನ ಅಶಾಂತಿ, ಅತಿಯಾಸೆ ಹೋಗಲಾಡಿಸಿ ನೆಮ್ಮದಿ ಬದುಕು ನೀಡುವ ದಾರಿದೀಪವಾಗಿದೆ. ಮಕ್ಕಳು ಅವರ ಆದರ್ಶ ಪಾಲಿಸಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎಂ.ರಾಧಮ್ಮ ಕರೆ ನೀಡಿದರು

ಕರುನಾಡ ಕನ್ನಡ ಸಂಘ, ತನೀಷ್ಕ್ ಮೋಟಾರ್ಸ್ ಮುಳಬಾಗಿಲು ಅವರ ಸಹಯೋಗದಲ್ಲಿ ತಾಲೂಕಿನ ಚದುಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ ಡಿ.ವಿ.ಗುಂಡಪ್ಪ ಅವರ 139ನೇ ಜನ್ಮದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಸಾಧಕ ಮಕ್ಕಳನ್ನು ಪುರಸ್ಕರಿಸಿ, ಪರೀಕ್ಷಾ ಸಲಕರಣೆ ವಿತರಣೆ, ಶಾಲೆಗಳಿಗೆ ಜ್ಞಾನಪೀಠ ಸಾಹಿತಿಗಳ ಫೋಟೋಗಳನ್ನು ಕೊಡುಗೆಯಾಗಿ ವಿತರಿಸಿ ಅವರು ಮಾತನಾಡಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿರುವ ಡಿವಿಜಿಯವರು ಅತ್ಯಂತ ಶ್ರೇಷ್ಟ ಕವಿಗಳು, ಸಾಹಿತಿಗಳು, ಪತ್ರಕರ್ತರಾಗಿದ್ದು, ಅವರ ಮಂಕುತಿಮ್ಮನ ಕಗ್ಗ ಕೃತಿ ಜೀವನದ ತತ್ವಜ್ಞಾನವನ್ನು ಸರಳ ಪದ್ಯಗಳಲ್ಲಿ ಹೇಳುವ ಇವರ ಮೇರು ಕೃತಿ ಎಂದರು.

ಕರುನಾಡ ಕನ್ನಡ ಸಂಘದ ಅಧ್ಯಕ್ಷ ಇ. ಶ್ರೀನಿವಾಸಗೌಡ ಕಾರ್ಯಕ್ರಮ ಉದ್ಘಾಟಿಸಿ, ಡಿ.ವಿ.ಗುಂಡಪ್ಪ ಅವರುಕೋಲಾರಜಿಲ್ಲೆಯವರುಎಂದುಹೇಳಲುಹೆಮ್ಮೆಯಾಗುತ್ತದೆ. ಅವರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ, ತತ್ವಜ್ಞಾನಿ ಮತ್ತು ಪತ್ರಕರ್ತರು. 'ಮಂಕುತಿಮ್ಮನ ಕಗ್ಗ'ದ ಮೂಲಕ 'ಕನ್ನಡದ ಆಧುನಿಕ ಸರ್ವಜ್ಞ' ಎಂದೇ ಜನಪ್ರಿಯರಾದವರು ಎಂದರು.



ಕರುನಾಡ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ವಿ.ಜಗನ್ನಾಥ್ ಪ್ರಾಸ್ತಾವಿಕವಾಗಿ ಮಾತನಾಡಿ, ಡಿವಿಜಿಯವರ ಸ್ಮರಣೆ ಒಂದು ದಿನಕ್ಕೆ ಸೀಮಿತವಲ್ಲ, ಅವರು ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರವಾಗಿದ್ದು, ಅವರ ಪ್ರಾಮಾಣಿಕತೆ, ಬದ್ದತೆ,ಶಿಸ್ತಿನ ಜೀವನ ಇಂದಿನ ಯುವಜನತೆಗೆ ಆದರ್ಶವಾಗಿದೆ ಎಂದು ತಿಳಿಸಿದರು. ನಿವೃತ್ತರಾದ ನವೀನ ಮಾತನಾಡಿ, ಡಿವಿಜಿ ಅವರ ಸಾಹಿತ್ಯ ಹೆಮ್ಮರದಂತಿದೆ ಎಂದ ಅವರು, ಅವರ ಹೆಸರು ಚಿರಸ್ಥಾಯಿಯಾಗಿರಲು ಕೋಲಾರ ಜಿಲ್ಲೆಯಲ್ಲಿ ಡಿವಿಜಿಯವರ ಪುತ್ಥಳಿಯನ್ನು ನಿರ್ಮಾಣ ಮಾಡಬೇಕು. ಯುವ ಸಾಹಿತಿಗಳು ಅವರ ಕೃತಿಗಳನ್ನು ಅಧ್ಯಯನ ಮಾಡಬೇಕು ಮುಖ್ಯ ಶಿಕ್ಷಕ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದು, ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ನಾಗರಾಜ್, ಪ್ರೌಢಶಾಲಾ ಶಿಕ್ಷಕ ವೆಂಕಟಾಚಲಪತಿ, ಕರುನಾಡ ಕನ್ನಡ ಸಂಘದ ಖಜಾಂಚಿ ಎಂ.ಶ್ರೀರಾಮ್, ಸಹಕಾರ್ಯದರ್ಶಿ ಸಿದ್ದಲಿಂಗಯ್ಯ, ಶಿಕ್ಷಕರಾದ ಗೌರಮ್ಮ, ಜೆ.ಡಿ.ಲಕ್ಷ್ಮಿ, ಮಲ್ಲಿಕಾ ಮತ್ತಿತರರಿದ್ದರು.



ಕೆಡಿ ಸರ್ಸೇ ಹಾಡಿನ ವಿವಾದ

ನೋರಾ ಹಾಗೆ ಮಾತಾಡಿರೋದು ತಪ್ಪು-ಪ್ರೇಮ್
ಶೀಘ್ರದಲ್ಲೇ ಆ ಹಾಡಿಗೆ ಬೇರೆ ಸಾಹಿತ್ಯ ಬರೆಯುವುದಾಗಿ ಸ್ಪಷ್ಟನೆ

▶ ಸತ್ಯಮೂರ್ತಿ

ಧ್ರುವ ಸರ್ಜಾ, ಜೋಗಿ ಪ್ರೇಮ್ ಕಾಂಬಿನೇಶನ್‌ನ ಕೆಡಿ ಚಿತ್ರವು ಆರಂಭವಾಗಿ ವರ್ಷಗಳೇ ಕಳೆದರೂ ಸುದ್ದಿಯಾಗಿದ್ದಿಲ್ಲ, ಆದರೆ ಅದ್ಯಾವಾಗ ಸರ್ಸೇ ನಿನ್ನ ಸೆರಗಿನ ಹಾಡಿನ ವಿವಾದ ಸೃಷ್ಟಿಯಾಯಿತೋ ಆಗ ದೇಶಾದ್ಯಂತ ಈ ಹಾಡಿನದ್ದೇ ಸುದ್ದಿಯಾಯ್ತು. ಪ್ರಾರಂಭದಲ್ಲಿ ಇದೂ ಒಂದು ಪ್ರಚಾರ ತಂತ್ರವಿರಬಹುದು ಎಂಬ ಅನುಮಾನವಿತ್ತು, ಆದರೀಗ ಆ ವಿವಾದ ದೊಡ್ಡಮಟ್ಟಕ್ಕೆ ಹೋಗಿಬಿಟ್ಟಿದೆ, ಈಗಾಗಲೇ ಈ ಚಿತ್ರದ 3 ಹಾಡುಗಳನ್ನು ರಿಲೀಸ್ ಮಾಡಿದ್ದರೂ, ಯಾವುದೇ ಕೆಟ್ಟ ಹೆಸರು ಹೊತ್ತುಕೊಳ್ಳದ ಪ್ರೇಮ್ ನಾಲ್ಕನೇ ಹಾಡಿನಿಂದ ದೊಡ್ಡ ಸುದ್ದಿಯಾಗಿ ಹೋದರು, ಇದೀಗ ಈ ಹಾಡಲ್ಲಿ ಹೆಜ್ಜೆ ಹಾಕಿರುವ ನಟಿ ನೋರಾ ಫತೇಹಿ ಕೂಡ ಪ್ರೇಮ್ ವಿರುದ್ಧ ತಿರುಗಿಬಿದ್ದಿದ್ದಾರೆ.



ಇದು ಸರಿಯಿಲ್ಲ ಅಂತ ನಿರ್ದೇಶಕರಿಗೆ ಹೇಳಿದ್ದೆ: ನೋರಾ

ನಾನು ಈ ಚಿತ್ರವನ್ನು ಒಪ್ಪಿಕೊಂಡಿದ್ದು, ಇದೊಂದು ಬಿಗ್ ಸಿನಿಮಾ ಅಂತ. ಹಾಗೇ ಸಂಜಯ್ ದತ್‌ರಂತಹ ಐಕಾನಿಕ್ ನಟನೊಂದಿಗೆ ಕೆಲಸ ಮಾಡಬಹುದು ಅಂತ. ಈ ಹಾಡು ನಾಯಕ್ ನಹೀ.. ಕಲ್ನಾಯಕ್ ಹೂ ಮೇ ಹಾಡಿನ ರಿಮೇಕ್ ಎಂದು ನನಗೆ ಹೇಳಲಾಗಿತ್ತು.

ನಾನು ಯಾವುದೇ ಹಾಡನ್ನು ಶೂಟ್ ಮಾಡುವಾಗ ಭಾಷಾಂತರ ಮಾಡುವಂತೆ ಕೇಳಿಕೊಳ್ಳುತ್ತೇನೆ. ಆದರೆ, ನನಗೆ ಕನ್ನಡ ಅರ್ಥ ಆಗದೇ ಇರುವುದರಿಂದ ಅವರು ಏನು ಹೇಳಿದರೋ ಅದನ್ನು ನಂಬಿ ಕನ್ನಡ ಭಾಷೆಯ ಚಿತ್ರೀಕರಣದಲ್ಲಿ ಭಾಗವಹಿಸಿದ್ದೆ ಎಂದು ವಿವರಿಸಿದ್ದಾರೆ. ಆದರೆ, ಈಗ ಹಾಡನ್ನು ಹಿಂದಿಗೆ ಭಾಷಾಂತರಿಸಿ, ಅಸಂಬಂಧ ಲಿರಿಕ್ಸ್ ಬರೆದಿದ್ದು ನನಗೆ ಗೊತ್ತಿಲ್ಲ. ಅದಕ್ಕವರು ನನ್ನಿಂದ ಅನುಮತಿಯನ್ನೂ ಪಡೆದಿಲ್ಲ. ನಾನು ಸಾಂಗ್‌ಲಾಂಚ್ ಇವೆಂಟ್‌ಗೆ ಹೋದಾಗ ಲಿರಿಕಲ್ ವರ್ಷನ್‌ಗೆ ನನ್ನ ಅಸಭ್ಯವಾದ ಫೋಟೊ ಬಳಸಿದ್ದರು. ನನ್ನ ಹಾಗೂ ಸಂಜಯ್‌ದತ್‌ರ ಫೋಟೊಗಳನ್ನು ಅವರು ಎಐನಿಂದ ಮಾಡಿದ್ದಾರೆ. ಹಿಂದಿ ಸಾಂಗ್ ಪ್ಲೇ ಮಾಡಿದಾಗಲೇ ಏನೋ ಯಡವಟ್ಟು ಆಗಿದೆ ಅನ್ನೋದು ನನಗೆ ಗೊತ್ತಾಗಿತ್ತು. ನಿರ್ದೇಶಕರಿಗೆ ಇದು ಸರಿಯಿಲ್ಲ, ಇದರಿಂದ ಸಾಕಷ್ಟು ಟೀಕೆಗಳನ್ನು ಎದುರಿಸಬೇಕಾಗುತ್ತೆ, ನೀವು ನನ್ನ ಇಮೇಜ್ ಹಾಗೂ ಗೌರವ ಎರಡೂ ತೆಗಿದಿದ್ದೀರ ಎಂದಿದ್ದೆ ಎಂದು ನೋರಾ ಫತೇಹಿ ಹೇಳಿಕೊಂಡಿದ್ದಾರೆ.





ಇದು ಎಐ ಫೋಟೋವಂತೆ

ಕಾಂಟ್ರಿವರ್ಸಿ ಆಗ್ತಿದೆ ಅಂತ ತಪ್ಪಿಸಿಕೊಳ್ಳಲು ಆ ರೀತಿ ಹೇಳಿರಲೂಬಹುದು: ಪ್ರೇಮ್

ಇದಕ್ಕೆ ಸಮಜಾಯಿಷಿ ನೀಡಿರುವ ನಿರ್ದೇಶಕ ಜೋಗಿ ಪ್ರೇಮ್ ನೋರಾ ಫತೇಹಿ ಅವರು ಹಾಗೆ ಮಾತಾಡಿರುವುದು ತಪ್ಪು, ವರು ಯಾಕೆ ಹಾಗೆ ಮಾತಾಡಿದರೋ ಗೊತ್ತಿಲ್ಲ. ಕಾಂಟ್ರಿವರ್ಸಿ ಆಗ್ತಿದೆ ಅಂತ ತಪ್ಪಿಸಿಕೊಳ್ಳಲು ಆ ರೀತಿ ಹೇಳಿರಲೂಬಹುದು, ಶೀಘ್ರದಲ್ಲೇ ಆ ಹಾಡಿನ ಸಾಹಿತ್ಯ ಬದಲಿಸಿ ಬೇರೆ ಲಿರಿಕ್ ಬರೆದು ಮತ್ತೆ ದೇಶಾದ್ಯಂತ ರಿಲೀಸ್ ಮಾಡುತ್ತೇನೆ ಎಂದವರು ಹೇಳಿದ್ದಾರೆ.

ನಾನು ಯಾರಿಗೇ ಆಗಲಿ, ಯಾವುದೇ ಉದ್ದೇಶದಿಂದ ತಪ್ಪು ಮಾಡಲ್ಲ, ನಾನು ಎಲ್ಲಾ ರೀತಿಯ ಸಾಂಗ್‌ಗಳನ್ನು ಬರೆದಿದ್ದೇನೆ. ಯಾವತ್ತೂ ಕೀಳುಮಟ್ಟದ ಸಾಹಿತ್ಯ ಬರೆದವನಲ್ಲ, ಬಾಟಲಿ, ಉಪ್ಪಿನಕಾಯಿ ಇಟ್ಟುಕೊಂಡು ಆ ಲಿರಿಕ್ ಬರೆದೆ, ಅಲ್ಲಿ ಯಾರನ್ನೂ ನೋಯಿಸುವ ಉದ್ದೇಶ ನನಗಿರಲಿಲ್ಲ, ಕೆಲವರಿಗದು ಹರ್ಟ್ ಆಗಿರಬಹುದು, ನನ್ನಬಗ್ಗೆ ಕೀಳಾಗಿ ಮಾತಾಡೋರಿಗೆಲ್ಲ ಒಳ್ಳೇದಾಗಲಿ, ಹಾಗೇನಾದರೂ ನೋವಾಗಿದ್ದರೆ ಕ್ಷಮಿಸಿ, ಹಿಂದಿ ಭಾಷೆಯ ಸಾಂಗ್ ನಾನು ಬರೆದದ್ದಲ್ಲ, ಭಾಷಾಂತರಗೊಂಡಾಗ ಅದು ಬೇರೆಯದೇ ಅರ್ಥ ನೀಡಿದೆ, ಅದನ್ನು ಬರೆದವರೂ ಆ ತಪ್ಪನ್ನು ನನ್ನ ಮೇಲೇ ಹಾಕಿದರು ಎಂದು ಹೇಳಿದ್ದಾರೆ.

ಲ್ಯಾಂಡ್ ಲಾರ್ಡ್ ನಿರ್ಮಾಪಕರ ಹೊಸ ಚಿತ್ರ

ಇಂದಿನಿಂದ ಕನ್ನಡಿಗರಿಗೆ ಹೊಸ ವರ್ಷ ಶುರುವಾಯ್ತು. ಸಿನಿಮಾ ರಂಗದಲ್ಲಿಯೂ ಹೊಸ ವರುಷಕ್ಕೆ ಹೊಸ ಹೊಸ ಸಿನಿಮಾಗಳ ಅನೌನ್ಸ್ ಸಂಭ್ರಮ ಕೂಡ ಜೋರಾಗಿ ನಡೆದಿದೆ. ಹಬ್ಬದ ಸಂಭ್ರಮದಲ್ಲಿ ಸ್ಯಾಂಡಲ್‌ವುಡ್‌ನ ಸಕ್ಸಸ್‌ಫುಲ್ ನಿರ್ದೇಶಕ ಪಿಸಿ ಶೇಖರ್ ಅವರು ತಮ್ಮ ಹೊಸ ಚಿತ್ರವನ್ನು ಅನೌನ್ಸ್ ಮಾಡಿದ್ದಾರೆ. ರಾಗ, ರೊಮಿಯೋದಂತಹ ಯಶಸ್ವೀ ಸಿನಿಮಾಗಳನ್ನು ನೀಡಿರುವ ನಿರ್ದೇಶಕ ಪಿಸಿ. ಶೇಖರ್ ಇದೀಗ ಮತ್ತೊಂದು ಚಿತ್ರ ನಿರ್ದೇಶನಕ್ಕೆ ಮುಂದಾಗಿದ್ದಾರೆ. ಈ ಸಲ ಪಿಸಿ ಶೇಖರ್ ಅವರು ಸಾರಥಿ, ಲ್ಯಾಂಡ್ಲಾರ್ಡ್‌ನಂಥ ಬಿಗ್ ಬಜೆಟ್ ಚಿತ್ರಗಳನ್ನು ನಿರ್ಮಾಣ ಮಾಡಿರುವ ನಿರ್ಮಾಪಕ ಸತ್ಯಪ್ರಕಾಶ್ ಅವರ ಜೊತೆ ಕೈ ಜೋಡಿಸಿದ್ದಾರೆ.



> ಪಿಸಿ ಶೇಖರ್ ನಿರ್ದೇಶನದ ಹೊಸ ಸಿನಿಮಾಗೆ 'ಲ್ಯಾಂಡ್ ಲಾರ್ಡ್' ನಿರ್ಮಾಪಕರ ಬಂಡವಾಳ

ಈಗಗಾಲೇ ಈ ಚಿತ್ರದ ಎಲ್ಲಾ ಪೂರ್ವ ತಯಾರಿಗಳು ಮುಗಿದಿದ್ದು, ಇನ್ನೇನು ಚಿತ್ರ ಸದ್ಯದಲ್ಲೇ ಸೆಟ್ಟೇರಬೇಕಿದೆ. ಸದ್ಯ ಮಹಾನ್ ಸಿನಿಮಾದ ಕೊನೆಯ ಹಂತದ ಚಿತ್ರೀಕರಣದಲ್ಲಿ ತೊಡಗಿಕೊಂಡಿರುವ ನಿರ್ದೇಶಕ ಪಿಸಿ ಶೇಖರ್ ಅವರು ಆ ಸಿನಿಮಾ ರಿಲೀಸಿಗೂ ಮೊದಲೇ ಮತ್ತೊಂದು ಸಿನಿಮಾಗೆ ಸಜ್ಜಾಗಿದ್ದಾರೆ. ಈ ಚಿತ್ರವು ದೊಡ್ಡ ಮಟ್ಟದಲ್ಲಿ ತಯಾರಾಗಲಿದೆ ಎಂದು ನಿರ್ದೇಶಕ ಪಿಸಿ ಶೇಖರ್ ಅವರೇ ಹೇಳಿದ್ದಾರೆ.

ಸಾರಥಿ, ಲ್ಯಾಂಡ್ಲಾರ್ಡ್ ನಂಥ ದೊಡ್ಡ ಸಿನಿಮಾಗಳನ್ನು ಮಾಡಿರುವ ನಿರ್ಮಾಪಕರು ನನಗೆ ಅವಕಾಶ ಕೊಟ್ಟಿದ್ದು ತುಂಬಾ ಖುಷಿಯಾಗುತ್ತೆ. ಸದ್ಯದಲ್ಲೇ ಸಿನಿಮಾದ ಟೈಟಲ್ ಮತ್ತು ಸ್ಟಾರ್ ಕಾಸ್ಟ್ ಬಗ್ಗೆ ರಿವೀಲ್ ಮಾಡುತ್ತೇವೆ ಎಂದು ಪಿಸಿ ಶೇಖರ್ ಅವರು ಹೇಳಿದ್ದಾರೆ.





ಈ ಚಿತ್ರದ ಇನ್ನೊಂದು ವಿಶೇಷ ಎಂದರೆ ಪಿಸಿ. ಶೇಖರ್ ಅವರ ಗೆಳೆಯ, ನಟ, ಮಿತ್ರ ಅವರು ಈ ಸಿನಿಮಾದಲ್ಲಿ ಕಾರ್ಯಕಾರಿ ನಿರ್ಮಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಪಿಸಿ ಶೇಖರ್ ನಿರ್ದೇಶನದ ರಾಗ ಚಿತ್ರದಲ್ಲಿ ಮಿತ್ರ ಅವರು ನಾಯಕನಾಗಿ ಕಾಣಿಸಿಕೊಂಡಿದ್ದರು.

ಆದರೆ ಈ ಸಿನಿಮಾದಲ್ಲಿ ಕಾರ್ಯಕಾರಿ ನಿರ್ಮಾಪಕರಾಗಿ ಕ್ಯಾಮರಾ ಹಿಂದೆ ಕೆಲಸ ಮಾಡುತ್ತಿರುವುದು ವಿಶೇಷ. ರಾಗ ಸಿನಿಮಾದಲ್ಲಿ ನಟ ಮಿತ್ರ ಮತ್ತು ಪಿಸಿ ಶೇಖರ್ ಅವರ ಕಾಂಬಿನೇಷನ್ ತುಂಬಾ ಚೆನ್ನಾಗಿ ವರ್ಕೌಟ್ ಆಗಿತ್ತು. ಹಾಗಾಗಿ ಇದೀಗ ಮತ್ತೆ ಅದೇ ಜೋಡಿ ಒಟ್ಟಿಗೆ ಸೇರಿರುವುದರಿಂದ ಈ ಸಿನಿಮಾದ ಮೇಲೂ ನಿರೀಕ್ಷೆ ಹೆಚ್ಚಾಗಿದೆ. ಸದ್ಯದಲ್ಲೇ ಚಿತ್ರದ ಬಗ್ಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳಲಿರುವುದಾಗಿ ನಿರ್ದೇಶಕರು ತಿಳಿಸಿದ್ದಾರೆ.



ಗಣೇಶ್ ಈಗ ಬೃಂದಾವಿಹಾರಿ

ಸೂಪರ್ ಹಿಟ್ ಕೃಷ್ಣಂ ಪ್ರಣಯ ಸಖಿ ಚಿತ್ರದ ಯಶಸ್ಸಿನ ರೂವಾರಿಗಳಾದ ನಿರ್ದೇಶಕ ಶ್ರೀನಿವಾಸರಾಜು ಹಾಗೂ ನಾಯಕನಟ ಗಣೇಶ್ ಇದೀಗ ಮತ್ತೊಮ್ಮೆ ಜತೆಯಾಗಿದ್ದಾರೆ, ಹಯಗ್ರೀವ ಚಿತ್ರದ ಯಶಸ್ಸಿನ ನಂತರ ಸಮೃದ್ಧಿ ವಿ. ಮಂಜುನಾಥ್ ಅವರು ಈ ಹೊಸ ಚಿತ್ರದ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. ಶ್ರೀನಿವಾಸರಾಜು ಅವರು ಆಕ್ಷನ್ ಕಟ್ ಹೇಳುತ್ತಿರುವ ಈ ಬಹುನಿರೀಕ್ಷಿತ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿದೆ. ಆ ಚಿತ್ರದ ಬೃಂದಾವಿಹಾರಿ ಎಂಬ ಟೈಟಲ್ ಇಡಲಾಗಿದೆ.

ಕೃಷ್ಣಂ ಪ್ರಣಯ ಸಖಿ ಚಿತ್ರದ ನಂತರ ಗೋಲ್ಡನ್ ಸ್ಟಾರ್ ಗಣೇಶ್ ಹಾಗೂ ಶ್ರೀನಿವಾಸರಾಜು ಅವರ ಕಾಂಬಿನೇಶನ್‌ನಲ್ಲಿ ಹೊಸ ಚಿತ್ರವೊಂದು ಆರಂಭವಾಗಿತ್ತು.

ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಬೃಂದಾವಿಹಾರಿ ಚಿತ್ರವನ್ನು ಸದಭಿರುಚಿಯ ಚಿತ್ರಗಳ ನಿರ್ಮಾಪಕ ಸಮೃದ್ಧಿ ವಿ. ಮಂಜುನಾಥ್ ಅವರು ನಿರ್ಮಾಣ ಮಾಡುತ್ತಿದ್ದಾರೆ. ಪ್ರಸ್ತುತ ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಈ ಚಿತ್ರದ ಶೀರ್ಷಿಕೆಯನ್ನ ಅನಾವರಣ ಗೊಳಿಸಲಾಗಿದೆ.

ರೊಮ್ಯಾಂಟಿಕ್ ಜಾನರ್‌ನ ಈ ಚಿತ್ರಕ್ಕೆ ಬೃಂದಾವಿಹಾರಿ ಎಂಬ ಟೈಟಲ್ ಇಡಲಾಗಿದೆ. ಈಗಾಗಲೇ ತನ್ನ ಚಿತ್ರೀಕರಣ ಮುಗಿಸಿಕೊಂಡಿರುವ ಬೃಂದಾವಿಹಾರಿ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ಸಾಗಿದೆ.

ಈ ಚಿತ್ರದಲ್ಲಿ ಗಣೇಶ್ ಅವರ ಜತೆ ಇಬ್ಬರು ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅವರುಗಳು ಅಭಿನಯಿಸಿದ್ದಾರೆ.

ಗಣೇಶ್ ಹಾಗೂ ಶ್ರೀನಿವಾಸರಾಜು ಅವರ ಕಾಂಬಿನೇಶನ್‌ನಲ್ಲಿ ಹೊರಬರುತ್ತಿರುವ ಚಿತ್ರ ಎಂದಮೇಲೆ ಅದರಲ್ಲಿ ಹಾಡುಗಳ ಬಗ್ಗೆ ಹೆಚ್ಚಿನ ನಿರೀಕ್ಷೆ ಇರುತ್ತದೆ. ಖ್ಯಾತ ಸಂಗೀತ ನಿರ್ದೇಶಕ ಹೇಶಮ್ ಅಬ್ದುಲ್ ವಹಾಬ್ ಅವರು ಸಂಗೀತ ಸಂಯೋಜಿಸಿರುವ ಸುಮಧುರ ಹಾಡುಗಳು ಬೃಂದಾವಿಹಾರಿ ಚಿತ್ರದಲ್ಲಿವೆ, ಸದ್ಯದಲ್ಲೇ ಈ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡುವ ಯೋಜನೆ ಚಿತ್ರತಂಡಕ್ಕಿದೆ. ನಿರ್ದೇಶಕ ಶ್ರೀನಿವಾಸರಾಜು ಅವರೇ ಈ ಚಿತ್ರದ ಕಥೆ, ಚಿತ್ರಕಥೆಯನ್ನು ಬರೆದಿದ್ದು, ವೆಂಕಟ್ ಪ್ರಸಾದ್ ಅವರ ಛಾಯಾಗ್ರಹಣ ಬೃಂದಾವಿಹಾರಿ ಚಿತ್ರಕ್ಕಿದೆ.

> ಚಿತ್ರದಲ್ಲಿ ನಾಯಕ ಹಳ್ಳಿಯ ಗ್ರಾಮ ಪಂಚಾಯ್ತಿಯಲ್ಲಿ ನೀರು ಬಿಡುವ ವಾಟರ್‌ಮ್ಯಾನ್. ಆತನ ಜೀವನವೇ ಒಂಥರಾ ಲಕ್ಸುರಿಯಾಗಿರುತ್ತದೆ, ಅಂಥವನ ಜೀವನದಲ್ಲಿ ಅದೇ ಊರಿನಲ್ಲಿರುವ ಗೌಡರ ಮಗಳ ಎಂಟ್ರಿ ಆಗುತ್ತದೆ. ಆಕೆಯ ಪ್ರವೇಶದ ನಂತರ ನಾಯಕನ ಜೀವನದಲ್ಲಿ ಏನೇನೆಲ್ಲ ಘಟನೆಗಳು ನಡೆದುಹೋಗುತ್ತದೆ. ಆತನ ಲೈಫಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತವೆ ಎನ್ನುವುದೇ ಈ ಚಿತ್ರದ ಕಥಾನಕ.

ಇದು ವಾಟರ್‌ಮ್ಯಾನ್ ಲಕ್ಸುರಿ ಲೈಫು!

ಮಧ್ಯಮ ವರ್ಗದ ಕುಟುಂಬದ ಯುವಕನೊಬ್ಬನ ಲಕ್ಸುರಿ ಜೀವನದ ಕನಸಿನ ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರದ ಹೆಸರು ಲಕ್ಸುರಿ, ವಿಜಯ್ ಇಂದ್ವಾಡಿ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಮೂಲಕ ಯುವನಟ ರಕ್ಷಣ್ ರಾಯರ್ ನಾಯಕನಾಗಿ ಚಿತ್ರರಂಗಕ್ಕೆ ಅಡಿಯಿಡುತ್ತಿದ್ದಾರೆ. ಜೈ ಭಜರಂಗಿ ಫಿಲಂಸ್ ಅಡಿ ಸುಖೇಶ್ ಕೊತ್ತನೂರು, ಪಲ್ಲವಿ ಮಹೇಂದ್ರ, ಅಂಜಲಿ ಗೂಳಿಗೌಡ ಹಾಗೂ ದೊಡ್ಡೇಗೌಡ(ರಾಕೇಶ್) ಸೇರಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಕಳೆದ 15 ವರ್ಷಗಳಿಂದ ದಯಾಳ್ ಪದ್ಮನಾಭನ್, ಹೆಚ್.ವಾಸು, ಹೇಮಂತ್ ಹೆಗ್ಡೆ, ಎಂಡಿ. ಶ್ರೀಧರ್‌ರಂಥ ಹಿರಿಯ ನಿರ್ದೇಶಕರ ಬಳಿ ಕೆಲಸ ಮಾಡಿರುವ ವಿಜಯ್ ಇಂದ್ವಾಡಿ ಅವರ ಪ್ರಥಮ ನಿರ್ದೇಶನ ಚಿತ್ರ ಇದಾಗಿದೆ, ಈಗಾಗಲೇ ತನ್ನ ಚಿತ್ರೀಕರಣ ಮುಗಿಸಿಕೊಂಡು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಲಕ್ಸುರಿ ಚಿತ್ರದ ಫಸ್ಟ್ ಲುಕ್ ಇತ್ತೀಚಗೆ ಬಿಡುಗಡೆಯಾಗಿದೆ, ಕಬ್ಜ, ಫಾದರ್ ಖ್ಯಾತಿಯ ನಿರ್ದೇಶಕ ಆರ್.ಚಂದ್ರು ಅವರು ಈ ಚಿತ್ರದ ಮೊದಲನೋಟ(ಫಸ್ಟ್ ಲುಕ್) ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ.










ಚಿತ್ರದಲ್ಲಿ ನಾಯಕ ಹಳ್ಳಿಯ ಗ್ರಾಮ ಪಂಚಾಯ್ತಿಯಲ್ಲಿ ನೀರು ಬಿಡುವ ವಾಟರ್‌ಮ್ಯಾನ್. ಆತನ ಜೀವನವೇ ಒಂಥರಾ ಲಕ್ಸುರಿಯಾಗಿರುತ್ತದೆ, ಅಂಥವನ ಜೀವನದಲ್ಲಿ ಅದೇ ಊರಿನಲ್ಲಿರುವ ಗೌಡರ ಮಗಳ ಎಂಟ್ರಿ ಆಗುತ್ತದೆ. ಆಕೆಯ ಪ್ರವೇಶದ ನಂತರ ನಾಯಕನ ಜೀವನದಲ್ಲಿ ಏನೇನೆಲ್ಲ ಘಟನೆಗಳು ನಡೆದುಹೋಗುತ್ತದೆ. ಆತನ ಲೈಫಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತವೆ ಎನ್ನುವುದೇ ಈ ಚಿತ್ರದ ಕಥಾನಕ.

ಸಕಲೇಶಪುರ, ಮೈಸೂರು, ಮಡಿಕೇರಿ, ಗೋವಾ, ಚಿಕ್ಕಮಗಳೂರು ಸುತ್ತಮುತ್ತ 45 ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಅಲ್ಲದೆ ಗೋವಾ, ಮಡಿಕೇರಿ ಚಿಕ್ಕಮಗಳೂರು ಸುತ್ತಮುತ್ತ ಹಾಡುಗಳನ್ನು ಚಿತ್ರೀಕರಿಸಲಾಗಿದೆ, ಲಕ್ಸುರಿ ಚಿತ್ರದಲ್ಲಿ ರಕ್ಷಣ್ ರಾಯರ್ ಅವರ ಜತೆ ನಾಯಕಿಯಾಗಿ ನಟಿ ಸೈಕ್ ಸೋನು ಅವರು ನಟಿಸುತ್ತಿದ್ದಾರೆ, ಉಳಿದಂತೆ ನಾಯಕಿಯ ತಂದೆ, ತಾಯಿಯಾಗಿ ಶೋಭರಾಜ್ ಹಾಗೂ ಸಂಗೀತಾ ನಟಿಸುತ್ತಿದ್ದಾರೆ, ನಾಯಕನ ಸೋದರ ಮಾವನಾಗಿ ಟೆನ್ನಿಸ್ ಕೃಷ್ಣ ಹಾಗೂ ಲಾಯರ್ ಪಾತ್ರದಲ್ಲಿ ಸುಜಯ್ ಶಾಸ್ತ್ರಿ ಕಾಣಿಸಿಕೊಂಡಿದ್ದಾರೆ.

ಚಿತ್ರದಲ್ಲಿ 4 ಹಾಡುಗಳಿದ್ದು ಪ್ರಕಾಶ್ ಜಾನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಯೋಗರಾಜ ಭಟ್, ಕೆ.ಕಲ್ಯಾಣ್, ನಾಗೇಂದ್ರ ಪ್ರಸಾದ್, ಭರ್ಜರಿ ಚೇತನ್ ಸಾಹಿತ್ಯ ರಚಿಸಿದ್ದಾರೆ. ವಿಜಯ್ ಇಂದ್ವಾಡಿ ಅವರ ಕಥೆ, ಚಿತ್ರಕಥೆ, ಶರಣು ಎಸ್.ಪಿ.ಕೆ ಅವರ ಸಂಭಾಷಣೆ, ಜೈ ವಿಘ್ನೇಶ್ ಅವರ ಛಾಯಾಗ್ರಹಣ, ಅರ್ಜುನ್ ಕಿಟ್ಟು ಅವರ ಸಂಕಲನ ಈ ಚಿತ್ರಕ್ಕಿದೆ.





ಮುಂಬೈ ಕರ್ನಾಟಕ ವಿತರಣೆ
ಕೆ. ಮುನೀಂದ್ರ MP FILMS

ಹುಬ್ಬಳ್ಳಿ	ರಾಮದುರ್ಗ
LAXMI CITY PRIDE MULTIPLEX	ವೆಂಕಟೇಶ
PVR INOX	ಮುದ್ದೇಬಿಹಾಳ
Cinépolis	ಗಿರಿಜಶಂಕರ
ಧಾರವಾಡ	ಬಾಗೇವಾಡಿ
ವಿಜಯ	ಸತ್ಯನಾರಾಯಣ
PVR INOX	ಇಂಡಿ
ಬೆಳಗಾವಿ	ಮಹಾವೀರ
ನಿರ್ಮಲ	ಯಾದವಾಡ
PVR INOX	ಬಸವೇಶ್ವರ
ಬಿಜಾಪುರ	ಬ್ಯಾಡಗಿ
ಅಮಿರ್	ಶೋಭಾ
ಗದಗ	ಹೊನ್ನಾವರ
ಕೃಷ್ಣ	ಪದ್ಮಾ ಅಂಜಲಿ
ರಾಣೆಬೆನ್ನೂರು	ಇಳಕಲ್
ಶಿವಶಕ್ತಿ	ಮಹಾಂತೇಶ್
ಹಾವೇರಿ	ರೋಣ
ಸರಸ್ವತಿ	ಮಲ್ಲಿಕಾರ್ಜುನ
ಬಾಗಲಕೋಟೆ	ನಿಡಗುಂದಿ
SMART MOVIZ A/C CINEMA	ಯಲಾಗುರೇಶ್ವರ
ಕಾರವಾರ	ಬಾದಾಮಿ
MIRAJ	ಕುಮಾರೇಶ್ವರ
ಮುಧೋಳ್	ಗಜೇಂದ್ರಗಡ
ಸೂರ್ಯವಂಶಿ	ಅಲಂಕಾರ
ಸುಭಾಷಿಣಿ	ಗುಳೇದಗುಡ್ಡ
	ಅಂಕಿತ
	ತಾಳಿಕೋಟೆ
	ಮಹಾವೀರ
	ಹಾಗೂ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ



ಶ್ರೀ ಅರಸೇಶ್ವರಿ ಸಿನಿ ಪ್ರೊಡಕ್ಷನ್ಸ್ ರವರ

ಯುಗಾದಿ ಹಬ್ಬದ ಶುಭಾಶಯಗಳು

FROM THE MAKER OF

ಸಾರಥಿ ಬ್ಲಾಡ್‌ಲಾರ್ಡ್

The Next Big Chapter Begins!

PRODUCTION
NO.3



PRODUCED BY : K V SATHYA PRAKASH
WRITER & DIRECTOR: PC SHEKAR
EXECUTIVE PRODUCER: MITHRA

TOWARDS 50DAYS



PVR G T WORLD MALL (MAGADI ROAD)
INOX MANTRI MALL
PVR ORION MALL
PVR GARUDA SWAGATH MALL (JAYANAGARA)
PVR NEXUS FORUM MALL (KORAMANGALA)
PVR VAISHNAVI MALL (YESHAWANHAPURA)
INOX CENTRAL MANTRI MALL (JP NAGAR)
PVR VEGA CITY MALL (BANNERUGHATTA ROAD)
PVR KONANAKUNTE
Cinépolis LULU MALL (RAJAJINAGAR)
Cinépolis ETA MALL (BINNY PETE)
GOPALAN CINEMAS ARCHED MALL (R R NAGAR)
GOPALAN CINEMAS INOVATION MALL (J P NAGAR)
MOVIETIME CINEMAS Y G R MALL (R R NAGAR)
INOX S MALL (TUMKUR)
INOX MALL OF MYSORE MYSORE
DRC CINEMAS ENTERTAINMENT UNLIMITED MYSORE
ಬಸವೇಶ್ವರ (ಚಾಮರಾಜನಗರ)

ವೆಂಕಟೇಶ್ (ರಾಮದುರ್ಗ)
ಪೂರ್ಣಿಮಾ (ತುರುವೇಕೆರೆ)
ಪದ್ಮ (ಕುಣಿಗಲ್)
ಆರ್ಕಾವತಿ (ಕನಕಪುರ)
ಶ್ರೀ ಟಾಕೀಸ್ (ಸಾಗರ)
Bharath Cinemas (ಉಡುಪಿ)
Bharath Cinemas (ಕುಂದಾಪುರ)
Bharath Cinemas (ಶಿವಮೊಗ್ಗ)
LAXMI PRIDE (ಹುಬ್ಬಳ್ಳಿ)
ಶ್ರೀನಿವಾಸ (ರಬಕವಿ)
ಮುರುಗೇಂದ್ರ (ಅಥಣಿ)
ಮಾರುತಿ (ಮಹಾಲಿಂಗಪುರ)
ಡ್ರಿಮ್ಲ್ಯಾಂಡ್ (ಬಿಜಾಪುರ)
ಮಹಾವೀರ (ಇಂಡಿ)
ಮಹಾವೀರ (ತಾಳಿಕೋಟೆ)
ವೆಂಕಟೇಶ್ (ರಾಮದುರ್ಗ)
ಸೂರ್ಯವಂಶಿ (ಮುಧೋಳ್)
ಸ್ಮಾರ್ಟ್ MOVIZ (ಬಾಗಲಕೋಟೆ)
ಮಹಾಂತೇಶ್ (ಇಲಕಲ್ಲ)
ಮಲ್ಲಿಕಾರ್ಜುನ (ರೋಣ)
ವೀಣಾ (ರಾಣೇಬೆನ್ನೂರು)
ಶಿವ (ಕೊಪ್ಪಳ)
ಶಾರದ (ಪಿರಿಯಾಪಟ್ಟಣ)

ಹಾಗೂ ರಾಜ್ಯಾದ್ಯಂತ





ಗರಿಷ್ಠ 32° ಕನಿಷ್ಠ 20°
ಹೊಸ ದಿಗಂತ
ಮೈಸೂರು
ಗುರುವಾರ 19 ಮಾರ್ಚ್ 2026

ಪಾಲುದಾರರ ಕಾರ್ಯಾಗಾರ



ಕೈಗಾರಿಕಾ, ವಾಣಿಜ್ಯ ಇಲಾಖೆ ವತಿಯಿಂದ ಕರ್ನಾಟಕ ಎಂಎಸ್‌ಎಂಇ ನೀತಿ 2025ರ ಅಡಿಯಲ್ಲಿ ಮೈಸೂರಿನ ವಿಭಾಗ ಮಟ್ಟದ ಪಾಲುದಾರರ ಸಮಾಲೋಚನ ಕಾರ್ಯಾಗಾರವನ್ನು ಎಸ್ ಡಿಎಮ್ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಸೌಕರ್ಯಗಳಿಗೆ ಆದ್ಯತೆ: ಶ್ರೀರೂಪಾ | ೨
ಲೋಪವಾಗದಂತೆ ಎಚ್ಚರವಹಿಸಿ: ಶಾಸಕ | ೩
ಜನರ ಸಮಸ್ಯೆಗೆ ಸ್ಪಂದಿಸಿ: ರೇವಣ್ಣ | ೪

ಯುಗಾದಿ ಹಬ್ಬ: ಸಿಲಿಂಡರ್ ಇಲ್ಲದೆ ಹೋಳಿಗೆ ಮನೆಗಳು ಕ್ಲೋಸ್
ಖರೀದಿ ಭರಾಟೆ ಅಲ್ಪ ಇಳಿಕೆ

ಮೈಸೂರು: ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಯುಗಾದಿ ಹಬ್ಬದ ಮೇಲೂ ತಟ್ಟಿದೆ. ಈಗಾಗಲೇ ಮೈಸೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಕೊರತೆಯಿಂದಾಗಿ ಹಲವಾರು ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಇದರಿಂದಾಗಿ ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೂರಾರು ಮಂದಿ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ. ಹೋಟೆಲ್‌ನ ಸುತ್ತ ಮುತ್ತ ವ್ಯಾಪಾರ ವಹಿವಾಟು ನಡೆಸುತ್ತಿದ್ದವರಿಗೂ ದೊಡ್ಡ ಪೆಟ್ಟು ಬಿದ್ದಿದೆ. ಹೀಗಾಗಿ ಆರ್ಥಿಕವಾಗಿ ಸಂಕಷ್ಟಗೀಡಾಗಿರುವ ಜನರಿಗೆ ಈ ಬಾರಿಯ ಯುಗಾದಿ ಹಬ್ಬವನ್ನು ಸಂಭ್ರಮದಿಂದ ಆಚರಿಸುವ ಪರಿಸ್ಥಿತಿಯೇ ಇಲ್ಲವಾಗಿದೆ. ಉಳ್ಳುವರು ಮಾತ್ರ ಹಬ್ಬವನ್ನು ಸಡಗರಿಂದ ಆಚರಿಸುವಂತಹ ವಾತಾವರಣ ನಿರ್ಮಾಣವಾಗಿದೆ. ಮತ್ತೊಂದೆಡೆ ಮನೆಗಳಲ್ಲಿ ಗ್ಯಾಸ್ ಸಿಲಿಂಡರ್ ಅಭಾವದ ಆತಂಕ ಜನರನ್ನು ಕಾಡುತ್ತಿದೆ. ಹಬ್ಬಕ್ಕಾಗಿ ಹೆಚ್ಚಾಗಿ ಸಿಲಿಂಡರ್ ಬಳಿಸಿ, ಅದು ಮುಗಿದ ಹೋದರೆ ಏನಪ್ಪಾ ಗತಿ ಎಂಬ ಆತಂಕ ಕಾಡುತ್ತಿದೆ. ಹಾಗಾಗಿ ಈ ಹಿಂದಿನ ದಿನಗಳಲ್ಲಿ ಇರುತ್ತಿದ್ದ ಹಬ್ಬದ ಸಂಭ್ರಮ ಈಗ ಹೆಚ್ಚಾಗಿ ಕಂಡು ಬರುತ್ತಿಲ್ಲ. ಆದರೂ ಕೂಡ ಮಾರುಕಟ್ಟೆಯಲ್ಲಿ ಭರ್ಜರಿ ವ್ಯಾಪಾರ ವಹಿವಾಟು ನಡೆಯದಿದ್ದರೂ, ಯುಗಾದಿ ಹಬ್ಬಕ್ಕೆ ಬೇಕಾದಂತಹ ಅಗತ್ಯ ವಸ್ತುಗಳನ್ನು ಜನರು ಖರೀದಿಸುತ್ತಿದ್ದಾರೆ.

ನಗರದ ವಿವಿಧ ಭಾಗಗಳಲ್ಲಿರುವ ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ ವೃತ್ತ, ಶಿವರಾಂ ಪೇಟೆ, ವಾಣಿವಿಲಾಸ, ಮಂಡಿ ಮಾರ್ಕೆಟ್, ಅಗ್ರಹಾರ ವೃತ್ತ, ನಂಜುಮಳಿಗೆ ವೃತ್ತ ಸೇರಿದಂತೆ ಪ್ರಮುಖ ಮಾರುಕಟ್ಟೆ, ವೃತ್ತಗಳು ಹಾಗೂ ರಸ್ತೆ ಬದಿಯಲ್ಲಿ ಹಬ್ಬಕ್ಕೆ ಬೇಕಿರುವ ಅಗತ್ಯ ವಸ್ತುಗಳ ವ್ಯಾಪಾರ ಸುಮಾರಾಗಿ ನಡೆಯಿತು. ಈ ಹಿಂದಿನ ದಿನಗಳಲ್ಲಿ ಕಾಣುತ್ತಿದ್ದ ಕಾಲಿಡಲು ಜಾಗವಿಲ್ಲದಂತಹ ಪರಿಸ್ಥಿತಿಯೇನು ಇರಲಿಲ್ಲ. ಬೆಳಗ್ಗೆಯಿಂದಲೇ ಮಾರುಕಟ್ಟೆಗೆ ಆಗಮಿಸಿದ ಗ್ರಾಹಕರು ಹೂ, ಹಣ್ಣು, ತರಕಾರಿ, ಬೇವು ಬೆಲ್ಲ, ಹೊಸ ಬಟ್ಟೆ ಸೇರಿದಂತೆ ಇತರೆ ವಸ್ತುಗಳನ್ನು ಖರೀದಿಸಿದರು. ಮೈಸೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಬೇವಿನ ಸೊಪ್ಪು, ಮಾವಿನ ಸೊಪ್ಪು,



ಹೋಳಿಗೆ ದರ ಏರಿಕೆ

ಯುಗಾದಿ ಹಬ್ಬಕ್ಕೆ ಒಬ್ಬಟ್ಟು ಹೋಳಿಗೆ ಸವಿಯದಿದ್ದರೆ, ಹಬ್ಬದ ಕಳೆಯೇ ಇರುವುದಿಲ್ಲ. ಆದರೆ ಯುದ್ಧದ ಪರಿಣಾಮ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳು ಸಿಗದ ಕಾರಣ ನಗರದಲ್ಲಿರುವ ಹಲವಾರು ಒಬ್ಬಟ್ಟು ತಯಾರಿಕೆಯ ಹೋಳಿಗೆ ಮನೆಗಳು, ಅಂಗಡಿಗಳು ಬಾಗಿಲು ಮುಚ್ಚಿವೆ. ಇದರಿಂದಾಗಿ ಒಬ್ಬಟ್ಟಿಗೆ ಈಗ ಎಲ್ಲಿಲ್ಲದ ಬೇಡಿಕೆಯುಂಟಾಗಿದೆ. ಬಾಗಿಲು ತೆರೆದಿರುವ ಹೋಳಿಗೆ ಅಂಗಡಿಗಳ ಮುಂದೆ ಜನರು ಖರೀದಿಗಾಗಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ಉರಿ ಬಿಸಿಲನ್ನು ಲೆಕ್ಕಿಸದೆ ನಿಂತು, ಸದ್ಯ ಒಬ್ಬಟ್ಟು ಸಿಕ್ಕರೆ ಸಾಕಪ್ಪ ಎಂದು ಏದುಸಿರು ಬಿಡುತ್ತಿದ್ದಾರೆ. ಮೊದಲ ಒಂದು ಒಬ್ಬಟ್ಟಿನ ಪ್ಯಾಕ್ 60 ರೂ ಇತ್ತು. ಇದೀಗ ಅದು ನೂರು ರೂ.ಗೆ ಏರಿಕೆಯಾಗಿದೆ.



ಹೂಗಳನ್ನು ನಗರದ ಪ್ರಮುಖ ವೃತ್ತಗಳಲ್ಲಿ ಮಾರಾಟ ಮಾಡುತ್ತಿದ್ದುದು ಕಂಡು ಬಂತು.

ಹೂವಿನ ಬೆಲೆ ಏರಿಕೆ: ಯುಗಾದಿ ಹಬ್ಬದ ಹಿನ್ನೆಲೆ ನಗರದಲ್ಲಿ ಹೂವಿನ ಬೆಲೆ ಏರಿಕೆಯಾಗಿದ್ದು, ಸಾಮಾನ್ಯ ದಿನಕ್ಕಿಂತ 20ರಿಂದ 30ರೂ. ಏರಿಕೆಯಾಗಿದೆ. ಸೇವಂತಿಗೆ ಮಾರು 80-100 ರೂ, ಕನಕಾಂಬರದ ಗರಿಷ್ಠ ದರ ಪ್ರತಿ ಕೆ.ಜಿ.ಗೆ 1000 ರೂ, ಮಲ್ಲಿಗೆ ಕೆ.ಜಿಗೆ 900-1000 ರೂ, ಕಾಕಡ 700 ರೂ, ಗುಲಾಬಿ ಕೆ.ಜಿಗೆ 200 ರೂ, ಗಣಗಲೆ ಕೆ.ಜಿಗೆ 300 ರೂ, ಚೆಂಡೂ ಹೂ ಕೆ.ಜಿ.ಗೆ 60-80 ರೂಗೆ ಮಾರಾಟವಾಯಿತು.

ಬಾಳೆ ಹಣ್ಣು ಕೆಜಿಗೆ 80-100ರೂ.ಗೆ ಮಾರಾಟವಾಯಿತು. ತರಕಾರಿ ಮತ್ತು ಹಣ್ಣುಗಳ ಬೆಲೆ ಏರಿಕೆಯಾಗಿಲ್ಲ ಏರಿಕೆಯಾಗಿದೆ. ಬೀನ್ಸ್ ಕೆಜಿಗೆ 60 ರೂ, ಕ್ಯಾರೆಟ್ 40 ರೂ, ಸುವರ್ಣಗೆಡ್ಡೆ 40 ರೂ, ಬೀಟ್‌ರೂಟ್ 40 ರೂ, ದಪ್ಪಮೆಣಸಿ 60 ರೂಗೆ ಮಾರಾಟ ಮಾಡಲಾಗುತ್ತಿದೆ.

ಮಾವಿನ ಎಲೆ 20 ರೂ., ಬೇವಿನ ಸೊಪ್ಪು 20 ರೂ., ತುಳಸಿ ತೋರಣ ಒಂದು ಮಾರಿಗೆ 60 ರಿಂದ 80 ರೂ ಇತ್ತು. ಬೆಲ್ಲದ ಅಚ್ಚು-ಉಂಡೆ ಕೆ.ಜಿ.ಗೆ 80 ರಿಂದ 100 ರೂಗೆ ಮಾರಾಟವಾಯಿತು.

ಇಂದಿನಿಂದ ಚಿಕ್ಕದೇವಮ್ಮ ಜಾತ್ರಾ ಮಹೋತ್ಸವ

ಸರಗೂರು: ನಾಡಿನ ಅದಿದೇವತೆ ಚಿಕ್ಕ ದೇವಮ್ಮನ ಜಾತ್ರಾ ಮಹೋತ್ಸವ ಮಾ.19ರಿಂದ ಮೂರು ದಿನಗಳು ವಿಜೃಂಭಣೆಯಿಂದ ನಡೆಯಲಿರುವ ಹಿನ್ನೆಲೆಯಲ್ಲಿ ಭಕ್ತರು ಜಾತ್ರಾ ವೇಳೆ ಸಂಪೂರ್ಣವಾಗಿ ಪ್ರಾಣಿ ಬಲಿ ನಿಷೇಧಿಸಬೇಕೆಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ, ಪಶು ಪ್ರಾಣಿ ಬಲಿ ನಿರ್ಮೂಲನ ಜಾಗೃತಿ ಮಹಾಸಂಘ, ಬಸವ ಧರ್ಮಜ್ಞಾನ ಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ ನೇತೃತ್ವದಲ್ಲಿ ಜಾಗೃತಿ ಮೂಡಿಸಲಾಯಿತು.

ಪಟ್ಟಣದ ಪೊಲೀಸ್ ಠಾಣೆ ಮುಂಭಾಗದಲ್ಲಿ ಬುಧವಾರ ಜಾಗೃತಿ ಜಾಥಾ ರಥಕ್ಕೆ ಚಾಲನೆ ನೀಡಿ ಮಾತನಾಡಿದ ಬಸವ ಧರ್ಮಜ್ಞಾನ ಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ ಅವರು, ಜಾತ್ರಾ ಹಿನ್ನೆಲೆಯಲ್ಲಿ ಹಾಲುಗಡದಲ್ಲಿ ಸಂಪೂರ್ಣವಾಗಿ ಬಲಿ ನಿಷೇಧಿಸಲಾಗಿದೆ. ಪೂಜಾ ಕೈಂಕರ್ಯಗಳು ನಡೆಸುವ ವೇಳೆ ಬೆಟ್ಟದ ಪರಿಸರ, ಉತ್ಸವ ಮೆರವಣಿಗೆ ಸಂದರ್ಭದಲ್ಲಿ ರಸ್ತೆಗಳಲ್ಲಿ, ಅಕ್ಕ, ಪಕ್ಕದ ಜಮೀನುಗಳಲ್ಲಿ ಹಾಲುಗಡ



ಪ್ರಾಣಿ ಬಲಿ ನಿಷೇಧಿಸಬೇಕೆಂದು ಸ್ವಾಮೀಜಿ ನೇತೃತ್ವದಲ್ಲಿ ಜಾಗೃತಿ

ಮತ್ತು ಇಟ್ನ ಗ್ರಾಮಗಳಲ್ಲಿ ಭಕ್ತರು ದೇವರು, ಧರ್ಮದ ಹೆಸರಿನಲ್ಲಿ ಹರಕೆ ರೂಪದಲ್ಲಿ ಪ್ರಾಣಿ ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇದಕ್ಕೆ ಭಕ್ತರು ಸಹಕರಿಸಬೇಕೆಂದು ಮನವಿ ಮಾಡಿದರು.

ಭಕ್ತಾಧಿಗಳು ಪ್ರಾಣಿಬಲಿ ತ್ಯಜಿಸಿ ಅಹಿಂಸಾತ್ಮಕವಾಗಿ ಸಾತ್ವಿಕ ಪೂಜೆ ಸಲ್ಲಿಸಬೇಕು. ದೇವಾಲಯಗಳು ವಧಾಲಯಗಳಾಗದೆ ದಿವ್ಯಾಲಯವಾಗಬೇಕು. ಜಾತ್ರಾ ಪರಿಸರಗಳ ಧಾರ್ಮಿಕ ಸ್ಥಾನಗಳು ಕಟುಕರ ಕೇರಿಗಳಾಗಬಾರದು. ಜೀವ ತೆಗೆಯುವ ಮೃತ್ಯು ಕೂಪಗಳಾಗಬಾರದು. ಪ್ರಾಣಿಹಿಂಸೆ, ಮದ್ಯ, ಮಾದಕ ಪದಾರ್ಥಗಳಿಂದ ಮುಕ್ತವಾಗಬೇಕು. ಹೀಗಾಗಿ ಭಕ್ತರು ಪ್ರಾಣಿ ಬಲಿ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಜಾತ್ರಾ ಕಮಿಟಿಯ ಅಧ್ಯಕ್ಷ ದೊಡ್ಡವೀರನಾಯಕ, ಸಿಪಿಐ ಪ್ರಸನ್ನಕುಮಾರ್, ಪಿಎಸ್‌ಐ ಕಿರಣ್‌ಕುಮಾರ್, ಆರ್‌ಐ ರವಿಚಂದ್ರ, ವಿಎ ಕುಮಾರ್, ಪೊಲೀಸ್ ಸಿಬ್ಬಂದಿಗಳಾದ ಇಮ್ರನಾ ಅಹಮದ್, ಪುರುಷೋತ್ತಮ್, ಮುಳ್ಳೂರು ಶಿವಚೆನ್ನಪ್ಪ, ದೇವರಾಜು ಸೇರಿದಂತೆ ಇನ್ನಿತರರು ಹಾಜರಿದ್ದರು.

ಬಾಣಸಿಗರಿಗೆ ಉದ್ಯೋಗ ಅವಕಾಶ ಲಭ್ಯ

ಮೈಸೂರು: ತರಬೇತಿ-ಅನುಭವ ಹೊಂದಿರುವ ಭಾರತೀಯ ಬಾಣಸಿಗರಿಗೆ ಇಂದು ವಿಶ್ವಾದ್ಯಂತ ಅಪಾರ ಉದ್ಯೋಗ ಅವಕಾಶಗಳು ಲಭ್ಯವಾಗುತ್ತಿದ್ದು, ಯುವ ಜನತೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಮೈಸೂರು ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ ಕಲಿನರಿ ಬಾಣಸಿಗ ಸತೀಶ್ ನಾಗರಾಜ್ ತಿಳಿಸಿದರು.

ನಗರದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜ ವಿದ್ಯಾರ್ಥಿನಿಯರಿಗೆ ಎಂಐಎಚ್‌ಎಂಸಿನಲ್ಲಿ ಆಹಾರ- ಆತಿಥ್ಯೋದ್ಯಮ ಕ್ಷೇತ್ರದಲ್ಲಿ ಲಭ್ಯವಿರುವ ವೃತ್ತಿಪರ ಕೋರ್ಸ್ ಗಳು ಹಾಗು ಜಾಗತಿಕ ಅವಕಾಶಗಳ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು,

ಭಾರತೀಯ ಬಾಣಸಿಗರಿಗೆ ಇಂದು ವಿಶ್ವ ಮಟ್ಟದಲ್ಲಿ ಅವರ ಕೌಶಲ್ಯದ ಕಾರಣಕ್ಕೆ ಬಹಳ



ಬೇಡಿಕೆ ಇದೆ. ಕೃತಕ ಬುದ್ದಿಮತ್ತೆ ಈ ಕ್ಷೇತ್ರಕ್ಕೆ ತಟ್ಟುವುದಿಲ್ಲ. ಆಹಾರ ವಿಜ್ಞಾನ ವಿದ್ಯಾರ್ಥಿಗಳು ಈ ಕೋರ್ಸ್ ಮೂಲಕ ಅವಕಾಶಗಳನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬಹುದು, ಎಂದು ತಿಳಿಸಿದರು.

ಇಂದು ಪ್ರತಿಯೊಬ್ಬರೂ ಕೂಡಾ ತಾವು ಸೇವಿಸುವ ಆಹಾರ, ಡಯಟ್, ಪೌಷ್ಟಿಕಾಂಶಗಳ ಬಗ್ಗೆ ಹೆಚ್ಚು ಹೆಚ್ಚು ಜಾಗೃತರಾಗುತ್ತಿದ್ದರೆ. ಇದು, ಈ ಕ್ಷೇತ್ರದಲ್ಲಿನ ಉದ್ಯೋಗಾವಕಾಶವನ್ನು ಇನ್ನಷ್ಟು ಹೆಚ್ಚಿಸಿದೆ. ಮೆನು ಪ್ಲಾನರ್ ನಿಂದ ಆರಂಭಗೊಳ್ಳುವ ಉದ್ಯೋಗಾವಕಾಶಕ್ಕೆ ಅವಕಾಶಗಳು ಉಜ್ವಲವಾಗಿವೆ. ಕಾರ್ಪೊರೇಟ್ ಕಿಚನ್, ಡಯಟ್ ಚೆಫ್‌ಗಳು, ಹೀಗೆ ಈ ಕ್ಷೇತ್ರ ವಿಸ್ತೃತಗೊಳ್ಳುತ್ತಿದೆ, ಎಂದು ಹೇಳಿದರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಆಹಾರ ವಿಜ್ಞಾನ ಹಾಗು ಪೌಷ್ಟಿಕತೆ ವಿಭಾಗದ ಪ್ರಾಧ್ಯಾಪಕಿ ಡಾ. ರಾಜೇಶ್ವರಿ ಜೆ ಮಾತನಾಡಿ, ಆಹಾರ-ಪೌಷ್ಟಿಕಾಂಶ ಕ್ಷೇತ್ರ ಅನೇಕ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದ್ದು, ವಿದ್ಯಾರ್ಥಿನಿಯರು ತಮ್ಮ ಕೌಶಲ್ಯ ವೃದ್ಧಿಸಿಕೊಂಡರೆ ಅವರಿಗೆ ಅಪಾರ ಉದ್ಯೋಗವಾಕಾಶ ದೊರೆಯುತ್ತದೆ ಎಂದರು. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ) ಇದರ ಆಹಾರ ವಿಜ್ಞಾನ ಹಾಗು ಪೌಷ್ಟಿಕತೆ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ನಮ್ರತಾ ಎಂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಿರುಸುದ್ದಿ

ಮೈಸೂರು ಡಿಸಿಪಿಯಾಗಿ ಡಾ. ಹರ್ಷ ಪ್ರಿಯಂವದ ನೇಮಕ

ಮೈಸೂರು: ಮೈಸೂರು ನಗರ ಪೊಲೀಸ್ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿ ಡಾ. ಹರ್ಷ ಪ್ರಿಯಂವದ ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ. 2020ರ ಐಪಿಎಸ್ ಬ್ಯಾಚ್‌ನ ಹರ್ಷ ಪ್ರಿಯಂವದ ಅವರು ಆರಂಭದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ಉಪವಿಭಾಗದ ಎಎಸ್‌ಪಿಯಾಗಿ ಕಾರ್ಯನಿರ್ವಹಿಸಿದರು. ನಂತರ ಬೆಂಗಳೂರಿನ ಅಪರಾಧ ತನಿಖೆ ವಿಭಾಗ (ಸಿಐಡಿ)ದ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.ಈಗ ಡಿಸಿಪಿಯಾಗಿ ಮೈಸೂರಿಗೆ ವರ್ಗಾವಣೆ ಆಗಿದ್ದಾರೆ. 2025ರ ಡಿ.31ರಂದು ಈ ಹಿಂದೆ ಡಿಸಿಪಿಯಾಗಿದ್ದ ಆರ್.ಎನ್.ಬಿಂದುಮಣಿ ಅವರನ್ನು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿತ್ತು. ಆದರೆ ಅವರ ಸ್ಥಾನಕ್ಕೆ ಯಾರನ್ನೂ ನಿಯೋಜಿಸಿರಲಿಲ್ಲ. 77 ದಿನಗಳ ನಂತರ ಹೊಸ ಡಿಸಿಪಿ ನಿಯೋಜಿಸಲಾಗಿದೆ.

ಏ.3ರಿಂದ ಎಳೆಯರ ಮೇಳ, ಬೇಸಿಗೆ ಶಿಬಿರ

ಮೈಸೂರು: ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್ ಎಸ್ ಮಹಾವಿದ್ಯಾಪೀಠದಿಂದ ಎಳೆಯರ ಮೇಳ-2026 ಬೇಸಿಗೆ ಶಿಬಿರವನ್ನು ಏಪ್ರಿಲ್ 3 ರಿಂದ 24ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. 8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಭಾಗವಹಿಸಲು ಅವಕಾಶವಿರುತ್ತದೆ. ಇದೇ ತಿಂಗಳ 20ರಿಂದ ಅರ್ಜಿಗಳನ್ನು ವಿತರಿಸಲಾಗುತ್ತದೆ. ಮಕ್ಕಳ ಸುಪ್ತ ಪ್ರತಿಭೆಯ ಬೆಳವಣಿಗೆ ಮತ್ತು ಪ್ರದರ್ಶನಕ್ಕೆ ಇದೊಂದು ಉತ್ತಮ ವೇದಿಕೆ. ಶಿಬಿರದಲ್ಲಿ ರಂಗದಾಟಗಳು, ಬಣ್ಣದ ಕಲೆ, ಜೇಡಿಮಣ್ಣಿನ ಕಲೆ, ಕಾಳುಗಳಿಂದ ಚಿತ್ರ ರಚನೆ, ಮಕ್ಕಳ ಸಂತೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಪವಾಡ ರಹಸ್ಯ ಬಯಲು, ಪೇಪರ್ ಕ್ರಾಫ್ಟ್, ಹಾಡು, ನೃತ್ಯ, ನಾಟಕಗಳು, ಗಣ್ಯ ವ್ಯಕ್ತಿಗಳೊಡನೆ ಸಂವಾದ ಮತ್ತು ಒಂದು ದಿನದ ಪ್ರವಾಸ, ಹೀಗೆ ಹತ್ತು ಹಲವು ಕಾರ್ಯಕ್ರಮಗಳಿರುತ್ತವೆ. ಶಿಬಿರದ ಕೊನೆಯ ದಿನ ಶಿಬಿರಾರ್ಥಿಗಳಿಂದ ಹಾಡು, ನೃತ್ಯ, ನಾಟಕಗಳ ಪ್ರದರ್ಶನಗಳಿರುತ್ತವೆ. ಹೆಚ್ಚಿನ ವಿವರಗಳಿಗೆ ಶ್ರೀ ಚಂದ್ರಶೇಖರಾಚಾರ್ (94487 39365), ಎಂ. ಗುರುಸ್ವಾಮಿ (99454 72541), ಮಂಜುನಾಥ (ಕಾಚಕ್ಕಿ) (91649 91992), ಶಕುಂತಲಾ ಹೆಗಡೆ (8660750218) ಹಾಗೂ ಶ್ರೀ ಬಿ. ಜೀವನ್‌ಕುಮಾರ್ (98801 01305) ಇವರುಗಳನ್ನು ಸಂಪರ್ಕಿಸಬೇಕೆಂದು ಸಂಚಾಲಕ ಚಂದ್ರಶೇಖರಾಚಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಜಾ ಸಾಗಿಸುತ್ತಿದ್ದ ನಾಲ್ವರ ಬಂಧನ

ಮೈಸೂರು: ಗಾಂಜಾ ಸಾಗಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿರುವ ನಗರ ಅಪರಾಧ ಪೊಲೀಸರು, ಅವರಿಂದ 8.65 ಲಕ್ಷರೂ. ಮೌಲ್ಯದ 5.32 ಕೆಜಿ ಗಾಂಜಾ ಮತ್ತು ಒಂದು ಕಾರನ್ನು ವಶಪಡಿಸಿಕೊಂಡಿದ್ದಾರೆ. ಅಮ್ಮದ್ ಪಾಷಾ, ಜಿಯಾ ಖಾನ್, ಮೊಹಮ್ಮದ್ ಸಕ್ಲೆನ್ ಮತ್ತು ಸೈಯದ್ ಬೇಗ್ ಬಂಧಿತ ಆರೋಪಿಗಳು. ಖಚಿತ ಮಾಹಿತಿ ಮೇರೆಗೆ ಮತ್ತು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಸಿಬಿ ಈ ಸಿಬ್ಬಂದಿ ವಾಹನ ತಪಾಸಣೆಯ ಸಮಯದಲ್ಲಿ ಆರೋಪಿಗಳ ಸ್ವಿಫ್ಟ್ ಕಾರೊಂದನ್ನು ತಡೆದು ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಕಾರಿನಲ್ಲಿ ಗಾಂಜಾವನ್ನು ಸಾಗಿಸುತ್ತಿರುವುದು ಕಂಡುಬಂದಿದೆ. ಕೂಡಲೇ ಈ ನಾಲ್ವರನ್ನು ಬಂಧಿಸಿದ ಪೊಲೀಸರು ಅಕ್ರಮವಾಗಿ ಸಾಗಿಸುತ್ತಿದ್ದ ವಸ್ತುಗಳು ಮತ್ತು ವಾಹನವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಹೂ ನೀಡಿ ಮಕ್ಕಳಿಗೆ ಸ್ವಾಗತ

ಕೊಳ್ಳೇಗಾಲ: ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಅವರು ಹೂಗುಚ್ಛ ನೀಡುವ ಮೂಲಕ ಸ್ವಾಗತ ಕೋರಿದರು. ತಾಲೂಕಿನದ್ಯಂತಹ 9 ಪರೀಕ್ಷಾ ಕೇಂದ್ರಗಳಾದ ಪಟ್ಟಣದ ಎಸ್.ವಿ.ಕೆ ಬಾಲಕಿಯರ ಕಾಲೇಜು, ಸಂತ ಫ್ರಾನ್ಸಿಸ್ ಅಸ್ಸಿಸಿ ಪ್ರೌಢಶಾಲೆ, ಶ್ರೀ. ವಾಸವಿ ವಿದ್ಯಾಕೇಂದ್ರ, ಸರ್ಕಾರಿ ಎಂ.ಜಿ.ಎಸ್.ವಿ ಕಾಲೇಜು, ಲಯನ್ಸ್ ಪ್ರೌಢಶಾಲೆ, ಸತ್ತೇಗಾಲ ಸರ್ಕಾರಿ ಪ್ರೌಢಶಾಲೆ, ಪ್ರಕಾಶ್ ಪಾಳ್ಯ ಡಾನ್ ಬಾಸ್ಕೋ ಪ್ರೌಢಶಾಲೆ, ಕಾಮಗೆರೆ ಸಂತ ಪ್ರಾನ್ಸಿ ೀಸ್ ಕ್ಷೇವಿಯರ್ ಪ್ರೌಢಶಾಲೆ ಹಾಗೂ ಚಿಲಕವಾಡಿ ಪ್ರೌಢಶಾಲೆಗಳಲ್ಲಿ ಒಟ್ಟು 2019 ವಿದ್ಯಾರ್ಥಿಗಳ ಪೈಕಿ 2004 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಗಂಡು ಮಕ್ಕಳು 962 ಪೈಕಿ 953 ಮಕ್ಕಳು ಹಾಜರಾಗಿದ್ದು 9 ಮಕ್ಕಳು ಗೈರಾಗಿದ್ದಾರೆ, ಹೆಣ್ಣು ಮಕ್ಕಳು 1023 ಪೈಕಿ 1018 ಮಕ್ಕಳು ಹಾಜರಾಗಿದ್ದ 5 ಮಕ್ಕಳು ಗೈರಾಗಿದ್ದಾರೆ. 14 ಮಂದಿ ಗೈರಾದ್ದರು. ಹಾಜರಾಗಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಗುಲಾಬಿ ಹೂವು ನೀಡುವ ಮೂಲಕ ಬಿಇಒ ಮಂಜುಳಾ ರವರು ಪರೀಕ್ಷೆಯನ್ನು ಉತ್ತಮವಾಗಿ ಬರೆಯುವಂತೆ ಶುಭ ಹಾರೈಸಿದರು.



ಮೈಸೂರು ನಗರದ ಅರಮನೆ ಮುಂಭಾಗವಿರುವ ಡಾಕ್ಟರ್ ರಾಜ್ ಉದ್ಯಾನವನದಲ್ಲಿ ಬುಧವಾರ ಚಿತ್ರ ನಟ ದಿ. ಪುನೀತ್ ರಾಜ ಕುಮಾರ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಚಿತ್ರ ನಟ ಎಸ್. ಜಯಪ್ರಕಾಶ್ (ಜೆಪಿ), ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ರೈತ ಸಂಘದಿಂದ ಪ್ರತಿಭಟನೆ

ಗುಂಡ್ಲುಪೇಟೆ: ಶಾಲೆ ಮಕ್ಕಳನ್ನು ಕರೆದೊಯ್ಯುತಿದ್ದ ವಾಹನಕ್ಕೆ ಟಿಪ್ಪರ್ ಡಿಕ್ಕಿಯಾಗಿ ಏಳಕ್ಕು ಹೆಚ್ಚು ಮಕ್ಕಳು ತೀವ್ರ ಗಾಯವಾದ ಹಿನ್ನೆಲೆ ಶಿಂಡನಪುರ- ಕಂದೇಗಾಲ ಗ್ರಾಮಸ್ಥರು ಶಿಂಡನಪುರ ಗೇಟ್ ಬಳಿ ಗಣಿ ಇಲಾಖೆ, ಆರ್‌ಟಿಒ, ಪೊಲೀಸ್ ಇಲಾಖೆಯ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ಚಿಕ್ಕತುಪ್ಪೂರು ಗೇಟ್ ಬಳಿ ಪ್ರತ್ಯೇಕವಾಗಿ ರೈತಸಂಘದ ಮುಖಂಡರು ಪ್ರತಿಭಟನೆ ನಡೆಸಿ ತಾಲೂಕು ಆಡಳಿತ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಆರ್‌ಟಿಒ ಪೊಲೀಸ್ ಇಲಾಖೆ ಗಳ ವಿರುದ್ಧ ದಿಕ್ಕಾರದ ಘೋಷಣೆ ಕೂಗಿ ಆಕ್ರೋಶ ಹೂರಹಾಕಿದರು.

ತಾಲೂಕಿನಲ್ಲಿ ಟಿಪ್ಪರ್ ಲಾರಿಗಳು ನಿಯಮ ಮೀರಿ ಸಂಚರಿಸುತಿದ್ದರು ಕ್ರಮ ಕೈಗೊಳ್ಳುತಿಲ್ಲ, ಆದರೆ ಬೈಕ್ ಸವಾರರು ಹಾಗೂ ರೈತನ ಮೇಲೆ ಕೇಸ್ ಹಾಕುತ್ತೀರ ಮಕ್ಕಳ ಪ್ರಾಣಕ್ಕೆ ಹಾನಿಯಾಗಿದ್ದರೆ ಯಾರು ಹೊಣೆ ಇದುವರೆಗೂ ಯಾರು ಮಕ್ಕಳ ಆರೋಗ್ಯ ವಿಚಾರಿಸಿಲ್ಲ ಎಂದು ಆಕ್ರೋಶ ಹೊರಹಾಕಿದರು. ತಾಲ್ಲುಕಿನಲ್ಲಿ ಹದಿನೆಂಟು- ಇಪ್ಪತ್ತು ಚಕ್ರದ ದೊಡ್ಡ ಟಿಪ್ಪರ್ ನಿಲ್ಲಿಸಬೇಕು, ಶಾಲೆಯ ಆರಂಭ ಮತ್ತು ಮುಗಿಯುವ ಸಂಜೆ ಸಮಯ ಟಿಪ್ಪರ್ ಓಡಾಟಕ್ಕೆ ಕಡುವಾಣ ಹಾಕಬೇಕು ಎಂದು ಡಿವೈಎಸ್ಪಿ ಸ್ನೆಹರಾಜ್ ಗೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು, ರೈತ ಮುಖಂಡರಾದ ಗುರಪ್ರಸಾದ್, ಮಾಡ್ರಹಳ್ಳಿ ಮಹದೇವಪ್ಪ, ಕುಂದಕೆರೆ ಸಂಪತ್ತು, ಕಂದೇಗಾಲ ಹೊಸೂರು ಮಹೇಶ್, ಚಿಕ್ಕಣ್ಣ ಮತ್ತಿತರರಿದ್ದರು.



ಶಾಲೆ ಮಕ್ಕಳನ್ನು ಕರೆದೊಯ್ಯುತಿದ್ದ ವಾಹನಕ್ಕೆ ಟಿಪ್ಪರ್ ಡಿಕ್ಕಿಯಾಗಿ ಏಳಕ್ಕೂ ಹೆಚ್ಚು ಮಕ್ಕಳು ತೀವ್ರ ಗಾಯವಾದ ಹಿನ್ನೆಲೆ ಗುಂಡ್ಲುಪೇಟೆ ತಾಲೂಕಿನ ಶಿಂಡನಪುರ- ಕಂದೇಗಾಲ ಗ್ರಾಮಸ್ಥರು ಶಿಂಡನಪುರ ಗೇಟ್ ಬಳಿ ಗಣಿ ಇಲಾಖೆ, ಆರ್‌ಟಿಒ, ಪೊಲೀಸ್ ಇಲಾಖೆಯ ವಿರುದ್ಧ ಪ್ರತಿಭಟನೆ ನಡೆಸಿದರು.

ಚಾಮರಾಜನಗರ ನಗರಸಭೆ 187.ಲಕ್ಷ ರೂ. ಉಳಿತಾಯ ಬಜೆಟ್ ಮಂಡನೆ

ಸೌಕರ್ಯಗಳಿಗೆ ಆದ್ಯತೆ

ಚಾಮರಾಜನಗರ: ನಗರದ ವ್ಯಾಪ್ತಿಯಲ್ಲಿ ಮೂಲಸೌಕರ್ಯಗಳಿಗೆ ಒತ್ತು ನೀಡುವ ಜತೆಗೆ 187.66 ಲಕ್ಷ ಉಳಿತಾಯದ ಬಜೆಟ್ ಅನ್ನು ನಗರಸಭೆ ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಶ್ರೀರೂಪಾ ಬುಧವಾರ ಮಂಡಿಸಿದರು.

ನಗರಸಭಾ ಸಭಾಂಗಣದಲ್ಲಿ 2026, 27ನೇ ಸಾಲಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನಿರೀಕ್ಷಿಸಲಾಗಿರುವ ಅನುದಾನಗಳ ಸೇರಿದಂತೆ 5895.73 ಲಕ್ಷಗಳು ಸೇರಿದಂತೆ ನಗರಸಭೆಯ ಸ್ವಂತ ಮೂಲಗಳಿಂದ ಕ್ರೋಡೀಕರಿಸಲು ಉದ್ದೇಶಿರುವ ಆದಾಯಮೂಲಗಳಿಂದ 2117.73 ಲಕ್ಷಗಳು ಸೇರಿದಂತೆ ಪ್ರಮುಖ ವೆಚ್ಚಗಳಿಗೆ 7523.96 ಲಕ್ಷಗಳು ಸೇರಿ ನಗರಸಭಾ ಎಲ್ಲ ಬಾಬ್ತುಗಳಿಗೂ ಅನುದಾನ ಹಂಚಿಕೆ ಮಾಡಿ 187.66, ಆಯವ್ಯಯವನ್ನು ಮಂಡಿಸಿದರು.

ನಗರಸಭೆಗೆ 16 ನೇ ಹಣಕಾಸು ಆಯೋಗದಿಂದ 810 ಲಕ್ಷ, ಎಸ್‌ಎಫ್‌ಸಿ ಅನುದಾನದಿಂದ 300 ಲಕ್ಷ, ಎಸ್‌ಎಫ್‌ಸಿ ವೇತನ ಅನುದಾನ 597 ಲಕ್ಷ, ಎಸ್‌ಎಫ್‌ಸಿ ವಿದ್ಯುತ್ ಅನುದಾನ (ಬೀದಿ ದೀಪ) 263 ಲಕ್ಷ, ಎಸ್ ಎಫ್ ಸಿ ವಿದ್ಯುತ್ ಅನುದಾನ ನೀರು ಸರಬರಾಜು 653 ಲಕ್ಷ, ಸ್ವಚ್ಛ ಭಾರತ್ ಅಭಿಯಾನಯಡಿ 620 ಲಕ್ಷ, ವಿದ್ಯುತ್ ಚಿತಾಗಾರ ನಿರ್ಮಾಣಕ್ಕಾಗಿ 400 ಲಕ್ಷ, ಪೌರಕಾರ್ಮಿಕರ ಗೃಹ ಭಾಗ್ಯ ಅನುದಾನ 50 ಲಕ್ಷ ಸೇರಿದಂತೆ ಇತರೆ ಬಾಬ್ತುಗಳಿಂದ 5895.73 ಅನುದಾನವನ್ನು ಈ ವರ್ಷದಲ್ಲಿ ಈ ವರ್ಷದಲ್ಲಿ ನಿರೀಕ್ಷೆ ಮಾಡಲಾಗಿದೆ ಎಂದರು. 2026-27 ನೇ ಸಾಲಿನಲ್ಲಿ 32 ಲಕ್ಷ ರೂ. ಗಳಲ್ಲಿ ಪುಡ್ ಕೋರ್ಟ್ ನಗರಸಭೆ ಮಳಿಗೆ ಬಾಡಿಗೆಯಿಂದ ಲಭ್ಯವಿರುವ 40.69 ಮಳಿಗೆಗಳ ನವೀಕರಣ, ನಗರಸಭಾ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳ ನಾಮಫಲಕ ಅಳವಡಿಸಲು 20 ಲಕ್ಷ, ಅಮೃತ - 2.0 ಯೋಜನೆಯಡಿ ಉದ್ಯಾನವನಗಳ ಅಭಿವೃದ್ಧಿ, ನಗರ ಹಸರೀಕರಣ ಹಾಗೂ 5 ಪಾರ್ಕ್ ಅಭಿವೃದ್ಧಿ ಹಸಿರೀಕರಣಗೊಳಿಸಲು ಆದ್ಯತೆ ನೀಡಲಾಗಿದೆ ಎಂದರು. ಬಜೆಟ್ ವಿಶೇಷ ಸಭೆಯಲ್ಲಿ ಭಾಗವಹಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ನಗರಸಭಾ ಆದಾಯ ಕ್ರೋಡೀಕರಿಸುವಲ್ಲಿ ವಿಫಲವಾಗಿದೆ. ಹೋಟೆಲ್, ಸೇರಿದಂತೆ ವಿವಿಧ ಉದ್ಯಮಗಳಿಂದ ಸರಿಯಾಗಿ ತೆರಿಗೆ ವಸೂಲಾತಿ ಆಗಿಲ್ಲ ಇಂತಗ ಆದಾಯ ಬಿಟ್ಟರೆ ನಗರ ಅಭಿವೃದ್ಧಿ ಹೇಗೆ ಎಂದು ಅಧಿಕಾರಿಗಳ ತರಾಟೆ ತೆಗೆದುಕೊಂಡರು.

ಸಭೆಯಲ್ಲಿ ಯೋಜನಾ ನಿರ್ದೇಶಕ ವೆಂಕಟೇಶ್, ಪೌರಾಯುಕ್ತ ಪರಶುರಾಮ ಛಲವಾದಿ, ಪರಿಸರ ಇಂಜಿನಿಯರ್ ರೂಪ, ವೆಂಕಟನಾಯಕ್, ಹಾಗೂ ಅಧಿಕಾರಿಗಳ ಭಾಗವಹಿಸಿದ್ದರು.



> ಕುಡಿಯುವ ನೀರು, ಸ್ವಚ್ಛತೆ, ಒಳಚರಂಡಿ ಮೊದಲ ಆದ್ಯತೆ ನೀಡಬೇಕು. 31 ವಾರ್ಡ್‌ಗಳು ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು, ಅಂತರ್ಜಲ ಕುಸಿದಿದೆ. ಆಗಾಗಿ ಬೋರ್ ಕೊರೆದರು ನೀರು ಬರುತ್ತಿಲ್ಲ. ಆಗಾಗಿ ಕಾವೇರಿ ನೀರನ್ನು ಸಮರ್ಪಕವಾಗಿ ಸರಬರಾಜು ಕುಡಿಯುವ ನೀರಿನಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.
> **ಸಿ. ಪುಟ್ಟರಂಗ ಶೆಟ್ಟಿ, ಶಾಸಕ**

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ

ಚಾಮರಾಜನಗರ: ಭುವನೇಶ್ವರಿ (ಪಚ್ಚಪ್ಪ) ವೃತ್ತದಿಂದ ಡಿವೈಎಸ್‌ಪಿ ಕಚೇರಿ ವರೆಗೆ ಸಮಗ್ರವಾಗಿ ರಸ್ತೆ ಅಭಿವೃದ್ಧಿ ಯಾಗಲಿದೆ. ಪಾದಚಾರಿ ಮಾರ್ಗ, ವಿದ್ಯುತ್ ದೀಪ, ಇನ್ನಿತರ ವ್ಯವಸ್ಥೆಯು ರಸ್ತೆ ಅಭಿವೃದ್ಧಿಯಲ್ಲಿ ಸೇರಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ಜಿಲ್ಲಾ ಕೇಂದ್ರದ ಬಿ. ರಾಚಯ್ಯ ಜೋಡಿ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ 3.80 ಕೋಟಿ ರೂ. ವೆಚ್ಚದ ಕಾಮಗಾರಿಗೆ ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಗುದ್ದಲಿಪೂಜೆ ನೆರವೇರಿಸಿದರು.

ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಆಸ್ಪತ್ರೆ ಎದುರಿನ ರಸ್ತೆ ಭಾಗದಲ್ಲಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಭುವನೇಶ್ವರಿ ವೃತ್ತ, ಸರ್ಕಾರಿ ಆಸ್ಪತ್ರೆ ಬಳಿಯ ವೃತ್ತ ಹಾಗೂ ಡಿವೈಎಸ್‌ಪಿ ಕಚೇರಿ ವೃತ್ತಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತದೆ. ಒಟ್ಟಾರೆ ರಸ್ತೆಯ ಸಮಗ್ರ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದು ತಿಳಿಸಿದರು. ನಗರದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆ. ನೀರು ಪೂರೈ ಸಲು ಕೊಳವೆಬಾವಿಗಳನ್ನು ಕೊರೆಯಿಸಲಾ ಗುವುದು. ನಗರಕ್ಕೆ ಅಗತ್ಯ ಪ್ರಮಾಣದಲ್ಲಿ ನೀರು ಸರಬರಾಜು ಮಾಡುವ ಯೋಜನೆ ಹಾಗೂ ಒಳಚರಂಡಿ ಸಂಪರ್ಕ ಸಂಬಂಧ ಯೋಜನೆಗೆ ಈಗಾಗಲೇ ಟೆಂಡರ್ ಆಗಿದ್ದು, ಶೀಘ್ರವೇ ಕಾಮಗಾರಿಗೆ ಚಾಲನೆ ನೀಡಲು ಕೈಗೊಳ್ಳಲಾಗುತ್ತದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್. ವಿ. ಚಂದ್ರು, ಚೂಡಾ ಅಧ್ಯಕ್ಷ ಮಹ ಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ, ಇದ್ದರು.



ಆರೋಗ್ಯ ಅರಿವು ಕಾರ್ಯಕ್ರಮ

ಕೊಳ್ಳೇಗಾಲ: ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ರಕ್ತಸ್ರಾವದ ಸಂದರ್ಭದಲ್ಲಿ ಪಿಡ್ಸ್, ಹಾವು ಕಡಿತ ಹೀಗೆ ಅನೇಕ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ನೀಡುವುದರ ಬಗ್ಗೆ ಸಂಪನ್ಮೂಲ ವ್ಯಕ್ತಿ ಡಾ.ಶ್ವೇತ ಶಶಿಧರ್ ಮಾಹಿತಿ ನೀಡಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಯೂತ್ ರೆಡ್‌ಕ್ರಾಸ್ ಘಟಕದ ವತಿಯಿಂದ ವಿಶ್ವ ಆರೋಗ್ಯ ದಿನದ ಪ್ರಯುಕ್ತ ಆರೋಗ್ಯ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರದ ಯೂತ್‌ರೆಡ್ ಕ್ರಾಸ್ ಸೊಸೈಟಿಯ ಉಪಾಧ್ಯಕ್ಷ ಡಾ.ಮಹೇಶ್ ಎಂ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, 1859ರಲ್ಲಿ ಯುರೋಪ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಟಲಿಯ ನಡುವಿನ ಯುದ್ಧದ ಸಮಯದಲ್ಲಿ ಈ ರೆಡ್‌ಕ್ರಾಸ್ ಎಂಬುದು ಆರಂಭವಾಯಿತು. ನಂತರದ ದಿನಗಳಲ್ಲಿ ಜಿನೀವಾ ಸಮಾವೇಶದ ಮೂಲಕ ಜಾಗತಿಕ ಮಟ್ಟದಲ್ಲಿ ರೆಡ್ ಕ್ರಾಸ್ ಘಟಕ ವಿಸ್ತಾರವಾಯಿತು. ಹೆನ್ರಿಡ್ಯುನಾಂಟ್ ಎಂಬ ವ್ಯಕ್ತಿಯಿಂದ ಈ ರೆಡ್‌ಕ್ರಾಸ್ ಘಟಕ ಸ್ಥಾಪನೆ ಯಾಯಿತು. ನೊಬೆಲ್ ಪ್ರಶಸ್ತಿ ಪಡೆದ ಪ್ರಪಂಚದಲ್ಲಿ ಮೊದಲಿಗೆ ಎಂಬ ಖ್ಯಾತಿಗೆ ಪಾತ್ರರಾದರು. ಇಂದು ಪ್ರಪಂಚದಾದ್ಯಂತ 97 ದೇಶಗಳಲ್ಲಿ ಸುಮಾರು 17 ಮಿಲಿಯನ್ ಸದಸ್ಯರೊಂದಿಗೆ ರೆಡ್‌ಕ್ರಾಸ್ ಘಟಕ ಅಸ್ತಿತ್ವದಲ್ಲಿದೆ ಎಂದು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಕೊಂಗಳಪ್ಪ ನವರು ಮಾತನಾಡುತ್ತಾ 1920 ರಲ್ಲಿ ಭಾರತದಲ್ಲಿ ಯೂತ್‌ರೆಡ್ ಕ್ರಾಸ್ ಘಟಕ ಸ್ಥಾಪನೆಯಾಯಿತು. ನಂತರ ಕರ್ನಾಟಕದಲ್ಲಿ 1921ರಲ್ಲಿ ಸ್ಥಾಪನೆಯಾಗಿ ರಾಜ್ಯಪಾಲರು ಇದರ ಅಧ್ಯಕ್ಷರಾಗಿರುತ್ತಾರೆ. ಈ ಘಟಕದ ಉದ್ದೇಶ ಸೇವಾ ಮನೋಭಾವನೆ ಆರೋಗ್ಯ ರಕ್ಷಣೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಎಸ್. ಮಮತ ಹಾಗೂ ಯೂತ್ ರೆಡ್ ಕ್ರಾಸ್ ಘಟಕದ ಸಂಚಾಲಕರಾದ ಪುಟ್ಟಮ್ಮ ಉಪಸ್ಥಿತರಿದ್ದರು.



ಅಕ್ರಮ ಗಣಿಗಾರಿಕೆ ವಿರುದ್ಧ ಬಿಜೆಪಿ ಪ್ರತಿಭಟನೆ

ಗುಂಡ್ಲುಪೇಟೆ: ತಾಲೂಕಿನಲ್ಲಿ ಅಕ್ರಮ ಗಣಿಗಾರಿಕೆ, ಅಧಿಕ ಟಿಪ್ಪರ್‌ಗಳಿಂದ ಜನ ಸಾಮಾನ್ಯರ ಜೀವಕ್ಕೆ ಕುತ್ತು ಬರುತಿದ್ದು ಇದಕ್ಕೆ ಶಾಸಕರು ಪೊಲೀಸರು ಗಣಿ ಇಲಾಖೆ, ಆರ್ ಟಿಒ ಇಲಾಖೆಗಳು ಕುಮ್ಮಕ್ಕು ನೀಡುತ್ತಿವೆ ಎಂದು ಆರೋಪಿಸಿ ಈ ಎಲ್ಲಾ ಇಲಾಖೆ ವಿರುದ್ಧ ಧಿಕ್ಕಾರ ಕೂಗಿ ಬಿಜೆಪಿ ಯುವ ಮೋರ್ಚಾದಿಂದ ಪ್ರತಿಭಟನೆ ನಡೆಸಲಾಯಿತು.

ಶಾಲಾ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹಾಗೂ ತಾಲ್ಲೂಕಿನಲ್ಲಿ ಟಿಪ್ಪರ್ ಗಳ ಅಬ್ಬರ ಹೆಚ್ಚಿದ್ದು ಇದಕ್ಕೆ ಕಡಿವಾಣ ಹಾಕದೆ ಸಹಕಾರ ನೀಡುತಿದ್ದಾರೆ ಎಂದು ಸಂಬಂದಪಟ್ಟ ಇಲಾಖೆಗಳ ವಿರುದ್ಧ ಹಾಗೂ ಶಾಸಕರ ವಿರುದ್ಧ ಪ್ರತಿಭಟನೆ ನಡೆಸಿದರು.

ಎಲ್.ಸುರೇಶ್ ಮಾತನಾಡಿ, ಸರ್ಕಾರ ಮಹಿಳೆಯರಿಗೆಭಾಗ್ಯ ಕೊಡುತ್ತಾರೆ.ಆದರೆಸ್ಥಳೀಯ ಶಾಸಕರು ಟಿಪ್ಪರ್ ಗಣಿಗಾರಿಕೆಗೆ ಪ್ರೋತ್ಸಾಹ ನೀಡಿ ಜನಸಾಮಾನ್ಯರನ್ನು ಅಪಘಾತದಲ್ಲಿ ಕೊಲ್ಲಿಸಿ ವಿಧವೆ ಭಾಗ್ಯ ನೀಡುತಿದ್ದಾರೆ ಎಂದು ಆರೊಪಿಸಿದರು.

ಹಣದ ಆಸೆಗೆ ಗಣಿಗಾರಿಕೆ ಟಿಪ್ಪರ್ ಗಳಿಗೆ ಪ್ರೊತ್ಸಾಹ ನೀಡುತ್ತಿದ್ದು, ಇದರಿಂದಲೇ ಅಪಘಾತ ಹೆಚ್ಚಿದೆ ನಿಮ್ಮ ತಂದೆ ಸಾಕಷ್ಟು ಹಣ ಮಾಡಿದ್ದಾರೆ ನೀವು ಅವರಿಗಿಂತ ಹೆಚ್ಚು ಹಣ ಮಾಡಲು ಹೊರಟಿದ್ದೀರ ಎಂದು ಪ್ರಶ್ನಿಸಿದರು ಇನ್ನಾದರು ಜನಸಾಮಾನ್ಯರಿಗೆ ಅನುಕೂಲವಾಗುವಂತೆ ನಡೆದುಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಮಂಡಲ ಹಾಗೂ ಯುವ ಮೋರ್ಚಾ ಪದಾಧಿಕಾರಿಗಳು ಎಲ್ ಸುರೇಶ್, ಪ್ರಣಯ್, ಮಂಜು, ಶಿವಕುಮಾರ್, ಶಶಿಕುಮಾರ್, ಸುಬ್ಬು, ಸುನೀಲ್, ಜಗ, ನಾಗೇಂದ್ರ, ಸಾಗರ್, ಮಹದೇವಸ್ವಾಮಿ, ಮಹೇಂದ್ರ ಮತ್ತಿತರರಿದ್ದರು.



ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ

ಮೈಸೂರು: ಮೈಸೂರು ಅರಮನೆ ಮಂಡಳಿ ವತಿಯಿಂದ ಯುಗಾದಿ ಸಂಗೀತೋತ್ಸ ವದ ಪ್ರಯುಕ್ತ ಹಲವಾರು ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಮಾ. 22ರವರೆಗೆ ಅರಮನೆ ಆವರಣದಲ್ಲಿ ಆಯೋಜಿಸಲಾಗುತ್ತದೆ.

ಮಾ. 19 ರಂದು ಸಂಜೆ 4.30 ರಿಂದ 5.30 ಗಂಟೆಯವರೆಗೆ ವಿದ್ವಾನ್ ರವಿಕುಮಾರ್ ಎಂ.ಬಿ. ಮತ್ತು ತಂಡದವರಿಂದ ಸ್ಯಾಕ್ಸೋಫೋನ್ ವಾದನ, ಸಂಜೆ 5.35 ರಿಂದ 6 ರವರೆಗೆ ಜ್ಯೋತಿಷ್ಯ ಪ್ರವೀಣರಾದ ವೇ. ಎಂ.ವಿ. ಶ್ರೀನಿವಾಸಯ್ಯ ಪಂಚಾಂಗ ಶ್ರವಣ, ಸಂಜೆ 6.15 ರಿಂದ 7.15 ರವರೆಗೆ ವಿದ್ವಾನ್ ಎಸ್. ರಘುನಂದನ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 7.15 ರಿಂದ 7.25 ರವರೆಗೆ ಚಂದನ .ಆರ್ ಮತ್ತು ತಂಡದವರಿಂದ ನಾಡಗೀತೆ ಮತ್ತು ಮೈಸೂರು ಸಂಸ್ಥಾನದ ನಾಡಗೀತೆಯಾದ ಕಾಯೌ ಶ್ರೀಗೌರಿ ಕರುಣಾಲಹರಿ ಗೀತೆ, ರಾತ್ರಿ 7.25 ರಿಂದ 7.45ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಾಡಲಾಗುತ್ತದೆ. ರಾತ್ರಿ 7.45ರಿಂದ 9.30 ರವರೆಗೆ ಚಿಕ್ಕಮಗಳೂರಿನ ರಶ್ಮಿ ಅಂತಾರಾಷ್ಟ್ರೀಯ ಗಾಯಕರು ಹಾಗೂ ಖ್ಯಾತ ಹಿನ್ನಲೆಗಾಯಕರಾದ ಅಜಯ್ ವಾರಿಯರ್ ಮತ್ತು ತಂಡದವರಿಂದ ಗೀತ ಉತ್ಸವ ನಡೆಯಲಿದೆ.

ಮಾ.20ರಂದು ಸಂಜೆ5.00ರಿಂದ5.30ರವರೆಗೆ ವಿದೂಷಿ ವಿಪಂಚೀ ರಘುರಾಮ್ ಮತ್ತು ವಿದೂಷಿ ಮಹತೀ ರಘುರಾಮ್ ತಂಡದವರಿಂದ ಶಾಸ್ತ್ರೀಯ ಸಂಗೀತ, ಸಂಜೆ 5:40 ರಿಂದ 6:10 ರವರೆಗೆ ನಾಟ್ಯ ಗುರು ವಿದೂಷಿ ಸುನೀತಾ ನಂದಕುಮಾರ್ ಮತ್ತು ತಂಡದವರಿಂದ ಭರತನಾಟ್ಯ, ಸಂಜೆ 6.20 ರಿಂದ 7.15 ರವರೆಗೆ ವಿದುಷಿ ಶ್ರೀದೇವಿ ಭಂಡಾರಕರ್ ಮತ್ತು ಆದಿತ್ಯ ಎಸ್. ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ರಾತ್ರಿ 7.20 ರಿಂದ 8.20 ರವರೆಗೆ ಸಂಗೀತ ಮತ್ತು ತಂಡದವರಿಂದ ಜಾನಪದ ಯುಗಾದಿ ಉತ್ಸವ, 8.30 ರಿಂದ 10 ರವರೆಗೆ ನಾಗೇಶ್ ಕಂದೇಗಾಲ (ಸಂಗೀತ ನಿರ್ದೇಶಕರು) ಖ್ಯಾತ ಹಿನ್ನೆಲೆ ಗಾಯಕರುಗಳಾದ ಅನುರಾಧ ಭಟ್, ಶ್ರೀಹರ್ಷ, ಸುಪ್ರಿಯ ರಘುನಂದನ್ ತಂಡದವರಿಂದ ಭಾವ ಯುಗಾದಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಜಿಲ್ಲಾ ಅಭಿವೃದ್ಧಿ ಸಮನ್ವಯ, ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ

ಗುಣಮಟ್ಟದಿಂದ ಹೆದ್ದಾರಿ ಕಾಮಗಾರಿ ಮಾಡಿ

ಚಾಮರಾಜನಗರ: ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ಗುಣಮಟ್ಟದಿಂದ ನಿರ್ವಹಿಸಬೇಕು. ಅಪಘಾತಗಳಿಗೆ ಅವಕಾಶವಾಗದಂತೆ ಸಮರ್ಪಕವಾಗಿ ಎಲ್ಲ ಮುಂಜಾಗ್ರತಾ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳುವಂತೆ ಲೋಕಸಭಾ ಸದಸ್ಯ ಸುನೀಲ್ ಬೋಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣ ದಲ್ಲಿಂದು ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕ್ಷೇತ್ರದ ವಿವಿಧ ಭಾಗಗಳಲ್ಲಿ ಕಾಮಗಾರಿ ನಿರ್ವಹಿಸ ಲಾಗುತ್ತಿದೆ. ಕಾಮಗಾರಿಗಳು ಕಳಪೆ ಎಂಬ ದೂರುಗಳು ಬರುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಬೇಕು. ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾಮಗಾರಿಗಳು ನಿರ್ವಹಣೆಯಾಗಬೇಕು. ರಸ್ತೆ ಸುರಕ್ಷತಾ ಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಗುಂಡ್ಲುಪೇಟೆ-ನಂಜನಗೂಡು ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚಾಗಿವೆ. ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಈ ರಸ್ತೆಯಲ್ಲಿ ಅಪಘಾತಗಳು ಹೆಚ್ಚುತ್ತಿವೆ. ಸೈನ್ ಬೋರ್ಡ್ ಮತ್ತು ಮಿರರ್ ನಂತಹ ಸುಗಮ ಸಂಚಾರಕ್ಕೆ ಮಾರ್ಗದರ್ಶನ ಮಾಡುವ ಫಲಕಗಳನ್ನು ಅಳವಡಿಸಬೇಕು ಎಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ನಿರ್ದೇಶನ ನೀಡಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ ನಗರ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿಯಲ್ಲಿ ಅಪಘಾತ ಸಂಭವಿಸುತ್ತಿವೆ. ಹೀಗಾಗಿ ಬೈಪಾಸ್‌ಗಳನ್ನು ನಿರ್ಮಾಣ ಮಾಡುವಂತೆ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ತಿಳಿಸಲಾಗಿತ್ತು. ಆದರೂ ಸಹ ಇನ್ನೂ ಕ್ರಮ ಕೈಗೊಂಡಿಲ್ಲ. ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಸಭೆಯಲ್ಲಿ ಉಪಸ್ಥಿತರಿದ್ದರು.



ತಾಲೂಕಿನ ಗೆಜ್ಜಲಗೆರೆ ಗ್ರಾಮ ನಗರಸಭೆಯಿಂದ ಕೈಬಿಡುವಂತೆ ಒತ್ತಾಯ

ರಾಜ್ಯಪಾಲರಿಗೆ ಪತ್ರ ಚಳವಳಿ: ಪ್ರತಿಭಟನೆ

ಮದ್ದೂರು: ತಾಲೂಕಿನ ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಯಿಂದ ಕೈಬಿಡುವಂತೆ ಒತ್ತಾಯಿಸಿ ಸ್ಥಳೀಯ ನಿವಾಸಿಗಳು ಪಟ್ಟಣದ ಅಂಚೆ ಕಚೇರಿಯಲ್ಲಿ ರಾಜ್ಯ ಪಾಲರಿಗೆ ಪತ್ರ ಚಳುವಳಿ ನಡೆಸುವ ಮೂಲಕ ನೂತನ ಪ್ರತಿಭಟನೆ ನಡೆಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾಮದಿಂದ ನೂರಾರು ಸಂಖ್ಯೆಯಲ್ಲಿ ಆಗಮಿಸಿದ ಪ್ರತಿಭಟನಾಕಾರರು, ಸ್ಥಳೀಯ ನಿವಾಸಿಗಳು ಪಟ್ಟಣದ ಅಂಚೆ ಕಚೇರಿ ಬಳಿ ಆಗಮಿಸಿ ಸುಮಾರು 200ಕ್ಕೂ ಹೆಚ್ಚು ಗ್ರಾಮಸ್ಥರು ರಾಜ್ಯಪಾಲರಿಗೆ ರಿಜಿಸ್ಟರ್ ಪೋಸ್ಟ್ ಮಾಡುವ ಮೂಲಕ ಪತ್ರ ಚಳುವಳಿ ನಡೆಸಿ ನಗರಸಭೆಯಿಂದ ಗ್ರಾಮವನ್ನು ಕೈಬಿಡುವಂತೆ ಆಗ್ರಹಿಸಿದರು.

ನಗರಸಭೆಯಿಂದ ಗ್ರಾಮವನ್ನು ಕೈಬಿಡುವಂತೆ ಒತ್ತಾಯಿಸಿ ಕಳೆದ 87 ದಿನಗಳಿಂದ ನಿರಂತರವಾಗಿ ಧರಣಿ ಕೈಗೊಳ್ಳುವ ಜತೆಗೆ ಅಹೋರಾತ್ರಿ ಧರಣಿ ಕೈಗೊಂಡಿದ್ದು ತಮ್ಮ ಬೇಡಿಕೆ ಈಡೇರುವವರೆಗೂ ತಾವು ಪ್ರತಿಭಟನೆಯನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲವೆಂದ ಪ್ರತಿಭಟನಾಕಾರರು ಸ್ಥಳೀಯ ಶಾಸಕರು ತಮ್ಮ ಹಠಮಾರಿ ಧೋರಣೆಯನ್ನು ಕೈಬಿಟ್ಟು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದರು.

ರೈತನಾಯಕಿ ಸುನಂದಜಯರಾಂ ಮಾತನಾಡಿ, ಶಾಸಕರು ಅಸಭ್ಯ ಹೇಳಿಕೆಗಳನ್ನು ನೀಡದೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಮೂಲಕ ಗ್ರಾಮದ ಜನರ ನಿರೀಕ್ಷೆಯನ್ನು ಉಳಿಸಿಕೊಳ್ಳುವಂತೆ ತಾವು ಅಭಿವೃದ್ಧಿ ಬಗ್ಗೆ ಮಾತನಾಡುತ್ತಿಲ್ಲ ತಾವು ಸಹ ಹೋರಾಟಗಾರರ ಮೇಲೆ ಗೌರವ ಇಟ್ಟುಕೊಂಡಿದ್ದು ಕೊಟ್ಟಿರುವ ಗೌರವವನ್ನು ಜವಾಬ್ದಾರಿಯಾಗಿ ನಿರ್ವಹಿಸಿ ಗ್ರಾಮವನ್ನು ನಗರಸಭೆಯಿಂದ ಕೈಬಿಡಬೇಕೆಂದು ಆಗ್ರಹಿಸಿದರು. ಗಂಭೀರವಾಗಿ ಸರಕಾರದ ಗಮನವನ್ನು ಸೆಳೆಯಬೇಕೆಂಬ ಉದ್ದೇಶದಿಂದಾಗಿ ಗ್ರಾಮಸ್ಥರ ಜತೆಗೂಡಿ ರಾಜ್ಯಪಾಲರಿಗೆ ಪತ್ರ ಚಳುವಳಿ ಕೈಗೊಂಡಿದ್ದು ಶಾಸಕರು ಇನ್ನಾದರೂ ತಮ್ಮ ಪ್ರತಿಷ್ಠೆಯನ್ನು ಬದಿಗೊತ್ತಿ ತಮಗೆ ಮತ ನೀಡಿರುವ ಜನರ ಪರ ದನಿಯೆತ್ತುವ ಮೂಲಕ ಕಳೆದ ಹಲವು ದಿನಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಅಂತ್ಯ ಹಾಡಬೇಕೆಂದು ಕೋರಿದರು.

ಪ್ರತಿಭಟನೆ ವೇಳೆ ನಿವೃತ್ತ ಯೋಧ ಬಿ.ಜಿ. ಹೊನ್ನಯ್ಯ, ಹೋರಾಟಗಾರರಾದ ಮೋಹನ್, ಗೌರಮ್ಮ, ಸವಿತ, ಗುರುಲಿಂಗಯ್ಯ, ಅಶ್ವಿನಿ, ಭಾಗ್ಯ, ವೀರಪ್ಪ, ಕೃಷ್ಣ, ಯೋಗೇಶ್, ರಾಮು, ರಾಜಣ್ಣ, ಚಿಕ್ಕೋಳಮ್ಮ ನೇತೃತ್ವ ವಹಿಸಿದ್ದರು.



ಕಿರುಸುದ್ದಿ

ಮಹಿಳೆಯರು ಆರ್ಥಿಕವಾಗಿ ಸಬಲರಾಗಲಿ



ಪಾಂಡವಪುರ: ಹೊಲಿಗೆ ತರಬೇತಿ ಪಡೆದು ಸ್ವಯಂ ಉದ್ಯೋಗ ಕಂಡುಕೊಳ್ಳುವ ಮೂಲಕ ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು ಎಂದು ಕಸಾಪ ಮಾಜಿ ಅಧ್ಯಕ್ಷ ಎಚ್.ಆರ್.ಧನ್ಯಕುಮಾರ್ ಹೇಳಿದರು.

ಪಟ್ಟಣದ ಹಾರೋಹಳ್ಳಿ ಗ್ರಾಮದಲ್ಲಿರುವ ವಿದ್ಯಾರಣ್ಯ ಟ್ರಸ್ಟ್‌ನ ದಾರಿದೀಪ ಹಿರಿಯ ನಾಗರಿಕರ ನಮ್ಮ ಮನೆ ಸಂಸ್ಥೆ ವತಿಯಿಂದ 2025-2026ನೇ ಸಾಲಿನಲ್ಲಿ ಉಚಿತ ಹೊಲಿಗೆ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಹಾಗೂ ಯುಗಾದಿ ಹಬ್ಬದ ಪ್ರಯುಕ್ತ ಹಿರಿಯನಾಗರಿಕರಿಗೆ ಸೀರೆ ವಿತರಣೆ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಮಾತನಾಡಿದರು. ಪತ್ರಕರ್ತ ಎನ್.ಕೃಷ್ಣೇಗೌಡ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಪುರುಷರಿಗೆ ಸರಿ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ಹೀಗಾಗಿ ಹೊಲಿಗೆ ತರಬೇತಿ ಪಡೆದು ಪ್ರಮಾಣ ಪತ್ರ ಪಡೆದಿರುವ ಮಹಿಳೆಯರು ಸ್ವಯಂ ಉದ್ಯೋಗ ಅರಸಿಕೊಂಡು ಸ್ವಾವಲಂಬಿಗಳಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಡಾ.ಶೇಖರ್, ಕೆ.ಆರ್.ಪೇಟೆ ರೈತ ಹೋರಾಟಗಾರ ಕುಮಾರ್, ಮಾಜಿ ಸೈನಿಕ ಮೋಹನ್ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಜಿ ಕುಬೇರ್ ಹಾಗೂ ಸಂಸ್ಥೆ ಸಿಬ್ಬಂದಿಗಳಾದ ಲಕ್ಷ್ಮಮ್ಮ, ಮಂಜುಳಾ ಮತ್ತು ನಿತ್ಯಲಕ್ಷ್ಮಿ ಹಾಜರಿದ್ದರು. ಇದೇ ವೇಳೆ ಸಂಸ್ಥೆ ವತಿಯಿಂದ ಉಚಿತ ಹೊಲಿಗೆ ತರಬೇತಿಯನ್ನು ಪಡೆಯುತ್ತಿರುವ ಎರಡು ತಂಡಗಳ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಅಪಘಾತ: ಸವಾರ ಸಾವು

ಮಳವಳ್ಳಿ: ಎರಡು ಬೈಕ್‌ಗಳ ನಡುವೆ ಅಪಘಾತ ಸಂಭವಿಸಿ ಬೈಕ್ ಸವಾರ ಸಾವನ್ನಪ್ಪಿದ್ದು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಚನ್ನಪಿಳ್ಳೇಕೊಪ್ಪಲು ಗ್ರಾಮದ ಪೆಟ್ರೋಲ್ ಬಂಕ್‌ಬಳಿ ಬಳಿ ನಡೆದಿದೆ.

ಮೈಸೂರಿನ ಮಾನಸಿನಗರ ನಿವಾಸಿ ಲೆ. ವೆಂಕಟಯ್ಯನವರ ಪುತ್ರ ಬಿಳಿಗಿರಿ(71) ಸಾವನ್ನಪ್ಪಿದ ದುರ್ದೈವಿ. ಬಿಳಿಗಿರಿ ಅವರು ಸಂಬಂಧಿಕರ ತಿಥಿಗಾಗಿ ಮೈಸೂರಿನಿಂದ ಮಳವಳ್ಳಿಗೆ ಆಗಮಿಸುತ್ತಿದ್ದಾಗ ವೇಳೆ ಅಪಘಾತ ಸಂಭವಿಸಿದ್ದು, ಅಪಘಾತದಲ್ಲಿ ಹಂಗ್ರಪುರ ಗ್ರಾಮದ ಗುರುಸ್ವಾಮಿ ಜಯಮ್ಮ ಗಾಯಗೊಂಡವರಾಗಿದ್ದಾರೆ. ಈ ಸಂಬಂಧ ಕಿರುಗಾವಲು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಳೆ ದ್ವೇಷದ ಹಿನ್ನೆಲೆ ವ್ಯಕ್ತಿ ಮೇಲೆ ಹಲ್ಲೆ

ಶ್ರೀರಂಗಪಟ್ಟಣ: ಹಳೆ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವನನ್ನು ಲಾಂಗ್, ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿಯಾಗಿರುವ ಘಟನೆ ತಾಲೂಕಿನ ಚನ್ನಳ್ಳಿ ಬಿದರಳ್ಳಿ ಗ್ರಾಮದ ಮಧ್ಯ ನಡೆದಿದೆ.

ಮೈಸೂರಿನ ರಮ್ಮನಹಳ್ಳಿ ಗ್ರಾಮದ ಮಾದೇವ ಎಂಬುವವರ ಮಗ ಶೇಖರ್ (36) ಹಣ್ಣಿನ ವ್ಯಾಪಾರಿ ಕೊಲೆಯಾದವರು ಎಂದು ತಿಳಿದು ಬಂದಿದೆ. ಈತ ಕಾರ್ಯನಿಮಿತ್ತ ತನ್ನ ಬೈಕ್‌ನಲ್ಲಿ ಬಿದರಹಳ್ಳಿ ಗ್ರಾಮದ ಬಳಿ ತೆರಳುತ್ತಿದ್ದ ವೇಳೆ ಕಾರ್‌ನಲ್ಲಿ ಅಪರಿಚಿತ ಮೂರು ನಾಲ್ಕು ಮಂದಿಯಿಂದ ಈ ಕೃತ್ಯ ನಡೆದಿರುವುದಾಗಿ ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಸ್ಥಳಕ್ಕೆ ಅರಕೆರೆ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲಿಸಿ ಅರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಕೊಲೆ ಮಾಹಿತಿ ಕುರಿತು ತನಿಖೆ ಮುಂದುವರೆಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಮದ್ದೂರು: ಪಟ್ಟಣ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಕುಂದು ಕೊರತೆಗಳು, ಸಲಹೆಗಳು ಮತ್ತು ನಿರ್ವಹಿಸಬೇಕಾದ ಅಭಿವೃದ್ಧಿ ಕಾಮಗಾರಿಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ ಎಂದು ಸೆಸ್ಕ್ ಇಲಾಖೆ ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಮಾ. 20ರ ಶುಕ್ರವಾರ ಬೆಳಗ್ಗೆ 11.30ಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮದ್ದೂರು ವಿಭಾಗ ಕಚೇರಿಯ ಸಭಾಂಗಣದಲ್ಲಿ ಗ್ರಾಹಕರ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದ್ದು ತಾಲೂಕು ವ್ಯಾಪ್ತಿಯ ಗ್ರಾಹಕರು ಸಭೆಯಲ್ಲಿ ಹಾಜರಾಗಿ ತಮ್ಮ ಕುಂದು ಕೊರತೆಗಳಿಗೆ ಪರಿಹಾರ ಕಂಡುಕೊಂಡು ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಕೋರಲಾಗಿದೆ.



ಮಂಡ್ಯ ತಾಲೂಕಿನ ಮುದ್ದನಘಟ್ಟ ಗ್ರಾಮದ ಯುವ ಮುಖಂಡ ಎಂ.ಎನ್. ತೇಜಸ್‌ಗೌಡ ಅವರನ್ನು ಬಿಜೆಪಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ಜಿಲ್ಲಾಧ್ಯಕ್ಷ ಎಚ್.ಎಂ. ರಘುಗೌಡ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಮಕ್ಕಳನ್ನು ಮೊಬೈಲ್‌ನಿಂದ ದೂರವಿರಿಸಿ

ಮಂಡ್ಯ: ಮಕ್ಕಳನ್ನು ಮೊಬೈಲ್‌ನಿಂದ ದೂರ ಇಟ್ಟು ಪುಸ್ತಕಗಳನ್ನು ಕೊಟ್ಟು ಅಧ್ಯಯನ, ಅಭ್ಯಾಸ ಮಾಡುವಂತೆ ಪ್ರೇರೇಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಪೋಷಕರಿಗೆ ಕರೆ ನೀಡಿದರು. ನಗರದ ಹಾಲಹಳ್ಳಿ ಕಿಡ್ಸ್‌ಪ್ಲಾನೆಟ್ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪೋಷಕರು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಮೊಬೈಲ್ ಕೊಟ್ಟು ಅಭ್ಯಾಸ ಮಾಡಿಸುತ್ತಿರುವಂತಹ ಕೆಟ್ಟ ಬೆಳವಣಿಗೆ ನಡೆಯುತ್ತಿದೆ. ಇದರಿಂದ ಮಕ್ಕಳ ಮಾನಸಿಕ ಸ್ಥಿತಿಗೆ ನಾವೇ ಪೆಟ್ಟು ಕೊಟ್ಟಂತಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ನಮ್ಮ ಅಜ್ಜ-ಅಜ್ಜಿಯರ ಕಾಲದಲ್ಲಿ ನಮಗೆ ಕಥೆಗಳನ್ನು ಹೇಳುವ ಮೂಲಕ ಸಮಾಜಕ್ಕೆ ಮಾದರಿಯಾಗುವಂತೆ ಮಾಡುತ್ತಿದ್ದರು. ಅದರಿಂದ ಎಷ್ಟೋ ಮಂದಿ ಪ್ರೇರಿತರಾಗಿ ತಮ್ಮ ಬದುಕಿನ ದಾರಿಯನ್ನೇ ಬದಲಾಯಿಸಿಕೊಂಡಿರುವ ಉದಾಹರಣೆಗಳೂ ಇವೆ. ಆದರೆ ಇಂದು ಪೋಷಕರು ಮಕ್ಕಳು ಗಲಾಟೆ ಮಾಡುತ್ತಿರುತ್ತಾರೆ ಎಂಬ ಕಾರಣಕ್ಕೆ ಮೊಬೈಲ್ ಕೊಟ್ಟು ಅವರು ಬೇರೆಯದ್ದೇ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ ಎಂದು ಎಚ್ಚರಿಸಿದರು. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಸಂಸ್ಕೃತಿ, ಸಂಸ್ಕಾರ ನೀಡಬೇಕು. ಒಳ್ಳೆಯ ರೀತಿಯಲ್ಲಿ ಬೆಳೆಸಬೇಕು. ಮಹನೀಯರು, ದಾರ್ಶನಿಕರು, ಸಾಧಕರ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಅದರಲ್ಲೂ ಮುಖ್ಯವಾಗಿ ಮಾನವೀಯತೆಯ ಸದ್ಗುಣಗಳನ್ನು ಮೈಗೂಡಿಸಿಕೊಳ್ಳುವಂತಹ ವಾತಾವರಣ ನಿರ್ಮಿಸಬೇಕು. ಇದು ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.



ಮಂಡ್ಯ ನಗರದ ಹಾಲಹಳ್ಳಿ ಕಿಡ್ಸ್‌ಪ್ಲಾನೆಟ್ ವಾರ್ಷಿಕೋತ್ಸವ ಸಮಾರಂಭವನ್ನು ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಉದ್ಘಾಟಿಸಿದರು.

ವೈರಮುಡಿ ಬ್ರಹ್ಮೋತ್ಸವಕ್ಕೆ ಸೂಕ್ತ ಕ್ರಮ ವಹಿಸಬೇಕು: ಶಾಸಕ

ವೈರಮುಡಿ ಉತ್ಸವಕ್ಕೆ ಸಿದ್ಧತೆ

ಮೇಲುಕೋಟೆ: ವೈರಮುಡಿ ಬ್ರಹ್ಮೋತ್ಸವದಲ್ಲಿ ಯಾವುದೇ ಲೋಪದೋಷಗ ಳಾಗದಂತೆ, ಭಕ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸೂಕ್ತ ಕ್ರಮ ವಹಿಸಬೇಕು ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಮೇಲುಕೋಟೆ ಪ್ರವಾಸಿ ಮಂದಿರದಲ್ಲಿ ನಡೆದ ಮೇಲುಕೋಟೆಯ ಐತಿಹಾಸಿಕ ವೈರಮುಡಿ ಬ್ರಹ್ಮೋತ್ಸವದ ಪೂರ್ವಭಾವಿ ಸಿದ್ಧತೆಗಳ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಕಟ್ಟುನಿಟ್ಟಿನ ಭದ್ರತೆ, ಸುಗಮ ಜನಸಂದಣಿ ನಿರ್ವಹಣೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಆದ್ಯತೆ ನೀಡಲು ಸೂಚಿಸಿದರು ಶೌಚಾಲಯ, ವೈದ್ಯಕೀಯ ಸೌಲಭ್ಯ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ನಿರ್ದೇಶನ ನೀಡಿದರಲ್ಲದೆ, ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಉತ್ಸವದ ಮೆರವಣಿಗೆ ಸುಗಮವಾಗಿ ಸಾಗಲು ಸೂಕ್ತ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಡಾ. ಕುಮಾರ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಮಾ. 28ರಂದು ನಡೆಯುವ ವಿಶ್ವವಿಖ್ಯಾತ ವೈರಮುಡಿ ಬ್ರಹ್ಮೋತ್ಸವವು ಶ್ರೀ ಚಲುವನಾರಾಯಣಸ್ವಾಮಿಗೆ ವಜ್ರಖಚಿತ ಕಿರೀಟಧಾರಣೆ ಮಾಡಿ, ರತ್ನ ಖಚಿತ ಆಭರಣಗಳಿಂದ ಅಲಂಕರಿಸಿ, ರಾತ್ರಿ ವೇಳೆ ನಡೆಯುವ ಅದ್ದೂರಿ ಉತ್ಸವದಲ್ಲಿ ಭಕ್ತಾ ದಿಗಳಿಗೆ ದರ್ಶನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಬ್ಯಾರಿಕೆಡ್ ವ್ಯವಸ್ಥೆ ಅಳವಡಿಸಬೇಕು. ಏ.1ರಂದು ಮೇಲುಕೋಟೆಯ ಪುರಾಣ ಪ್ರಸಿದ್ಧ ಪಂಚ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯುವುದರಿಂದ ಕಲ್ಯಾಣಿಯನ್ನು ವೀಕ್ಷಣೆ ಮಾಡಿ ಭಕ್ತಾದಿಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ವಹಿಸಬೇಕು ಎಂದು ತಿಳಿಸಿದರು. ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ. ಶೋಭಾರಾಣಿ ವಿ. ಜೆ, ಮುಜರಾಯಿ ಇಲಾಖೆ ತಹಶೀಲ್ದಾರ್ ತಮ್ಮಣ್ಣಗೌಡ ಇತರರು ಇದ್ದರು.



> ವಜ್ರಖಚಿತ ವೈರಮುಡಿ ಉತ್ಸವಕ್ಕೆ ಹೆಚ್ಚಿನ ಭಕ್ತಾದಿಗಳು ಮೇಲುಕೋಟೆಗೆ ಭೇಟಿ ನೀಡುವುದರಿಂದ ಅವರಿಗೆ ಯಾವುದೇ ತೊಂದರೆಯಾಗದಂತೆ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಸಾರಿಗೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
> ■ ದರ್ಶನ್ ಪುಟ್ಟಣ್ಣಯ್ಯ, ಶಾಸಕ

> ಮಾ. 28ರಂದು ಮೇಲುಕೋಟೆಯಲ್ಲಿ ನಡೆಯುವ ವೈರಮುಡಿ ಉತ್ಸವವನ್ನು ಕಣ್ತುಂಬಿಕೊಳ್ಳಲು ಭಕ್ತರಿಗಾಗಿ ಮಂಡ್ಯ, ಪಾಂಡವಪುರ, ಮೈಸೂರು ಹಾಗೂ ಬೆಂಗಳೂರುಗಳಿಂದ ಮೇಲುಕೋಟೆಗೆ ಸಾರಿಗೆ ಸಂಪರ್ಕ ಕಲ್ಪಿಸಲಾಗಿದೆ. ಹೆಚ್ಚಿನ ಜನದಟ್ಟಣೆಯನ್ನು ನಿಭಾಯಿಸಲು ಆಯಕಟ್ಟಿನ ಪ್ರದೇಶಗಳಲ್ಲಿ ಬ್ಯಾರಿಕೇಟ್ ಅಳವಡಿಸಲಾಗಿದೆ. ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.
> ■ ಡಾ. ಕುಮಾರ, ಜಿಲ್ಲಾಧಿಕಾರಿ

ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಅಭಿವೃದ್ಧಿಗೆ ಜಾಗದ ಕೊರತೆ

ಮಂಡ್ಯ: ಮಂಡ್ಯ ನಗರದಲ್ಲಿ ಸೂಪರ್‌ಸ್ಪೆಷಾಲಿಟಿ ಆಸ್ಪತೆ ಸ್ಥಾಪನೆಗೆ ಕೇಂದ್ರ ಸರ್ಕಾರ 311 ಕೋಟಿ ಅನುದಾನ ನೀಡಿದ್ದು, ಜಾಗದ ಕೊರತೆಯಿಂದಾಗಿ ಅನುದಾನ ವಾಪಸ್ಸು ಹೋಗುವ ಸಾಧ್ಯತೆಗಳಿವೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ. ಮಂಜುನಾಥ್ ಆತಂಕ ವ್ಯಕ್ತಪಡಿಸಿದ್ದಾರೆ.

ಸೂಪರ್ ಸ್ಪಷಾಲಿಟಿ ಆಸ್ಪತ್ರೆಗೆ 10 ಎಕರೆ ಜಾಗದ ಅಗತ್ಯತೆ ಇದ್ದು, ಜಾಗವನ್ನು ಒದಗಿಸುವಲ್ಲಿ ರಾಜ್ಯಸರ್ಕಾರ ವಿಫಲವಾಗಿದೆ. ಜಮೀನು ನೀಡುವ ಜವಾಬ್ದಾರಿಯನ್ನು ಜಿಲ್ಲಾಡಳಿತ ತೆಗೆದುಕೊಳ್ಳದೆ ನಿರ್ಲಕ್ಷ್ಯವಹಿಸಿದೆ. ಭೂಮಿಯನ್ನು ಗುರುತಿಸಿ ಕಾರ್ಯಗತಗೊಳಿಸುವಂತೆ ಪತ್ರಿಕಾ ಹೇಳಿಕೆಯಲ್ಲಿ ಜಿಲ್ಲಾಡಳಿತವನ್ನು ಆಗ್ರಹಿಸಿದರು. ಮಂಡ್ಯ, ರಾಮನಗರ, ತುಮಕೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಮಿಮ್ಸ್ ಆಸ್ಪತ್ರೆಗೆ ರೋಗಿಗಳು ಬರುತ್ತಿದ್ದು, ಆಸ್ಪತ್ರೆ ಉನ್ನತೀಕರಣಕ್ಕೆ ಯೋಜನೆ ರೂಪಿಸಿದ್ದರೂ ಸಹ ರಾಜ್ಯಸರ್ಕಾರ ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿದೆ ಎಂದು ದೂರಿದರು. ಮಿಮ್ಸ್ ಆವರಣದಲ್ಲಿ 45 ಕೋಟಿ ರೂ. ವೆಚ್ಚದ ಕ್ಯಾನ್ಸರ್ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಿದ್ದು, ಹಲವು ವರ್ಷಗಳಿಂದಲೂ ವಿಳಂಬವಾಗುತ್ತಿದೆ. 2024ರ ಜುಲೈನಲ್ಲಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ್ದ ವೈದ್ಯಕೀಯ ಶಿಕ್ಷಣ ಸಿಚವ ಡಾ. ಶರಣ್‌ಪ್ರಕಾಶ್ ಆರ್. ಪಾಟೀಲ್ ಅವರು ಮೂರು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ್ದರು. ಆದರೆ ಅದು ಹುಸಿಯಾಗಿದೆ ಎಂದು ಆರೋಪಿಸಿದರು. ಕ್ಯಾನ್ಸರ್ ಆಸ್ಪತ್ರೆ ಆರಂಭವಾದಲ್ಲಿ ರೋಬೋಟಿಕ್ ರೇಡಿಯೋಥೆರಪಿ ಸೇವೆಯನ್ನು ಪಡೆಯಬಹುದು. ಇದು ಆಧುನಿಕ ತಂತ್ರಜ್ಞಾನದ ಮೂಲಕ ಕ್ಯಾನ್ಸರ್ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಶೇ. 75ರಷ್ಟು ಹಾಗೂ ರಾಜ್ಯ ಸರ್ಕಾರ ಶೇ. 25ರಷ್ಟು ಅನುದಾನ ನೀಡುತ್ತಿದೆ. ಆದರೂ ರಾಜ್ಯ ಸರ್ಕಾರ ಕೇಂದ್ರದ ಯೋಜನೆಯನ್ನು ಬಳಸಿಕೊಳ್ಳಲು ಮೀನಾ ಮೇಷ ಎಣಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದ ಬಜೆಟ್ ಘೋಷಣೆಯಂತೆ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಮಿ ಕೇಂದ್ರಗಳನ್ನು ಸ್ಥಾಪಿಸಿ ಬಡ ರೋಗಿಗಳಿಗೆ ನೆರವಾಗಬೇಕು. ಚಿಕಿತ್ಸೆಗಾಗಿ ರೋಗಿಗಳು ಬೆಂಗಳೂರು, ಮೈಸೂರಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಕೂಡಲೇ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಈ ಬಗ್ಗೆ ಗಮನ ಹರಿಸಬೇಕು ಎಂದು ಒತ್ತಾಯಿಸಿದ್ದಾರೆ.



ಬೆಂಗಳೂರು-ಮೈಸೂರು ನಡುವೆ ಪ್ರತಿನಿತ್ಯ ಅಪಘಾತಗಳು ನಡೆಯುತ್ತಿದ್ದು, ಅಪಘಾತ ನಡೆದ ಸಂದರ್ಭದಲ್ಲಿ ತಲೆಗೆ ತೀವ್ರವಾದ ಪೆಟ್ಟಾದಲ್ಲಿ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಕೇಂದ್ರಕ್ಕೆ ಹೋಗಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಮಂಡ್ಯ ನಗರದ ಮಿಮ್ಸ್ ಆವರಣದಲ್ಲಿ ಅತ್ಯಾಧುನಿಕ ಟ್ರಾಮಾ ಕೇರ್ ಸೆಂಟರ್ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಕ್ಯಾನ್ಸರ್ ಆಸ್ಪತ್ರೆಗೆ ವೈದ್ಯರು, ನರ್ಸಿಂಗ್ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿ ನೇಮಕಾತಿಗಾಗಿ ಹಣಕಾಸು ಇಲಾಖೆಯಿಂದ ಅನುಮತಿ ಪಡೆದು ಶೀಘ್ರವೇ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪರೀಕ್ಷಾ ಕೇಂದ್ರಕ್ಕೆ ಡಿಸಿ ಭೇಟಿ



ಮಂಡ್ಯ: ಜಿಲ್ಲೆಯಲ್ಲಿ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ (ಪರೀಕ್ಷೆ-1) ಬುಧವಾರದಿಂದ ಆರಂಭವಾಗಿದ್ದು, ಜಿಲ್ಲಾಧಿಕಾರಿ ಡಾ. ಕುಮಾರ ಅವರು ನಗರದ ಮಾಜಿ ಪುರಸಭೆ ಕಾಲೇಜಿನ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಸಿಸಿಟಿವಿ ಅಳವಡಿಕೆ, ಆಸನ ವ್ಯವಸ್ಥೆ, ಭದ್ರತೆ, ಮತ್ತು ಆರೋಗ್ಯ ಸಿಬ್ಬಂದಿ ನಿಯೋಜನೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಪರಿಶೀಲಿಸಿದರು. ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆ ಬರೆಯಲು ಸೂಕ್ತ ವಾತಾವರಣ ಕಲ್ಪಿಸಲು ಹಾಗೂ ಮುಖ್ಯ ಅಧೀಕ್ಷಕರು ಹಾಗೂ ಪರೀಕ್ಷಾ ಸಿಬ್ಬಂದಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಣೆ ಮಾಡಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲದೆ, ಅತ್ಯಂತ ಕಟ್ಟುನಿಟ್ಟಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದುತಿಳಿಸಿದರು. ಮಂಡ್ಯ ಜಿಲ್ಲೆಯಲ್ಲಿ ತೆರೆಯ ಲಾಗಿರುವ ಒಟ್ಟು 62 ಪರೀಕ್ಷಾ ಕೇಂದ್ರ ಗಳಲ್ಲಿ 20669 ವಿದ್ಯಾರ್ಥಿಗಳು ಪರಿಕ್ಷೆಗೆ ನೋಂದಾಯಿಸಿ ಕೊಂಡಿದ್ದು, ಹೊಸದಾಗಿ 9467 ಗಂಡು ಮಕ್ಕಳು 9348 ಹೆಣ್ಣುಮಕ್ಕಳು ಸೇರಿದಂತೆ ಒಟ್ಟು 18815, ಖಾಸಗಿಯಾಗಿ 392, ಪುನರಾವರ್ತಿತ ಅಭ್ಯರ್ಥಿಗಳಾಗಿ 1462 ಹಾಗೂ 134 ಸಿಡಬ್ಲ್ಯು ಎಸ್‌ಎನ್ ವಿದ್ಯಾರ್ಥಿಗಳು ಪರಿಕ್ಷೆ ತೆಗೆದುಕೊಂಡಿದ್ದಾರೆ. ಒಟ್ಟಾರೆ 10833 ಗಂಡು ಮಕ್ಕಳು 9836 ಹೆಣ್ಣು ಮಕ್ಕಳು ಸೇರಿದಂತೆ 20669 ವಿದ್ಯಾರ್ಥಿಗಳು ಪರಿಕ್ಷೆ ತೆಗೆದುಕೊಡಿದ್ದಾರೆ.

ಪರಿಕ್ಷಾ ಕೇಂದ್ರಗಳ ವಿವರ: ಜಿಲ್ಲೆಯ ಕೆಆರ್‌ಪೇಟೆ(06), ಮದ್ದೂರು(12), ಮಳವಳ್ಳಿ(10), ಮಂಡ್ಯ ಉತ್ತರ ವಲಯ(05), ಮಂಡ್ಯ ದಕ್ಷಿಣ ವಲಯ(09), ನಾಗಮಂಗಲ(06), ಪಾಂಡವಪುರ(06) ಹಾಗೂ ಶ್ರೀರಂಗಪಟ್ಟಣ(08) ಕೇಂದ್ರಗಳು ಸೇರಿದಂತೆ ಒಟ್ಟು 62 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ವಿತರಣೆ ಮಾಡಲು ಒಟ್ಟು 27 ಮಾರ್ಗಗಳನ್ನು ಗುರುತಿಸಿ, ಪ್ರತಿ ಮಾರ್ಗಕ್ಕೆ ಇಬ್ಬರು ಅಧಿಕಾರಿಗಳನ್ನು ತಾಲೂಕು ಹಂತದಲ್ಲಿ ನೇಮಕ ಮಾಡಲಾಗಿದೆ. ಡಿಡಿಪಿಐ ಜಿ.ಎ. ಲೋಕೇಶ್, ದಕ್ಷಿಣ ವಲಯ ಬಿಇಒ ಮಹದೇವ ಹಾಗೂ ಪರೀಕ್ಷಾ ಮುಖ್ಯ ಅಧೀಕ್ಷಕರು ಹಾಜರಿದ್ದರು.

ಬ್ಯಾಡ್ಮಿಂಟನ್: ಶ್ರೀಧರ್, ನಾಗೇಶ್ ತಂಡಕ್ಕೆ ಗೆಲುವು

ಪಾಂಡವಪುರ: ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಶುಭೋದಯ ಗೆಳೆಯರ ಬಳಗ ವತಿಯಿಂದ ಆಯೋಜಿಸಿದ್ದ ಪ್ರಥಮ ವರ್ಷದ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಅಪ್ಪು ಕಪ್‌ನ್ನು ಬಿ.ಟಿ.ಶ್ರೀಧರ್-ನಾಗೇಶ್ ತಂಡ ತಮ್ಮದಾಗಿಸಿಕೊಳ್ಳುವ ಮೂಲಕ ಪ್ರಥಮ ಸ್ಥಾನ ಪಡೆದು ಗೆಲುವಿನ ನಗೆ ಬೀರಿತು.

ಉಳಿದಂತೆ ರನ್ನರ್ ಆಫ್ ಪ್ರಶಸ್ತಿಯನ್ನು (ದ್ವಿತೀಯ ಸ್ಥಾನ) ನವೀನ್ - ಬಾಬು ತಂಡ ಪಡೆದುಕೊಂಡಿತು. ತೃತೀಯ ಸ್ಥಾನವನ್ನು ಅರೋಕ್ಯ- ಕುಮಾರ್ ತಂಡ ಪಡೆದುಕೊಂಡಿತು. ಚತುರ್ಥ ಸ್ಥಾನವನ್ನು ಮಂಜುನಾಥ್ -ಅಭಿ ತಂಡ ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಇನ್ನು ಸುನಿಲ್- ಡಾ.ವಿಜಯ್ ತಂಡ, ಶಂಕರ್-ಶಿವರಾಜ್ ತಂಡ ಹಾಗೂ ಪ್ರಮೋದ್ - ದೀಪು ತಂಡಗಳು ಸಮಾಧಾನಕರ ಬಹುಮಾನವನ್ನು ಪಡೆದುಕೊಂಡವು. ಮಾರ್ಚ್ 1 ರಿಂದ ಮಾರ್ಚ್ 17ರ ವರೆಗೆ ಲೀಗ್ ಪಂದ್ಯಾವಳಿಗಳು ನಡೆಯಿತು. ಪ್ರತಿದಿನ ಎರಡು ಪಂದ್ಯಗಳು ನಡೆದು, ಅಂತಿಮವಾಗಿ ಫೈನಲ್ ಪಂದ್ಯ ಮಾ.17ರಂದು ಬಹಳ ರೋಚಕವಾಗಿ ನಡೆಯಿತು.

ಮಾ.22ರಂದು ಯುಗಾದಿ ಕವಿಗೋಷ್ಠಿ

ಮಂಡ್ಯ: ಕೆಟಿಹೆಚ್ ಕನ್ನಡ ಬಳಗ, ನಂಜಮ್ಮ ಮೋಟೇಗೌಡ ಚಾರಿಟಬಲ್ ಅಂಡ್ ಎಜುಕೇಷನಲ್ ಟ್ರಸ್ಟ್ ಇವರ ವತಿಯಿಂದ ಮಾ. 22ರ ಭಾನುವಾರ ಸಂಜೆ 4.30ಕ್ಕೆ ನಗರದ ಗಾಂಧಿ ಭವನದಲ್ಲಿ ವಿಶ್ವ ಕವಿಗಳ ದಿನದ ನಿಮಿತ್ತ ಯುಗಾದಿ ಕವಿಗೋಷ್ಠಿ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೆ.ಟಿ. ಹನುಮಂತು ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಖ್ಯಾತ ಸಾಹಿತಿ ಡಾ. ವಿ. ನಾಕೇಂದ್ರಪ್ರಸಾದ್ ಸಮಾರಂಭ ಉದ್ಘಾಟಿಸುವರು. ಕರ್ನಾಟಕ ಲೇಖಿಕಿಯರ ಸಂಘಧ ಮಾಜಿ ಅಧ್ಯಕ್ಷೆ ಡಾ. ಎಚ್.ಎಲ್. ಪುಷ್ಪ ಅವರು ಕವಿಗೋಷ್ಠಿಗೆ ಮುನ್ನುಡಿಯಾಡಲಿದ್ದು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಸಮಾರಂಭದಲ್ಲಿ ಭಾಗವಹಿಸುವರು ಎಂದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಮೀರಾ ಶಿವಲಿಂಗಯ್ಯ, ಪ್ರೊ. ಜಿ.ಟಿ. ವೀರಪ್ಪ, ಡಾ. ಎಚ್.ಎಸ್. ಮುದ್ದೇಗೌಡ, ಕನ್ನಿಕ ಶಿಲ್ಪ ನವೋದಯ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಚ್. ಆರ್. ಕನ್ನಿಕಾ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ. ವಿನಯ್‌ಕುಮಾರ್, ಸಾಹಿತಿ ಡಾ. ಹುಸ್ಕೂರು ಕೃಷ್ಣೇಗೌಡ ಭಾಗವಹಿಸುವರು ಎಂದು ಹೇಳಿದರು. ಕನ್ನಡ ಪರಿಚಾರಕ ಕೆ.ಟಿ. ಹನುಮಂತು ಸಮಾರೋಪ ನುಡಿಯನ್ನಾಡುವರು. ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಡೇವಿಡ್, ಚಿಂತಕ ಧನಂಜಯ ದರಸಗುಪ್ಪೆ ಅವರು ಸಮಾರಂಭದಲ್ಲಿ ಭಾಗವಹಿಸುವರು ಎಂದು ತಿಳಿಸಿದರು. ಕವಿಗಳಾದ ಡಾ. ಶುಭಶ್ರೀಪ್ರಸಾದ್, ಶಿವಕುಮಾರ್ ಆರಾಧ್ಯ, ಡಾ. ಅನಿತಾ, ಲೋಕೇಶ್, ಡಾ. ಎಂ. ಕೆಂಪಮ್ಮ, ದೊ.ಚಿ. ಗೌಡ, ರಾಜು, ಡೇವಿಡ್ ಪ್ರತಿಭಾಂಜಲಿ, ಭವಾನಿ ಲೋಕೇಶ್, ಆಶಾ, ಮಜ್ಜಿಗೆಪುರ ಶಿವರಾಮು ಸೇರಿದಂತೆ ಹಲವರು ಕವಿಗೋಷ್ಠಿಯಲ್ಲಿ ಭಾಗವಹಿಸುವರು ಎಂದು ತಿಳಿಸಿದರು. ಮಹಿಳೆಯರಲ್ಲಿ ಸೃಜನಶೀಲತೆಯನ್ನು ಪ್ರೋತ್ಸಾಹಿಸಲು ಮಂಡ್ಯ ಲೇಡಿಸ್ ಕ್ಲಬ್ ವತಿಯಿಂದ ಸರ್ ಎಂ.ವಿ. ಕ್ರೀಡಾಂಗಣ ಮತ್ತು ಕರ್ನಾಟಕ ಸಂಘದ ಆವರಣದಲ್ಲಿ ರಂಗೋಲಿ ಸ್ಪರ್ಧೆ ಆಯೋಜಿಸಿದ್ದು, ಬೆಳಗ್ಗೆ 7 ರಿಂದ 12ರವರೆಗೆ ರಂಗೋಲಿ ಸ್ಪರ್ಧೆ ನಡೆಯಲಿದೆ. ಯುಗಾದಿ ವಸಂತಕಾಲದ ಥೀಮ್‌ನಲ್ಲಿ ಕಲಾತ್ಮಕವಾಗಿ ರಂಗೋಲಿ ಬಿಡಿಸಿದ ಮೂರು ಮಂದಿಗೆ ನಗದು ಬಹುಮಾನ ನೀಡಲಾಗುವುದು. ನೇರವಾಗಿ ಸ್ಥಳದಲ್ಲೇ ನೋಂದಣಿ ಮಾಡಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ ಎಂದುಹೇಳಿದರು. ಮಂಡ್ಯ ಶೈಲಿಯ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ ನಡೆಯಲಿದೆ ಎಂದರು. ಮುಖಂಡರಾದ ಲೋಕೇಶ್, ವಿನಯ್‌ಕುಮಾರ್, ಚಂದಗಾಲು ಲೋಕೇಶ್, ಧನಂಜಯ ದರಸಗುಪ್ಪೆ ಇದ್ದರು.



ಮಾ.23ರಂದು ದೇವರ ದಾಸಿಮಯ್ಯ ಜಯಂತಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಾ.23 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಗ್ಗೆ 11 ಗಂಟೆಗೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾಜಿ ಪ್ರಧಾನಿ ಎಚ್.ಡಿದೇವೇಗೌಡ ಉಪಸ್ಥಿತರಿರಲಿದ್ದು, ಸಚಿವರಾದ ಕೃಷ್ಣ ಬೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ, ಮಾದೇಗೌಡ, ಕೆ, ವಿವೇಕಾನಂದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಾಹಿತಿಗಳದ ಎಸ್. ಕೋಟ್ರೋಶ್ ಉಪ್ಪಾರ್ ಉಪನ್ಯಾಸ ನೀಡಲಿದ್ದಾರೆ.



ಚನ್ನರಾಯಪಟ್ಟಣದಲ್ಲಿ ಅಪ್ಪು ಅಭಿಮಾನಿ ಬಳಗದಿಂದ ಡಾ. ಪುನೀತ್ ರಾಜ್‌ಕುಮಾರ್ ಅವರ 51ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಮಕ್ಕಳಿಗೆ ಲೇಖನ ಸಾಮಗ್ರಿ ವಿತರಣೆ

ಚನ್ನರಾಯಪಟ್ಟಣ: ಮನುಷ್ಯ ಹುಟ್ಟಿದ ಮೇಲೆ ಬಾಳಿನಲ್ಲಿ ಸಾರ್ಥಕವಾಗಲು ಪ್ರೀತಿ ಮತ್ತು ಮಾನವೀಯತೆಯನ್ನ ಬಾಳ ಪಯಣದ ನಿಜವಾದ ಅರ್ಥ ತಿಳಿಸಬೇಕು. ಅದ್ಭುತ ವ್ಯಕ್ತಿತ್ವದ ಪುನಿತ್ ರಾಜ್‌ಕುಮಾರ್ ಅವರು ಅನೇಕ ಜನರ ಬಾಳನ್ನು ಬೆಳಗಿಸಿ ನಂದಾದೀಪವಾಗಿ ಸಂದೇಶ ನೀಡಿದ್ದಾರೆ ಎಂದು ಡಿವೈಎಸ್‌ಪಿ ಕುಮಾರ್ ತಿಳಿದ್ದಾರೆ.

ಪುನೀತ್ ರಾಜ್‌ಕುಮಾರ್ ಅವರ 51ನೇ ಹುಟ್ಟುಹಬ್ಬವನ್ನು ಪಟ್ಟಣದ ನಾನಾ ಕಡೆಗಳಲ್ಲಿ ಅವರ ಅಭಿಮಾನಿ ಬಳಗದಿಂದ ಜನೋಪಯೋಗಿ ಆಚರಿಸಲಾಯಿತು. ಸಂಚಾರಿ ಪೊಲೀಸ್ ಇನ್‌ಸ್ಪೆಕ್ಟರ್ ಚರಣ್‌ಗೌಡ ಮಾತನಾಡಿ, ಜೀವ ರಕ್ಷಣೆಗೆ ಜಾಗೃತಿ ಕಾರ್ಯಕ್ರಮ ಹಾಗೂ ರಸ್ತೆ ಸಂಚಾರದ ಅರಿವಿನ ಕಾರ್ಯಕ್ರಮವನ್ನು ಸದ್ಯದಲ್ಲೇ ಸಾರ್ವಜನಿಕವಾಗಿ ಏರ್ಪಡಿಸಲಾಗುವುದು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಪುಟ್ಟಣ್ಣ ಗೋಕಾಕ್ ವಹಿಸಿದ್ದರು. ಲೇಖನ ಸಾಮಗ್ರಿ ವಿತರಣೆ: ಪಟ್ಟಣಕ್ಕೆ ಹೊಂದಿ ಕೊಂಡಂತಿರುವ ಗ್ರಾಮಗಳಾದ ಗೂರನಹಳ್ಳಿ, ಆಲಗೊಂಡನಹಳ್ಳಿ, ಬರಗೂರು, ಬರಗೂರು ಕೊಪ್ಪಲು, ಬೀರೂರು, ದೊಡ್ಡಮತಿಘಟಟ ಮತ್ತು ಉಗ್ರನಕೊಪ್ಪಲು ಗ್ರಾಮಗಳ ಒಂದರಿಂದ 7ನೇ ತಗರತಿ ಓದುತ್ತಿರುವ ಸುಮಾರು 120 ಮಕ್ಕಳಿಗೆ ಪರೀಕ್ಷೆ ಪ್ಯಾಡ್, ಲೇಖನಿ ಹಾಗೂ ನೋಟ್ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಆಗಮಿಸಿದ್ದ ನೂರಾರು ಮಂದಿಗೆ ಅನ್ನದಾನ ನೆರವೇರಿಸಲಾಯಿತು.



ನಾಗಮೋಹನದಾಸ್, ಸದಾಶಿವ ಆಯೋಗದ ವರದಿಗಳನ್ನು ತಿರಸ್ಕರಿಸುವಂತೆ ಆಗ್ರಹಿಸಿ ಆಲೂರು ತಾಲೂಕು ಬಲಗೈ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಅಧಿಕಾರಿಗಳಿಂದ ಏಕಪಕ್ಷೀಯ ನಿರ್ಧಾರ: ಎಚ್.ಡಿ. ರೇವಣ್ಣ ಅಸಮಾಧಾನ

ಜನರ ಸಮಸ್ಯೆಗೆ ಸ್ಪಂದಿಸಿ

ಹಾಸನ: ಜಿಲ್ಲೆಯಲ್ಲಿ ಬಡವರು ಅನ್ಯಾಯಕ್ಕೆ ಒಳಗಾಗುತ್ತಿದ್ದರೂ, ಅಧಿಕಾರಿಗಳು ಸಭೆಗಳಲ್ಲೇ ಕಾಲಹರಣ ಮಾಡುತ್ತಿದ್ದಾರೆ. ಅಧಿಕಾರಿಗಳು, ಜನಪ್ರತಿ ನಿಧಿಗಳೊಂದಿಗೆ ಸಮನ್ವಯ ಸಾಧಿಸದೆ ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಿರುವುದು ಆಡಳಿತದ ದೌರ್ಬಲ್ಯ ಎಂದು ಮಾಜಿ ಸಚಿವ ಎಚ್.ಡಿ ರೇವಣ್ಣ ಅಸಮಧಾನ ಹೊರಹಾಕಿದರು.

ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಭೂ ಮಾಫಿಯಾ, ಅಕ್ರಮ ಕಲ್ಲು ಗಣಿಗಾರಿಕೆ ಹಾಗೂ ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಇದರ ವಿರುದ್ಧ ಸಮಗ್ರ ತನಿಖೆ ನಡೆಸಲು ತಕಣವೇ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ ಕ್ರಮಕೈಗೊಳ್ಳಬೇಕು. ದಂಧೆಕೋರರ ವಿರುದ್ಧ ಕೈಜೋಡಿಸಿರುವ ಹಾಸನ ತಹಸೀಲ್ದಾರ್ ಅವರನ್ನ ಅಮಾನತು ಮಾಡಿ, ಕೂಡಲೇ ಕಾನೂನು ಕ್ರಮ ಜರುಗಿಸದಿದ್ದರೆ ಜಿಲ್ಲಾಧಿಕಾರಿ



ಕಚೇರಿ ಮುಂದೆ ಸಾಕ್ಷಿ ಸಮೇತ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕಿತ್ತನಗೆರೆ ಗ್ರಾಮದ ದ್ಯಾವಮ್ಮ ಎಂಬುವರಿಗೆ ಸೇರಿದ ಜಮೀನಿನ ಖಾತೆಯನ್ನು ಪತಿ ಸತ್ತ ನಂತರ ಅವರಿಗೆ ಮಾಡಿಕೊಡದೆ, ಕಾನೂನು ಬಾಹಿರವಾಗಿ ಬೇರೆಯವರ ಹೆಸರಿಗೆ ವರ್ಗಾವಣೆ ಮಾಡಿರುವುದು ದೊಡ್ಡ ಅನ್ಯಾಯ. ಪತಿ ನಿಧನ ಬಳಿಕ 30 ದಿನಗಳೊಳಗೆ ಹೆಂಡತಿ ಹೆಸರಿಗೆ ಪೌತಿ ಖಾತೆ ಮಾಡಬೇಕು. ಆದರೆ 90 ದಿನ ಕಳೆದರೂ ಮಾಡಿಕೊಟ್ಟಿಲ್ಲ ಎಂದು ಗಂಭೀರ ಆರೋಪ ಮಾಡಿದರು. ಲ್ಯಾಂಡ್ ಮಾಫಿಯಾ ಜೊತೆ ಹಾಸನ ತಹಸೀಲ್ದಾರ್ ಭಾಗಿಯಾಗಿದ್ದಾರೆ ಕೂಡ ಭಾಗಿಯಾಗಿದ್ದಾರೆ. ಈ ಹಿಂದೆ ತರೀಕೆರೆಯಲ್ಲಿ ಅಮಾನತು ಗೊಂಡಿದ್ದ ತಹಸೀಲ್ದಾರ್‌ನ್ನು ಹಾಸನಕ್ಕೆ ತಂದು ಕೂರಿಸಲಾಗಿದೆ. ಅವರಿಂದ ವ್ಯಾಪಕ ಅಕ್ರಮ ನಡೆಯುತ್ತಿವೆ. ಲ್ಯಾಂಡ್ ಮಾಫಿಯಾದವರ ಜೊತೆ ಹಾಸನ ಮತ್ತು ಹೊಳೆನರಸೀಪುರ ತಹಸೀಲಾರ್ ಭಾಗಿಯಾಗಿದ್ದಾರೆ. ಸಂಬಂಧಿತ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಹೊಳೆನರಸೀಪುರ ಜಾತ್ರಾ ಮಹೋತವ ವೇಳೆ ಶಿಷ್ಟಾಚಾರ ಉಲ್ಲಂಘನೆ ಹಿನ್ನೆಲೆ ಡಿಸಿ ವಿರುದ್ಧ ಹಕ್ಕು ಚ್ಯುತಿ ಮಂಡಿಸಿದ್ದೇನೆ. ಆ ದಿನ ಪರಿ ಸ್ಥಿತಿ ತೀವ್ರವಾಗಿತ್ತು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡ ಲಕ್ಷ್ಮಣಗೌಡ, ಸಂತ್ರಸ್ತೆ ದ್ಯಾವಮ್ಮ ಹಾಜರಿದ್ದರು.

ಇಂದಿನಿಂದ ಅರಕಲಗೂಡಿನಲ್ಲಿ ರಾಮೋತ್ಸವ

ಅರಕಲಗೂಡು: ಪಟ್ಟಣದ ಕೋಟೆ ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದಲ್ಲಿ ಇಂದು ಗುರುವಾರದಿಂದ ಇದೇ ಮಾರ್ಚ್ 30ರವರೆಗೆ ರಾಮೋತ್ಸವದ ಅಂಗವಾಗಿ ವಿವಿಧ ಧಾಮಿಕ,ಸಾಂಸ್ಕೃತಿಕ ಹಾಗೂ ಉತ್ಸವಾದಿಗಳು ನಡೆಯಲಿವೆ.ಪ್ರತಿದಿನ ಪಂಚಾಮೃತ ಅಭಿಷೇಕ,ಭಜನೆ ನಡೆಯಲಿದ್ದು,ಶನಿವಾರ ಸಂಜೆ ಮೈಸೂರಿನ ಶಶಾಂಕ್ ಮತ್ತು ಸಂಗಡಿಗರಿಂದ ದೇವರನಾಮ, ಭಾನುವಾರ ಸಂಜೆ ಶೇಷವಾಹನೋತ್ಸವ, ಸೋಮವಾರ ಸಂಜೆ ಗರುಡೋತ್ಸವ, ಮಂಗಳವಾರದಂದು ಕು.ದೀಪ್ತಿ ಅವರಿಂದ ಗಮಕ ವಾಚನ ಹಾಗೂ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಅವರಿಂದ ವ್ಯಾಖ್ಯಾನ, ಮಾರ್ಚ್ 25ರ ಬುಧವಾರದಂದು ಅಶ್ವವಾಹನೋತ್ಸವ ನಡೆಯಲಿದೆ.

ಮಾರ್ಚ್ 28ರಂದು ಶ್ರೀರಾಮ ಪಟ್ಟಾಭಿಷೇಕ ನಡೆಯಲಿದ್ದು,ಇದೇ ಸಂಜೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಾಗಮಣಿ ವೆಂಕಟೇಶಮೂರ್ತಿ ಅವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ.

29ರಂದು ಸಂಜೆ ಅಶ್ವವಾಹನೋತ್ಸವ, 30ರಂದು ಸೋಮವಾರ ಹನುಮಂತೋತ್ಸವ ಕಾರ್ಯಕ್ರಮಗಳು ನಡೆಯಲಿದೆ.

ಸಂಘ ನೌಕರರಿಗೆ ಶಕ್ತಿ ಕೇಂದ್ರವಿದ್ದಂತೆ



ಆಲೂರು: ಸರಕಾರಿ ನೌಕರರ ಸಾಧಕ ಬಾದಕಗಳನ್ನು ಅವಲೋಕಿಸಿ, ಅವರಿಗೆ ಶಕ್ತಿ ಕೇಂದ್ರವಾಗಿರುವುದು ರಾಜ್ಯ ಸರಕಾರಿ ನೌಕರರ ಸಂಘ. ನೌಕರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಆಯಾ ಸರಕಾರದೊಂದಿಗೆ ಸಂವಾದಿಸುತ್ತಾ ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಸಂಘದ ಪರಿಶ್ರಮ ಅನನ್ಯವಾದುದು ಎಂದು ಆಲೂರು ಸಕಲೇಶಪುರ ಕಟ್ಟಾಯ ವಿಧಾನಸಭೆಯ ಶಾಸಕರಾದ ಎಸ್. ಮಂಜುನಾಥ್ (ಸಿಮೆಂಟ್ ಮಂಜುನಾಥ್) ಅಭಿಪ್ರಾಯಪಟ್ಟರು.

ಅವರು ಆಲೂರು ತಾಲ್ಲೂಕು ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಆಲೂರು ತಾಲ್ಲೂಕು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಕಟ್ಟಡದ ಮುಂದುವರಿದ ಅಭಿವೃದ್ಧಿ ಕಾಮಗಾರಿಯ ಶಂಕುಸ್ಥಾಪನೆ ಮಾಡಿ ಮಾತನಾಡಿ ರಾಜ್ಯ ಸರಕಾರಿ ನೌಕರರು ನಮ್ಮ ತಾಲ್ಲೂಕಿನಲ್ಲಿ ಸುಮಾರು ಸಾವಿರಕ್ಕೂ ಅಧಿಕವಿದ್ದು, ಈಗಿರುವ ಕಟ್ಟಡಚಿಕ್ಕದಾಗುವುದರಿಂದದೊಡ್ಡ ಸಮುದಾಯಭವನ ನಿರ್ಮಿಸಲು ವಿಶಾಲವಾದ ನಿವೇಶನ ಅಗತ್ಯವಿದೆ ಎಂದು ತಾಲ್ಲೂಕು ಅಧ್ಯಕ್ಷ ಡಿ.ಎಂ. ವರದರಾಜುರವರ ಕೋರಿಕೆ ಮೇರೆಗೆ ಸದ್ಯದಲ್ಲೇ ಪಟ್ಟಣದ ವ್ಯಾಪ್ತಿಯಲ್ಲಿ ಸೂಕ್ತ ನಿವೇಶನ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ವಿವಿಧ ಇಲಾಖಾ ನೌಕರರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ನೌಕರರ ಸಂಘದ ಬೇಡಿಕೆಗಳನ್ನು ಹಂತಹಂತವಾಗಿ ಈಡೇರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಹಾಸನ ಜಿಲ್ಲಾ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಾಗೂರು ಕೃಷ್ಣೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ಲಕ್ಷ್ಮೀಕಾಂತ್, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ, ತಾಲ್ಲೂಕು ಸಮನ್ವಯಾಧಿಕಾರಿ ವಿಜಯಕುಮಾರ್, ತಾಲ್ಲೂಕು ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಂ.ವರದರಾಜು, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಎಚ್.ರಾಮಚಂದ್ರು, ತಾಲ್ಲೂಕು ಗೌರವಾಧ್ಯಕ್ಷ ಬಿ.ಆರ್. ಧರ್ಮ, ಖಜಾಂಚಿ ಡಾ. ಅನಿಲ್ ಕುಮಾರ್, ಕಾರ್ಯದರ್ಶಿ ಹೇಮಂತ್, ಮಾಜಿ ಅಧ್ಯಕ್ಷ ನಯನ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಬಿ. ಅಮೃತೇಶ್, ತಾಲ್ಲೂಕು ಕಾರ್ಯದರ್ಶಿ ಎಂ.ಆರ್. ಶ್ರೀನಿವಾಸ ಉಪಸ್ಥಿತರಿದ್ದರು.

ಗರಿಷ್ಠ 28° ಕನಿಷ್ಠ 19°
ಹೊಸದಿಗಂತ
ಗುರುವಾರ 19 ಮಾರ್ಚ್ 2026

ತುಮಕೂರು

ಬೆಂಚ್-ಡೆಸ್ಕ್ ವಿತರಣೆ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್(ರಿ) ತಿಪಟೂರು ತಾಲೂಕು ರಂಗಾಪುರ ವಲಯದ ಶಾಲೆಗಳಿಗೆ ಮಂಜೂರು ಮಾಡಿದ ತಲಾ 5 ಬೆಂಚ್-ಡೆಸ್ಕ್‌ಗಳನ್ನು ತಾಲೂಕು ಯೋಜನಾಧಿಕಾರಿ ವಿತರಣೆ ಮಾಡಿದರು.



ಅನುದಾನಕ್ಕೆ ಕೊರತೆ ಇಲ್ಲ: ಶಾಸಕ | ೨
ಎಸೆಸ್ಸೆಲ್ಸಿ ಪರೀಕ್ಷೆಗೆ ಶೇ.೯೮ ಹಾಜರಿ | ೩
ಗರ್ಭಕಂಠ ಕ್ಯಾನ್ಸರ್‌ಗೆ ಕಡಿವಾಣ: ಡಿಸಿ | ೪

ಕಿರುಸುದ್ದಿ

ಶ್ರೀರಾಮನವಮಿ ಅಂಗವಾಗಿ ವಿಶೇಷ ಪೂಜೆ

• **ಮಧುಗಿರಿ:** ಏಕಶಿಲಾ ಬೆಟ್ಟದ ತಪ್ಪಲಿನಲ್ಲಿರುವ ಇತಿಹಾಸ ಪ್ರಸಿದ್ಧ ಕೋಟೆ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ಮಾ.19 ಗುರುವಾರದಿಂದ ಮಾ.29 ಭಾನುವಾರದವರೆಗೆ ಶ್ರೀ ರಾಮನವಮಿ ಅಂಗವಾಗಿ ಶ್ರೀ ಸ್ವಾಮಿಗೆ ಪ್ರತಿದಿನ ಫಲಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಹಾಗೂ ಮಹಾಮಂಗಳಾರತಿ ತೀರ್ಥಪ್ರಸಾದ ಏರ್ಪಡಿಸಿರುತ್ತದೆ. ಪ್ರತಿದಿನ ಬೆಳಿಗ್ಗೆ 10.30ಕ್ಕೆ ಹಾಗೂ ಸಂಜೆ 6ಗೆ ಮಹಾಮಂಗಳಾರತಿ ಇರುತ್ತದೆ. 27 ಶುಕ್ರವಾರ ರಾಮನವಮಿಯಂದು ಸಂಜೆ 6ಗೆ ಬೆಂಗಳೂರಿನ ಸಮೀರಾಚಾರ್ ಮತ್ತು ಸಂಗಡಿಗರು ದೇವರ ನಾಮಗಳನ್ನು ಹಾಗೂ ದಾಸರ ಪದಗಳನ್ನು ಪ್ರಸ್ತುತಪಡಿಸಲಿದ್ದಾರೆ. 28 ಶನಿವಾರ ಸಂಜೆ ಊರಿನ ರಾಜ ಬೀದಿಗಳಲ್ಲಿ ಶ್ರೀ ರಾಮದೇವರ ರಥೋತ್ಸವ ನಡೆಯಲಿದೆ. ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಪಾಲ್ಗೊಳ್ಳುವಂತೆ ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ದೇವಾಲಯ ಅಭಿವೃದ್ಧಿಗೆ ಡಿಡಿ ವಿತರಣೆ

• **ತಿಪಟೂರು:** ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್(ರಿ) ತಿಪಟೂರು ತಾಲೂಕು ಬಿದರೆಗುಡಿ ವಲಯದ ಬಿದರೆಗುಡಿ ಕಾರ್ಯಕ್ಷೇತ್ರದ ಚಟ್ನಹಳ್ಳಿ ಗ್ರಾಮದ ಶ್ರೀ ಚಿಕ್ಕಮ್ಮದೇವಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಕ್ಷೇತ್ರದ ವತಿಯಿಂದ ಮಂಜೂರು ಮಾಡಿದರೂ.1,50,000 ಲಕ್ಷ ಮೊತ್ತದ ಡಿಡಿ ವಿತರಣೆಯನ್ನು ಯೋಜನಾಧಿಕಾರಿ ಮಾಡಿದರು. ಹೆಗ್ಗಡೆಯವರು ಕ್ಷೇತ್ರದ ವತಿಯಿಂದ ಇದುವರೆಗೂ ಅನೇಕ ದೇವಸ್ಥಾನಗಳಿಗೆ ,ಸಮುದಾಯ ಭವನಗಳಿಗೆ ಹಾಲಿನ ಡೇರಿಗಳಿಗೆ ಕಟ್ಟಡ ನಿರ್ಮಾಣಗಳಿಗೆ ಅನುದಾನ ನೀಡಿದ್ದಾರೆ. ಇಂದು ನಮ್ಮ ಊರಿನ ದೇವಾಲಯ ಜೀರ್ಣೋದ್ಧಾರಕ್ಕೆ ಅನುದಾನ ನೀಡಿರುವುದು ನಮ್ಮೆಲ್ಲರ ಪುಣ್ಯ ಎಂದು ಅನಿಸಿಕೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಕೆರೆ ಸಮಿತಿ ಅಧ್ಯಕ್ಷರು ರಾಜಣ್ಣ, ಚಂದ್ರಣ್ಣ ದೇವಸ್ಥಾನ ಕಮಿಟಿ ಅಧ್ಯಕ್ಷರು ಚಂದ್ರಣ್ಣ, ವಲಯ ಮೇಲ್ವಿಚಾರಕರು, ಸೇವಾಪ್ರತಿನಿಧಿ, ಸದಸ್ಯರು, ಗ್ರಾಮಸ್ಥರು, ಭಾಗವಹಿಸಿದ್ದರು.

ಹೃದಯಾಘಾತದಿಂದ ಹಿರಿಯ ಪತ್ರಕರ್ತ ನಿಧನ

• **ಪಾವಗಡ:** ವಾಯುವಿಹಾರ ಮುಗಿಸಿ ಮನೆಗೆ ಹಿಂತಿರುಗುವಾಗ ಹೃದಯಾಘಾತ ಸಂಭವಿಸಿ ಹಿರಿಯ ಪತ್ರಕರ್ತ ಸೀತಾರಾಂ ಶಾಸ್ತ್ರಿ (61)ಬುಧವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಮೂಲತಃ ಪಳವಳ್ಳಿ ಗ್ರಾಮಕ್ಕೆ ಸೇರಿದ ಅವರು, ಪ್ರಸ್ತುತ ಪಾವಗಡ ಪಟ್ಟಣದ ಶ್ರೀನಿವಾಸ ನಗರದಲ್ಲಿ ವಾಸವಿದ್ದರು. ಕಳೆದ 30 ವರ್ಷಗಳಿಂದ ಈನಾಡು, ಕನ್ನಡಪ್ರಭ, ವಿಶಾಲಪ್ರಭ ದಿನಪತ್ರಿಕೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ತಾಯಿ. ಸಹೋದರಿ ಸೇರಿದಂತೆ ಮಕ್ಕಳು ಮೊಮ್ಮಕ್ಕಳನ್ನು ಅಗಲಿದ್ದಾರೆ. ತಾಲೂಕು ಪತ್ರಕರ್ತರ ಸಂಘ ಹಾಗೂ ಗಣ್ಯರು ಸಂತಾಪ ಸೂಚಿಸಿದ್ದಾರೆ.



ಮೊದಲ ದಿನದ ಪರೀಕ್ಷೆಯಲ್ಲಿ ಯಾವುದೇ ಲೋಪದೋಷಗಳಿಲ್ಲ

ಎಸೆಸ್ಸೆಲ್ಸಿ ಪರೀಕ್ಷೆ ಸುಗಮ

• **ತುಮಕೂರು:** ವಿದ್ಯಾರ್ಥಿಗಳ ಪ್ರಮುಖ ಘಟ್ಟವೆಂದೇ ಹೇಳಲಾಗುವ ಎಸ್ಸೆಸ್ಸೆಲ್ಸಿ ಪರೀಕ್ಷೆಯು ಜಿಲ್ಲೆಯಲ್ಲಿ ಇಂದಿನಿಂದ ಆರಂಭವಾಗಿದ್ದು, ಮೊದಲ ದಿನದ ಪರೀಕ್ಷೆಯು ಯಾವುದೇ ಲೋಪದೋಷಗಳಿಲ್ಲದೆ ತುಮಕೂರು ಶೈಕ್ಷಣಿಕ ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಸುಸೂತ್ರವಾಗಿ ನಡೆಯಿತು.

ತುಮಕೂರು(ದ)ಶೈಕ್ಷಣಿಕ ಜಿಲ್ಲೆಯ 82 ಪರೀಕ್ಷಾ ಕೇಂದ್ರಗಳಲ್ಲಿ 23,693 ವಿದ್ಯಾರ್ಥಿಗಳು, ಮಧುಗಿರಿ ಶೈಕ್ಷಣಿಕ ಜಿಲ್ಲೆಯ 49 ಪರೀಕ್ಷಾ ಕೇಂದ್ರಗಳಲ್ಲಿ 13,437 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ.

ಜಿಲ್ಲೆಯಲ್ಲಿ ತುಮಕೂರು (ದ) 82 ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ 49 ಸೇರಿ ಒಟ್ಟು 131 ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು, ಪರೀಕ್ಷಾ ಕೇಂದ್ರಗಳ ಎಲ್ಲಾ ಕೊಠಡಿಗಳಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇಂದು ಬೆಳಿಗ್ಗೆ 8 ಗಂಟೆಯಿಂದಲೇ ವಿದ್ಯಾರ್ಥಿಗಳು ತಮ್ಮ ತಮ್ಮ ಪರೀಕ್ಷಾ ಕೇಂದ್ರಗಳ ಮುಂದೆ ಜಮಾಯಿಸಿ ನೋಂದಣಿ ಸಂಖ್ಯೆ ಮತ್ತು ಕೊಠಡಿಗಳನ್ನು ಹುಡುಕಿಕೊಂಡು ಪರೀಕ್ಷೆ ಬರೆಯಲು ಉತ್ಸಾಹದಿಂದ ತೆರಳಿದ ದೃಶ್ಯಗಳು ಜಿಲ್ಲೆಯಾದ್ಯಂತ ಸಾಮಾನ್ಯವಾಗಿದ್ದವು.

ಪರೀಕ್ಷಾ ಕೇಂದ್ರಗಳಿಗೆ ಬಂದ ವಿದ್ಯಾರ್ಥಿಗಳನ್ನು ಶಾಲಾ ಸಿಬ್ಬಂದಿಗಳು ತಪಾಸಣೆ ನಡೆಸಿ ಪರೀಕ್ಷಾ ಕೊಠಡಿಗಳಿಗೆ ಹೋಗಲು ಅನುಮತಿ ನೀಡುತ್ತಿದ್ದ ದೃಶ್ಯಗಳು ಕಂಡು ಬಂತು. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷೆಗಳನ್ನು ವೀಕ್ಷಣೆ ಮಾಡಲು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಸಹ ಮಾಡಲಾಗಿದೆ.



131 ಕೇಂದ್ರಗಳಲ್ಲಿ ಪರೀಕ್ಷೆ

ಎಸ್ಸೆಸ್ಸೆಲ್ಸಿ ಪರೀಕ್ಷೆಯು ಏ.2ರವರೆಗೆ ಜಿಲ್ಲೆಯ 131 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಜಿಲ್ಲೆಯ ತುಮಕೂರು ಶೈಕ್ಷಣಿಕ ಮತ್ತು ಮಧುಗಿರಿ ಶೈಕ್ಷಣಿಕ ಜಿಲ್ಲೆಗಳಿಂದ ಒಟ್ಟು 37,130 ವಿದ್ಯಾರ್ಥಿಗಳು ಪರೀಕ್ಷೆಯನ್ನು ಸುಸೂತ್ರವಾಗಿ ಬರೆದಿದ್ದಾರೆ.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಡೆಸ್ಕ್, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ವ್ಯವಸ್ಥೆ ಹಾಗೂ ವಿದ್ಯುತ್ ಸೌಲಭ್ಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಪರೀಕ್ಷಾ ಕೇಂದ್ರಗಳಿಗೆ ಡಿಸಿ ಭೇಟಿ: ನಗರದ ಎಂಪ್ರೆಸ್ ಕಾಲೇಜಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರ, ಕಾಳಿದಾಸ ಶಾಲೆ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಶುಭಕಲ್ಯಾಣ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸಮೀಪದಲ್ಲಿರುವ ಜೆರಾಕ್ಸ್ ಸೆಂಟರ್, ಸೈಬರ್ ಸೆಂಟರ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ ಎಂದು ಅವರು ಹೇಳಿದರು. ಎಲ್ಲಾ ಎಸ್ಸೆಸ್ಸೆಲ್ಸಿ ಪರೀಕ್ಷೆ ಜೀವನದ ಕೊನೆ ಪರೀಕ್ಷೆ ಅಲ್ಲ, ಶಾಲೆಯಲ್ಲಿ ಕೇಳಿದ ಪಾಠ ಮತ್ತು ಓದಿರುವುದನ್ನು ನೆನಪಿನಲ್ಲಿಟ್ಟುಕೊಂಡು ಪರೀಕ್ಷೆಯನ್ನು ಉತ್ತಮವಾಗಿ ಬರೆಯಬೇಕು ಎಂದ ಅವರು, ಪರೀಕ್ಷೆ ಬರೆಯುತ್ತಿರುವ ಎಲ್ಲಾ ಮಕ್ಕಳಿಗೂ ಶುಭವಾಗಲಿ ಎಂದು ಹಾರೈಸಿದರು.

ಏ.3ರಂದು ಸಿಎಂ ಭೇಟಿ ಹಿನ್ನೆಲೆ ಸಿದ್ಧತೆಗೆ ಸೂಚನೆ

• **ತುಮಕೂರು:** ಜಿಲ್ಲೆಯ ಮಧುಗಿರಿಯಲ್ಲಿ ಏಪ್ರಿಲ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುವ ಕಾರ್ಯಕ್ರಮಕ್ಕೆ ಉದ್ಘಾಟನೆ/ಶಂಕುಸ್ಥಾಪನೆ ಹಾಗೂ ಘೋಷಣೆಗೆ ಸಂಬಂಧಿಸಿದ ಕಾರ್ಯಗಳನ್ನು ಇದೇ 20ರೊಳಗೆ ಅಂತಿಮಗೊಳಿಸುವಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಅಶ್ವಿಜ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾ ಪಂಚಾಯತಿಯಲ್ಲಿ ಬುಧವಾರ ವಿವಿಧ ಹಂತದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಈಗಾಗಲೇ ಕಾರ್ಯಕ್ರಮದ ವೇದಿಕೆಯ ಜಾಗ, ಇನ್ನಿತರೆ ಪೂರ್ವ ಸಿದ್ಧತೆಗಳ ರೂಪು-ರೇಷೆಗಳನ್ನು ಮಾಡಲಾಗಿದೆ. ಅದರಂತೆ ಮುಖ್ಯಮಂತ್ರಿಯವರು ಉದ್ಘಾಟಿಸಲಿರುವ ಹಾಗೂ ಶಂಕುಸ್ಥಾಪನೆ ನೆರವೇರಿಸಲಿರುವ ಫಲಕಗಳನ್ನು ಶಿಷ್ಟಾಚಾರದಂತೆ ಸಿದ್ಧಪಡಿಸಿ ಸಂಬಂಧಿಸಿದ ಫಲಕದ ಪ್ರತಿಯನ್ನು ಇದೇ 20ರೊಳಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ತಿಳಿಸಿದರು.

ಏ.3ರಂದು ಮುಖ್ಯಮಂತ್ರಿಗಳು ಹೆಲಿಕಾಪ್ಟರ್ ಮೂಲಕ ಆಗಮಿಸಲಿದ್ದು, ಸೂಕ್ತ ಹೆಲಿಪ್ಯಾಡ್ ವ್ಯವಸ್ಥೆಯನ್ನು ಹಾಗೂ ವೇದಿಕೆ ನಿರ್ಮಾಣ ಇತ್ಯಾದಿ ಜವಾಬ್ದಾರಿಗಳನ್ನು ವಹಿಸಿಕೊಂಡಿರುವ ಲೋಕೋಪಯೋಗಿ ಇಲಾಖೆ ಸಂಬಂಧಿಸಿದ ಕಾಮಗಾರಿಗಳಿಗೆ ದೃಢೀಕರಣ ನೀಡಬೇಕು ಎಂದರು.

ಅಲ್ಲದೆ, ವಿವಿಧ ಪ್ರಮುಖ ಇಲಾಖೆಗಳಲ್ಲಿ ಆಗಿರುವ ಪ್ರಮುಖ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಮುಖ್ಯಮಂತ್ರಿಯವರ ಭಾಷಣದ ಕರಡು ತಯಾರಿಸಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಯವರಿಗೆ ಇದೇ 23ರೊಳಗೆ ಒದಗಿಸುವಂತೆಯೂ ಅವರು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಸಂಜೀವಪ್ಪ, ಈಶ್ವರಪ್ಪ, ಯೋಜನಾಧಿಕಾರಿ ಸಣ್ಣಮಸಿಯಪ್ಪ ಭಾಗವಹಿಸಿದ್ದರು.



ರಾಜಕೀಯದಲ್ಲೂ ಆಸಕ್ತಿ ರೂಢಿಸಲಿ

• **ಮಧುಗಿರಿ:** ಯುವ ಪೀಳಿಗೆ ಶಿಕ್ಷಣದ ಜತೆಗೆ ರಾಜಕೀಯ ವಿಷಯಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ದೇಶದ ಉಜ್ವಲ ಭವಿಷ್ಯ ನಿರ್ಮಾತೃಗಳಾಗಬೇಕು ಎಂದು ಶಾಸಕ ಕೆ.ಎನ್. ರಾಜಣ್ಣ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸ್ನಾತಕ, ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಮಂಗಳವಾರ ರಾಜ್ಯದ ಆರ್ಥಿಕ ಬಜೆಟ್ ಅಧಿವೇಶನ ಮೇಲಿನ ವಿಧಾನಸಭೆ ಹಾಗೂ ವಿಧಾನ ಪರಿಷತ್ ಗಳ ಚರ್ಚೆಯ ಕಲಾಪ ವೀಕ್ಷಿಸಲು ಆಗಮಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾರ್ಯವೈಖರಿಯನ್ನು ನೇರವಾಗಿ ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿದ್ದು, ಕಲಾಪ ವೀಕ್ಷಣೆ ಜ್ಞಾನವರ್ಧನೆಗೆ ಸಹಕಾರಿಯಾಗಲಿದೆ, ಸಮಾಜದ ಸಮಸ್ಯೆಗಳ ಅರಿವು ಹೊಂದಿ ಪ್ರಶ್ನೆಗಳನ್ನು ಕೇಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಯಾವುದೇ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು, ಉದ್ಯೋಗ ಆಧಾರಿತ ಶಿಕ್ಷಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಜಿಟಿಟಿಸಿ ಸ್ಥಾಪನೆ, ನಿರುದ್ಯೋಗಿ ಯುವಕ ಯುವತಿಯರಿಗಾಗಿ ಉದ್ಯೋಗ ಮೇಳ, ಉತ್ತಮವಾದ ಸಾರಿಗೆ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯಗಳನ್ನು ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ನಾಗರೀಕರಾಗಿ ಮಾದರಿ ಜೀವನವನ್ನು ಕಟ್ಟಿಕೊಳ್ಳಬೇಕು ಎಂದರು.



ಮುಖಂಡ ಹರ್ಷ ಕುರುಬರಹಳ್ಳಿ ಮಾತನಾಡಿ ಶಾಸಕ ಕೆ.ಎನ್.ರಾಜಣ್ಣನವರು ಪದವಿ ವಿದ್ಯಾರ್ಥಿಗಳಿಗೆ ಕಲಾಪ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿದ್ದು, ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಕಾರಿಯಾಗಲಿದೆ. ಕಲಾಪವನ್ನು ನೇರವಾಗಿ ವೀಕ್ಷಿಸುವುದರಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಕಾರಿಯಾಗಲಿದೆ ಎಂದರು. ವಿಧಾನ ಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮತ್ತು ನೆನಪಿನ ಕಾಣಿಕೆಯನ್ನು ವ್ಯವಸ್ಥೆ ಮಾಡಿದ್ದರು.

ಗಂಗಾಸ್ನಾನ ಮಹೋತ್ಸವ

• **ಚಿಕ್ಕನಾಯಕನಹಳ್ಳಿ:** ತಾಲೂಕಿನ ಶೆಟ್ಟೀಕೆರೆ ಹೋಬಳಿಯ ಸೋಮಲಾಪುರ ಗ್ರಾಮದಲ್ಲಿ ಮೂಡಲಗಿರಿ ತಿಮ್ಮಪ್ಪ ಹಾಗೂ ಸಿದ್ದೇಶ್ವರ ಸ್ವಾಮಿಯ ಪುಣ್ಯ ಗಂಗಾಸ್ನಾನ ಮತ್ತು ವಾರ್ಷಿಕ ಉತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಭಾನುವಾರ ಮಧ್ಯರಾತ್ರಿಯಿಂದಲೇ ಪೂಜಾ ಕೈಂಕರ್ಯಗಳು ಆರಂಭಗೊಂಡವು. ದೈವಗಳ ಉತ್ಸವಮೂರ್ತಿಗಳನ್ನು ಮಂಗಳ ವಾದ್ಯಗಳೊಂದಿಗೆ ರಾಜಯ್ಯನಪಾಳ್ಯಕ್ಕೆ ಮೆರವಣಿಗೆಯ ಮೂಲಕ ಕರೆತರಲಾಯಿತು. ಅಲ್ಲಿ ಭಕ್ತಿಪೂರ್ವಕವಾಗಿ ಗಂಗಾಸ್ನಾನ ವಿಧಿಯನ್ನುಪೂರೈಸಿದ ನಂತರ ಸಾಂಪ್ರದಾಯಿಕ ಮಣೆವು ಹಾಗೂ ಅತ್ಯಂತ ಶ್ರದ್ಧೆಯಿಂದ ನೂರೊಂದು ಎಡೆ ಸೇವೆಯನ್ನು ಸಮರ್ಪಿಸಲಾಯಿತು. ಧಾರ್ಮಿಕ ಕಾರ್ಯಕ್ರಮಗಳು ಹೊಸ ಪಾಳ್ಯದದೂತರಾಯನ ಆಗಮನವು ಉತ್ಸವದ ಕಳೆ ಹಾಗೂ ಮೆರುಗನ್ನು ಇಮ್ಮಡಿಗೊಳಿಸಿತು.

ಎನ್‌ಡಿಎ ಮುಖಂಡರ ಪ್ರತಿಭಟನೆ

• **ಕುಣಿಗಲ್:** ಶಾಸಕರೇ ಸರ್ಕಾರವಲ್ಲ, ಶಾಸಕರು ಸರ್ಕಾರದ ಪ್ರತಿನಿಧಿ. ನಾವು ತಪ್ಪು ಮಾಡಿದರೆ ನಮ್ಮ ಪಕ್ಷದ ಕಾರ್ಯಕರ್ತರು ತಪ್ಪು ಮಾಡಿದರೆ ಕಾನೂನು ಕ್ರಮ ಕೈಗೊಳ್ಳಿ. ಆದರೆ ಶಾಸಕರ ಒತ್ತಡಕ್ಕೆ ಮಣಿದು ತಪ್ಪು ಕೆಲಸ ಮಾಡಿ ಸುಳ್ಳು ಪ್ರಕರಣ ದಾಖಲಿಸಬೇಡಿ ಎಂದು ಎನ್‌ಡಿಎ ಮುಖಂಡ ಡಿ.ಕೃಷ್ಣಕುಮಾರ್ ಹಾಗೂ ಡಾ.ರವಿಬಾಬು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಕಸಬಾ ಹೋಬಳಿ ಸಂತೆಮಾವುತೂರು ಗ್ರಾಮದಲ್ಲಿ ನಡೆದ ಅಕ್ರಮ ಚುನಾವಣೆ ಮತ್ತು ಅಕ್ರಮ ಬ್ಯಾಲೆಟ್ ಪೇಪರ್, ಕಳ್ಳ ಮತದಾನದ ವಿರುದ್ಧ ಎನ್‌ಡಿಎ ಪಕ್ಷದ ವತಿಯಿಂದ ಕಾಂಗ್ರೆಸ್ ಶಾಸಕರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ ದೇಶದಲ್ಲಿ ಕಾನೂನು ವ್ಯವಸ್ಥೆ ಸತ್ತಿಲ್ಲ, ಕಾನೂನು ನ್ಯಾಯದ ಪರವಾಗಿದೆ, ಶಾಸಕರು ಸಹಕಾರಕ ಸಂಘಗಳನ್ನ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ, ಅವರ ರಕ್ಷಣೆಗೆ ಅಧಿಕಾರಿಗಳು ನಿಂತಿರುವುದು ದುರಂತ ಶಾಸಕರೇ ನಿಮ್ಮ ಅಕ್ರಮಗಳನ್ನು ಬಯಲಿಗೆ ಎಳೆಯುವ ಕಾಲ ದೂರವಿಲ್ಲ ಎಂದರು.

ಶಾಸಕರು ಮಾಡುವ ಕಾನೂನು ಬಾಹಿರ ಕೆಲಸಗಳಿಗೆ ಸಹಕಾರ ನೀಡಿದ ಅಧಿಕಾರಿಗಳು ಇಂದು ಜೈಲಿನಲ್ಲಿ ಕೊಳೆಯುತ್ತಿದ್ದಾರೆ, ನೀವು ಎಚ್ಚರವಾಗಿರಿ ಶಾಸಕರು ಎಷ್ಟು ದಿನ ನಿಮ್ಮ ತಲೆ ಕಾಯುತ್ತಾರೋ ನೋಡೋಣ ಎಂದರು. ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ಹುಚ್ಚ ಮಾಸ್ತಿ ಗೌಡರ ಸರ್ಕಲ್ ನಿಂದ ತಾಲೂಕು ಕಚೇರಿಯ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರತಿಭಟನೆಯಲ್ಲಿ ಎನ್.ಡಿ.ಎ ಮುಖಂಡರಾದ ದಿನೇಶ, ಬಲರಾಮ್, ಶಿವಣ್ಣ, ವೈ ಎಚ್ ಹುಚ್ಚಯ್ಯ, ಕೆ ಎಲ್ ಹರೀಶ, ದೀಪು, ಕೃಷ್ಣಪ್ಪ, ಹರೀಶ್ ನಾಯಕ್, ರಂಗಸ್ವಾಮಿ, ಮಂಜುನಾಥ್, ತರೀಕೆರೆ ಪ್ರಕಾಶ್ ನೂರಾರು ಎನ್ ಡಿ ಎ ನಾಯಕರು ಇದ್ದರು.



» ಶಾಸಕರ ಒತ್ತಡಕ್ಕೆ ಮಣಿದು ತಪ್ಪು ಕೆಲಸ ಮಾಡಿ ಸುಳ್ಳು ಪ್ರಕರಣ ದಾಖಲಿಸಬೇಡಿ

ಗುಣಮಟ್ಟದ ಹಾಲು ಉತ್ಪಾದನೆಯಲ್ಲಿ ಚಿಕ್ಕನಾಯಕನಹಳ್ಳಿ ಜಿಲ್ಲೆಗೆ ಮೊದಲಸ್ಥಾನ

ಯಳನಾಡಿನಲ್ಲಿ ಕರು ಪ್ರದರ್ಶನ ಯಶಸ್ವಿ



• **ಹುಳಿಯಾರು:** ತುಮಕೂರು ಹಾಲು ಒಕ್ಕೂಟದ ವತಿಯಿಂದ ಚಿಕ್ಕನಾಯಕನಹಳ್ಳಿ ತಾಲೂಕಿನ ಯಳನಾಡಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಿಶ್ರತಳಿ ರಾಸುಗಳ ಹಾಲು ಕರೆಯುವ ಸ್ಪರ್ಧೆ ಹಾಗೂ ಕರುಗಳ ಪ್ರದರ್ಶನ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಬಿ.ಎಂ.ಶಿವಪ್ರಕಾಶ್ ಬುಳ್ಳೇನಹಳ್ಳಿ ಅವರು ಮಾತನಾಡಿ ರಾಜ್ಯದ 16 ಹಾಲು ಒಕ್ಕೂಟಗಳಲ್ಲಿ ತುಮಕೂರು ಜಿಲ್ಲೆ ನಾಲ್ಕನೇ ಸ್ಥಾನದಲ್ಲಿದ್ದು, ಗುಣಮಟ್ಟದ ಹಾಲು ಉತ್ಪಾದನೆಯಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕು ಇಡೀ ಜಿಲ್ಲೆಗೆ ಪ್ರಥಮ ಸ್ಥಾನದಲ್ಲಿದೆ ಎಂದು ಹೆಮ್ಮೆಯಿಂದ ತಿಳಿಸಿದರು.

ತಾಲೂಕಿನಲ್ಲಿ ಪ್ರತಿದಿನ ಸರಾಸರಿ 86,836 ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಇದರಿಂದ ದಿನಕ್ಕೆ ಸುಮಾರು 33,88,959 ರೂ. ಹೈನುಗಾರರ ಕೈ ಸೇರುತ್ತಿದೆ ಮತ್ತು ತಿಂಗಳಿಗೆ ಸುಮಾರು 10.50 ಕೋಟಿ ರೂ. ಗ್ರಾಮೀಣ ಆರ್ಥಿಕತೆಗೆ ಹರಿದುಬರುತ್ತಿದೆ. ಇದು ಬೇರೆ ಯಾವುದೇ ಬೆಳೆಯಿಂದ ಸಾಧ್ಯವಿಲ್ಲದ ಸಾಧನೆ ಎಂದು ಅವರು ಅಭಿಪ್ರಾಯಪಟ್ಟರು.

ತಾಲೂಕಿನಲ್ಲಿ ಒಟ್ಟು 122 ಹಾಲು ಉತ್ಪಾದಕರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 25 ಮಹಿಳಾ ಸಂಘಗಳು ಹಾಗೂ 25 ಬಿ.ಎಂ.ಸಿ ಕೇಂದ್ರಗಳಿವೆ. ಸುಮಾರು 26,448 ಕುಟುಂಬಗಳು ಹೈನುಗಾರಿಕೆಯನ್ನು ಅವಲಂಬಿಸಿವೆ ಎಂಬ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಯಳನಾಡು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವೈ.ಆರ್. ಮಲ್ಲಿಕಾರ್ಜುನಯ್ಯ , ಡಾ.ಅಭಿಜ್ಞಾ ಮಾಧುಸ್ವಾಮಿ , ಹಾಲು ಒಕ್ಕೂಟದ ಅಧಿಕಾರಿಗಳಾದ ಟಿ.ವಿ.ಶ್ರೀನಿವಾಸ್, ಚಂದ್ರಶೇಖರ್, ಭಾರತಿ ದೇವಿ, ಮಾದಿಹಳ್ಳಿ ಪ್ರಕಾಶ್, ನಂಜೇಗೌಡ ಮತ್ತಿತರರು ಸೇರಿದಂತೆ ಎಂ.ಪಿ.ಸಿ.ಎಸ್ ಅಧ್ಯಕ್ಷರು, ಕಾರ್ಯದರ್ಶಿಗಳು, ಭಾಗವಹಿಸಿದ್ದರು.

ಕಿರುಸುದ್ದಿ

ಪ್ರಥಮ ಭಾಷೆಗೆ 11,999 ವಿದ್ಯಾರ್ಥಿಗಳು ಹಾಜರಿ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ-1ರ ಪರೀಕ್ಷೆಗಳು ಪ್ರಾರಂಭವಾಗಿದ್ದು, ಬುಧವಾರ ನಡೆದ ಪ್ರಥಮ ಭಾಷೆ ವಿಷಯದ ಪರೀಕ್ಷೆಯಲ್ಲಿ 11,999 ಜನ ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ವಿವರ: ಪ್ರಥಮ ಭಾಷೆ ಪರೀಕ್ಷೆಯು ಚನ್ನಪಟ್ಟಣ ತಾಲ್ಲೂಕಿನ 13 ಕೇಂದ್ರಗಳಲ್ಲಿ 2,938 ಜನ ವಿದ್ಯಾರ್ಥಿಗಳು ಹಾಜರಾಗಿದ್ದು, 30 ಜನ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಕನಕಪುರ ತಾಲ್ಲೂಕಿನ 13 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಯಲ್ಲಿ 3,561 ಜನ ವಿದ್ಯಾರ್ಥಿಗಳು ಹಾಜರಾಗಿದ್ದು, 58 ಜನ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಮಾಗಡಿ ತಾಲ್ಲೂಕಿನ 9 ಪರೀಕ್ಷಾ ಕೇಂದ್ರದಲ್ಲಿ ನಡೆದ ಪರೀಕ್ಷೆಗೆ 2,332 ವಿದ್ಯಾರ್ಥಿಗಳು ಹಾಜರಾಗಿದ್ದು, 61 ಜನ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಹಾಗೂ ರಾಮನಗರ ತಾಲ್ಲೂಕಿನ 13 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಯಲ್ಲಿ 3,168 ವಿದ್ಯಾರ್ಥಿಗಳು ಹಾಜರಾಗಿದ್ದು, 43 ಜನ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 48 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆ 11,999 ವಿದ್ಯಾರ್ಥಿಗಳು ಹಾಜರಾಗಿದ್ದು, 192 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರ

ಕನಕಪುರ: ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವೆಂದೇ ಬಿಂಬಿಸಲಾಗಿರುವ 2026ನೇ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆಯ ಮೊದಲ ದಿನವಾದ ಬುಧವಾರ ತಾಲೂಕಿನಾದ್ಯಂತ ಸುಸೂತ್ರವಾಗಿ ನಡೆಯಿತು. ತಾಲೂಕಿನಲ್ಲಿ ಮೊದಲ ಭಾಷೆಯ ಕನ್ನಡ ಪರೀಕ್ಷೆಯು ಯಾವುದೇ ಗೊಂದಲವಿಲ್ಲದೆ, ಶಿಸ್ತಿನಿಂದ ನಡೆಯಿತು. ಎಸ್ಎಸ್ಎಲ್‌ಸಿ ಪರೀಕ್ಷೆಗೆ ಒಟ್ಟು 3619 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದರು. ಅವರಲ್ಲಿ 3569 ಮಂದಿ ಹಾಜರಾಗಿ ಪರೀಕ್ಷೆ ಬರೆದಿದ್ದಾರೆ. 58 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ತಾಲೂಕಿನ ಒಟ್ಟು 13 ಕೇಂದ್ರಗಳಲ್ಲಿ ಪರೀಕ್ಷೆಯ ನಡೆಸಲಾಯಿತು. ಯಾವುದೇ ಅಹಿತಕರ ಘಟನೆಗಳಿಲ್ಲದೇ ಮತ್ತು ನಕಲುಮುಕ್ತವಾಗಿ ಪರೀಕ್ಷೆ ಆರಂಭವಾಯಿತು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಕಣ್ಗಾವಲಿನಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ಪೋಲಿಸ್ ಭದ್ರತೆ ಕೈಗೊಳ್ಳಲಾಗಿತ್ತು. ತಾಲೂಕು ಪರೀಕ್ಷಾ ನಿರ್ವಾಹಕ ನೊಡೆಲ್ ಅಧಿಕಾರಿ ವಿಜಯಕುಮಾರ್ ಮಾತನಾಡಿ, ಎಲ್ಲಾ ಕೇಂದ್ರಗಳಲ್ಲಿ ಪರೀಕ್ಷೆ ಸುಸೂತ್ರವಾಗಿ ಆರಂಭಗೊಂಡಿದೆ, ವಿದ್ಯಾರ್ಥಿಗಳು ಭಯ ಮುಕ್ತರಾಗಿ ಸಂತಸದಿಂದ ಪರೀಕ್ಷೆ ಬರೆದಿದ್ದಾರೆ. ಮಾರ್ಚ್ 18ರಿಂದ ಏಪ್ರಿಲ್ 22ರವರೆಗೆ ಪರೀಕ್ಷೆ ನಡೆಯಲಿದೆ. ಏಪ್ರಿಲ್ 24ರಂದು ಫಲಿತಾಂಶ ಪ್ರಕಟವಾಗಲಿದೆ. ತಾಲೂಕಿ ಕ್ಷೇತ್ರ ಶಿಕ್ಷಣ ಪ್ರಭಾರ ಅಧಿಕಾರಿ ನಾರಾಯಣ್ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಮಕ್ಕಳಿಗೆ ಶುಭ ಹಾರೈಸಿದ್ದಾರೆ ಎಂದರು.

ಮಾವು ಬೆಳೆಗಾರರ ಸಂಘದ ಚುನಾವಣೆ ದಿನ ನಿಗದಿ

ರಾಮನಗರ: ಜಿಲ್ಲಾ ಮಾವು ಮತ್ತು ತೋಟದ ಬೆಳೆಗಾರರ ಮಾರಾಟ ಸಹಕಾರ ಸಂಘದ ಚುನಾವಣೆ ಮಾರ್ಚ್ 28 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ರಾಮನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಕಚೇರಿ ಕಟ್ಟಡದ ಆವರಣದಲ್ಲಿ ನಡೆಯಲಿದೆ. ಸಂಘದ ನೀತಿ ನಿಯಮಾವಳಿಯಂತೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಚಿಸುವ ಸಂಘದ ಸದಸ್ಯರಾದ ಅಭ್ಯರ್ಥಿಗಳು ಮಾರ್ಚ್ 20 ರಂದು ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ಸಲ್ಲಿಸಬೇಕು. ಮಾರ್ಚ್ 21 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು ಅಂದೇ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ಮಾರ್ಚ್ 22ರಂದು ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ವಾಪಸ್ ಪಡೆಯಬಹುದು. ಮದ್ಯಾಹ್ನ 3 ಗಂಟೆ ನಂತರ ಕಣದಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದ್ದು ಚುನಾವಣೆ ಚಿಹ್ನೆ ಹಂಚಿಕೆ ಮಾಡಲಾಗುವುದು. ಮತದಾನ ದಿನವೇ ಮತದಾನ ಆದ ನಂತರ ಫಲಿತಾಂಶ ಘೋಷಣೆಯಾಗಲಿದೆ ಎಂದು ಸಂಘದ ಚುನಾವಣಾಧಿಕಾರಿಯಾಗಿ ನೇಮಕವಾಗಿರುವ ಕೆ.ಟಿ. ಉಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತರಬೇತಿ ಶಿಬಿರ ಉದ್ಘಾಟನೆ

ಚಿಕ್ಕನಾಯಕನಹಳ್ಳಿ: ಎಸ್.ಬಿ,ಚಾರಿಟೇಬಲ್ ಟ್ರಸ್ಟ್ ವತಿಯಿಂದ ಜ್ಞಾನಕಲ್ಪ ಉಚಿತ ಸಿಇಟಿ/ನೀಟ್, ಜೆಇಇ ತರಬೇತಿ ಶಿಬಿರದ ಉದ್ಘಾಟನೆ ಮಾ.17ರಂದು ಪಟ್ಟಣದಲ್ಲಿ ನಡೆಯಲಿದೆ. ಪಟ್ಟಣದ ತೀನಂಶ್ರೀ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಶಿಬಿರವನ್ನು ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಉದ್ಘಾಟಿಸುವರು, ಶಾಸಕ ಸಿ.ಬಿ.ಸುರೇಶ್‌ಬಾಬು ಅಧ್ಯಕ್ಷತೆ ವಹಿಸುವರು. ಸಿಇಟಿ ತರಬೇತಿ ಶಿಬಿರದ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾದ ಸಾ.ಚಿ.ನಾಗೇಶ್ ಆಶಯ ನುಡಿಗಳನ್ನಾಡುವರು.



ಕನಕಪುರ ತಾಲೂಕು ಬೆಂಡಗೋಡು ಗ್ರಾಮದಲ್ಲಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 51ನೇ ಹುಟ್ಟುಹಬ್ಬ ಆಚರಣೆಯಲ್ಲಿ ಮಹೇಶ್‌ನಾಯ್ಕ, ಮಂಜುನಾಯ್ಕ ಹಲವರು ಉಪಸ್ಥಿತರಿದ್ದರು. ಸುನೀಲ್‌ನಾಯ್ಕ, ರಮೇಶ್‌ನಾಯ್ಕ ಇದ್ದರು.

ಗೌಡ್ರುಪಾಳ್ಯ ಡೇರಿಗೆ ಅಧ್ಯಕ್ಷ ಆಯ್ಕೆ

ಮಾಗಡಿ: ಹುಚ್ಚಹನುಮೇಗೌಡನ ಪಾಳ್ಯದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಪುಷ್ಪಲತಾ ದನಂಜಯ, ಉಪಾಧ್ಯಕ್ಷರಾಗಿ ಜವರಯ್ಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪುರುಷೋತ್ತಮ್ ಘೋಷಣೆ ಮಾಡಿದರು. ತಾಲೂಕಿನ ಹುಚ್ಚ ಹನುಮೇಗೌಡನ ಪಾಳ್ಯ (ಗೌಡ್ರುಪಾಳ್ಯ) ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಕಳೆದ ಫೆಬ್ರವರಿಯ 18ರಂದು ನೂತನ ನಿರ್ದೇಶಕರ ಚುನಾವಣೆ ನಡೆದು ಹನ್ನೆರಡು ಜನ ಸದಸ್ಯರು ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿದ್ದು, ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಮಾರ್ಚ್ ನ18 ಚುನಾವಣೆ ನಿಗಧಿಯಾಗಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸಂಘದ ನಿರ್ದೇಶಕರುಗಳು ಒಮ್ಮತದಿಂದ ಅಧ್ಯಕ್ಷರಾಗಿ ಪುಷ್ಪಲತಾ ದನಂಜಯ, ಉಪಾಧ್ಯಕ್ಷರಾಗಿ ಜವರಯ್ಯ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಸಹಕಾರ ಇಲಾಖೆಯ ಚುನಾವಣಾಧಿಕಾರಿ ಪುರುಷೋತ್ತಮ್ ಘೋಷಣೆ ಮಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ನೂತನ ಅಧ್ಯಕ್ಷೆ ಪುಷ್ಪಲತಾ ಧನಂಜಯ ಅವರು, ನಾನು ಈ ಸಂಘದಲ್ಲಿ ಕಳೆದ ಹತ್ತು ವರ್ಷಗಳಿಂದ ಸದಸ್ಯರಾಗಿ ಹಾಲು ಪೂರೈಸುತ್ತಿದ್ದು, ಶಾಸಕರಾದ ಹೆಚ್.ಸಿ ಬಾಲಕೃಷ್ಣ, ಸಹಕಾರ ರತ್ನ, ಹೆಚ್.ಎನ್. ಅಶೋಕ್, ಕೋಡಿಪಾಳ್ಯ ಶಿವರಾಜು, ಬೋರ್ ವೆಲ್ ನರಸಿಂಹಯ್ಯ, ಪೂಜಾರಿ ಪಾಳ್ಯ ಕೃಷ್ಣಮೂರ್ತಿ ಇದ್ದರು.



ಮಾಗಡಿಯಲ್ಲಿ ಹುಚ್ಚಹನುಮೇಗೌಡನ ಪಾಳ್ಯದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಪುಷ್ಪಲತಾ ಧನಂಜಯ, ಉಪಾಧ್ಯಕ್ಷರಾಗಿ ಜವರಯ್ಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿರೋಧಿಗಳ ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ: ಬಾಲಕೃಷ್ಣ

ಅನುದಾನಕ್ಕೆ ಕೊರತೆ ಇಲ್ಲ

ರಾಮನಗರ: ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ ಎಂಬ ವಿರೋಧಿಗಳ ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ ನೀಡಲಾಗುತ್ತಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ಬಿಡದಿ ಹೋಬಳಿ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸುಮಾರು 40 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ/ಉದ್ಘಾಟನೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣದ ಕೊರತೆ ಇಲ್ಲ. ಗ್ಯಾರಂಟಿ ಯೋಜನೆಗಳ ಜತೆ ಜತೆಗೆ ಅಭಿವೃದ್ಧಿಯೂ ನಡೆಯುತ್ತಿದೆ. ಇದರಿಂದ ಹತಾಶರಾಗಿರುವ ವಿಪಕ್ಷಗಳ ಮುಖಂಡರು ಜನರ ದಿಕ್ಕುತಪ್ಪಿಸಲು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದರು.

ಮೂರ್ನಾಕು ಬಾರಿ ಶಾಸಕರಾಗಿರುವವರು ಸುಮಾರು 40ಕ್ಕೂ ಹೆಚ್ಚು ಶಾಸಕರಿದ್ದೇವೆ. ಹಾಲಿ ಇರುವ 20 ಸಚಿವರನ್ನು ಬದಲಿಸಿ 20 ಮಂದಿ ಹೊಸ ಮುಖಗಳಿಗೆ ಅವಕಾಶ ನೀಡಿದರೆ ಮತ್ತಷ್ಟು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಇದರಿಂದ ಪಕ್ಷಕ್ಕೆ ಮತ್ತಷ್ಟು ಒಳ್ಳೆ ಹೆಸರು ಬರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ನಾಯಕರ ಮೂಲಕ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದೇವೆ ಎಂದರು. ನಮ್ಮ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಎರಡು ಕ್ಷೇತ್ರಗಳ ಉಪ ಚುನಾವಣೆ ನಂತರ ಹೈಕಮಾಂಡ್ ಗಮನಕ್ಕೆ ತಂದು ಅರ್ಹರಿಗೆ ಸಚಿವ ಸ್ಥಾನ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ನಾಯಕತ್ವ ಬದಲಾವಣೆ ಆಗಬೇಕೆಂಬುದು ನಮ್ಮ ವ್ಯಾಪ್ತಿಯನ್ನು ಮೀರಿದ ವಿಚಾರ. ನಾಯಕತ್ವ ಬದಲಾಗಬೇಕೆ, ಬೇಡವೇ ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ನಮಗೆ ಸಚಿವ ಸ್ಥಾನ ನೀಡಬೇಕೆಂಬುದು ಮಾತ್ರವೇ ನಮ್ಮ ಬೇಡಿಕೆಯಾಗಿದೆ ಎಂದು ಪ್ರಶ್ನೆಯೊಂದಕ್ಕೆ ಬಾಲಕೃಷ್ಣ ಪ್ರತಿಕ್ರಿಯಿಸಿದರು.



> ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ 40 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ರಸ್ತೆ, ಮೂಲಭೂತ ಸೌಕರ್ಯ ಸೇರಿದಂತೆ ವಿಶೇಷವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣಕ್ಕೆ ವಿಶೇಷ ಒತ್ತು ನೀಡಲಾಗಿದೆ. ವಂಡರ್ ಲಾ, ಟೊಯೋಟಾ ಕಂಪೆನಿಗಳ ಸಹಯೋಗದಲ್ಲಿ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದೆ.
> ■ ಎಚ್.ಸಿ.ಬಾಲಕೃಷ್ಣ, ಶಾಸಕ

ಮೊದಲ ಬಾರಿ ಗೆದ್ದಿರುವ ಶಾಸಕರು ಮಂತ್ರಿ ಸ್ಥಾನಕ್ಕೂ ಮಿಗಿಲಾಗಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಂತ್ರಿ ಸ್ಥಾನ ನೀಡಿದರೆ ಯಾರಾದರೂ ಬೇಡ ಎನ್ನುತ್ತಾರೆಯೇ ಎಂದರು. ನೀರಾವರಿ ವಿಚಾರವಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಲು ಎಲ್ಲಾ ಪಕ್ಷಗಳ ಸಂಸದರ ನಿಯೋಗದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂಬಂಧಪಟ್ಟ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದಾರೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಎಂದು ಹೇಳಿದರು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್, ನಿರ್ದೇಶಕ ಪುಟ್ಟಯ್ಯ, ಮುಖಂಡರಾದ ಚಂದ್ರಶೇಖರ್, ಅಬ್ಬನಕುಪ್ಪೆ ರಮೇಶ್, ಚಿಕ್ಕ ಬ್ಯಾಟಪ್ಪ, ಹೊಂಬೇಗೌಡ, ಕಾಕರಾಮನಹಳ್ಳಿ ರಮೇಶ್, ಬಸವರಾಜು, ಸತೀಶ್, ಕೃಷ್ಣ, ಗೋಪಾಲ್ ರಾಜ್, ಹೇಮಂತ್, ವಾಸು, ಅಂಜನಪ್ಪ ಹಾಗೂ ಇತರರು ಇದ್ದರು.

ವಿಶ್ವಕರ್ಮರ ಬೇಡಿಕೆಗಳನ್ನು ಈಡೇರಿಸಲು ಪಾದಯಾತ್ರೆ

ರಾಮನಗರ: ವಿಶ್ವಕರ್ಮರಿಗೆ ಪರಿಶಿಷ್ಟ ಪಂಗಡದ ಮೀಸಲಾತಿ ಕಲ್ಪಿಸುವುದು ಸೇರಿದಂತೆ ಹಲವಾರು ಬೇಡಿಕೆ ಮುಂದಿಟ್ಟುಕೊಂಡು ಸೆಪ್ಟೆಂಬರ್ ತಿಂಗಳಲ್ಲಿ ಬೀದರ್ ನಿಂದ ಬೆಂಗಳೂರುವರೆಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯರು ಆದ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಕೆ.ಪಿ.ನಂಜುಂಡಿ ಹೇಳಿದರು.

ನಗರದಲ್ಲಿನಡೆದಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕೈದು ತಿಂಗಳು ರಾಜ್ಯದ ಪ್ರತಿ ಹೋಬಳಿ, ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ವಿಶ್ವಕರ್ಮರನ್ನು ಸಂಘಟಿಸಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯ ಕುರಿತು ಅರಿವು ಮೂಡಿಸಲಾಗುವುದು. ಅನಂತರ ಸೆಪ್ಟೆಂಬರ್ ತಿಂಗಳಲ್ಲಿ 40 ದಿನಗಳ ಕಾಲ 750 ಕಿ.ಮೀವರೆಗೆ ಪಾದಯಾತ್ರೆ ನಡೆಸಿ ರಾಜ್ಯ ಸರ್ಕಾರದ ಗಮನ ಸೆಳೆಯುತ್ತೇವೆ ಎಂದು ತಿಳಿಸಿದರು. ಆದ್ದರಿಂದ ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬುದು ಸಮಾಜದ ಒತ್ತಾಸೆಯಾಗಿದೆ ಎಂದರು.

ಆಯಾಯ ಸಮಾಜಗಳನ್ನು ವೃತ್ತಿ ಮೂಲಕ ಗುರುತಿಸಿ ಬಲಿಷ್ಠಗೊಳಿಸಿ ದೇಶದ ಸಂಸ್ಕೃತಿಗೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರಗಳು ಮಾಡುತ್ತಿಲ್ಲ. ಹೀಗಾಗಿ ರಾಜಕೀಯ ಪ್ರಜ್ಞೆ ಇಲ್ಲದ ಸಮಾಜಗಳು ದೇಶಕ್ಕೆ ಏನೇ ಕೊಡುಗೆ ನೀಡಿದ್ದರು ಸಹ ಅವುಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆಎಂದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಸಮಾಜದ ರಾಜ್ಯ ಉಪಾಧ್ಯಕ್ಷ ಬಸವರಾಜು, ಕುಮಾರ್, ಜನಾರ್ಧನ್, ಲಿಂಗರಾಜು, ಸಿದ್ದರಾಜು, ರಾಮಾಚಾರಿ, ಲೋಕೇಶ್ , ಕುಮಾರ್ , ರಾಜೇಶ್ ಉಪಸ್ಥಿತರಿದ್ದರು.



ದನಗಳ ಜಾತ್ರೆ ಪ್ರಯುಕ್ತ ರೈತರಿಗೆ 3 ದಿನ ಸತತ ಅನ್ನದಾಸೋಹ

ಮಾಗಡಿ: ಶ್ರೀ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವದ ಅಂಗವಾಗಿ ಯುಗಾದಿ ಹಬ್ಬದಿಂದ ಆರಂಭವಾಗುವ ದನಗಳ ಜಾತ್ರೆಗೆ ಮೂರು ದಿನಗಳ ಕಾಲ ರೈತರಿಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಶಿವಪ್ರಸಾದ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದರು. ಮಾಗಡಿ ದನಗಳ ಜಾತ್ರೆ ಸಾಕಷ್ಟು ಪ್ರಸಿದ್ಧಿ ಪಡೆದಿದ್ದು ಬೆಂಗಳೂರು ದಕ್ಷಿಣ ಜಿಲ್ಲೆ ಸೇರಿದಂತೆ ಬೇರೆ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಇಲ್ಲಿಗೆ ರಾಶಿಗಳನ್ನು ಕೊಳ್ಳಲು ಆಗಮಿಸುತ್ತಾರೆ ಈ ಹಿನ್ನೆಲೆಯಲ್ಲಿ ಶಾಸಕ ಬಾಲಕೃಷ್ಣ ಬಮೂಲ್ ನಿರ್ದೇಶಕ ಎಚ್. ಎನ್.ಅಶೋಕ್ ಮಾರ್ಗದರ್ಶನದಲ್ಲಿ ಮಾ.21 ರಿಂದ 23 ರ ವರೆಗೆ ಪಟ್ಟಣದ ಹೊಸಪೇಟೆ ರಾಮನಗರ ಮುಖ್ಯ ರಸ್ತೆಯ(ಕ್ಷೀರ ಭವನ) ಬಮೂಲ್ ಶಿಬಿರ ಕಚೇರಿ ಮುಂಭಾಗದಲ್ಲಿ ಮಧ್ಯಾಹ್ನ 12 ಗಂಟೆಗೆ ಬರುವಂತಹ ರೈತರಿಗೆ ಉಚಿತವಾಗಿ ಅನ್ನದಾಸೋಹ ಏರ್ಪಡಿಸಲಾಗಿದ್ದು ಟಿಎಪಿಸಿಎಂಎಸ್ ಎಲ್ಲಾ ಆಡಳಿತ ಮಂಡಳಿ ರೈತರಿಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಲು ಒಪ್ಪಿಗೆ ನೀಡಿದ್ದು ರೈತರಿಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡುತ್ತಿರುವುದರಿಂದ ರೈತರು ಇದರ ಸದುಪಯೋಗವನ್ನು ಪಡಿಸಿಕೊಳ್ಳಬೇಕು.

ರೈತರಿಗಾಗಿ ದೊಡ್ಡಮಟ್ಟದ ದಾಸ್ತಾನು ಮಳಿಗೆ ಶೀಘ್ರದಲ್ಲೇ ಲೋಕಾರ್ಪಣೆ ಯಾಗಲಿದ್ದು ರೈತರು ಬೆಳೆದ ಬೆಳೆಯನ್ನು ಇಲ್ಲಿ ಸಂರಕ್ಷಿಸಿಕೊಳ್ಳಬಹುದು ಜೊತೆಗೆ ರೈತರಿಗೆ ನೀಡುವ ರಸಗೊಬ್ಬರ ದಾಸ್ತಾನು ಮಾಡಿ ಮುಂಗಾರಿನಲ್ಲಿ ರೈತರಿಗೆ ರಸಗೊಬ್ಬರ ತೊಂದರೆಯಾಗದಂತೆ ಟಿಎಪಿಸಿಎಂಎಸ್ ವತಿಯಿಂದ ಗೊಬ್ಬರ ಸಂಗ್ರಹಣೆ ಮಾಡಲಾಗುತ್ತದೆ ಯುಗಾದಿ ಹಬ್ಬದ ಇಂದ ಆರಂಭವಾಗುವ ದನಗಳ ಜಾತ್ರೆ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿದರು. ಇದೇ ವೇಳೆ ಟಿಎಪಿಸಿಎಂಎಸ್‌ನ ನಿರ್ದೇಶಕರು ಹಾಗೂ ಇತರರು ಭಾಗವಹಿಸಿದ್ದರು.



ರೈತ ಸಮಾಜಕ್ಕೆ ಫ್ಲಿಪ್‌ಕಾರ್ಟ್‌ನಿಂದ ಅನ್ಯಾಯ

ಹಾರೋಹಳ್ಳಿ: ಫ್ಲಿಪ್‌ಕಾರ್ಟ್ ಸಂಸ್ಥೆ ಒಂದು ರೂಪಾಯಿಗೆ ಒಂದು ಲೀಟರ್ ಹಾಲು ಮಾರಾಟ ಮಾಡಲು ಮುಂದಾಗಿರುವುದರಿಂದ ರೈತರ ಮೇಲೆ ನೇರ ಪರಿಣಾಮ ಬೀರುವುದು ಎಂದು ಬಮುಲ್ ನಿರ್ದೇಶಕ ಹರೀಶ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. ಹಾರೋಹಳ್ಳಿ ಪಟ್ಟಣದ ಆದಿಶಕ್ತಿಯ ದೇವಸ್ಥಾನದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ರೈತರ ಸಭೆಯಲ್ಲಿ ಮಾತನಾಡಿ ಕ್ಷೀರ ಮಾರುಕಟ್ಟೆ ಕೈವಶ ಮಾಡಿಕೊಂಡು ಹಣ ಮಾಡುವ ದುರುದ್ದೇಶದಿಂದ ಫ್ಲಿಪ್‌ಕಾರ್ಟ್ ಸಂಸ್ಥೆ ದೇಶದ ರೈತಸಮುದಾಯವನ್ನೇ ಹಾಳು ಮಾಡುವ ಕೃತ್ಯಕ್ಕೆ ಕೈಹಾಕಿದೆ. ಹಾಲು ಒಕ್ಕೂಟಗಳನ್ನು ನಾಶ ಮಾಡುವ ಪ್ರಕ್ರಿಯೆ ಇದಾಗಿದ್ದು, ರೈತರ ಹಿತವನ್ನು ಹಾಳು ಮಾಡುವ ಕೆಲಸವನ್ನು ಈ ಬಹುರಾಷ್ಟ್ರೀಯ ಕಂಪನಿ ಮಾಡುತ್ತಿದೆ. ರೈತರಿಗೆ ನಾವು ಪ್ರತಿ ಲೀಟರ್ ಹಾಲಿಗೆ 38 ರೂ.ನಿಂದ 40 ರೂ. ವರೆಗೆ ಪಾವತಿಸುತ್ತಿದ್ದೇವೆ. ಫ್ಲಿಪ್‌ಕಾಟ್ ್ನವರು 1 ರೂಪಾಯಿಗೆ ಒಂದು ಲೀಟರ್ ಹಾಲು ಮಾರಾಟ ಮಾಡಲು ಹೇಗೆ ಸಾಧ್ಯ? ಎಲ್ಲಿಂದ ಹಾಲು ಬರುತ್ತಿದೆ? ಯಾರಿಂದ ಖರೀದಿ ಮಾಡುತ್ತಿದ್ದಾರೆ.



ಇದು ಹೇಗೆ ಸಾಧ್ಯವಾಗಿದೆ. ಇದರ ನೇರ ಪರಿಣಾಮ ರೈತರ ಮೇಲೆ ಬೀಳುತ್ತದೆ. ರೈತ ಸಮುದಾಯದ ಬದುಕನ್ನು ಕಸಿದುಕೊಳ್ಳುವ ಈ ಪ್ರಯತ್ನದಿಂದ ಫ್ಲಿಪ್‌ಕಾರ್ಟ್ ಕೂಡಲೇ ಹಿಂದೆ ಸರಿಯಬೇಕು .ಕಳಪೆ ಹಾಲನ್ನು ಫ್ಲಿಪ್ಕಾರ್ಟ್ ಅವರು ನೀಡುತ್ತಾರೆ. ಅದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಫ್ಲಿಪ್ಕಾರ್ಟ್ ಅವರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆ.

ದೇಶಾದ್ಯಂತ ಅಭಿಯಾನ ಆಗಬೇಕು ಫ್ಲಿಪ್ಕಾರ್ಟ್ ಅನ್ನು ಮೊದ್ಲು ಮೊಬೈಲ್ ನಿಂದ ಅಳಿಸಿ ಹಾಕಬೇಕು. ಡಿಕೆ ಸುರೇಶ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ನಮಗೆ ಖುಷಿ ತಂದಿದೆ.ರೈತ ಪರ ಚಿಂತನೆಗಳನ್ನು ಹೊಂದಿರುವ ನಾಯಕ ಒಕ್ಕೂಟವನ್ನು ಬೆಳೆಸಲು ಹಲವು ರೀತಿಯ ಚಿಂತನೆಗಳನ್ನು ಡಿಕೆ ಸುರೇಶ ಹೊಂದಿದ್ದಾರೆ.ಈ ಹಿಂದೆ 24 ಕೋಟಿ ನಷ್ಟ ಹೊಂದಿದ್ದೆವು ಇದೀಗ 60ಕೋಟಿ ಲಾಭ ಹೊಂದಿದ್ದೇವೆ. ರೈತರಿಗೆ 1ಲೀ. 1ರೂ ಬೋನಸ್ ನೀಡಲಾಗುವುದು. ರೈತರು ಬೋನಸ್ ಹಣದಿಂದ ಹಸುಗಳನ್ನು ಕೊಂಡುಕೊಳ್ಳಬೇಕು. ಹಸುಗಳನ್ನು ಮಾರಾಟ ಮಾಡಬೇಡಿ.

ವೈದ್ಯರ ಸಲಹೆಯಂತೆ ಹೈನುಗಾರಿಕೆ ನಡೆಸಬೇಕು. ಮುಂದೆ ಹಾಲಿಗೆ ಬೇಡಿಕೆ ಹೆಚ್ಚಾಗಲಿದೆ ಇದನ್ನು ಅರಿತುಕೊಳ್ಳಬೇಕು.

ಬಮುಲ್ ಪ್ರಧಾನ ವ್ಯವಸ್ಥಾಪಕ ಶ್ರೀಧರ್, ರಾಕೇಶ್ ಅಂಗಡಿ, ಕುಮಾರ್, ನಿತ್ಯ, ಪ್ರವೀಣ್ ಕುಮಾರ್ ತಾಲೂಕಿನ ಹಾಲು ಉತ್ಪಾದಕ ಸಹಕಾರ ಸಂಘಗಳ ಅಧ್ಯಕ್ಷರು, ಕಾರ್ಯ ನಿರ್ವಹಣಾಧಿಕಾರಿಗಳು ಹಾಜರಿದ್ದರು.

ಬಿಡದಿ ವಿವಿಧೋದ್ದೇಶ ಕೃಷಿ ಸಂಘಕ್ಕೆ ಏ.12ಕ್ಕೆ ಚುನಾವಣೆ

ರಾಮನಗರ: ಬಿಡದಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿ ಸದಸ್ಯರ ಚುನಾವಣೆಯು ಏ.12ರಂದು ನಡೆಯಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಬಿ.ಕೆ.ಮಂಜುನಾಥ್ ತಿಳಿಸಿದ್ದಾರೆ. ಬಿಡದಿಯ ಛತ್ರದ ಬಾನಂದೂರು ರಸ್ತೆಯಲ್ಲಿರುವ ಬಿಜಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಸಂಘದ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ನಿರ್ದೇಶಕರುಗಳ ಚುನಾವಣೆ ನಡೆಯಲಿದೆ. ಬಿಡದಿ ಸಂಘದ ಕಚೇರಿಯಲ್ಲಿ ಏ.1ರ ಬುಧವಾರದಿಂದ ನಾಮಪತ್ರ ಸ್ವೀಕಾರ ಆರಂಭವಾಗಲಿದ್ದು ಬೆಳಿಗ್ಗೆ 10 ಗಂಟೆಯಿಂದ 3 ಗಂಟೆಯೊಳಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರು ಉಮೇದುವಾರಿಕೆ ಸಲ್ಲಿಸಬಹುದು. ಏ.4ರಂದು ನಾಮಪತ್ರ ಸಲ್ಲಿಸಲು ಕೊನೆ ದಿನಾಂಕವಾಗಿರುತ್ತದೆ. ಏ.5ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರಗಳನ್ನು ಹಿಂಪಡೆಯಲು ಏ.6ರಂದು ಮಧ್ಯಾಹ್ನ 3 ಗಂಟೆಯವರೆಗೆ ಅವಕಾಶವಿರುತ್ತದೆ. ನಂತರ ಸಂಘದ ಸೂಚನಾ ಫಲಕದಲ್ಲಿ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದು. ಬಳಿಕ ಅಭ್ಯರ್ಥಿಗಳಿಗೆ ಗುರುತಿನ ಚಿನ್ಹೆ ಹಂಚಿಕೆ ಮಾಡಲಾಗುವುದು. ಏ.12ರಂದು ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಚುನಾವಣೆಯ ಮತದಾನ ನಡೆಯಲಿದೆ. ಸಂಘದ ಆಡಳಿತ ಮಂಡಳಿಗೆ ಸಾಲಗಾರರಲ್ಲದ ಕೇತ್ರ ಸಾಮಾನ್ಯ ಸ್ಥಾನ-1, ಸಾಲಗಾರರ ಕ್ಷೇತ್ರದಿಂದ 11 ಸ್ಥಾನಗಳಿದ್ದು ಅದರಲ್ಲಿ 5 ಸಾಮಾನ್ಯ, ಹಿಂದುಳಿದ ಪ್ರವರ್ಗ(ಎ) ಮೀಸಲು-1, ಹಿಂದುಳಿದ ಪ್ರವರ್ಗ(ಬಿ) ಮೀಸಲು-1, ಪರಿಶಿಷ್ಟಜಾತಿ ಮೀಸಲು-1, ಪರಿಶಿಷ್ಟ ಪಂಗಡ ಮೀಸಲು-1, ಹಾಗೂ ಮಹಿಳಾ ಮೀಸಲು ಸ್ಥಾನಗಳು ಸೇರಿದಂತೆ ಒಟ್ಟು 12 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸಿಲಿನಿಂದ ಕಂಗಾಲಾದ ಜನಕ್ಕೆ ಮಳೆಯಿಂದ ಸಂತಸ

ಗುಡುಗುಸಹಿತ ಆಲಿಕಲ್ಲು ಮಳೆ

ರಾಮನಗರ: ತಾಲೂಕಿನ ಬಿಡದಿ ಭಾಗದಲ್ಲಿ ಗುಡುಗು ಮಿಂಚುಸಹಿತ ಆಲಿಕಲ್ಲು ಮಳೆ ಸುರಿದಿದ್ದು, ಬಿಸಿಲ ಬೇಗೆಯಿಂದ ತತ್ತರಿಸಿದ್ದ ಜನರಿಗೆ ತಂಪಾದ ವಾತಾವರಣ ತಂದು ಉಲ್ಲಾಸ ಮೂಡಿಸಿದೆ. ಒಂದೇ ಸಮನೆ ಸುರಿದ ಮಳೆಯಿಂದ ಜನರಲ್ಲಿ ಸಂತಸ ಮನೆ ಮಾಡಿತು. ಏಕಾಏಕಿ ಸುರಿದ ಭಾರಿ ಮಳೆಯಿಂದ ಬಿಡದಿ ಪಟ್ಟಣದ ರಸ್ತೆಗಳು ಜಲಾವೃತವಾದವು, ಚರಂಡಿಗಳು ತುಂಬಿದ ಪರಿಣಾಮ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿದು ತಗ್ಗು ಪ್ರದೇಶದ ಕಡೆಗೆ ರಭಸವಾಗಿ ನುಗ್ಗಿತು.

ದಿನವಿಡೀ ಮೋಡ ಕವಿದ ವಾತಾವರಣ ಉಂಟಾಗಿತ್ತು, ನಂತರ ತುಸುಗಾಳಿಯೂ ಶುರುವಾಗಿ ಗುಡುಗು ಮಿಂಚು ಸದ್ದು ಮಾಡಿತು. ಸಮಾರು 1 ಗಂಟೆಗೂ ಹೆಚ್ಚು ಕಾಲ ಜೋರು ಮಳೆ ಜತೆಗೆ ಅಲಿಕಲ್ಲು ಸಹ ಸುರಿಯಿತು. ಈ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿತ್ತು.

ತುರ್ತು ಕೆಲಸದಲ್ಲಿ ತೊಡಗಿದ್ದ ಕೆಲವು ನಾಗರಿಕರು ಮಳೆಯಲ್ಲೆ ಕಾಲ್ನಡಿಗೆಯಲ್ಲಿ ಕೆಲವರು ದ್ವಿಚಕ್ರ ವಾಹನಗಳಲ್ಲಿ ತೆರಳುತ್ತಿದ್ದುದು ಕಂಡುಬಂತು.

ಮಾವು ಬೆಳೆಗೆ ಹಾನಿ: ಮಂಗಳವಾರ ಸುರಿದ ಅಲಿಕಲ್ಲು ಮಳೆ ಹಾಗೂ ಗಾಳಿಯ ರಭಸಕ್ಕೆ ಕೆಲವೆಡೆ ಪಾಲ್‌ಹೌಸ್ ಗಳು ಹಾಗೂ ಮಾವು ಬೆಳೆಗೆ ತೀವ್ರ ಹಾನಿಯಾಗಿದೆ. ಅಲ್ಲದೆ ಕೆಲವು ಕಡೆ ಬೆಳೆದು ನಿಂತಿದ್ದ ಬಾಳೆ ಬೆಳೆ ನೆಲಕ್ಕುರುಳಿದೆ. ಗಾಳಿ ಮಳೆಗೆ ಮಾವು ಬೆಳೆ ಉದುರಿದ್ದು ರೈತರಿಗೆ ಭಾರಿ ನಷ್ಟ ಉಂಟಾಗಿದೆ ಎಂದು ಹೇಳಲಾಗುತ್ತಿದೆ.



ರಸ್ತೆ ಸಂಚಾರ ಸ್ಥಗಿತ: ಸಂಜೆ ವೇಳೆಗೆ ಭಾರಿ ಮಳೆ ಸುರಿದ ಪರಿಣಾಮ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ತೊಡಕಾಗಿತ್ತು. ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಂಡರ್‌ಪಾಸ್‌ಗಳ ಕೆಳಭಾಗದಲ್ಲಿ ದ್ವಿಚಕ್ರ ವಾಹನಗಳ ಸವಾರರು ಆಶ್ರಯ ಪಡೆದುಕೊಂಡರು. ಜೋರು ಮಳೆ ಕಡಿಮೆಯಾಗದೆಂದು ಅರಿತ ಕೆಲವರು ಮಳೆಯಲ್ಲೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಮಳೆ ಸ್ವಲ್ಪ ಕಡಿಮೆಯಾದಂತೆ ಅಲ್ಲಲ್ಲಿ ನಿಲ್ಲಿಸಿದ್ದ ವಾಹನಗಳು ರಸ್ತೆಗಿಳಿಯುತ್ತಿದ್ದುದು ಕಂಡುಬಂತು.

ಖೋಖೋ: ಪ್ರಥಮ ಸ್ಥಾನ



ಗುಬ್ಬಿ: ತುಮಕೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಮಹಿಳೆಯರ ಖೋ- ಖೋ ಪಂದ್ಯಾವಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ತುಮಕೂರು ನಡೆಸಿದ್ದ ಪಂದ್ಯಾವಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)ಗುಬ್ಬಿ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಪ್ರಥಮ ಬಿಎ ವಿದ್ಯಾರ್ಥಿನಿ ಎನ್.ಡಿ.ನಾಗರತ್ನರವರಿಗೆ ಉತ್ತಮ ಆಟಗಾರ್ತಿ ಎಂದು ಪ್ರಶಸ್ತಿಯನ್ನು ತುಮಕೂರು ವಿವಿ ನೀಡಿರುತ್ತದೆ. ಈ ಆಟಗಾರ್ತಿ ಹಾಗೂ ತಂಡಕ್ಕೆ ಕಾಲೇಜು ಪ್ರಾಂಶುಪಾಲರಾದ ಡಾ.ಪ್ರಸನ್ನ ಹಾಗೂ ಶಿಕ್ಷಣ ನಿರ್ದೇಶಕ ಮಲ್ಲಿಕಾರ್ಜುನ ಪ್ರಭು, ಉಪನ್ಯಾಸಕರು, ಸಿಬ್ಬಂದಿ ಶುಭ ಹಾರೈಸಿದರು.

ಕೆಸಿಸಿ ಬೆಳೆಸಾಲ ವಿತರಿಸಲು ರಿಯಾಯಿತಿ ಬಡ್ಡಿ ದರ ನೀಡಲಿ

ಕೃಷಿ ಸಂಘಕ್ಕೆ ಸಿಎಸ್‌ಆರ್ ಅನುದಾನ ನೀಡಿ

ರಾಮನಗರ: ರೈತರಿಗೆ ಕೆಸಿಸಿ ಬೆಳೆ ಸಾಲ ವಿತರಿಸಲು ರಿಯಾಯಿತಿ ಬಡ್ಡಿ ದರದಲ್ಲಿ ಸಾಲಸೌಲಭ್ಯ ವಿತರಿಸುವ ಪ್ರಕ್ರಿಯೆ ಮುಂದುವರಿಸುವುದು ಹಾಗೂ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಿಎಸ್‌ಆರ್ ಅನುದಾನದ ವ್ಯಾಪ್ತಿಗೆ ತರಬೇಕು. ಈ ಬಗ್ಗೆ ಕೇಂದ್ರ ಸರ್ಕಾರದ ಗಮನವನ್ನು ರಾಜ್ಯಸರ್ಕಾರ ಸೆಳೆಯಬೇಕಿದೆ ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು ಹೇಳಿದರು.

ತಾಲೂಕಿನ ಯರೇಹಳ್ಳಿ ಪಿಎಸಿಎಂಎಸ್ ನೂತನ ಅಧ್ಯಕ್ಷ ಸಂತೋಷ್ ಕುಮಾರ್(ತೇಜು) ಮತ್ತು ಉಪಾಧ್ಯಕ್ಷ ಮಾಯಣ್ಣ ಅವರನ್ನು ಅಭಿನಂದಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಎರಡು ಗಂಭೀರ ವಿಚಾರಗಳ ಕುರಿತು ಅಧಿವೇಶನದಲ್ಲಿ ಚರ್ಚಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಶಾಸಕರಾದ ಬಾಲಕೃಷ್ಣ, ಇಕ್ಬಾಲ್ ಹುಸೇನ್, ಸಿ.ಪಿ.ಯೋಗೇಶ್ವರ್ ಅವರನ್ನು ಭೇಟಿಯಾಗಿ ಶೀಘ್ರದಲ್ಲಿಯೇ ಮನವಿ ಸಲ್ಲಿಸಲಾಗುವುದು ಎಂದರು. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗದ ಕಾರಣ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಶೂನ್ಯ ಬಡ್ಡಿ ದರದಲ್ಲಿ ಕೆಸಿಸಿ ಬೆಳೆ ಸಾಲ ವಿತರಣೆ ಮಾಡಲಾಗುತ್ತಿತ್ತು. ಇದು ಎಲ್ಲ ರಾಜ್ಯಗಳಲ್ಲಿಯೂ ಸುಗಮವಾಗಿ ಸಾಗುತ್ತಿತ್ತು. ಆದರೀಗ ಅಮಿತ್ ಶಾ ಕೇಂದ್ರ ಸಹಕಾರ ಖಾತೆಯ ಸಚಿವರಾದ ಮೇಲೆ ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತಿದ್ದ ಎಲ್ಲ ಸಾಲ ಸೌಲಭ್ಯಗಳನ್ನು ಸ್ಥಗಿತಗೊಳಿಸಲು ಮುಂದಾಗಿದ್ದಾರೆ ಎಂದರು.

ಈಗ ಕೇಂದ್ರ ಸರ್ಕಾರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ನೀಡುವುದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ. ಇನ್ನು ಕೇಂದ್ರದ ಸ್ವಾಮ್ಯಕ್ಕೆ ಒಳಪಟ್ಟಿರುವ ನಬಾರ್ಡ್ ಬಡ್ಡಿ ದರದಲ್ಲಿ ಸಾಲ ಕೊಡಲು ಸಿದ್ಧವಿದೆ. ನಬಾರ್ಡ್ ನಿಂದ ಬಡ್ಡಿಗೆ ಸಾಲ ಪಡೆದು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಕೊಡಲು ಸಾಧ್ಯವಾಗುವುದಿಲ್ಲ. ಇದರಿಂದ ಡಿಸಿಸಿ ಬ್ಯಾಂಕ್ ಗಳು ಅಭಿವೃದ್ಧಿ ಕಾಣಲಾಗದೆ ಅವನತಿಯತ್ತ ಸಾಗುತ್ತವೆ ಎಂದು ತಿಳಿಸಿದರು. ಬಿಡಿಸಿಸಿ ಬ್ಯಾಂಕ್‌ನಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳ ರೈತರಿಗೆ 800 -850 ಕೋಟಿ ರು.ಗೂ ಹೆಚ್ಚಿನ ಮೊತ್ತದ ಕೆಸಿಸಿ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಆದರೆ, ಕೇಂದ್ರ ಸರ್ಕಾರದ ಹೊಸ ನೀತಿಯಿಂದ ರೈತರಿಗೆ ಕೆಸಿಸಿ ಬೆಳೆ ಸಾಲ ವಿತರಣೆ ಪ್ರಕ್ರಿಯೆಯೇ ಸ್ಥಗಿತಗೊಳ್ಳುತ್ತದೆ ಎಂದರು.

ಕೇಂದ್ರಸರ್ಕಾರಕ್ಕೆ ರೈತರ ಮೇಲೆ ಕಾಳಜಿ ಇದ್ದರೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ವಿತರಣೆ ಹಾಗೂ ಸಿಎಸ್ ಆರ್ ಅನುದಾನದ ವ್ಯಾಪ್ತಿಗೆ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ತರಬೇಕು ಎಂದರು. ಸಂಘದ ನಿರ್ದೇಶಕರಾದ ಯೋಗರಾಜ್, ಜಯಪಾಲ್, ಮಂಗಮ್ಮ, ಕವಿತಾ ಆನಂದ್, ಕೃಷ್ಣಯ್ಯ, ಲೋಕೇಶ್, ಬಿಳಿಯಪ್ಪ, ಪ್ರಶಾಂತ್, ರತ್ನಮ್ಮ, ಟಿಎಪಿಸಿಎಂಎಸ್ ನಿರ್ದೇಶಕ ಮಹದೇವಯ್ಯ, ಯರೇಹಳ್ಳಿ ಟಿಎಪಿಸಿಎಂಎಸ್ ಸಿಇಒ ದಿನೇಶ್, ಮುಖಂಡರಾದ ರವಿ, ಕೃಷ್ಣ, ಹಾಪ್‌ಕಾಮ್ಸ್ ಪುಟ್ಟಸ್ವಾಮಿ, ಅಶೋಕ್ ಹಾಗೂ ಇತರರು ಇದ್ದರು.

ಕಿರುಸುದ್ದಿ

ಮೆಡಿಕಲ್ ಸ್ಟೋರ್ ನವೀಕರಣಕ್ಕೆ ಲಂಚ: ಲೋಕಾ ಬಲೆಗೆ



• **ಕೋಲಾರ:** ಸಹಾಯಕ ಡ್ರಗ್ಸ್ ಕಂಟ್ರೋಲರ್ ಲೋಕಾ ಬಲೆಗೆ ಬಿದ್ದ ಪ್ರಕರಣ ವರದಿಯಾಗಿದ್ದು, ಲೋಕಾಯುಕ್ತ ಅಧಿಕಾರಿಗಳನ್ನು ಕಂಡು ಹಣ ಬಿಸಾಡಿ ಪರಾರಿಯಾಗಿದ್ದ ಎಡಿಸಿ ಶ್ಯಾಮಲಾ ಹಾಗೂ ಇಬ್ಬರು ಸಹಾಯಕರು ಈಗ ಲೋಕಾಯುಕ್ತ ಪೊಲೀಸರ ವಶದಲ್ಲಿದ್ದಾರೆ. ಮೆಡಿಕಲ್ ಸ್ಟೋರ್ ಲೈಸೆನ್ಸ್ ನವೀಕರಣಕ್ಕೆ 35,000 ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಲಂಚ ಸ್ವೀಕಾರ ಮಾಡಿ ಲೋಕಾ ಅಧಿಕಾರಿಗಳ ಕಂಡು ಪರಾರಿಯಾಗಿದ್ದ ಅಧಿಕಾರಿ, ಮಾರ್ಗಮಧ್ಯದಲ್ಲಿ ಲಂಚದ ಹಣವನ್ನು ಬಿಸಾಡಿ ಬಂದಿರುವ ಚಾಲಾಕಿ ಅಧಿಕಾರಿ ಕೊನೆಗೂ ಬಂಧಿತರಾದರು.

ತಡರಾತ್ರಿವರಗೂ ಹಣಕ್ಕಾಗಿ ಹುಡುಕಾಡಿದ ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿ, ಹಣ ಸಿಗದ ಹಿನ್ನೆಲೆ ಹಣ ಸ್ವೀಕರಿಸಿರುವ ವಿಡಿಯೋ ಪಡೆದು ಪ್ರಕರಣ ದಾಖಲಿಸಿಕೊಂಡು ತನಿಖೆ, ನಡೆಸಿದ್ದು, ಅಧಿಕಾರಿ ಶ್ಯಾಮಲಾ, ನಿವೃತ್ತ ಡಿಗ್ರೂಪ್ ನೌಕರ ಶ್ರೀನಿವಾಸ್, ಹಾಗೂ ಡ್ರೈವರ್ ಮಹಂತೇಶ್ ಸದ್ಯ ಲೋಕಾಯುಕ್ತ ಪೊಲೀಸರ ವಶದಲ್ಲಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ವೆಂಕಟೇಶ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ನಡೆದಿದ್ದು, ದಲಿತ ಮುಖಂಡ ಹೂಹಳ್ಳಿ ಪ್ರಕಾಶ್ ಹಾಗೂ ಕೃಷ್ಣಯ್ಯ ದೂರು ನೀಡಿದ್ದರು.

ಡಿವಿಜಿ ಕಾವ್ಯವನ್ನು ವಿಶ್ವವಿದ್ಯಾಲಯದ ಪಠ್ಯವನ್ನಾಗಿಸಲಿ

• **ಕೋಲಾರ:** ಮಂಕುತಿಮ್ಮನ ಕಗ್ಗವನ್ನು ಕನ್ನಡದ ಭಗವದ್ಗೀತೆ ಎಂದೂ ಕರೆಯಲಾಗುತ್ತದೆ, ಇಂತಹ ಸಾಹಿತ್ಯವನ್ನು ಕನ್ನಡಕ್ಕೆ ನೀಡಿದ ಡಿವಿಜಿಯವರ ಕಾವ್ಯವನ್ನು ವಿಶ್ವವಿದ್ಯಾಲಯದ ಪಠ್ಯವನ್ನಾಗಿಸಿ ಎಂದು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ ನಾರಾಯಣಪ್ಪ ಕೋರಿದರು. ನಗರದಲ್ಲಿ ಇಂದು ಸರ್ವಜ್ಞ ಪಾರ್ಕ್‌ನಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನಿಂದ ಹಮ್ಮಿಕೊಂಡಿದ್ದ ಡಿವಿಜಿ ಯವರ ಜನ್ಮದಿನಾಚರಣೆಯಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ನಿವೃತ್ತ ಎಎಸ್‌ಐ ರವೀಂದ್ರನಾಥ್ ಮಾತನಾಡಿ, ಆಧುನಿಕತೆಯ ಅಕ್ಷರದ ಅರಿವು ನಮ್ಮ ಅಂಗೈಯಲ್ಲಿ – ಎನ್ನುವ ಧಿಮಾಕು ಎದ್ದುಕಾಣುತ್ತಿದೆ. ಅಂಗೈ ಗಾತ್ರದ ಕಗ್ಗ ನಮ್ಮ ವ್ಯಕ್ತಿತ್ವದ ಪ್ರತಿಬಿಂಬವಾಗಿ ನಿಂತು, ವಿವೇಕದ ದರ್ಶನವನ್ನು ಒದಗಿಸುವ ದರ್ಪಣವಾಗಿದೆ. ಎಂದರೆ ಇಂದಿನ ನಮ್ಮ ಮತಿಯ ಮಿತಿಯನ್ನೂ ಗತಿಯ ಸ್ಥಿತಿಯನ್ನೂ ಕನ್ನಡಿಯಂತೆ ಕಾಣಿಸಬಲ್ಲ ಮಹಾಕೃತಿಯೇ ಮಂಕುತಿಮ್ಮನ ಕಗ್ಗ ಎಂದರು. ಜಿಲ್ಲಾ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಸಂಘದ ಅಧ್ಯಕ್ಷ ಜಿ.ಶ್ರೀನಿವಾಸ ಮಾತನಾಡಿ, ಮಂಕುತಿಮ್ಮನ ಕಗ್ಗ ಕೃತಿ ಜ್ಞಾನಪೀಠ ಪ್ರಶಸ್ತಿಗೆ ಅರ್ಹವಾದರೂ ಇದುವರೆಗೂ ಪ್ರಶಸ್ತಿ ದೊರಕದಿರುವುದು ಕನ್ನಡಿಗರ ದೌರ್ಭಾಗ್ಯ ಎಂದರು. ಕವಿ ಡಾ. ಶರಣಪ್ಪ ಗಬ್ಬೂರು, ಸ್ವರ್ಣಭೂಮಿ ಫೌಂಡೇಶನ್ ಅಧ್ಯಕ್ಷ ಬಿ. ಶಿವಕುಮಾರ್, ಕವಿ ಒಂಗಾರಪೇಟೆಯ ಜಿ.ಟಿ.ರಾಮಚಂದ್ರಪ್ಪ, ಬೆಮೆಲ್ ಶ್ರೀನಿವಾಸ್, ಕಸಾಪ ಕಾರ್ಯದರ್ಶಿ ವೇಣು, ಕವಿ ಇಂಚರ ನಾರಾಯಣಸ್ವಾಮಿ, ಮುಂತಾದವರು ಉಪಸ್ಥಿತರಿದ್ದರು.

ರಾಹುಕೇತು ಶಾಂತಿ ಪೂಜೆ

• **ಕೋಲಾರ:** ನಗರದ ಅಮಾನಿ ಕೆರೆಕಟ್ಟೆ ಮೇಲಿರುವ ಶ್ರೀ ಮಹಾಗಣಪತಿ ಶ್ರೀ ಪರಶುರಾಮ ಶ್ರೀ ಗುರು ದಕ್ಷಣಾಮೂರ್ತಿ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ಮತ್ತು ಸಾಮೂಹಿಕ ಗುರು ಹೋಮ, ರುದ್ರ ಹೋಮ ಮತ್ತು ರಾಹು ಕೇತು ಶಾಂತಿ ಪೂಜೆ ನಡೆಯಿತು. ಶ್ರೀ ಗುರುದಕ್ಷಿಣಮೂರ್ತಿ ಅವರಿಗೆ ವಿಶೇಷವಾಗಿ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಮತ್ತು ಮಧ್ಯಾಹ್ನ 12 ಗಂಟೆ ಸರಿಯಾಗಿ ಮಹಾ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನಡೆಯಿತು.



ಸಾಮೂಹಿಕ ಹೋಮಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದರು. ಶ್ರೀ ಗುರುದಕ್ಷಣಾ ಮೂರ್ತಿ ಅನುಗ್ರಹ ಪಡೆದರು. ಎಲ್ಲಾ ಪೂಜಾ ಕೈಂಕರಗಳನ್ನು ಕೋಲಾರಮ್ಮ ದೇವಸ್ಥಾನ ಪ್ರಧಾನ ಅರ್ಚಕ ಸಿ ಸೋಮಶೇಖರ್ ದೀಕ್ಷಿತ್ ಅವರ ಮಗ ಕಾರ್ತಿಕ್ ದೀಕ್ಷಿತ್ ನೆರವೇರಿಸಿಕೊಟ್ಟರು.



ಕೋಲಾರದಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಚೇರಿಯಲ್ಲಿ ನಡೆದ ಪ್ರಶಿಕ್ಷಣ ಆಯೋಜನ ಬೈಠಕ್ ಯಶಸ್ವಿಯಾಗಿ ನೆರವೇರಿದ್ದು ಪ್ರಭಾರಿ ಬೋಜೇಗೌಡರನ್ನು ಸನ್ಮಾನಿಸಲಾಯಿತು.

ಪಕ್ಷದ ಸಿದ್ಧಾಂತಕ್ಕೆ ಬದ್ಧ: ಓಂಶಕ್ತಿ ಚಲಪತಿ

• **ಕೋಲಾರ:** ಕೋಲಾರದಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಚೇರಿಯಲ್ಲಿ ಇಂದು ನಡೆದ ಪ್ರಶಿಕ್ಷಣ ಆಯೋಜನ ಬೈಠಕ್ ಯಶಸ್ವಿಯಾಗಿ ನೆರವೇರಿದ್ದು, ಎಲ್ಲರೂ ಪಕ್ಷದ ಸಿದ್ಧಾಂತಕ್ಕೆ ಬದ್ಧರು ಎಂದು ಜಿಲ್ಲಾಧ್ಯಕ್ಷ ಓಂ ಶಕ್ತಿ ಚಲಪತಿ ತಿಳಿಸಿದರು. ಜಿಲ್ಲಾಧ್ಯಕ್ಷ, ಪಕ್ಷದ ಕಾರ್ಯಕರ್ತರ ಶ್ರಮ ಮತ್ತು ನಾಯಕರ ನಡವಳಿಕೆಯ ನಡುವಿನ ಸಂಬಂಧ ಅತ್ಯಂತ ಮಹತ್ವದ್ದಾಗಿದೆ. ಕಾರ್ಯಕರ್ತರು ಯಾವುದೇ ವ್ಯಕ್ತಿಗತ ನಾಯಕನಿಗಾಗಿ ಅಲ್ಲ, ಪಕ್ಷದ ಸಿದ್ಧಾಂತ ಮತ್ತು ನಿಷ್ಠೆಗೆ ಬದ್ಧರಾಗಿ ದುಡಿಯುತ್ತಾರೆ. ಭಾರತೀಯ ಜನತಾ ಪಾರ್ಟಿಯ ಬೆಳವಣಿಗೆ ಕಾರ್ಯಕರ್ತರ ಸಮರ್ಪಣೆಯ ಫಲವಾಗಿದ್ದು, ಕಾರ್ಯಕರ್ತರ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬ ನಾಯಕರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಪ್ರಭಾರಿ ಬೋಜೇಗೌಡ ಮಾತನಾಡಿ, ಸಾವಿರಾರು ಕಾರ್ಯಕರ್ತರ ಬಲಿದಾನ ದಿಂದಲೇ ನಾಯಕರು ರೂಪುಗೊಳ್ಳುತ್ತಾರೆ. ಯಾವುದೇ ನಾಯಕನಿಂದ ಕಾರ್ಯ ಕರ್ತರ ಋಣ ತೀರಿಸಲಾಗದು ಎಂದು ತಿಳಿಸಿದರು. ಮಾಜಿ ಸಂಸದ ಎಸ್. ಮುನಿಸ್ವಾಮಿ, ಪ್ರಶಿಕ್ಷಣ ಆಯೋಜನ ಬೈಠಕ್ ನಲ್ಲಿ ಮಾಜಿ ಶಾಸಕ ವೈ. ಸಂಪಂಗಿ, ಕೋಲಾರ ನಗರಾಧ್ಯಕ್ಷ ಸಾಮ್ ಅನಿಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಪ್ಪಿರಾಜು ಸೇರಿದಂತೆ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಕೋಲಾರದ ಸರ್ವಜ್ಞ ಪಾರ್ಕ್‌ನಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ನಿಂದ ಹಮ್ಮಿಕೊಂಡಿದ್ದ ಡಿವಿಜಿಯವರ ಜನ್ಮದಿನಾಚರಣೆಯಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಎಸ್ಸೆಸ್ಸೆಲ್ಸಿ ಮೊದಲ ದಿನ ಪರೀಕ್ಷೆ ಸುಗಮ | ಕೇಂದ್ರಗಳಿಗೆ ಡಿಸಿ, ಡಿಡಿಪಿಐ ಭೇಟಿ

ಪರೀಕ್ಷೆಗೆ ಶೇ.98 ಹಾಜರಿ

• **ಕೋಲಾರ:** ಜಿಲ್ಲೆಯ 65 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪ್ರಥಮ ಭಾಷೆ ಪರೀಕ್ಷೆ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಕೆಲವು ಕೇಂದ್ರಗಳಿಗೆ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ, ಶಾಲಾ ಶಿಕ್ಷಣ ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್, ಬಿಇಒ ಮಧುಮಾಲತಿ ಪಡುವಣೆ ಮತ್ತಿತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್ ಪರೀಕ್ಷೆ ಹಾಜರಾತಿ ಮಾಹಿತಿ ನೀಡಿ, ಮೊದಲ ದಿನ 202 ಮಂದಿ ಗೈರಾಗಿದ್ದು, ಜಿಲ್ಲೆಯಲ್ಲಿ ಯಾವುದೇ ಪರೀಕ್ಷಾ ಅವ್ಯವಹಾರ ನಡೆದಿಲ್ಲ, ಎಲ್ಲೂ ಗೊಂದಲಕ್ಕೆ ಅವಕಾಶ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಪರೀಕ್ಷೆಗೆ ಹೆಸರು ನೊಂದಾಯಿಸಿದ್ದ 19098 ವಿದ್ಯಾರ್ಥಿಗಳ ಪೈಕಿ 18896 ಮಂದಿ ಹಾಜರಾಗಿದ್ದು, 202 ಮಂದಿ ಮಂದಿ ಗೈರಾಗಿದ್ದರು.

ತಾಲೂಕುವಾರು ಹಾಜರಿ ವಿವರ:

ಬಂಗಾರಪೇಟೆ ತಾಲೂಕಿನ 8 ಕೇಂದ್ರಗಳಲ್ಲಿ ಪ್ರಥಮ ಭಾಷೆಗೆ 2547 ಮಂದಿ ನೊಂದಾಯಿಸಿದ್ದು, 2526 ಮಂದಿ ಹಾಜರಾಗಿ 21 ಮಂದಿ ಗೈರಾಗಿದ್ದಾರೆ, ಕೆಜಿಎಫ್ ತಾಲೂಕಿನ 9 ಕೇಂದ್ರಗಳಲ್ಲಿ 3316 ಮಕ್ಕಳು ಹೆಸರು ನೊಂದಾಯಿಸಿದ್ದು, 3280 ಮಂದಿ ಹಾಜರಾಗಿ 36 ಮಂದಿ ಗೈರಾಗಿದ್ದಾರೆ.

ಕೋಲಾರ ತಾಲೂಕಿನ 18 ಕೇಂದ್ರಗಳಲ್ಲಿ 4811 ಮಂದಿ ಹೆಸರು ನೊಂದಾಯಿಸಿದ್ದು, 4774 ಮಂದಿ ಹಾಜರಾಗಿ ಕೇವಲ 37 ಮಂದಿ ಗೈರಾಗಿದ್ದಾರೆ. ಮಾಲೂರು ತಾಲ್ಲೂಕಿನ 8 ಕೇಂದ್ರಗಳಲ್ಲಿ 3005 ಮಂದಿ ಹೆಸರು ನೊಂದಾಯಿಸಿದ್ದು, 2972 ಮಂದಿ ಹಾಜರಾಗಿದ್ದು, 33 ಮಂದಿ ಗೈರಾಗಿದ್ದಾರೆ. ಮುಳಬಾಗಿಲು ತಾಲೂಕಿನ 12 ಕೇಂದ್ರಗಳಲ್ಲಿ 2865 ಮಂದಿ ನೊಂದಾಯಿಸಿದ್ದು, 2811 ಮಂದಿ ಹಾಜರಾಗಿದ್ದು, 54 ಮಂದಿ ಗೈರಾಗಿದ್ದಾರೆ, ಶ್ರೀನಿವಾಸಪುರ ತಾಲೂಕಿನ 10 ಕೇಂದ್ರಗಳಲ್ಲಿ 2554 ಮಂದಿ ಹೆಸರು ನೊಂದಾಯಿಸಿದ್ದು, 2533 ಮಂದಿ ಹಾಜರಾಗಿದ್ದು, 21 ಮಂದಿ ಗೈರಾಗಿದ್ದಾರೆ.



ಮಕ್ಕಳಿಗೆ ಹೂ ನೀಡಿ ಡಿಡಿಪಿಐ ಸ್ವಾಗತ

ಬೆಳಗ್ಗೆ 9-40ರಿಂದಲೇ ಪರೀಕ್ಷಾ ಕೇಂದ್ರಗಳಿಗೆ ಪ್ರವೇಶ ನೀಡಲಾಗಿದ್ದು, ಕೋಲಾರ ನಗರದ ಅಲಮಿನ್ ಪ್ರೌಢಶಾಲೆ ಕೇಂದ್ರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಡಿಡಿಪಿಐ ಅಲ್ಮಾಸ್ ಫರ್ವೀನ್‌ತಾಜ್ ಅವರು ಮಕ್ಕಳಿಗೆ ಹೂ ನೀಡುವ ಮೂಲಕ ಸ್ವಾಗತಿಸಿ ಆತ್ಮಸ್ಥೈರ್ಯ ತುಂಬಿದರು.

ಮೊದಲ ದಿನದ ಪರೀಕ್ಷೆ ಬರೆಯುವ ಆತಂಕ ಮತ್ತು ಇಲಾಖೆ ಸಿಸಿ ಕ್ಯಾಮರಾ, ವೆಬ್ ಕಾಸ್ಟಿಂಗ್ ಮಾಡುತ್ತಿರುವ ಹಿನ್ನಲೆಯಲ್ಲಿ ಮಕ್ಕಳು ಭಯ ಕಾಡಿದ್ದರೂ ಮಕ್ಕಳು ಆತ್ಮಸ್ಥೈರ್ಯದಿಂದಲೇ ಕೇಂದ್ರದತ್ತ ಬಂದಿದ್ದು ಕಂಡು ಬಂತು.

ಜಿಲ್ಲಾ ಪರೀಕ್ಷಾ ನೋಡಲ್ ಅಧಿಕಾರಿ ಶಂಕರೇಗೌಡ, ಶಿಕ್ಷಣಾಧಿಕಾರಿ ವೀಣಾ, ಡಿವೈಪಿಸಿಗಳಾದರಾಜೇಶ್ವರಿ, ಕೋಲಾರತಾಲೂಕು ಬಿಇಒ ಮಧುಮಾಲತಿ ಪಡುವಣೆ, ವಿವಿಧ ತಾಲೂಕುಗಳ ಬಿಇಒಗಳಾದ ಮಧುಮಾಲತಿ ಪಡುವಣೆ, ಶಶಿಕಲಾ, ನಾರಾಯಣಸ್ವಾಮಿ, ಕೆಂಪಯ್ಯ, ರಾಮಚಂದ್ರ, ಮುನಿಲಕ್ಷ್ಮಯ್ಯ ವಿಷಯ ಪರಿವೀಕ್ಷಕರಾದ ಸಮೀವುಲ್ಲಾ, ಕ್ರಿಸ್ಟಿನಾಬಬಿತಾ, ತಾಲೂಕು ನೋಡಲ್ ಅಧಿಕಾರಿ ಇಸಿಒ ರಾಧಾ ಮತ್ತಿತರರು ಕೇಂದ್ರಗಳಿಗೆ ಭೇಟಿ ನೀಡಿದ್ದರು. ಧೈರ್ಯದಿಂದ ಪರೀಕ್ಷೆ ಎದುರಿಸುವ ಆತ್ಮಸ್ಥೈರ್ಯ ತಂದುಕೊಟ್ಟಿದೆ ಎಂದು ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್ ತಿಳಿಸಿದ್ದಾರೆ.

ಹಬ್ಬದ ಸಂಭ್ರಮಕ್ಕೆ ಬೆಲೆ ಏರಿಕೆ ಜತೆಗೆ ಗ್ಯಾಸ್ ಟ್ರಬಲ್

ದಿನಸಿ, ಹೊಸಬಟ್ಟೆ ಖರೀದಿಗೆ ಮಾರುಕಟ್ಟೆಯಲ್ಲಿ ಜನಸಾಗರ

• **ಕೋಲಾರ:** ಹಿಂದುಗಳ ಹೊಸ ವರ್ಷ, ಸಂವತ್ಸರ ಆರಂಭದ ಮೊದಲ ಹಬ್ಬ ಯುಗಾದಿ ಜತೆಗೆ ರಂಜಾನ್ ಜತೆಯಲ್ಲೇ ಬಂದಿದ್ದು, ಜನತೆಯಲ್ಲಿ ಎಲ್ಲೆಲ್ಲಿದ ಉತ್ಸಾಹ ಬೆಲೆ ಏರಿಕೆ ಇದ್ದರೂ ಲೆಕ್ಕಿಸದೇ ಬಟ್ಟೆ, ಹೂ ಹಣ್ಣು ಖರೀದಿಗೆ ಮುಗಿಬಿದ್ದ ಜನತೆ, ಅಡುಗೆ ಅನಿಲ ಸಮಸ್ಯೆಯ ನಡುವೆಯೂ ಹಬ್ಬದ ಮುನ್ನಾದಿನ ಬುಧವಾರ ಮಾರುಕಟ್ಟೆಯಲ್ಲಿ ಬೃಹತ್ ಜನಸಾಗರ ಕಂಡು ಬಂತು.

ಅದೃಷ್ಟವಷಾತ್ ಬಿಸಿಲಿನತಾಪಹೆಚ್ಚಿದ್ದರೂ ಆಗಾಗ್ಗೆ ಮೋಡ ಮುಸುಕಿ ತಂಪು ನೀಡುತ್ತಿದ್ದು, ನಗರದ ಬಜಾರ್‌ಗಳಲ್ಲಿ ಹಬ್ಬದ ಖರೀದಿಗೆ ಮುಗಿಬಿದ್ದಿದ್ದು, ನಗರದ ಯಾವುದೇ ರಸ್ತೆಗೆ ಹೋದರೂ ಟ್ರಾಫಿಕ್ ಜಾಮ್ ಸಮಸ್ಯೆ ಕಾಣುತ್ತಿತ್ತು.

ಜತೆಗೆ ಮಾವಿನ ಎಲೆ, ಹಣ್ಣು, ಹೂವು, ಎಲೆ ಅಡಿಕೆ, ತರಕಾರಿಗಳ ಅಂಗಡಿಗಳು ತುಂಬಿ ತುಳುಕುತ್ತಿದ್ದರೆ ದಿನಸಿ ಅಂಗಡಿಗಳಲ್ಲಿ ಬೆಲ್ಲ, ಬೇಳೆ ವ್ಯಾಪಾರವೂ ಜೋರಾಗಿಯೇ ನಡೆದಿದೆ. ಯುಗಾದಿಗೆ ಹೊಸ ಬಟ್ಟೆ ಹಾಕಲೇಬೇಕು ಎಂಬ ಸಂಪ್ರದಾಯದ ಹಿನ್ನಲೆಯಲ್ಲಿ ನಗರದ ದೊಡ್ಡಪೇಟೆ, ಎಂಜಿ ರಸ್ತೆ, ಕಾಳಮ್ಮ ಗುಡಿ ರಸ್ತೆಯ ಬಟ್ಟೆ ಅಂಗಡಿಗಳಲ್ಲಿ ಬಟ್ಟೆ ಖರೀದಿಗೆ ಜನ ಮುಗಿಬಿದ್ದಿದ್ದು ಕಂಡು ಬಂತು. ಬೆಲೆ ಏರಿಕೆ ಸಂಕಷ್ಟ ಬಡ ಜನತೆಗೆ ಕಷ್ಟ ತರಿಸಿದ್ದರೂ, ಇರುವ ಮಟ್ಟಿಗಾದರೂ ಹಬ್ಬ ಆಚರಿಸುವ ಅವರ ಉತ್ಸಾಹ ಮಾತ್ರ ಕುಂದಿರುವಂತೆ ಕಂಡು ಬರಲಿಲ್ಲ, ರಂಜಾನ್ ,ಯುಗಾದಿ ಜತೆಯಲ್ಲಿ ಬಂದಿದ್ದು, ಬಟ್ಟೆ ಅಂಗಡಿಗಳಲ್ಲಿ ಹಿಂದೂ,ಮುಸ್ಲೀಂ ಬಾಂಧವರು ತುಂಬಿ ತುಳುಕುತ್ತಿದ್ದುದು ಕಂಡು ಬಂತು. ಹೂ,ತರಕಾರಿ, ಹಣ್ಣಿನ ಬೆಲೆ ಗಗನಮುಖಿಯಾಗಿದ್ದು, ತಾಪಮಾನ ತಲೆ ಸುಡುತ್ತಿದ್ದರೆ ಬೆಲೆ ಏರಿಕೆ ಜೇಬು ಸುಡುವಂತಿತ್ತು.



ಬಟ್ಟೆ ಖರೀದಿಗೆ ಜನವೋ ಜನ

ಹೊಸ ವರ್ಷಕ್ಕೆ ಹೊಸ ಬಟ್ಟೆ ಹಾಕಲೇಬೇಕು ಎಂಬುದು ಹಿಂದೂಗಳ ಯುಗಾದಿಯ ಸಂಪ್ರದಾಯವಾದರೆ, ರಂಜಾನ್‌ಗೆ ಬಟ್ಟೆ ಖರೀದಿಗೆ ಮುಸ್ಲೀಂ ಬಾಂಧವರು ಮುಗಿಬಿದ್ದಿದ್ದರಿಂದಾಗಿ ನಗರದ ಬಟ್ಟೆ ಅಂಗಡಿಗಳಿರುವ ಎಂ.ಜಿ.ರಸ್ತೆ ಹಾಗೂ ದೊಡ್ಡಪೇಟೆಗಳಲ್ಲಿ ಬಟ್ಟೆ ಅಂಗಡಿಗಳಲ್ಲಿ ಜನಜಂಗುಳಿ ನೆರೆದಿದ್ದು ಕಂಡು ಬಂತು.

ಒಟ್ಟಾರೆ ಬೆಲೆ ಏರಿಕೆಯ ಬಿಸಿಯ ನಡುವೆಯೂ ಹಬ್ಬ ಆಚರಣೆಯ ಆಶಯಕ್ಕೆ ಮಾತ್ರ ಧಕ್ಕೆ ಬಂದಿಲ್ಲವೆಂಬುದನ್ನು ನಗರದ ಪೇಟೆ ಬೀದಿಯಲ್ಲಿನ ಜನ ಸಂದಣಿಯ ವಹಿವಾಟು ಸಾಕ್ಷಿಕರಿಸಿತ್ತು.

ಕೆಜಿ ಸೇಬು 250 ರಿಂದ 300 ರೂ, ದಾಳಿಂಬೆ 200ರಿಂದ 250 ರೂ, ಬಾಳೆ ಹಣ್ಣು ಕೆಜಿ ಒಂದಕ್ಕೆ 60 ರೂಗೆ ಮಾರಾಟವಾಗುತ್ತಿದ್ದರೂ ಹಬ್ಬಕ್ಕೆ ಹಣ್ಣುಗಳು ಅಗತ್ಯವಾದ ಕಾರಣ ಖರೀದಿಗೆ ಮುಗಿಬಿದ್ದಿದ್ದರು.

ಕಿರಿಯ ವಯಸ್ಸಿನಲ್ಲೇ ಪುನೀತ್ ಮೇರು ಸಾಧನೆ: ಶ್ರೀನಾಥ್

• **ಕೋಲಾರ:** ಕನ್ನಡ ಚಿತ್ರರಂಗದಲ್ಲಿ ಅಪ್ಪು ಎಂದೇ ಖ್ಯಾತಿ ಪಡೆದಿರುವ ಡಾ.ಪುನೀತ್ ರಾಜ್ ಕುಮಾರ್ ಅವರ ಹೆಸರನ್ನು ಮುಖ್ಯರಸ್ತೆಗಳಿಗೆ ಇಡುವ ಮೂಲಕ ಕಿರಿಯ ವಯಸ್ಸಿನಲ್ಲೇ ಅವರು ಮಾಡಿರುವ ಮೇರು ಸಾಧನೆ ಸಮಾಜದಲ್ಲಿ ಶಾಶ್ವತವಾಗಿ ಉಳಿದಿದೆ ಎಂದು ಜೆಡಿಎಸ್ ಮುಖಂಡ ಹಾಗೂ ಸಮಾಜ ಸೇವಕ ಸಿಎಂಆರ್ ಶ್ರೀನಾಥ್ ಹೇಳಿದರು. ಡಾ. ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬದ ಪ್ರಯುಕ್ತ ನಗರದ ಪಾಲಸಂದ್ರ ಲೇಔಟ್ ರಸ್ತೆಯಲ್ಲಿರುವ ಡಾ. ಪುನೀತ್ ರಾಜಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಿ ಮಾತನಾಡಿದರು. ಪುನೀತ್ ರಾಜ್‌ಕುಮಾರ್ ಅವರ ಸೇವಾ ಮನೋಭಾವ ಸಮಾಜದ ಪ್ರತಿಯೊಂದು ಸಂಘ ಸಂಸ್ಥೆಗಳಿಗೆ ಮತ್ತು ಪ್ರತಿಯೊಬ್ಬರಿಗೂ ಸಹ ಪ್ರೇರಣೆ ಮತ್ತು ಸ್ಫೂರ್ತಿದಾಯಕವಾಗಿದೆ. ಈ ನಿಟ್ಟಿನಲ್ಲಿ ಅವರ ಆದರ್ಶವನ್ನು ಮೈಗೂಡಿಸಿಕೊಂಡರೆ ಸಮಾಜ ಮುಖಿ ಕಾರ್ಯದಲ್ಲಿ ತೊಡಗಲು ದಾರಿದೀಪವಾಗುತ್ತದೆ ಎಂದು ನುಡಿದರು. ದೇಶ ಹಾಗೂ ರಾಜ್ಯದಲ್ಲಿ ಉತ್ತಮ ಹೆಸರನ್ನು ಪಡೆದುಕೊಂಡಿದ್ದರೂ ಸಹ ಸಮಾಜದಲ್ಲಿ ನೊಂದ ವ್ಯಕ್ತಿಗಳ ಹಾಗೂ ಅಭಿಮಾನಿಗಳೊಂದಿಗೆ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದ ನಗುವಿನ ಒಡೆಯ ಪುನೀತ್ ರಾಜ್ ಕುಮಾರ್ ಅವರು ಎಂದರೆ ತಪ್ಪಿಲ್ಲ ಎಂದರು. ರಾಜ್ಯದ ಬಿಎಂಟಿಸಿ ಸಂಸ್ಥೆಗೆ ಪುನೀತ್ ರಾಜ್ ಕುಮಾರ್ 2019ರಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬ್ರ್ಯಾಂಡ್ ಅಂಬಾಸಿಡರ್ ಆಗಲು ಒಪ್ಪಿಕೊಂಡಿದ್ದರು. ಕೆಎಂಎಫ್ ಬ್ರ್ಯಾಂಡ್ ಅಂಬಾಸಿಡರ್ ತಂದೆ ಡಾ. ರಾಜ್‌ಕುಮಾರ್ ಹಾದಿಯಲ್ಲಿ ಪುನೀತ್ ಹೆಜ್ಜೆ ಹಾಕಿದ್ದರೆಂಬುದಕ್ಕೆ, ಯಾವುದೇ ಸಂಭಾವನೆ ಸ್ವೀಕರಿಸದೇ ಕರ್ನಾಟಕ ಹಾಲು ಒಕ್ಕೂಟದ (ಕೆಎಂಎಫ್) ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದೇ ಸಾಕ್ಷಿ. ಕೆಎಂಎಫ್ ಉತ್ಪನ್ನಗಳನ್ನು ಪುನೀತ್ ಪ್ರಚಾರ ಮಾಡಿದ್ದಾರೆ ಎಂದು ಮೆಲುಕು ಹಾಕಿದರು. ಪುನೀತ್ ರಾಜ ಕುಮಾರ್ ಅಭಿಮಾನಿ ಗಳಿಂದ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಅವರ ಹೆಸರಿನಲ್ಲಿ ಆರ್.ಎಲ್ ಜಾಲಪ್ಪ ಮೆಡಿಕಲ್ ಕಾಲೇಜು ವತಿಯಿಂದ ಆರೋಗ್ಯ ಶಿಬಿರ ಆಯೋಜಿಸುವ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿದರು. ನಗರದ ಮಹಿಳಾ ಠಾಣೆ ವೃತ್ತ ನಿರೀಕ್ಷಕಿ ವೇದಾವತಿ, ಗಲ್‌ಪೇಟೆ ಸಬ್ ಇನ್ಸ್‌ಪೆಕ್ಟರ್ ವಿಠ್ಠಲ್, ವೆಂಕಟೇಶ್ ಕೊಂಡಿ, ಮೆಹಂದಿ, ಜನಾರ್ದನ್ ಉಪಸ್ಥಿತರಿದ್ದರು.



ಸೌಲಭ್ಯ ಅಕ್ರಮ ಮಾರಾಟ: ತನಿಖೆಗೆ ಆಗ್ರಹ

• **ಬಂಗಾರಪೇಟೆ:** ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾಗಿದ್ದು, ಬಂಗಾರಪೇಟೆ-ಕೆಜಿಎಫ್ ತಾಲೂಕಿಗೆ ಸಂಬಂಧಪಟ್ಟಂತೆ ಸುಮಾರು 17 ವಿದ್ಯಾರ್ಥಿ ನಿಲಯಗಳಿದ್ದು, ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪ. ಪಂಗಡದ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉಜ್ವಲಗೊಳಿಸಲು ಉನ್ನತ ವಿದ್ಯಾವಂತರಾಗಿ ತಮ್ಮ ಜೀವನಗಳನ್ನು ರೂಪಿಸಿಕೊಳ್ಳಲು ವಿದ್ಯಾರ್ಥಿನಿಲಯಗಳಲ್ಲಿ ಇದ್ದು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ವಾರ್ಡನ್‌ಗಳು-ಅಡುಗೆಯವರುಮಕ್ಕಳಿಗೆಸರ್ಕಾರದಿಂದ ಬರುವ ಮೂಲಭೂತ ಸೌಕರ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿ ಮಕ್ಕಳ ಹಕ್ಕನ್ನು ಕಸಿಯುತ್ತಿದ್ದಾರೆ ಎಂದು ಅಂಬೇಡ್ಕರ್ ವೀರಸೇನೆ ವತಿಯಿಂದ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕನಿರ್ದೇಶಕಿ ಶಿವಕುಮಾರಿ ಅವರಿಗೆ ಮನವಿ ನೀಡಿ, ಮಾತನಾಡಿದ ಸಂಸ್ಥಾಪಕ ಅಧ್ಯಕ್ಷ ಬಟ್ರಕುಪ್ಪ ಅರುಣ್ ಅವರು, ಅಂಬೇಡ್ಕರ್ ಬಾಲಕಿಯರ ಮೆಟ್ರಿಕ್‌ಪೂರ್ವ




ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಶಿವಲೀಲ ಎಂಬುವವರು ಅಲ್ಲಿನ ಮಕ್ಕಳ ಬೆಡ್‌ಗಳು, ಹಾಗೂ ಫ್ಯಾನ್, ಇತ್ಯಾಧಿ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವಿಡೀಯೋಗಳು ಅಲೆದಾಡಿರುತ್ತದೆ, ಆದರೆ ಶಿವಲೀಲ ಅವರು ಮಹೇಶ್ ಅಡುಗೆಯವರಿಗೆ ಇಲ್ಲಿನ ವಸ್ತುಗಳನ್ನು ನೀಡಿದ್ದೇನೆ ಎಂದು ತಿಳಿಸಿದ್ದು, ಸಹಾಯಕ ನಿರ್ದೇಶಕರಿಗೆ ಯಾವುದೇ ರೀತಿ ಪತ್ರ ವ್ಯವಹಾರ ಹಾಗೂ ಅನುಮತಿ ಪಡೆಯದೆ ಇಲ್ಲಿನ ವಸ್ತುಗಳನ್ನು ಮಾರಾಟ ಮಾಡಿರುವುದು ಸರ್ಕಾರದ ಕೆಲಸವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ, ಆದರೆ ಇಷ್ಟೆಲ್ಲಾ ನಡೆದ ತಕ್ಷಣ ಶಿವಲೀಲ ಅವರನ್ನು ಕೂಡಲೇ ವರ್ಗಾವಣೆ ಮಾಡಿ ಕೈ ತೊಳೆದುಕೊಂಡಿರುವುದು ಎಷ್ಟರ ಮಟ್ಟಿಗೆ ಸರಿ? ಎಂಬುದು ಪ್ರಶ್ನೆಯಾಗಿದೆ.

ಇದರ ಬಗ್ಗೆ ಸವಿಸ್ತರವಾಗಿ ತನಿಖೆ ಮಾಡಿ ಶಿವಲೀಲ ವಾರ್ಡನ್ ಹಾಗೂ ಮಹೇಶ್ ಅಡುಗೆಯವರನ್ನು ಈ ಕೂಡಲೇ ಅಮಾನತ್ತು ಮಾಡಿ ಸರ್ಕಾರದ ಕೆಲಸ ದುರುಪಯೋಗಪಡಿಸಿಕೊಂಡಿರುವುದರ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ನೀಡಿ ಇವರನ್ನು ಕೆಲಸದಿಂದ ವಜಾ ಮಾಡಬೇಕೆಂದು ನಮ್ಮ ಸಂಘಟನೆಯು ಒತ್ತಾಯಿಸುತ್ತದೆ. 10 ದಿನಗಳೊಳಗೆ ತಾವು ಕ್ರಮ ಕೈಗೊಳ್ಳದೆ ಇಲ್ಲವಾದಲ್ಲಿ ಇಲಾಖೆ ಮುಂಭಾಗ ಅನಿಧಿಷ್ಠಾವಧಿ ಧರಣಿಯನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಅರುಣ್‌ಕುಮಾರ್ ಪ್ರಕರಣ ಇತ್ಯರ್ಥಕ್ಕೆ ಕೆ.ಸಿ.ರಾಜಣ್ಣ ಆಗ್ರಹ

• **ಕೋಲಾರ:** ಎಲ್ಲರಿಗೂ ಸರಿ ಸಮವಾಗಿ ಸಿಗಬೇಕಾಗಿರುವ ಕಾನೂನಿನ ನ್ಯಾಯ ಕೆಲವರ ಕಪಿಮುಷ್ಠಿಯಲ್ಲಿ ಸಿಲುಕಿ ಒದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿರುವ ಪರಿಣಾಮ ಆಪಾದಿತ ಮಾಲೂರು ತಾಲೂಕಿನ ರಾಜಸ್ವ ನಿರೀಕ್ಷಕ ಅರುಣ್ ಕುಮಾರ್ ಎಂಬುವವರು ಕಾನೂನಿನ ಕುಣಿಕೆಯಿಂದ ನುಣಿಚಿಕೊಂಡಿರುವುದು ಕಾನೂನಿನ ವ್ಯವಸ್ಥೆ ಬಗ್ಗೆ ಗುಮಾನಿ ಉಂಟಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಕೆ.ಸಿ.ರಾಜಣ್ಣ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಳಬಾಗಿಲು ತಾಲೂಕಿನ ಆವಣಿ ಹೋಬಳಿಯ ಮಿಣಜೇನಹಳ್ಳಿ ಗ್ರಾಮದ ಎಂ. ವೆಂಕಟೇಶ್ ಎಂಬುವವರು ಬಿಎಂಟಿಸಿ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹುದ್ದೆ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಆವಣಿ ನೆಮ್ಮದಿ ಕೇಂದ್ರಕ್ಕೆ 15 ರೂ. ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರುತ್ತಾರೆ. ಅಂದಿನ ಗ್ರಾಮಲೆಕ್ಕಿಗ, ಪ್ರಸ್ತುತ ಮಾಲೂರು ತಾಲೂಕು ಕಸಬಾ ಹೋಬಳಿ ರಾಜಸ್ವ ನಿರೀಕ್ಷಕ ಅರುಣ್ ಕುಮಾರ್ ಸಿಂಧುತ್ವ ಪ್ರಮಾಣ ಪತ್ರ ನೀಡಲು 2 ಸಾವಿರ ಲಂಚದ ಬೇಡಿಕೆ ಇಡುತ್ತಾರೆ. ಅರ್ಜಿದಾರನು ಬೇಡಿಕೆಯ ಧ್ವನಿಯನ್ನು ಮುದ್ರಿಸಿಕೊಂಡು 2009ರ ಡಿಸೆಂಬರ್ 31ರಂದು ಲೋಕಾಯುಕ್ತರಿಗೆ ದೂರು ನೀಡಿರುತ್ತಾರೆ ಎಂದು ಹೇಳಿದರು. ಸತತ 11 ವರ್ಷಗಳ ದೀರ್ಘಕಾಲದಿಂದ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಪಟ್ಟಿಯಾಗದೆ ಆಪಾದಿತ ನೌಕರ ರಾಜಸ್ವ ನಿರೀಕ್ಷಕ ಅರುಣ್ ಕುಮಾರ್ ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಲು ಕಾರಣವಾದರೂ ಏನಿರಬಹುದು ಎಂಬುದರ ಬಗ್ಗೆ ದಿಗ್ಭ್ರಮೆ ಉಂಟಾಗಿದೆ. ತಕ್ಷಣವೇ ವಿಶೇಷ ವಕೀಲರ ಮೂಲಕ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟರ್ ಜನರಲ್, ನ್ಯಾಯಾಲಯದ ಮುಂದೆ ಪಟ್ಟಿ ಮಾಡಿಸಿ ಆಪಾದಿತ ನೌಕರ ರಾಜಸ್ವ ನಿರೀಕ್ಷಕ ಅರುಣ್ ಕುಮಾರ್ ಪ್ರಕರಣ ಇತ್ಯರ್ಥ ಪಡಿಸಬೇಕೆಂದು ಕೋರಿದರು.



ಆನ್ಲೈನ್‌ನಲ್ಲಿ ಹಾಲು ಖರೀದಿ ವಿರೋಧಿಸಿ ಪ್ರಾಂತ ರೈತಸಂಘದಿಂದ ಪ್ರತಿಭಟನೆ

ರೈತ ವಿರೋಧಿ ಸರ್ಕಾರದ ವಿರುದ್ಧ ಆಕ್ರೋಶ

• **ಕೋಲಾರ:** ಆನ್ಲೈನ್‌ನಲ್ಲಿ ಒಂದು ರೂಗೆ ಲೀಟರ್ ಹಾಲು ಮಾರಾಟ ಮತ್ತು ಇತರೆ ಕೃಷಿ ಉತ್ಪನ್ನಗಳ ಮಾರಾಟ ವಿರೋಧಿಸಿ ಹಾಗೂ 2002ರ ಸ್ಪರ್ಧಾ ಕಾಯ್ದೆಯಂತೆ ಭಾರತ ಸ್ಪರ್ಧಾ ಆಯೋಗವು ಕಾನೂನು ಬಾಹಿರ ಅನ್ಯಾಯದ ಸ್ಪರ್ಧೆಯನ್ನು ನಿಯಂತ್ರಿಸುವ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದು ಕೊಳ್ಳಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬುಧವಾರ ನಗರದ ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ್ ಮಾತನಾಡಿ, ಕೋಟ್ಯಾಂತರ ಸಂಖ್ಯೆಯಲ್ಲಿ ರೈತರು, ಕೃಷಿ ಕೂಲಿಕಾರರು, ಮಹಿಳೆಯರು, ದಲಿತರು ಕೃಷಿಯ ಉಪಕಸಬಾಗಿ ಭಾರತದಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಕರ್ನಾಟಕದ ಕೆಎಂಎಫ್ ಅಡಿಯಲ್ಲಿ ಸುಮಾರು 25 ಲಕ್ಷಕ್ಕೂ ಹೆಚ್ಚು ಹಾಲು ಉತ್ಪಾದಕರು ಸಹಕಾರಿ ತತ್ವದಡಿಯಲ್ಲಿ ಹೈನುಗಾರಿಕೆಯಿಂದ ಜೀವನ ರೂಪಿಸಿಕೊಂಡಿದ್ದಾರೆ. ಪ್ರಾಥಮಿಕ ಸಹಕಾರಿ ಸಂಘಗಳು ಹಾಗೂ ಒಕ್ಕೂಟಗಳಲ್ಲಿ ಮತ್ತಿತರೆ ಡೇರಿ ಉತ್ಪನ್ನಗಳ ಉದ್ದಿಮೆಗಳಲ್ಲಿ ಲಕ್ಷಾಂತರ ಜನಕ್ಕೆ ಈ ಕ್ಷೇತ್ರ ಉದ್ಯೋಗ ಸೃಷ್ಟಿ ಮಾಡಿದೆ. ಇದನ್ನು ನಾಶ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು

ಇತ್ತೀಚಿನ ದಿನಗಳಲ್ಲಿ ಅಮೆಜಾನ್, ವಾಲ್ ಮಾರ್ಟ್, ಫ್ಲಿಪ್ ಕಾರ್ಡ್ ಸೇರಿದಂತೆ ಹಲವು ಖಾಸಗಿ ಕಂಪನಿಗಳು ಆನ್‌ಲೈನ್ ಜಾಲದಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಅತ್ಯಂತ ಕಡಿಮೆ ಬೆಲೆಗೆ ಕಾನೂನು ಬಾಹಿರವಾಗಿ ಅನ್ಯಾಯದ ಸ್ಪರ್ಧೆಯಲ್ಲಿ ಪೈಪೋಟಿಗಿಳಿದು ನಂದಿನಿ ಬ್ರಾಂಡಿನ ಹಾಲನ್ನು ಒಂದು ರೂಗೆ ಒಂದು ಲೀಟರ್ ನಂತೆ ಹಾಲು ಮಾರಾಟ ಮಾಡುತ್ತಿರುವುದು ಕರ್ನಾಟಕದ ಲಕ್ಷಾಂತರ ಹೈನುಗಾರರನ್ನು ತೀವ ಆತಂಕಕ್ಕೆ ಗುರಿ ಮಾಡುತ್ತಿದೆ ಎಂದರು.

ರಾಜ್ಯ ಉಪಾಧ್ಯಕ್ಷ ಪಿ.ಆರ್. ಸೂರ್ಯನಾರಾಯಣ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಾತಕೋಟೆ ನವೀನ್ ಕುಮಾರ್ ಜಿಲ್ಲಾ ಮುಖಂಡರಾದ ಗಂಗಮ್ಮ, ವಿ.ನಾರಾಯಣರೆಡ್ಡಿ, ಹೊಲ್ಲಂಬಳ್ಳಿ ವೆಂಕಟೇಶಪ್ಪ, ಮಾಲೂರು ವೆಂಕಟಪ್ಪ ಇದ್ದರು.




2 ವರ್ಷವಾದರೂ ಯಾವುದೇ ಗ್ರಾಮಗಳಿಗೆ ಸರಬರಾಜಾಗಿಲ್ಲ ಯರಗೋಳ್ ನೀರು

ಯರಗೋಳ್ ಡ್ಯಾಂ ಖಾಲಿ: ಜನತೆಗೆ ಆತಂಕ

• **ಬಂಗಾರಪೇಟೆ:** ಮೂರು ತಾಲೂಕಿನ ಜನತೆಗೆ ಕುಡಿಯುವ ನೀರಿನ ಮೂಲವಾಗಿರುವ ಯರಗೋಳ್ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದು, ಬೇಸಿಗೆಯಲ್ಲಿ ನೀರಿನ ಅಭಾವ ಎದುರಾಗುವ ಆತಂಕ ಎದುರಾಗಿದೆ.

ತಾಲೂಕಿನ ಯರಗೋಳ್ ಗ್ರಾಮದ ಸಮೀಪ ಸುಮಾರು 315 ಕೋಟಿ ರೂ. ವೆಚ್ಚದಲ್ಲಿ 300 ಎಕರೆ ಪ್ರದೇಶದಲ್ಲಿ ಯರಗೋಳ್ ಡ್ಯಾಂ ನಿರ್ಮಿಸಿ ಎರಡು ವರ್ಷಗಳ ಹಿಂದೆ ಲೋಕಾರ್ಪಣೆ ಮಾಡಲಾಗಿದೆ, 1 ಟಿಎಂಸಿಯಷ್ಟು ನೀರು ಶೇಖರಣಾ ಸಾಮರ್ಥ ಹೊಂದಿದೆ, ಡ್ಯಾಂನಿಂದ ಸೂಚಿತ ನಗರ, ಹಾಗೂ ದಾರಿ ಮಧ್ಯಸಿಗುವ 45 ಗ್ರಾಮಗಳಿಗೆ ಪೈಪ್ ಲೈನ್ ನಿರ್ಮಾಣ ಮಾಡಲಾಗಿದ್ದು, ಅದರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ, ಎರಡು ವರ್ಷವಾದರೂ ಯಾವುದೇ ಗ್ರಾಮಗಳಿಗೆ ಯರಗೋಳ್ ಡ್ಯಾಂನ ನೀರು ಸರಬರಾಜಿಗಿಲ್ಲ.

ಬಂಗಾರಪೇಟೆ, ಕೋಲಾರ ನಗರ ಹಾಗೂ ಮಾಲೂರು ನಗರ ಪ್ರದೇಶಕ್ಕೆ ಮಾತ್ರ ಡ್ಯಾಂನಿಂದ ಆಯ್ದ ಓವರ್ ಹೆಡ್ ಟ್ಯಾಂಕ್‌ಗಳಿಗೆ ಪಂಪ್ ಮಾಡಿ ತುಂಬಿಸಿ, ಮನೆಗಳಿಗೆ ಪೂರೈಕೆ ಮಾಡಲಾಗುತ್ತಿದೆ, ಕಳೆದ ವರ್ಷ ಸುರಿದ ಮಳೆಗೆ ನೀರು ಶೇಖರಣೆಯಾಗಿತ್ತು, ಇದೀಗ ಶೇ.60ನೀರುಖಾಲಿಯಾಗಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ. ಜಲಾಶಯದಲ್ಲಿರುವ ನೀರು ಬೇಸಿಗೆ ಮುಗಿರುವಷ್ಟರಲ್ಲಿ ಖಾಲಿಯಾಗಲಿದೆ ಎನ್ನಲಾಗುತ್ತಿದೆ, ಇದರಿಂದ ಜಲಾಶಯದ ಮೇಲೆ ಅವಲಂಬಿತವಾಗಿರುವ ನಗರಗಳ ಜನರಲ್ಲಿ ಆತಂಕ ಮೂಡಿದ್ದು, ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಮುಂದಾಗಬೇಕು, ನೀರಿನ ಬಳಕೆಯನ್ನು ನಿಯಂತ್ರಿಸುವುದು, ಪರ್ಯಾಯ ನೀರಿನ ವ್ಯವಸ್ಥೆ ಮಾಡುವುದು ಸೇರಿ ದಂತೆ ತುರ್ತು ಕ್ರಮಗಳನ್ನು ಶೀಘ್ರ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯವಾಗಿದೆ.



> ಮಾರ್ಕಂಡೇಯ ಹಾಗೂ ಯರಗೋಳ್ ಜಲಶಾಯಗಳು ಈ ಭಾಗದ ಜಲಮೂಲಗಳು. ಮಳೆ ಕೊರತೆಯಿಂದ ನೀರು ಖಾಲಿಯಾಗುತ್ತಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಲಕ್ಷಣಗಳಿದ್ದು, ಸಂಬಂಧಪಟ್ಟ ಇಲಾಖಾಧಿಕಾರಿಗಳು ಸಮಸ್ಯೆ ಎದುರಾಗದಂತೆ ಎಚ್ಚರವಹಿಸಬೇಕು.
> ■ ಸೂಲಿಕುಂಟೆ ಆನಂದ್, ಸಮಾಜ ಸೇವಕ

ಕಿರುಸುದ್ದಿ

ಅಕ್ರಮ ಬಳಕೆ: 30 ಅನಿಲ ಸಿಲಿಂಡರ್‌ಗಳ ವಶ

ಚಿಕ್ಕಬಳ್ಳಾಪುರ: ಜಿಲ್ಲೆಯಾದ್ಯಂತ ಆಹಾರ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯ ಜಂಟಿ ಕಾರ್ಯಾಚರಣೆ ಮಾಡಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗಾಗಿ ಅಕ್ರಮವಾಗಿ ಉಪಯೋಗಿಸುತ್ತಿದ್ದ ಹೋಟೆಲ್/ರೆಸ್ಟೋರೆಂಟ್/ಟೀ ಅಂಗಡಿ/ಬೇಕರಿ/ಕಾಂಡಿಮೆಂಟ್ಸ್/ಬಾರ್ ರೆಸ್ಟೋರೆಂಟ್‌ಗಳಿಗೆ ದಿಢೀರ್ ದಾಳಿ ನಡೆಸಿ ಅಕ್ರಮವಾಗಿ ಬಳಸುತ್ತಿದ್ದ 30 ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು ಅಗತ್ಯ ವಸ್ತುಗಳ ಕಾಯ್ದೆ-1955 ರಲ್ಲಿ ಔಜಿಟ್ಟಿಜ್ಜಿಬಿಭಿಭ ಕಭಿಠಿಟ್ಟಭ್ಠಿಇ ಎಚಿಠ (ಉಎಖಿಔಅಖಐಣಾಫೆ ಣಾಊ ಖಖಿಕಕಟ್ಗಿ ಅಫೆಈ ಈಐಖಖ್ಕಐಆಖಿಖಐಣಾಫೆ) ಣ್ಟಭಟ್ಟಿ 2000 ರನ್ವಯ ಪ್ರಕರಣ ದಾಖಲಿಸಲಾಗಿರುತ್ತದೆ.

ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಗಳನ್ನು ವಾಣಿಜ್ಯ ಬಳಕೆಗೆ ಉಪಯೋಗಿಸಬಾರದೆಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ. ನಿಯಮ ಮೀರಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಗಳನ್ನು ವಾಣಿಜ್ಯ ಬಳಕೆಗೆ ಉಪಯೋಗಿಸುತ್ತಿದ್ದಲ್ಲಿ, ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಪಿಎಸ್‌ಸಿ 462ನೇ ರ್‍ಯಾಂಕ್: ಡಾ.ವರುಣ್‌ಗೌಡಗೆ ಸನ್ಮಾನ



ಚಿಂತಾಮಣಿ: ಯುಪಿಎಸ್‌ಸಿಯಲ್ಲಿ 462 ನೇ ರ್‍ಯಾಂಕ್ ಪಡೆದ ಡಾ.ವರುಣ್‌ಗೌಡ ಮತ್ತು ಪೋಷಕರಾದ ಪ್ರಕಾಶ್ ಗೌಡ ಮತ್ತು ಪ್ರೇಮಾರನ್ನು ಸನ್ಮಾನಿಸಿದ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜೆ ಕೆ ಕೃಷ್ಣಾರೆಡ್ಡಿ. ನಗರದ ಹೊರವಲಯದ ಜೆ ಕೆ ಭವನದಲ್ಲಿ ಇತ್ತೀಚೆಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 462ನೇ ರ್‍ಯಾಂಕ್ ಪಡೆದ ರಾಜೀವ್‌ಬಡಾವಣೆ ದಂಪತಿ ಪ್ರಕಾಶ್‌ಗೌಡ ಮತ್ತು ಪ್ರೇಮಾರ ಪುತ್ರನಾದ ಡಾ.ವರುಣ್‌ಗೌಡಗೆ ಜೆ.ಕೆ.ಕೃಷ್ಣಾರೆಡ್ಡಿ ಶಾಲು, ಹೂವಿನಹಾರ ಹಾಗೂ ಹಣ್ಣಹಂಪಲುಗಳನ್ನು ನೀಡಿ ಸನ್ಮಾನಿಸಿದರು. ಸನ್ಮಾನದ ನಂತರ ಜೆ.ಕೆ.ಕೃಷ್ಣಾರೆಡ್ಡಿ ಮಾತನಾಡಿ ಡಾ.ವರುಣ್ ಗೌಡರ ಸಾಧನೆ ತಾಲ್ಲೂಕಿಗೆ ಮಾತ್ರವಲ್ಲದೆ ಅವಿಭಜಿತ ಕೋಲಾರ ಜಿಲ್ಲೆಗೆ ರಾಜ್ಯ ಸಲ್ಲುತ್ತದೆ. ಇವರಿಂದ ಯುವಕ ಯುವತಿಯರಿಗೆ ಸ್ಫೂರ್ತಿ ಪಡೆದು ನಿಮ್ಮ ಸಾಧನೆಯ ಹಿಂಬಾಲಕರಾಗಿ ಅವರು ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಹಾಗೂ ಅವಿಭಜಿತ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಬೇಕೆಂದು ಆಶಿಸಿ ದೊಡ್ಡಮಟ್ಟದ ಸಾಧನೆಯನ್ನು ಮಾಡುವುದರ ಮೂಲಕ ಜಿಲ್ಲೆಗೆ ಹಾಗೂ ತಾಲ್ಲೂಕಿಗೆ ಕೀರ್ತಿಯನ್ನು ತಂದಿದ್ದು ಮತ್ತಷ್ಟು ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆಯೆಂದರು. ಎಎಸ್‌ಐ ಪ್ರಕಾಶ್‌ಗೌಡ, ತಾಯಿ ಪ್ರೇಮಾ, ದೊಡ್ಡಬೊಮ್ಮನಹಳ್ಳಿ ವೆಂಕಟರೆಡ್ಡಿ, ವೆಂಕಟರೋಣಪ್ಪ ಮಧು, ಶ್ರೀನಿವಾಸರೆಡ್ಡಿ, ವೇಣು ಇದ್ದರು.

ರಾಯಲ್ ವಿದ್ಯಾಸಂಸ್ಥೆಯಲ್ಲಿ ಗ್ರ್ಯಾಜುಯೇಷನ್ ದಿನಾಚರಣೆ



ಚಿಂತಾಮಣಿ: ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂಬ ನಾಣ್ನುಡಿಯಂತೆ ಶಿಶು ವಿಹಾರ ಹಂತದಲ್ಲಿ ಶಾಲೆಗೆ ಕಲಿಯಲು ಬಯಸಿ ಬಂದ ಪ್ರತಿಯೊಬ್ಬ ವಿದ್ಯಾರ್ಥಿ ಸಮಯ ಮತ್ತು ವಯಸ್ಸು ತುಂಬಾ ಅಮೂಲ್ಯವಾದು ದೆಂದು ಸಂಸ್ಥೆಯ ಅಧ್ಯಕ್ಷ ಕೆ. ರಾಮಕೃಷ್ಣ ನುಡಿದರು. ನಗರದ ಪ್ರತಿಷ್ಠಿತ ರಾಯಲ್ ವಿದ್ಯಾಸಂಸ್ಥೆಯಲ್ಲಿ ಶಿಶು ವಿಹಾರ ಹಂತದಿಂದ ಉತ್ತೀರ್ಣರಾಗಿ ಪ್ರಾಥಮಿಕ ಹಂತಕ್ಕೆ ತಲುಪುತ್ತಿರುವ ಯುಕೆಜಿ ವಿದ್ಯಾರ್ಥಿಗಳಿಗೆ ಗ್ರಾಜುಯೇಷನ್ ದಿನಾಚರಣೆಯಲ್ಲಿ ಮಾತನಾಡಿ ವಿದ್ಯಾರ್ಥಿ ಹಾಗೂ ಪೋಷಕರನ್ನು ಉದ್ದೇಶಿಸಿ ಮಾತನಾಡಿ ಈ ಹಂತದಲ್ಲಿ ಶಾಲೆಯಲ್ಲಿ ಶಿಕ್ಷಕರು-ಮನೆಯಲ್ಲಿ ಪೋಷಕರು ಕನಿಷ್ಠ ಸಮಯ ಮೀಸಲಿಟ್ಟು ಪ್ರತಿಯೊಬ್ಬ ವಿದ್ಯಾರ್ಥಿ ಬೇಕುಬೇಡಗಳ ಬಗ್ಗೆ ಗಮನ ಹರಿಸಿ ವಿದ್ಯಾರ್ಥಿ ಸರ್ವತೋಮುಖ ಅಭಿವೃದ್ಧಿಗೆ ಒತ್ತುಕೊಡಬೇಕೆಂದರು.

ತಮ್ಮ ಶಾಲೆಯ ಶಿಶು ವಿಹಾರದಲ್ಲಿ ಅಭ್ಯಾಸ ಮಾಡಿ ಶುದ್ಧ ಬರವಣಿಗೆ, ಸ್ವಯಂ ಶಿಸ್ತು, ನಿರಂತರ ಚಟುವಟಿಕೆ ನಾಯಕತ್ವ ಡ್ರಸ್‌ಕೋಡ್, ಚಿತ್ರರಚನೆ, ಗಾಯನ, ಭಗವತ್ ಗೀತೆ ಪಠಣ ಮುಂತಾದ ವಿಶಿಷ್ಟ ಅಭಿರುಚಿಗಳನ್ನು ಮೈಗೂಡಿಸಿಕೊಂಡಿರುವ ವಿದ್ಯಾರ್ಥಿಗಳನ್ನು ಗುರ್ತಿಸಿ ಸ್ಟಾರ್ ಬ್ಯಾಡ್ಜ್ ಮತ್ತು ಅಂಕಪಟ್ಟಿ ನೀಡಿ, ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಅಭಿನಂದಿಸಲಾಯಿತು. ಕಾರ್ಯದರ್ಶಿ ಕೆ.ಆರ್. ಪ್ರೇಮಲತ ಹಿರಿಯ ಶಿಕ್ಷಕಿ ಆಶಾ, ಶಿಶು ವಿಹಾರದ ಶಿಕ್ಷಕಿಯರಾದ ಭಾನುಪ್ರಿಯಾ, ಚಂದ್ರಕಲಾ ಇದ್ದರು.



ಗೌರಿಬಿದನೂರು ನಗರದ ಸಮೀಪದ ಹಿರೇಬಿದನೂರು ಗ್ರಾಮದ ಡೇರಿಗೆ ಅಧ್ಯಕ್ಷರಾಗಿ ಡಿ.ಎನ್.ವೆಂಕಟರೆಡ್ಡಿ, ಉಪಾಧ್ಯಕ್ಷ ಎಚ್.ಎ.ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

ಹಿರೇಬಿದನೂರು ಡೇರಿಗೆ ವೆಂಕಟರೆಡ್ಡಿ ಅಧ್ಯಕ್ಷ

ಗೌರಿಬಿದನೂರು: ನಗರದ ಸಮೀಪದ ಹಿರೇಬಿದನೂರು ಗ್ರಾಮದ ಡೇರಿಗೆ ಅಧ್ಯಕ್ಷರಾಗಿ ಡಿ.ಎನ್.ವೆಂಕಟರೆಡ್ಡಿ, ಉಪಾಧ್ಯಕ್ಷ ಎಚ್.ಎ.ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

13 ನಿರ್ದೇಶಕರನ್ನೊಳಗೊಂಡ ಹಿರೇಬಿದನೂರು ಡೇರಿಗೆ 11 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು ಉಳಿದ 2 ಸ್ಥಾನಗಳಲ್ಲಿ ಚುನಾವಣೆ ನಡೆದಿತ್ತು. ಡಿ.ಎನ್.ವೆಂಕಟರೆಡ್ಡಿ ಡೇರಿಗೆ 6ನೇ ಬಾರಿಗೆ ಅವಿರೋಧವಾಗಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ನೂತನ ಅಧ್ಯಕ್ಷ ಡಿ.ಎನ್.ವೆಂಕಟರೆಡ್ಡಿ ಮಾತನಾಡಿ, ಡೇರಿ, ರೈತರ ಅಭಿವೃದ್ಧಿ ಹಿತದೃಷ್ಟಿಯಿಂದ ಪ್ರಾರಂಭದಿಂದಲೂ ಪಕ್ಷಾತೀತವಾಗಿ ಅವಿರೋಧವಾಗಿ ಆಯ್ಕೆ ಮಾಡಿಕೊಂಡು ರೈತರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. 25 ಲೀ. ಹಾಲಿನಿಂದ ಪ್ರಾರಂಭಗೊಂಡ ಡೇರಿಯು 800 ಲೀ. ಶೇಖರಣೆಯ ಸಾಮರ್ಥ್ಯ ಹೊಂದಿದೆ ಎಂದರು.

ವಿಮಾ ಸೌಲಭ್ಯ: ರೈತರು ಡೇರಿಗೆ ಗುಣಮಟ್ಟದ ಹಾಲನ್ನು ಹಾಕುವ ಮೂಲಕ ಡೇರಿ ಅಭಿವೃದ್ಧಿ, ನಿಮ್ಮ ಆರ್ಥಿಕ ಅಭಿವೃದ್ಧಿಗೆ ಕೈಜೋಡಿಸಬೇಕು, ಚೀಮುಲ್‌ನಿಂದ ಬರುವ ಯೋಜನೆಗಳನ್ನು ರೈತರಿಗೆ ತಲುಪಿಸಲಾಗುವುದು ಎಂದರು. ಡೇರಿ ನಿರ್ದೇಶಕರಾದ ಸಂಜೀವರಾಯಪ್ಪ, ಲೋಕೇಶ್, ಸೋಮಶೇಖರ್, ರೇಖಾ, ನಾಗಮಣಿ, ಶ್ರೀನಿವಾಸ್, ಭರತ್ ಕುಮಾರ್, ಮಹ್ಮದ್ ಮತೀನ್, ಪಿ.ಗಂಗಾಧರಪ್ಪ, ಸಾವಿತ್ರಮ್ಮ, ಗೋಪಾಲ್, ಡೇರಿ ಕಾರ್ಯದರ್ಶಿ ಎಚ್.ಆರ್. ಮಂಜುನಾಥ್ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.



ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿ ಹೊಸಪೇಟೆ ಗ್ರಾಮದ ಸಮಾಜ ಸೇವಕ ಎಚ್.ವಿ.ಮಂಜುನಾಥ ಗೌಡ ಹುಟ್ಟುಹಬ್ಬವನ್ನು ಹೊಸಪೇಟೆ ಗ್ರಾಮದ ಯುವಕರು ಗ್ರಾಮ ಪಂಚಾಯಿತಿ ಹತ್ತಿರದ ಉದ್ಯಾನವನದಲ್ಲಿ ಗಿಡ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು.

ಹೆಣ್ಣುಮಕ್ಕಳ ಆರೋಗ್ಯವೇ ಜಿಲ್ಲೆಯ ಸುಭದ್ರ ಭವಿಷ್ಯ: ಜಿ.ಪ್ರಭು

ಗರ್ಭಕಂಠ ಕ್ಯಾನ್ಸರ್‌ಗೆ ತಡೆ

ಚಿಕ್ಕಬಳ್ಳಾಪುರ: ಜಿಲ್ಲೆಯ ಹೆಣ್ಣು ಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲು ಸುರಕ್ಷಿತ ಲಸಿಕೆ ನೀಡಿ ಹೆಣ್ಣು ಮಕ್ಕಳ ಆರೋಗ್ಯವನ್ನು ಕಾಪಾಡುವುದು ನಮ್ಮ ಆದ್ಯತೆ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಿಕೆಗಾಗಿ ಜಿಲ್ಲೆಯಲ್ಲಿ ಎಚ್‌ಪಿವಿ ಲಸಿಕಾಕರಣ ಕಾರ್ಯಕ್ರಮ ಕುರಿತ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತ ನಾಡಿದರು.

ಎಲ್ಲಾ ಶಾಲೆಗಳಲ್ಲಿ ಮತ್ತು ಕ್ಷೇತ್ರ ಮಟ್ಟದಲ್ಲಿ ಅರಿವು ಮೂಡಿಸಲು ಕ್ರಮ ವಹಿಸಬೇಕು ಎಂದು ಸೂಚನೆಗಳನ್ನು ನೀಡಿದರು. ಹೆಚ್.ಪಿ.ವಿ ಲಸಿಕೆ ಇದು ತುಂಬಾ ಪರಿಣಾಮ ಕಾರಿಯಾಗಿದ ಲಸಿಕೆ 14 ವರ್ಷ ಮುಗಿದು 15 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಮುಂದಿನ ವಯೋ ಮಾನದಲ್ಲಿ ಗರ್ಭಕಂಠದ ಕ್ಯಾನ್ಸರ್‌ನ್ನು ತಡೆಗಟ್ಟುವ ಸಲುವಾಗಿ ಹೆಚ್.ಪಿ.ವಿ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ ಹೆಚ್.ಪಿ.ವಿ ಲಸಿಕೆಯನ್ನು ಪಡೆದ ಮಕ್ಕಳಿಗೆ ನಿಗದಿತ ತಂತ್ರಾಂಶದಲ್ಲಿ ನೊಂದಣಿ ಮಾಡಿ ಲಸಿಕಾ ಪ್ರಮಾಣ ಪತ್ರ ನೀಡಬೇಕು. ಪ್ರತಿ ಬುಧವಾರ ಬೆಳಿಗ್ಗೆ 9 ಗಂಟೆಯಿಂದ 2 ಗಂಟೆಯ ವರೆಗೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಉಚಿತವಾಗಿ ಎಡ ಕೈಯ ತೋಳಿನ ಸ್ನಾಯುಗೆ ಲಸಿಕೆಯನ್ನು (ಇಂಟ್ರಾಮಸ್ಕುಲರ್)ನೀಡಲು ಸಕಲ ವ್ಯವಸ್ಥೆ ಮಾಡಿಕೊಳ್ಳಲು ಸೂಚನೆ ನೀಡಿದರು.

ಜಿಲ್ಲೆಯಲ್ಲಿಸುಮಾರು13,432ಹದಿನಾಲ್ಕುವರ್ಷದ ಹೆಣ್ಣು ಮಕ್ಕಳಿದ್ದು, 4,830 ಡೋಸ್ ಲಸಿಕೆ ಬಂದಿದೆ



> 14 ವರ್ಷದ ಎಲ್ಲಾ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆಯನ್ನು ಹಾಕುವುದರ ಮೂಲಕ ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆ ಮಾಡಲು ಆರೋಗ್ಯ ಇಲಾಖೆ ಜತೆಗೆ ಸಂಬಂಧ ಪಟ್ಟ ಇತರ ಇಲಾಖೆಗಳ ಅಧಿಕಾರಿಗಳು ಕ್ರಮ ವಹಿಸಬೇಕು. ಪ್ರತಿ 14 ವರ್ಷದ ಬಾಲಕಿಗೆ ಲಸಿಕಾಕರಣ ಆಗುವ ನಿಟ್ಟಿನಲ್ಲಿ ಯೋಜಿಸಿ ಉಚಿತವಾಗಿ ಲಸಿಕೆಯನ್ನು ನೀಡಬೇಕು.
> ■ ಜಿ.ಪ್ರಭು, ಜಿಲ್ಲಾಧಿಕಾರಿ

ಲಸಿಕಾ ಡೋಸ್‌ಗಳನ್ನು ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ರವಾನೆ ಮಾಡಲಾಗಿದೆ. ಬಾಕಿ ಲಸಿಕೆಯನ್ನು ಧರಿಸಿಕೊಳ್ಳಲು ಸಕರ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಹೆಣ್ಣು ಮಕ್ಕಳಿಗೆ ಗರ್ಭಕಂಠದ(ಸರ್ವಿಕಲ್ ಕ್ಯಾನ್ಸರ್) ರೋಗವನ್ನು ತಡೆಗಟ್ಟುವ ಸಲುವಾಗಿ ಹೆಚ್.ಪಿ.ವಿ ಲಸಿಕೆಯನ್ನು ಮಾರ್ಚ್ ಅಂತ್ಯದಲ್ಲಿ,ಏಪ್ರಿಲ್ ಮತ್ತುಮೇ-2026ರತಿಂಗಳುಗಳಲ್ಲಿಜಿಲ್ಲಾದ್ಯಂತಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ, ಅರ್ಹ ಮಕ್ಕಳಿಗೆ ಲಸಿಕೆಯನ್ನು ಹಾಕಿಸುವ ಮೂಲಕ ಪೋಷಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.. ಜಿಲ್ಲೆಯ 14 ವರ್ಷದೊಳಗಿನ ಹೆಣ್ಣು ಮಕ್ಕಳ ಪೋಷಕರು ತಮ್ಮ ಹತ್ತಿರದ ಲಸಿಕಾ ಕೇಂದ್ರ (ಆರೋಗ್ಯ ಸಂಸ್ಥೆ)ಗಳಿಗೆ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದು ಎಚ್.ಪಿ.ವಿ ಲಸಿಕೆಯನ್ನು ಹಾಕಿಸಿ ಲಸಿಕಾ ಅಭಿಯಾನದ ಸದುಪಯೋಗವನ್ನು ಪಡೆಯಲು ಕರೆನೀಡಿದರು.

ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಇಂದೇ ಹೆಜ್ಜೆ ಇಡಿ ನಿಮ್ಮ ಆರೋಗ್ಯ- ನಮ್ಮ ಆದ್ಯತೆ ಇದು ಈ ಅಭಿಯಾನದ ಆಶಯವಾಗಿದ್ದು ಇದನ್ನು ಅರ್ಥ ಮಾಡಿಕೊಂಡು ಜನರು ಅಭಿಯಾನವನ್ನು ಯಶಸ್ವಿಗೊಳಿ ಸುವಂತೆ ಕೋರಿದರು. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅತಿಕ್ ಪಾಷಾ, ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕುಮಾರ್ ಹಾಗೂ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಅವೈಜ್ಞಾನಿಕ ಹಂಪ್‌ಗಳಿಂದ ಹೆಚ್ಚುತ್ತಿದೆ ಅಪಘಾತ: ಆರೋಪ

ಬಾಗೇಪಲ್ಲಿ: ಚೇಳೂರು ತಾಲೂಕಿನ ಕೂಗಳತೆಯಲ್ಲಿರುವ ಸಿ.ಹೊಸಹುಡ್ಯ ಗ್ರಾಮದಲ್ಲಿ ಅವೈಜ್ಞಾನಿಕ ಹಂಪ್‌ಗಳಿಂದ ಹೆಚ್ಚಿದ ಅಪಘಾತ ಗಳು ನಡೆಯುತ್ತಿದ್ದು, ಪ್ರತಿನಿತ್ಯ ಸಾಲು ಸಾಲು ಅಪಘಾತಗಳು ಆಗುತ್ತಿವೆ. ಇದಕ್ಕೆ ಹೊಣೆ ಯಾರು?. ಲೋಕೋಪಯೋಗಿ ಇಲಾಖಾಧಿ ಕಾರಿಗಳ ಬೇಜವಾಬ್ದಾರಿತನ ಎತ್ತಿ ತೋರಿಸುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿ ಸಿದ್ದಾರೆ.

ಚೇಳೂರಿನಿಂದ ಚಿಂತಾಮಣಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿರುವ ರಸ್ತೆ ಹಂಪ್‌ಗಳು ವಾಹನ ಸವಾರರಿಗೆ ಭಾರೀ ತೊಂದರೆ ಉಂಟುಮಾಡುತ್ತಿವೆ.

400 ಮೀಟರ್ ರಸ್ತೆಯೊಳಗೆ 3 ಕಡೆ ಒಟ್ಟು 9 ಹಂಪ್‌ಗಳು ನಿರ್ಮಿಸಿರುವುದರಿಂದ ದಿನನಿತ್ಯ ಸಂಚರಿಸುವ ವಾಹನ ಸವಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಈರಸ್ತೆಯಲ್ಲಿ ಅತಿಯಾದ ಹಂಪ್ ನಿರ್ಮಿಸಿರುವುದರಿಂದ ವಾಹನಗಳು ಹೋಗಿ ಬರಲು ಆಗುತ್ತಿಲ್ಲ ಈ ಪರಿಣಾಮವಾಗಿ ಬೈಕ್, ಕಾರು ಸೇರಿ ಹಲವು ವಾಹನಗಳ ಭಾಗಗಳು ಹಾನಿಗೊಳಗಾಗುತ್ತಿದ್ದು, ವಾಹನಗಳನ್ನು ರಿಪೇರಿ ಮಾಡಿಸಲು ಸವಾರರು ವೆಚ್ಚ ಮಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಎಷ್ಟೋ ಬಾರಿ ಈ ಹಂಪ್‌ಗಳಿಂದ ಅಪಘಾತಗಳು ಆಗಿವೆ. ಸಾಕಷ್ಟು ಆಸ್ಪತ್ರೆಗೆ ದಾಖ ಲಾಗಿದ್ದಾರೆ.

> ಚೇಳೂರುನಿಂದ ಚಿಂತಾಮಣಿ ರಸ್ತೆಯ ಹೊಸಹುಡ್ಯ ಗ್ರಾಮದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮೂರು ಕಡೆ ಹಂಪ್‌ಗಳನ್ನು ಹಾಕಿರುವುದು ತಿಳಿದು ಬಂದಿದೆ ಮೇಲಾಧಿಕಾರಿಗಳ ಗಮನಕ್ಕೆ ತಂದು ತೆರವುಗೊಳಿಸಿ ಜನರಿಗೆ ಅನೂಕೂಲಕರ ಮಾಡಲಾಗುವುದು.
> ■ ಕಲ್ಯಾಣ್‌ಕುಮಾರ್, ಜೆಇ ವಿಭಾಗ

ರಾತ್ರಿ ಸಮಯದಲ್ಲಿ ಹಂಪ್‌ಗಳು ಕಾಣದಂತೆ ಇವೆ ಬಿಳಿ ಬಣ್ಣ ಹಾಕಿರುವುದಿಲ್ಲ ಸರಿಯಾದ ಗುರುತು ಹೆಚ್ಚಾಗಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ಯಾವ ಪ್ರಯೋಜನ ಆಗಿರುವುದಿಲ್ಲ. ಹಂಪ್‌ಗಳಿಗೆ ಎಚ್ಚರಿಕೆ ಫಲಕಗಳಿಲ್ಲದ ಕಾರಣ ಅಪಘಾತಗಳು ಆಗುತ್ತಿವೆ. ಸಂಬಂಧಿಸಿದ ಅಧಿಕಾರಿಗಳು ಅವೈಜ್ಞಾನಿಕ ಹಂಪ್‌ಗಳನ್ನು ತೆರವುಗೊಳಿಸಿ, ಸಂಚಾರಕ್ಕೆ ಅನುಕೂಲವಾಗುವಂತೆ ವಾಹನ ಸವಾರರು ಮತ್ತು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ವಾತ್ಸಲ್ಯ ಯೋಜನೆಯಲ್ಲಿ ನೂತನ ಮನೆ ಹಸ್ತಾಂತರ

ಗೌರಿಬಿದನೂರು: ತಾಲೂಕಿನ ಹುದುಗೂರು ಗ್ರಾಮದ ಗಂಗಮ್ಮ ಮತ್ತು ಕಸಬಾ ಹೋಬಳಿ ಚನ್ನ ಬೈರೇನಹಳ್ಳಿ ಗ್ರಾಮದ ಪುಷ್ಪಾ ಅವರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಾತ್ಸಲ್ಯ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡಿದ್ದ ನೂತನ ಮನೆಗಳ ಬೀಗದಕೈಯನ್ನು ಕುಟುಂಬಸ್ಥರಿಗೆ ಹಸ್ತಾಂತರಿಸುವ ಮೂಲಕ ಸೋಮವಾರದಂದು ಗೃಹಪ್ರವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕೆಎಚ್‌ಪಿ ಫೌಂಢೇಶನ್ ವ್ಯವಸ್ಥಾಪಕ ಹಾಗೂ ಶಾಸಕರ ಆಪ್ತರಾದ ಶ್ರೀನಿವಾಸಗೌಡ ಮಾತನಾಡುತ್ತಾ ಸಮಾಜದಲ್ಲಿ ಅತ್ಯಂತ ಸಂಕಷ್ಟದಲ್ಲಿರುವ, ಸ್ವಂತ ಮನೆ ಇಲ್ಲದ ಹಾಗೂ ಆಸರೆಹೀನರಾದ ಕುಟುಂಬಗಳನ್ನು ಗುರುತಿಸಿ ಅವರಿಗೆ ಗೌರವಯುತ ಬದುಕು ನೀಡುವ ನಿಟ್ಟಿನಲ್ಲಿ ಪೂಜ್ಯ ಹಗ್ಗಡೆಯವರ ಮಾರ್ಗದರ್ಶನದಲ್ಲಿ ಈ ಮನೆಗಳನ್ನು ನಿರ್ಮಿಸಲಾಗಿದೆ, ಸರ್ಕಾರದ ಕಾರ್ಯಕ್ರಮಗಳಿಗೆ ಕಡಿಮೆ ಇಲ್ಲದಂತೆ ಪ್ರಾಮಾಣಿಕವಾಗಿ ನಡೆಸಿಕೊಂಡು ಬರುತ್ತಿರುವ ಧರ್ಮ ಕಾರ್ಯಗಳು ಎಲ್ಲರಿಗೂ ಮಾದರಿಯಾಗಿವೆ. ವಾತ್ಸಲ್ಯ ಮನೆಗಳಷ್ಟೇ ಅಲ್ಲದೇ ಕೆರೆ ಕಾಮಗಾರಿ, ಮಾಶಾಸನ ವ್ಯವಸ್ಥೆ, ಬಡವರಿಗೆ ಸಿಗುವ ಸಾಲ ಸೌಲಭ್ಯ ಸೇರಿದಂತೆ ಇನ್ನಿತರ ಸೇವಾ ಕಾರ್ಯಗಳ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಧರ್ಮಸ್ಥಳಸಂಘದಜಿಲ್ಲಾನಿರ್ದೇಶಕಪ್ರಶಾಂತ್.ಸಿ.ಎಸ್ ಮಾತನಾಡಿ, ತಾಲ್ಲೂಕಿನಲ್ಲಿ ಪ್ರಸ್ತುತ 72 ಮಂದಿ ಫಲಾನುಭವಿಗಳಿಗೆ ಹಾಗೂ ಜಿಲ್ಲೆಯಲ್ಲಿ 450 ಕ್ಕೂ ಹೆಚ್ಚು ಮಂದಿ ನಿರ್ಗತಿಕರಿಗೆ ಪ್ರತಿ ತಿಂಗಳು 1000 ರೂಗಳಿಂದ 3000 ರೂಗಳವರೆಗೆ ಮಾಶಾಸನ ನೀಡುತ್ತಿದ್ದೇವೆ ಎಂದರು.

ತಾಲ್ಲೂಕು ಯೋಜನಾಧಿಕಾರಿ ನಾಗರಾಜ್ ನಾಯ್ಕ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೇವಲ ಆರ್ಥಿಕ ಸಬಲೀಕರಣ ಮಾತ್ರವಲ್ಲದೆ ಎಂದು ತಿಳಿಸಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷೆ ಪ್ರಭಾ ನಾರಾಯಣಗೌಡ, ಸದಸ್ಯರಾದ ಮಾರ್ಕೆಟ್ ಮೋಹನ್, ಗಂಗಾಧರ್ ಚಾರಿ, ಚಂದ್ರಶೇಖರ ಹಾಗೂ ಸಂಕಲ್ಪ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕಾಂತರಾಜು, ಜ್ಞಾನವಿಕಾಸ ಸಮನ್ವಯಾಧಿಕಾರಿ ಅಶ್ವಿನಿ, ಲೆಕ್ಕಪರಿಶೋಧಕ ರವಿತೇಜ, ಮೇಲ್ವಿಚಾರಕರಾದ ಉಮಾದೇವಿ, ಉಷಾ, ಸುರೇಂದ್ರ ಸೇರಿದಂತೆ ಮತ್ತಿತರರು.



ಸಾಧನೆ ಮಾಡಲು, ಬೆಳೆಯಲು ಗುರುವಿನ ಬೆಂಬಲ ಅವಶ್ಯ

ಚಿಂತಾಮಣಿ: ಎಲ್ಲಾ ಕ್ಷೇತ್ರಗಳಲ್ಲೂ ವ್ಯಕ್ತಿಗಳು ಸಾಧನೆ ಮಾಡಲು ಮತ್ತು ಉನ್ನತ ಸ್ಥಾನಕ್ಕೆ ಬೆಳೆಯಲು ಗುರುವಿನ ಶ್ರಮ ಅವಶ್ಯಕವಾಗಿದ್ದು ಗುರುವಿನ ಮಾರ್ಗದರ್ಶನದಿಂದಲೇಉನ್ನತಸ್ಥಾನಅಲಂಕರಿಸಲು ಸಾಧ್ಯವೆಂದು ನಿವೃತ್ತ ಶಿಕ್ಷಕ ನರಸಿಂಹಮೂರ್ತಿ ನುಡಿದರು. ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಿರಿಯ ನಾಗರಿಕರ ಮಾಸಿಕ ಸಭೆಯಲ್ಲಿ ಮಾತನಾಡಿ ಗುರುವಿನ ಸ್ಥಾನದ ಕುರಿತು ನುಡಿಯುತ್ತಾಯಾವುದೇಕ್ಷೇತ್ರದಲ್ಲಿಸಾಧನೆಮಾಡಲು ಮತ್ತು ಬೆಳೆಯಲು ಗುರುವಿನ ಶ್ರಮ ಅವಶ್ಯಕವಾಗಿದ್ದು, ತನ್ನ ಸಾಮರ್ಥ್ಯವನ್ನೆಲ್ಲ ದಾರೆಯೆರದು, ಯಾವ ನಿರೀಕ್ಷೆಯನ್ನು ಬಯಸದೇ ಸೇವೆಯನ್ನು ನೀಡುವ ವ್ಯಕ್ತಿಯೇ ಗುರುವೆಂದು ನುಡಿದರು. ಧಾರ್ಮಿಕ ಚಿಂತಕ ಬೆಳಸಿನೂರಿನ ವೀರಭದ್ರೆಗೌಡ ರಾಮಾಯಣ, ಮಹಾಭಾರತ ಗ್ರಂಥಗಳ ಕೆಲವು ಮುಖ್ಯ ಪಾತ್ರಗಳನ್ನು ವಿಶ್ಲೇಷಿಸಿ ಮನುಷ್ಯನ ಬದುಕು ಹಸನಾಗಲು ಉತ್ತಮ ಪಾತ್ರಗಳ ಸ್ಮರಣೆ



ಸ್ಫೂರ್ತಿ ನೀಡುತ್ತವೆಂದರು. ಡಾ.ವೈ.ಎಸ್. ರೆಡ್ಡಿರಮಣ ಮಾತನಾಡಿ ಲಾಲ್ ಬಹುದ್ದೂರ್ ಶಾಸ್ತ್ರಿರವರು ಯಾವುದೇ ಹುದ್ದೆಗಾಗಿ ಆಸೆ ಪಟ್ಟವರಲ್ಲ, ತಾವುಗಳು ರೈಲ್ವೆ ಮಂತ್ರಿಗಳಾ ಗಿದ್ದ ಸಂದರ್ಭದಲ್ಲಿ ಅಪಘಾತವಾದಾಗರೈಲ್ವೆಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದವರು. ತಮ್ಮದೇ ಆದ ಸ್ವಂತ ಮನೆಯೂ ಇರಲಿಲ್ಲವೆಂದರೆ ಇಂದಿನ ರಾಜಕಾರಣಿಗಳಿಗೆ ಅವರನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲವೆಂದರು. ಅಧ್ಯಕ್ಷ ಕಾಗತಿ ವೆಂಕಟರತ್ನಂ , ನರಸಿಂಹಮೂರ್ತಿ ಬಬ್ರುವಾಹನ ಚಿತ್ರದ ಏಕಪಾತ್ರ ಅಭಿನಯ ಮಾಡಿ ಗಮನಸೆಳೆದರು. ಜಿ.ಬಿ. ವೆಂಕಟರಮಣರೆಡ್ಡಿ, ನಾರಾಯಣಸ್ವಾಮಿ, ಎಸ್.ಶಿವರಾಂ, ಕೆ.ಬಿ.ಕೃಷ್ಣಪ್ಪ ರಾಮಕೃಷ್ಣಾರೆಡ್ಡಿ, ಮಂಗಳಗೌರಿ, ಹನುಮಂತಪ್ಪ, ಜಿ.ಟಿ.ವೆಂಕಟರಮಣರೆಡ್ಡಿ, ಮುನಿಯಪ್ಪ ಇದ್ದರು.

ಸಲಹಾ ಸಮಿತಿಗೆ ನಾಮನಿರ್ದೇಶಿತ ಸದಸ್ಯರ ಆಯ್ಕೆಗೆ ಅರ್ಜಿ

ಚಿಕ್ಕಬಳ್ಳಾಪುರ: ಜಿಲ್ಲೆಯ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಸೌಲಭ್ಯ ಹಾಗೂ ಮೀಸಲಾತಿಯನ್ನು ಕಲ್ಪಿಸಲು ಜಿಲ್ಲಾ ಮಟ್ಟದ ಸಲಹಾ ಸಮಿತಿಗೆ ಒಬ್ಬರನ್ನು ನಾಮ ನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡುವ ಸಂಬಂಧ ಈ ಕಚೇರಿಯ ಪ್ರಕಟಣೆ ದಿನಾಂಕ:28-03-2025ನ್ನು ರದ್ದುಪಡಿಸಿ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಸೌಲಭ್ಯ ಹಾಗೂ ಮೀಸಲಾತಿಯನ್ನು ಕಲ್ಪಿಸಲು ಜಿಲ್ಲಾ ಮಟ್ಟದ ಸಲಹಾ ಸಮಿತಿಗೆ ಒಬ್ಬರನ್ನು ನಾಮ ನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಾಸವಾಗಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ಅಲೆಮಾರಿ/ಅರೆ ಅಲೆಮಾರಿ ಸಮುದಾಯಕ್ಕೆ ಸೇರಿರುವ ಆಸಕ್ತಿಯುಳ್ಳವರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇಲ್ಲಿ ಅರ್ಜಿಯನ್ನು ಪಡೆದು ಏಪ್ರಿಲ್ 6 ರ ಸಂಜೆ 5.30 ರೊಳಗೆ ಅರ್ಜಿಯನ್ನು ಭರ್ತಿ ಮಾಡಿ ಈ ಕಚೇರಿಗೆ ಸಲ್ಲಿಸತಕ್ಕದ್ದು.

ನಾಮ ನಿರ್ದೇಶನ ಬಯಸುವ ವ್ಯಕ್ತಿಯು ಚಿಕ್ಕಬಳ್ಳಾಪುರ ಜಿಲ್ಲೆಯವರಾಗಿರತಕ್ಕದ್ದು, ಹಿಂದುಳಿದ ವರ್ಗಗಳಕಲ್ಯಾಣಇಲಾಖೆಯಲ್ಲಿಬರುವಅಲೆಮಾರಿ/ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿರಬೇಕು ಮತ್ತು ಜಿಲ್ಲೆಯಲ್ಲಿ ಕನಿಷ್ಠ 15 ವರ್ಷ ವಾಸವಾಗಿರತ್ತಕ್ಕದ್ದು. ಕನಿಷ್ಟ 35 ವರ್ಷದಿಂದ ಗರಿಷ್ಠ 65 ವರ್ಷ ವಯೋಮಿತಿ ಒಳಗಿರತಕ್ಕದ್ದು. ಕನಿಷ್ಠ ಎಸ್.ಎಸ್.ಎಲ್.ಸಿ ಯವರೆಗೆ ವಿದ್ಯಾಭ್ಯಾಸ ಹೊಂದಿರತಕ್ಕದ್ದು. ಚಿಕ್ಕಬಳ್ಳಾಪುರ ಜಿಲ್ಲೆಯ ಸಮಗ್ರ ಮಾಹಿತಿ ಹಾಗೂ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರು ವಾಸಿಸುವ ಸ್ಥಳ, ಅವರುಗಳ ಆರ್ಥಿಕ/ಸಾಮಾಜಿಕ/ಶೈಕ್ಷಣಿಕ ಸ್ಥಿತಿಗತಿ, ಉದ್ಯೋಗ ಇತ್ಯಾದಿ ಅಂಕಿ ಅಂಶಗಳ ಮಾಹಿತಿ ತಿಳಿದಿರಬೇಕು. ನಿವೃತ್ತ ಸರ್ಕಾರಿ/ಅರೆ ಸರ್ಕಾರಿ ನೌಕರರು ಆಯ್ಕೆ ಸಮಿತಿಯ ಸದಸ್ಯರಾಗ ಬಯಸಿದಲ್ಲಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಜವಾಬ್ದಾರಿ/ಪಾರದರ್ಶಕ ಗುಣ ಹೊಂದಿರವರನ್ನು ಆಯ್ಕೆ ಮಾಡಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮುನಿರತ್ನಮ್ಮ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಜಿ.ಪ್ರಭು

ಮಹಿಳಾ ಸಾಧಕಿಯರ ಆದರ್ಶ ಅಳವಡಿಸಿಕೊಳ್ಳಿ

ಚಿಕ್ಕಬಳ್ಳಾಪುರ: ಮಹಿಳಾ ಸಾಧಕಿಯರ ಸಾಧನೆಗಳನ್ನು ನೆನೆದು ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವುದೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಜವಾದ ಆಶಯ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅಭಿಪ್ರಾಯಪಟ್ಟರು.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತದ ದಿನಮಾನಗಳಲ್ಲಿ ಪ್ರತಿ ಮನೆಯನ್ನು ಬೆಳಗುತ್ತಿರುವವರು ಮಹಿಳೆಯರು. ಝಾನ್ಸಿರಾಣಿ ಲಕ್ಷ್ಮೀಬಾಯಿ, ಸರೋಜಿನಿ ನಾಯ್ಡು, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ ಸೇರಿದಂತೆ ಅಸಂಖ್ಯಾತ ಮಹಿಳಾ ಸಾಧಕಿಯರು ನಮ್ಮ ಸಮಾಜಕ್ಕೆ ನೀಡಿರುವ ಕೊಡುಗೆಗಳು ಅಪಾರವಾದದ್ದು, ಅವರ ಸಾಧನೆಗಳನ್ನು ಸ್ಮರಿಸುವುದೇ ನಮ್ಮೆಲ್ಲರ ಭಾಗ್ಯವಾಗಿದೆ. ಜಿಲ್ಲೆಯಲ್ಲಿ 10 ಸಾವಿರಕ್ಕೂ ಹೆಚ್ಚು ಮಹಿಳಾ ಸ್ವ-ಸಹಾಯ ಗುಂಪುಗಳು



ಕಾರ್ಯನಿರ್ವಹಿಸುತ್ತಿದ್ದು, ತನ್ನದೇ ಆದ ಅಮೂಲ್ಯ ಸೇವೆಯನ್ನು ಸಮಾಜಕ್ಕೆ ನೀಡುತ್ತಿವೆ. ಈ ಸಂಘಗಳಲ್ಲಿ 1.20 ಲಕ್ಷ ಮಹಿಳೆಯರು ಭಾಗವಹಿ ಸುತ್ತಿರುವುದು ಹೆಮ್ಮೆಯ ವಿಚಾರ. ಜಿಲ್ಲೆಯು ಹಾಲು ಉತ್ಪಾದನೆಯಲ್ಲಿ ಮಂಚೂಣಿಯಲ್ಲಿದೆ,ಅದರ ಶ್ರೇಯ ಮಹಿಳೆಯರಿಗೆ ಸಲ್ಲಬೇಕು. ಏಕೆಂದರೆ ಈ ಕ್ಷೇತ್ರದಲ್ಲಿ ಶೇ.90 ರಷ್ಟು ಶ್ರಮ ಇರುವುದು ಮಹಿಳೆಯರದ್ದು ಎಂದರೆ ತಪ್ಪಾಗಲಾರದು ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎನ್.ರಮೇಶ್, ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷ ಆಂಜಿನಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎನ್.ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವೈ.ನವೀನ್ ಭಟ್, ಅಪರ ಜಿಲ್ಲಾಧಿಕಾರಿ ಡಾ.ಎನ್. ಭಾಸ್ಕರ್, ಉಪ ಕಾರ್ಯದರ್ಶಿ ಅತಿಕ್ ಪಾಷಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವೆಂಕಟೇಶರೆಡ್ಡಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೌತಾಜ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ನಿಸ್ವಾರ್ಥ ಸೇವೆಗೆ ಮುಂದೊಂದು ದಿನ ಪ್ರತಿಫಲ ಲಭ್ಯ: ಕಸಾಪ ಶ್ರೀನಿವಾಸ್

ಶಿಬಿರಕ್ಕೆ ಮಾತ್ರ ಸೇವೆ ಸೀಮಿತವಾಗದಿರಲಿ

ಚಿಂತಾಮಣಿ: ನಿಸ್ವಾರ್ಥದಿಂದ ಮಾಡಿದ ಸೇವೆಗೆ ದೇವರು ಮುಂದೊಂದು ದಿನ ಪ್ರತಿಫಲ ನೀಡುತ್ತಾನೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಭಾಗವಹಿಸಿದ ವ್ಯಕ್ತಿ ಯಾವತ್ತೂ ಕೆಟ್ಟ ವ್ಯಕ್ತಿಯಾಗಿ ರೂಪುಗೊಳ್ಳುವುದಿಲ್ಲವೆಂದು ಕಸಾಪ ಅಧ್ಯಕ್ಷ ಎನ್.ವಿ.ಶ್ರೀನಿವಾಸ್ ನುಡಿದರು.

ತಾಲೂಕಿನ ಕೈವಾರ ಕೆಪಿಎಸ್ ಶಾಲೆಯಲ್ಲಿ ಚಿಂತಾಮಣಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಎನ್‌ಎಸ್‌ಎಸ್(ರಾಷ್ಟ್ರೀಯ ಸೇವಾ ಯೋಜನೆ) ಘಟಕದ ವತಿಯಿಂದ 7 ದಿನಗಳ ಕಾಲ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ವಿಶೇಷ ಶಿಬಿರವು ಸಮಾರೋಪ ಮಾತನಾಡಿ ಎನ್‌ಎಸ್‌ಎಸ್ ನಂತಹ ಶಿಬಿರಗಳಲ್ಲಿ ಶಿಬಿರಾರ್ಥಿಗಳ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ನಿಸ್ವಾರ್ಥದಿಂದ ಮಾಡಿದ ಸೇವೆಗೆ ದೇವರು ಮುಂದೊಂದು ದಿನ ಪ್ರತಿಫಲ ನೀಡುತ್ತಾನೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಭಾಗವಹಿಸಿದ ವ್ಯಕ್ತಿ ಯಾವತ್ತೂ ಕೆಟ್ಟ ವ್ಯಕ್ತಿಯಾಗಿ ರೂಪುಗೊಳ್ಳುವುದಿಲ್ಲವೆಂದರು. ನಿಮ್ಮ ಸೇವೆ ಶಿಬಿರಕ್ಕೆ ಮಾತ್ರ ಸೀಮಿತವಾಗದೆ ಅದು ನಿರಂತರವಾಗಿರಬೇಕೆಂದರು.



ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಪ್ರೊ. ಕುಸುಮ ಮಂಗಳ ಮಾತನಾಡಿ ಎನ್‌ಎಸ್‌ಎಸ್ ಶಿಬಿರದಲ್ಲಿ ಮಾಡಿದ ನಿಸ್ವಾರ್ಥ ಸೇವೆಯನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಎಂದು ಮರೆಯಲು ಸಾಧ್ಯವಾಗುವುದಿಲ್ಲ ಅವು ನಿಮಗೆ ನಿರಂತರ ನೆನಪಾಗುತ್ತವೆಂದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಎಸ್.ಅಶ್ವಥ್ ಮಾತನಾಡಿ ಶಿಬಿರದ ಏಳು ದಿನಗಳಲ್ಲಿ ಸೇವಾ ಕಾರ್ಯ ಚಟುವಟಿಕೆ ಮಾಡಿದ ಬಗ್ಗೆ ವಿವರ ತಿಳಿಸಿದರು. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶಿಬಿರಕ್ಕೆ ಸಹಾಯ ಮಾಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಏಳು ದಿನಗಳ ಕಾಲ ಕೆಪಿಎಸ್ ಶಾಲೆಯ ಆವರಣ, ಭೀಮಲಿಂಗೇಶ್ವರ ದೇವಸ್ಥಾನ, ಬನಹಳ್ಳಿಯ ಕಲ್ಯಾಣಿ ಸ್ವಚ್ಛತೆಕಾರ್ಯವನ್ನು ಮಾಡಿದರು. ಚಂದ್ರತೇಜ ಅವರಿಗೆ ಉತ್ತಮ ಶಿಬಿರಾರ್ಥಿ ನಾಯಕ ಪ್ರಶಸ್ತಿ ನೀಡಲಾಯಿತು.

ಕೆಪಿಎಸ್ ಶಾಲೆಯ ಮುಖ್ಯ ಶಿಕ್ಷಕ ಕೃಷ್ಣಪ್ಪ, ರಹೀಮ್ ಖಾನ್, ಅಂಬೇಡ್ಕರ್ ಶಾಲೆಯ ಶ್ರೀಧರ್ ಹಿರೇಮಠ್, ದೈಹಿಕ ಶಿಕ್ಷಣ ನಿರ್ದೇಶಕ ಪ್ರವೀಣ್, ಸಹ ಶಿಬಿರಾಧಿಕಾರಿ ನವೀನ್, ಪ್ರಾಧ್ಯಾಪಕ ಸಾಯಿರಾಮ್, ನಾರಾಯಣಸ್ವಾಮಿ, ಗ್ರಂಥಪಾಲಕರು ರಾಮಣ್ಣ, ಸಹ ಶಿಕ್ಷಕರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.